ಕುಟುಂಬಗಳು ನಿರ್ಗತಿಕರಾಗುತ್ತವೆ. ಕೂಡಲೆ ಸರ್ಕಾರ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಬಗ್ಗೆ ಹೇಳಿದ್ದೇನೆ. ದಿನಾಂಕ: 16–01–2010 ರಂದು ಈ ಐದು ವರ್ಷಗಳವರೆಗೆ ಗುತ್ತಿಗೆ ನೀಡಿ ತದನಂತರ ನವೀಕರಣ ಮಾಡಬಹುದು ಎಂದು ಈಗಾಗಲೇ ಸರ್ಕಾರದ ಆಜ್ಞೆಯಾಗಿದೆ. ಅದರ ಬಗ್ಗೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ನಾವು ನಡೆದುಕೊಳ್ಳುತ್ತೇವೆ.

ಅಧ್ಯಕ್ಷರು : ಆಯಿತು. ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾನಿರ್ಣಯದ ಮೇಲೆ ಚರ್ಚೆ, ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ತಾವು ಮಾತನಾಡಿ.

7. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾನಿರ್ಣಯದ ಮೇಲೆ ಮುಂದುವರೆದ ಚರ್ಚೆ ಹಾಗೂ ಸರ್ಕಾರದ ಉತ್ತರ :

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ನಂಜನಗೂಡು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾಧ್ಯಕ್ಷರೆ, ಘನತೆವೆತ್ತ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆಗಳನ್ನು ಸಲ್ಲಿಸುವ ಪ್ರಸ್ತಾವನೆಯ ಬಗ್ಗೆ ಮಾತನಾಡಲಿಕ್ಕೆ ನನಗೆ ಅವಕಾಶ ಕೊಟ್ಟ ತಮಗೆ ನಾನು ಮೊಟ್ಟ ಮೊದಲಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ರಾಜ್ಯಪಾಲರು ಸಂವಿಧಾನ ಬದ್ಧವಾಗಿ, ಸರ್ಕಾರದ ಸಮರ್ಥನೆಯನ್ನು ಮಾಡಿಕೊಂಡಿದ್ದಾರೆ. ಮಾನ್ಯ ರಾಜ್ಯಪಾಲರ ಭಾಷಣ ನೋಡಿದಂಥ ಸಂದರ್ಭದಲ್ಲಿ ಬಹುಶ: ಅದು ಬಹಳ ಶುಷ್ಕವಾದಂಥ, ಒಂದು ಸತ್ವವಿಲ್ಲದೇ ಇರತಕ್ಕಂಥ ಭಾಷಣ ಎಂದು ಮನಸ್ಸಿಗೆ ನೋವಾದರೂ ಕೂಡ ಹೇಳಲೇಬೇಕಾಗುತ್ತದೆ. ಒಂದು ರೀತಿ ಸ್ಕೂಲ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ 'Character and conduct is good ಎಂದು certificate ಕೊಡುತ್ತಾರೆ. ನಾವೇನು ತಪ್ಪು ಮಾಡಿದರೂ ಕೂಡ ಅದನ್ನು ಅವರು ಕೊಡುತ್ತಾರೆ. ಅದೇ ರೀತಿ ಮಾನ್ಯ ರಾಜ್ಯಪಾಲರು, ಒಂದು ವರ್ಷದಲ್ಲಿ ನಡೆಸಿರತಕ್ಕಂಥ ಆಡಳಿತ ಏನು ಎಂಬುದರ ಬಗ್ಗೆ ಒಂದು certificate ಅನ್ನು

ಈ ಸರ್ಕಾರಕ್ಕೆ ಕೊಟ್ಟಿದ್ದಾರೆ. ರಾಜ್ಯಪಾಲರು ಕೂಡ ಈ ಸರ್ಕಾರದ ಬಗ್ಗೆ ಬಹಳ ಬೇಸರ ವ್ಯಕ್ತಪಡಿಸಿದ್ದಾರೆ. ಹಲವಾರು ಸಾರಿ ಅವರು ತಮ್ಮ ಅಸಮಾಧಾನ ಬೇಸರವನ್ನು ವ್ಯಕ್ತಪಡಿಸಿರುವುದನ್ನು ನಾವು ಕಾಣುತ್ತೇವೆ. ವಿಶೇಷವಾಗಿ ಪ್ರವಾಹ ಪೀಡಿತರಾದ ಜನರ ಅವರ ಪುನರ್‌ವಸತಿಯ ಬಗ್ಗೆ ಅವರಲ್ಲಿರುವ ಸಂಕಷ್ಟಗಳ ಬಗ್ಗೆ ಅವರು ಅನೇಕ ಸಾರಿ, ಸರ್ಕಾರ ಸರಿಯಾದ ರೀತಿಯಲ್ಲಿ ಸ್ಪಂದಿಸಿ ಅವರಿಗೆ ಪುನರ್‌ವಸತಿಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಆ ಕೆಲಸ ಕಾರ್ಯಗಳು ಸರಿಯಾದ ರೀತಿಯಿಂದ ನಡೆಯುತ್ತಿಲ್ಲವೆನ್ನತಕ್ಕಂಥ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಚರ್ಚ್‌ಗಳ ಮೇಲೆ ದಾಳಿ ನಡೆದಂಥ ಸಂದರ್ಭದಲ್ಲೂ ಸಹ ಅವರು ಯಾವ ರೀತಿ ಕೋಮು ಗಲಭೆಗಳನ್ನು ನಿಯಂತ್ರಿಸುವಲ್ಲಿ ಸರ್ಕಾರ ಎಲ್ಲಿ ವಿಫಲವಾಗಿದೆ ಎನ್ನುವ ಸಂದರ್ಭದಲ್ಲಿ ರಾಜ್ಯಪಾಲರು ಸರ್ಕಾರದ ಗಮನ ಸೆಳೆದಿದ್ದಾರೆ ಮತ್ತು ತಮ್ಮ ಅಸಮಾಧಾನ ಕೂಡ ಹೇಳಿರತಕ್ಕಂಥದ್ದು ಇದೆ. ಜೊತೆಗೆ ವಿಧಾನ ಪರಿಷತ್ತಿಗೆ ಆಗತಕ್ಕಂಥ ನಾಮಕರಣದ ಬಗ್ಗೆನೂ ಕೂಡ ಅವರು, ಅದು ಕಾನೂನು ರೀತಿಯಲ್ಲಿ ಸಂವಿಧಾನಬದ್ಧವಾಗಿ ಆ ನಾಮಕರಣ ಸರಿಯಿಲ್ಲ ಎಂದು ಒಂದು ನೇಮ್‌ಅನ್ನು ತಿರಸ್ಕೃತ ಮಾಡಿದಂಥ ಸಂದರ್ಭದಲ್ಲಿ ಬಹಳ ಬೇಸರವಾಗತಕ್ಕಂಥದ್ದು ಇದೆ. ಬಿಜೆಪಿಯ ಒಬ್ಬ ಪ್ರಮುಖರು ಇವತ್ತು ರಾಜ್ಯಾಧ್ಯಕ್ಷರಾಗಿರತಕ್ಕಂಥವರು ಕೂಡ ಎಂಥ ಹಗುರವಾದ ಮಾತುಗಳನ್ನು ರಾಜ್ಯಪಾಲರ ಬಗ್ಗೆ ಮಾತನಾಡಿದ್ದಾರೆನ್ನತಕ್ಕಂಥದ್ದು ಇದೆ. ರಾಜ್ಯಪಾಲರ ಬಗ್ಗೆ ನಾವು ತಿಳಿದುಕೊಳ್ಳಬೇಕಾಗುತ್ತದೆ. ಈಗ ರಾಜ್ಯಪಾಲರು ಯಾರು ಇದ್ದಾರೆ ಅವರು ಕೇಂದ್ರದ ಕಾನೂನು ಸಚಿವರಾಗಿದ್ದಂಥವರು, he is a constitutional expert. ಸಂವಿಧಾನದ ತಜ್ಞರಾಗಿ ಅಪಾರ ಅನುಭವ ಇರತಕ್ಕಂಥವರು ಕರ್ನಾಟಕ ರಾಜ್ಯದಲ್ಲಿ ಇವತ್ತು ರಾಜ್ಯಪಾಲರಾಗಿರತಕ್ಕಂಥವರು. ಅವರ ಬಗ್ಗೆ ಅವರ ಹೇಳಿಕೆ ಬಹಳ ಅಪಹಾಸ್ಯವಾದಂಥ ಒಂದು ಕುಚೋದ್ಯವಾದಂಥ ಹೇಳಿಕೆಯನ್ನು ಮಾನ್ಯ ಕರ್ನಾಟಕ ರಾಜ್ಯದ ಬಿಜೆಪಿಯ ಪ್ರೆಸಿಡೆಂಟ್‌ರವರು ಮಾತನಾಡುತ್ತಾರೆ. ರಾಜಭವನದಲ್ಲಿ ಕುಳಿತು ರಾಜಕೀಯ ಮಾಡುತ್ತಿದ್ದಾರೆ, ಇವರು ರಾಜೀನಾಮೆ

ಕೊಟ್ಟು ಹೊರಗಡೆ ಬಂದು ರಾಜಕಾರಣ ಮಾಡಲಿ ಎನ್ನತಕ್ಕಂಥ ರೀತಿಯಲ್ಲಿ ಹೇಳಿದ್ದಾರೆ ಅದು ಬಹುಶಃ ರಾಜ್ಯಪಾಲರಿಗೆ ಸಂವಿಧಾನಬದ್ಧವಾಗಿ ಆ ಹುದ್ದೆಗೆ ಇರತಕ್ಕಂಥ ಗೌರವ, ಘನತೆ, ಜವಾಬ್ದಾರಿಯ ಬಗ್ಗೆ ಬಹಳ ಎಚ್ಚರಿಕೆಯ ಮಾತುಗಳನ್ನು ಮುಂದಾದರೂ ಕೂಡ ಆಡಬೇಕೆಂದು ಆಡಳಿತ ಪಕ್ಷದ ಅವರ ಮುಖಂಡರಿಗೆ ನಾನು ಈ ಒಂದು ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ಇವತ್ತು ರಾಜ್ಯಪಾಲರು customary speech, ಸಾಂಪ್ರದಾಯಕವಾದಂಥ ಒಂದು ಭಾಷಣವನ್ನು ಮಾಡಿದ್ದಾರೆ. ಜೊತೆಗೆ ನಾವು ಈ ಸದನದಲ್ಲಿ ಬಹಳ ಮುಖ್ಯವಾಗಿ ಮತ್ತೊಂದರ ಬಗ್ಗೆ ಬಹಳ ಯೋಚನೆ ಮಾಡಬೇಕಾಗಿತ್ತು. ಅಖಿಲ ಭಾರತ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನದಲ್ಲಿ ಆಗಿರತಕ್ಕಂಥ ಅಧ್ಯಕ್ಷೀಯ ಭಾಷಣದ ಬಗ್ಗೆನೂ ಕೂಡ ನಾವು ಒಂದು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಆ ಭಾಷಣದಲ್ಲಿ ಬಹಳ ಮುಖ್ಯವಾಗಿರುವಂಥದ್ದು ಇದೆ. ಎಂಥ ಮಾತುಗಳನ್ನು ಹೇಳಿದ್ದಾರೆ? ಒಂದು ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನ ಎಂದರೆ ಕೇವಲ ಸಾಹಿತಿಗಳು, ವರ್ಷದಲ್ಲಿ ಒಂದು ಕಡೆ ಕುಳಿತು ಬರಿ ಚರ್ಚೆ ಮಾಡತಕ್ಕಂಥ, ಅಥವಾ ಕೆಲವು ವಿಚಾರಗೋಷ್ಠಿ ನಡೆಸತಕ್ಕಂಥದ್ದಲ್ಲ. ಈ ನಾಡಿನ ಬುದ್ಧಿಜೀವಿಗಳು, ಸಾಹಿತಿಗಳು, ಸಾಹಿತಿಗಳು ಯಾರೇ ಇರಲಿ, ನವೋದಯ ಸಾಹಿತಿಗಳಿರಲಿ, ಪ್ರಗತಿಪರ ಸಾಹಿತಿಗಳಿರಲಿ, ಬಂಡಾಯ ಸಾಹಿತಿಗಳಿರಲಿ, ದಲಿತ ಸಾಹಿತಗಳಿರಲಿ, ಎಲ್ಲರೂ ಕೂಡ ಒಟ್ಟಾಗಿ ಇಡೀ ನಾಡಿನ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡತಕ್ಕಂಥದ್ದು. ಬರಿ ಸಾಹಿತ್ಯಕವಾಗಿ ಅಲ್ಲ. ಅದು ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ, ಸಮಗ್ರ ರಾಜ್ಯದ ಅಭಿವೃದ್ಧಿಯ ಎಡೆಗೆ ಚಿಂತನೆ ಮಾಡತಕ್ಕಂಥ ಒಂದು ಪಕ್ಷಾತೀತವಾದಂಥ ಸಮ್ಮೇಳನ ಎನ್ನುವ ಬಗ್ಗೆ ನಾನು ಹೆಮ್ಮೆ ಪಡುವಂಥದ್ದಾಗಿದೆ. ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಆಗಿರುವಂಥ ಚರ್ಚೆಗಳ ಬಗ್ಗೆ ನಾವು ನೋಡಬೇಕಾಗುತ್ತದೆ. ವಿಶೇಷವಾಗಿ ಸಮ್ಮೇಳನದ ಅಧ್ಯಕ್ಷರ ಭಾಷಣದಲ್ಲಿರುವ ಅಂಶವನ್ನು ನಾವು ಗಮನಿಸಬೇಕು. ಅವರು ಹೇಳಿರುವುದು ಕೇವಲ ಸಾಹಿತಿಗಳಿಗೆ ಮಾತ್ರವಲ್ಲ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪಾರ್ಲಿಮೆಂಟ್‌ನಿಂದ ಪಂಚಾಯತ್‌ವರೆಗೆ

ಇರುವ ಎಲ್ಲಾ ಸಂಸ್ಥೆಗಳ ಜವಾಬ್ದಾರಿ ಏನೆಂಬುದನ್ನು ನಾವು ಅರಿತು ಕೊಳ್ಳಬೇಕಾಗುತ್ತದೆ. ಅವರು ತುಂಬಾ ಚೆನ್ನಾಗಿ ಸಾಹಿತಿಗಳಿಗೆ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ, ಸಾಹಿತಿಗಳೆ, ನೀವು ಶೋಷಕರ ಪರವೋ ಅಥವಾ ಶೋಷಿತರ ಪರವೋ? ಎಂದು ಹೇಳಿರತಕ್ಕಂಥದ್ದು ಬಹುಶ: ಅದು ನಮ್ಮ ಹೃದಯವನ್ನು ಮಟ್ಟುವಂಥ ರೀತಿಯಲ್ಲಿದೆ. ಮತ್ತೆ ಇವತ್ತಿನದಿವಸ ಇದರ ಬಗ್ಗೆ ನಾವೆಲ್ಲರೂ ಕೂಡ ಯೋಚನೆ ಮಾಡಬೇಕಾಗಿದೆ. ರಾಜ್ಯಪಾಲರ ಭಾಷಣ ಅಥವಾ ಬಜೆಟ್ ಅಥವಾ ಶ್ರೀಸಾಮಾನ್ಯನ ಸಮಸ್ಯೆಗಳು ಇರುವಂಥ ಸಂದರ್ಭದಲ್ಲಿ ನಾವುಗಳು ಅದರ ಬಗ್ಗೆ ಮುಖ್ಯವಾಗಿ ಯೋಚನೆ ಮಾಡಬೇಕು. ಮತ್ತೆ ನಮ್ಮ ಜವಾಬ್ದಾರಿ ಕೂಡ ಅದೇ ಆಗಿದೆ. ನಾನು ಅನೇಕ ಸಾರಿ ಹೇಳಿರುವುದೇನೆಂದರೆ, ಮಾನವೀಯತೆ ಗುಣಗಳು ಬಹು ಮುಖ್ಯವಾಗಿ ಚುನಾಯಿತ ಪ್ರತಿನಿಧಿಗಳಿಗೆ ಇರಬೇಕಾಗಿದೆ ಎಂದು ಹೇಳುತ್ತಾ ಬಂದಿದ್ದೇನೆ. ಬಹುಶ: ಅದನ್ನು ಬಡಿದು ಎಬ್ಬಿಸುವಂಥ ಕೆಲಸ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಆಗಿದೆ. ಅಂದರೆ, ಈ ಸಾರಿಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ಎಂಥ ಮಾತುಗಳನ್ನು ಹೇಳಿದ್ದಾರೆಂದು ಇದರಿಂದ ಗೊತ್ತಾಗುತ್ತದೆ. ಅವರು ಹೇಳಿರತಕ್ಕಂಥ ಮಾತುಗಳು ಆಡಳಿತ ನಡೆಸುವವರು ಮತ್ತು ವಿರೋಧ ಪಕ್ಷದಲ್ಲಿರುವವರು ಅಥವಾ ಯಾವುದೇ ಪಕ್ಷಕ್ಕೆ ಸೇರಿದವರು, ಅದರಲ್ಲಿಯೂ ವಿಶೇಷವಾಗಿ ಜನಪ್ರತಿನಿಧಿಗಳಿಗೆ, ಬಹಳ ಚೆನ್ನಾಗಿ ಮತ್ತು ಮಾರ್ಮಿಕವಾಗಿ ಹೇಳಿದ್ದಾರೆ. ಅವರು ಹೇಳಿರುವ ಪ್ರತಿಯೊಂದು ಮಾತು ಕೂಡ ನಮ್ಮನ್ನು ಬಡಿದು ಎಬ್ಬಿಸುವಂಥ ರೀತಿಯಲ್ಲಿದೆ. ನಮ್ಮೆಲ್ಲರ ಹೃದಯದ ಅಂತರಾಳಕ್ಕೆ ಸ್ಪಂದಿಸುವಂಥ ರೀತಿಯಲ್ಲಿ ಅವರು ಹೇಳಿದ್ದಾರೆಂದು ನನಗೆ ಅನಿಸುತ್ತದೆ. ನಮಗೆ ಇರಬೇಕಾದ ಗುಣಗಳೇನು? ವಿಜ್ಞಾನಿಯ ಕಲೆ, ಸಂತನ ಹೃದಯ, ಬುದ್ಧನ ಕರುಣೆ, ಬಸವಣ್ಣನ ಛಲ, ಬಾಬಾ ಸಾಹೇಬರ ಸ್ವಾಭಿಮಾನ, ಮಹಾತ್ಮ ಗಾಂಧೀಜಿಯವರ ಅಹಿಂಸಾತ್ಮಕವಾದ ತತ್ವ ವಿಚಾರಗಳ ಮೇಲೆ ನಾವು ಕರ್ನಾಟಕ ರಾಜ್ಯವನ್ನು ಕಟ್ಟತಕ್ಕಂಥ ರೀತಿಯಲ್ಲಿ ಮತ್ತು ಸಮಗ್ರ ಕರ್ನಾಟಕದ ಬಗ್ಗೆ ಮಾನವೀಯತೆ ಗುಣಗಳ ನೆಲೆಗಟ್ಟಿನ ಮೇಲೆ ನಾವು ಚರ್ಚೆ ಮಾಡಿ

ಅದನ್ನು ಅಳವಡಿಸಿಕೊಂಡು ನಾವು ಕಾರ್ಯೋನ್ಮುಖರಾಗಬೇಕೆಂಬ ಸಂದೇಶವನ್ನು ಕೊಟ್ಟಿರುವಂಥದ್ದು ಇದೆ. ಬಹುಶ: ನಾವು ರಾಜ್ಯಪಾಲರ ಭಾಷಣದ ಜೊತೆಗೆ ನಾವೆಲ್ಲರೂ ಹೆಮ್ಮೆ ಪಡುವಂಥ ರೀತಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿರುವಂಥದ್ದು ಮತ್ತು ಅಲ್ಲಿ ಪ್ರಮುಖವಾದಂಥ ವಿಚಾರಗಳ ಬಗ್ಗೆ ಯಾವರೀತಿಯಾಗಿ ಚರ್ಚೆಯಾಗಿ ಏನು ಸಂದೇಶ ಬಂದಿದೆ ಎಂಬುದರ ಬಗ್ಗೆ ಈ ಸದನದಲ್ಲಿ ಗಮನ ಸೆಳೆಯುವುದಕ್ಕೆ ನಾನು ಇಷ್ಟಪಡುತ್ತೇನೆ.

ಮಾನ್ಯ ಸಭಾಧ್ಯಕ್ಷರೆ, ಗೌರವಾನ್ವಿತ ರಾಜ್ಯಪಾಲರ ಭಾಷಣವನ್ನು ಪ್ರಾರಂಭದಲ್ಲಿ ನೋಡಿದ ಪ್ರಕಾರ ಹೇಳುವುದಾದರೆ, ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕಾಗಿತ್ತು. ಅವರ ಭಾಷಣದಲ್ಲಿ ಏನು ಹೇಳುತ್ತಾರೆಂದರೆ, ಕಳೆದ ಒಂದು ವರ್ಷದಲ್ಲಿ ನನ್ನ ಸರ್ಕಾರವು ಕರ್ನಾಟಕದ ಜನತೆಯ ಕಲ್ಯಾಣಕ್ಕಾಗಿ ಅವಿರತವಾಗಿ ಶ್ರಮಿಸಿದೆ ಮತ್ತು ಇನ್ನೂ ಹೆಚ್ಚಿನ ಸ್ಪಂದನಶೀಲ ಆಡಳಿತವನ್ನು ನೀಡುವ ದೃಢ ನಿಶ್ಚಯದಿಂದ ಈ ವರ್ಷ ಮುನ್ನಡೆಯಲಿದ್ದೇವೆ ಎಂಬ ಮಾತನ್ನು ಹೇಳಿದ್ದಾರೆ. ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಕಳೆದ ಒಂದು ವರ್ಷದಿಂದ ಕರ್ನಾಟಕ ರಾಜ್ಯದ ಕಲ್ಯಾಣಕ್ಕೋಸ್ಕರ ನೀವು ಮಾಡಿರತಕ್ಕಂಥದ್ದು ಬಹುಶ: ಇದು ಕೇವಲ ಉತ್ಪ್ರೇಕ್ಷೆಯ ಮಾತುಗಳೆಂದು ಹೇಳಬೇಕಾಗುತ್ತದೆ. ಒಂದು ವರ್ಷದಿಂದ ಈಚೆಗೆ ನಡೆದಿರುವಂಥ ಘಟನೆಗಳು ಮತ್ತು ಇವರಲ್ಲಿರುವ ಆಂತರಿಕವಾದಂಥ ಕಲಹ, ಭಿನ್ನಾಭಿಪ್ರಾಯಗಳು ಎಲ್ಲಿಯವರೆಗೆ ತಂದು ನಿಲ್ಲಿಸಿದೆ ಎಂಬುದರ ಬಗ್ಗೆ ಯೋಚನೆ ಮಾಡಬೇಕಾಗಿದೆ. 'People's memory is very very short' ಎಂದು ನೀವು ತಿಳಿದುಕೊಂಡಿರಬಹುದು. ನಿಮ್ಮನ್ನು ಜನರು ಮರೆತು ಬಿಡುತ್ತಾರೆಂಬುದಲ್ಲ, ಒಂದು ವರ್ಷದಿಂದ ನೀವು ಜನತೆಯ ಕಲ್ಯಾಣದ ಕಾರ್ಯವನ್ನು ಮಾಡಿಲ್ಲ. ನೀವು ಏನು ಮಾಡಿದ್ದೀರೆಂಬುದರ ಬಗ್ಗೆ ನಿಮ್ಮ ಆತ್ಮಸಾಕ್ಷಿಯಾಗಿ ಇವತ್ತು ಯೋಚನೆ ಮಾಡಬೇಕಾಗಿದೆ. ಮುಖ್ಯಮಂತ್ರಿಯವರ ಕುರ್ಚಿಯ ಉಳಿವಿಗಾಗಿ ಮತ್ತು ಮುಖ್ಯಮಂತ್ರಿಯವರ ಕಲ್ಯಾಣಕ್ಕೋಸ್ಕರ ಅಂದರೆ ಅವರು ಮುಖ್ಯಮಂತ್ರಿಯ ಹುದ್ದೆಯಲ್ಲಿ ಉಳಿದುಕೊಳ್ಳಬೇಕೆಂಬ

ದೃಷ್ಟಿಯಲ್ಲಿ ನೀವು ಒಂದು ವರ್ಷವನ್ನು ಕಳೆದಿದ್ದೀರಿ. ನಿಮ್ಮ ಆಲೋಚನೆಗಳು, ನಿಮ್ಮ ಎಲ್ಲಾ ರೀತಿಯ ಆಂತರಿಕ ಕಲಹ, ಭಿನ್ನಾಭಿಪ್ರಾಯಗಳನ್ನು ಬಗೆಹರಿಸುವಂಥ ರೀತಿಯಲ್ಲಿ ನಿಮ್ಮ ವರಿಷ್ಠ ಮಂಡಳಿಯಿಂದ ಏನೇನು ಆಯಿತು ಮತ್ತು ನೀವುಗಳು ಏನೇನು ಮಾಡಿದ್ದೀರಿ ಎಂಬುದನ್ನು ಇವತ್ತು ನಾನು ಈ ಸದನದಲ್ಲಿ ರಾಜ್ಯಪಾಲರ ಭಾಷಣದ ಮೂಲಕ ರಾಜ್ಯದ ಜನತೆಗೆ ಜ್ಞಾಪಿಸಬೇಕಾಗುವ ಕೆಲಸವಾಗಿದೆ. ಈ ಒಂದು ಹಿನ್ನಲೆಯಲ್ಲಿ ನಾನು ತಮಗೆ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಆಗಿರುವಂಥ ಪ್ರವಾಹದ ಬಗ್ಗೆ ನಮ್ಮೆಲ್ಲರಿಗೂ ಸಹ ಗೊತ್ತಿದೆ. ಮತ್ತೆ ಇದನ್ನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಹಿಂದೆ 5 ದಿನಗಳವರೆಗೆ ಬಹಳ ಮಹತ್ತರವಾದಂಥ ವಿಷಯದ ಬಗ್ಗೆ ವಿಶೇಷ ಅಧಿವೇಶನ ನಡೆಯಿತು. ಇದು ಬಹಳ ಐತಿಹಾಸಿಕ ಅಧಿವೇಶನವೆಂದು ಗ್ರಾಮೀಣ ಅಭಿವೃದ್ಧಿ ಮತ್ತು ಬರದ ಬಗ್ಗೆ ನಾವೆಲ್ಲರೂ ಕೂಡ ಆ ಸಂದರ್ಭದಲ್ಲಿ ಚರ್ಚೆ ಮಾಡಿದ್ದೇವೆ. ಆಗ ಕಿತ್ತು ತಿನ್ನುವಂಥ ಬರ ಇತ್ತು. ಮತ್ತೆ ಹಿಂಗಾರು ಮತ್ತು ಮುಂಗಾರು ವಿಫಲವಾಗಿತ್ತು. ವಿಶೇಷವಾಗಿ ಉತ್ತರ ಕರ್ನಾಟಕ ಜನರು ಬರದಿಂದ ತತ್ತರಿಸಿ ಹೋಗಿದ್ದರು. ಅವರ್‍ಯಾರೂ ಗುಳೆ ಹೋಗದೆ ಇರುವುದಕ್ಕೋಸ್ಕರ ಅವರಿಗೆ ನಾವು ಏನೇನು ಅನುಕೂಲಗಳನ್ನು ಮಾಡಿಕೊಡಬೇಕೆಂಬುದರ ಬಗ್ಗೆ ಮತ್ತು ಬರವನ್ನು ಎದುರಿಸುವುದಕ್ಕೋಸ್ಕರ ಏನೇನು ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆಂಬುದರ ಬಗ್ಗೆ ಮತ್ತು ಇವತ್ತು ನಮಗೆ ಸ್ವಾತಂತ್ರ್ಯ ಬಂದು 63 ವರ್ಷಗಳಾದರೂ ಸಹ ಗ್ರಾಮೀಣ ಜನರ ಬದುಕು ಹೇಗಿದೆ ಎಂಬುದರ ಬಗ್ಗೆ ನಾವು ವಿಶೇಷ ಅಧಿವೇಶನದ ಸಂದರ್ಭದಲ್ಲಿ ಬಹಳ ಮಹತ್ತರವಾದ ಚರ್ಚೆ ಮಾಡಿದೆವು. ನಾವು ಇಲ್ಲಿ ಬರದ ಬಗ್ಗೆ ಮಾತನಾಡಿ ಇದಕ್ಕೆ ಯಾವ್ಯಾವ ರೀತಿಯಲ್ಲಿ ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆಂದು ಹೇಳಿದೆವು. ಆದರೆ, ದುರಂತವೆಂದರೆ, ಸ್ವಲ್ಪ ದಿನಗಳಲ್ಲಿಯೇ ಪ್ರವಾಹ ಬಂದು ಉತ್ತರ ಕರ್ನಾಟಕದ ಭಾಗಗಳು ತತ್ತರಿಸಿ ಹೋದವು. ಉತ್ತರ ಕರ್ನಾಟಕದ 15 ಜಿಲ್ಲೆಗಳಲ್ಲಿ ಮಳೆ ಬಂದಾಗ ಅಲ್ಲಿನ ಜನರು ಮಳೆ ಬರುತ್ತಿದೆಯಲ್ಲ ಎಂದು ಆನಂದದಿಂದ ಇದ್ದರು.

ಆದರೆ, ಆ ಪ್ರವಾಹದ ಭೀತಿ ಹೇಗಿತ್ತೆಂದರೆ, ಮಳೆ ಪ್ರಾರಂಭವಾಗಿ ಆರೇಳು ಗಂಟೆಗಳಲ್ಲಿ ಅಂದರೆ ಇಡೀ ರಾತ್ರಿ ಬಂದಂಥ ಮಳೆಯಿಂದ 7–8 ಅಡಿವರೆಗೆ ನೀರು ಬಂದಿರುವುದನ್ನು ನಾವು ನೋಡಿದ್ದೇವೆ. ಇದರ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ಶತಮಾನದಲ್ಲಿ ಎಂದಿಗೂ ಕೂಡ ಪ್ರವಾಹ ಬಂದು 15 ಜಿಲ್ಲೆಗಳಲ್ಲಿ ಈ ರೀತಿಯಾದ ಭೀಕರ ಜಲಪ್ರಳಯ ಆಗಿರಲಿಲ್ಲ. ಇದರಿಂದ ಅಲ್ಲಿ ಲಕ್ಷಾಂತರ ಹೆಕ್ಟೇರ್ ಕೃಷಿ ಭೂಮಿ ಹಾಳಾಗಿದೆ. ಯಾರ್‍ಯಾರ ಭೂಮಿ ಎಲ್ಲಿದೆ ಎಂದೂ ಸಹ ಗೊತ್ತಿಲ್ಲದ ರೀತಿಯಲ್ಲಿ ಹಾಳಾಗಿದೆ. ಮತ್ತೆ ಸಾಕಷ್ಟು ಜೀವ ಹಾನಿ ಯಾಗಿದೆ. ಲಕ್ಷಾಂತರ ಮನೆಗಳು ಸಹ ಹಾಳಾಗಿವೆ. ಮೊದಲು ಅನುಕೂಲಸ್ಥರಾಗಿದ್ದಂಥವರು ಕೂಡ ನಿರ್ಗತಿಕರಾಗಿ ಗಂಜಿ ಕೇಂದ್ರಕ್ಕೆ ಬಂದಿರುವುದನ್ನು ನಾವು ನೋಡಿದ್ದೇವೆ. ಅಲ್ಲಿ ಸುಮಾರು 16 ಸಾವಿರ ಕೋಟಿಯಿಂದ 20 ಸಾವಿರ ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ ಎಂದು ಅಂದಾಜು ಮಾಡಿದ್ದೀರಿ. ಇದಕ್ಕೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸ್ಪಂದಿಸಿರುವ ಜೊತೆಗೆ ಒಬ್ಬ ಶ್ರೀಸಾಮಾನ್ಯನೂ ಕೂಡ ಯಾವರೀತಿಯಾಗಿ ಸ್ಪಂದಿಸಿದ್ದಾನೆಂಬುದನ್ನು ನೋಡಬೇಕಾಗುತ್ತದೆ. ಜಲಪ್ರಳಯದಿಂದ ನೊಂದು ಬೆಂದು ಸಂಕಷ್ಟದಲ್ಲಿರುವವರ ನೆರವಿಗೆ ಯಾವರೀತಿಯಾಗಿ ದೇಣಿಗೆ ಬಂದಿದೆ ಎಂಬುದನ್ನು ನೋಡಬೇಕಾಗುತ್ತದೆ. ನಾವ್ಯಾರೂ ನಿರೀಕ್ಷೆ ಮಾಡದ ರೀತಿಯಲ್ಲಿ ಜನರು ಸ್ಪಂದಿಸಿ ಯಾವರೀತಿಯಾಗಿ ದೇಣಿಗೆಯನ್ನು ಕೊಟ್ಟರು ಎಂಬ ಬಗ್ಗೆ ಸ್ವತ: ಮಾನ್ಯ ಮುಖ್ಯಮಂತ್ರಿಯವರೇ ಹೇಳಿದ್ದಾರೆ. ಕಾರ್ಪೊರೇಟ್ ಸಂಸ್ಥೆ, ಸಂಘ ಸಂಸ್ಥೆಗಳು, ಮಠಾಧಿಪತಿಗಳು ಯಾವರೀತಿಯಾಗಿ ಸಹಕರಿಸಿ ದೇಣಿಗೆ ಕೊಟ್ಟಿರುವ ಬಗ್ಗೆ ಎಲ್ಲರಿಗೂ ಸಹ ಗೊತ್ತಿದೆ. ಕೇಂದ್ರ ಸರ್ಕಾರದ ಮಾನ್ಯ ಪ್ರಧಾನ ಮಂತ್ರಿಗಳು ಮತ್ತು ಯುಪಿಎ ಛೇರ್ ಪರ್ಸನ್ ಆಗಿರುವ ಶ್ರೀಮತಿ ಸೋನಿಯಾ ಗಾಂಧಿಯವರು ಅಲ್ಲಿಗೆ ಬಂದು ವೈಮಾನಿಕ ಸಮೀಕ್ಷೆಯನ್ನು ನಡೆಸಿದರು. ಮತ್ತೆ ಗೃಹ ಸಚಿವರು ಸಹ ಬಂದು ವೀಕ್ಷಣೆ ಮಾಡಿದರು. ಮತ್ತೆ ಕೇಂದ್ರ ಸರ್ಕಾರದಿಂದ ನಮಗೆ ನಿರೀಕ್ಷೆ ಮಾಡಿದಷ್ಟು ಪರಿಹಾರ ಬರುವುದಿಲ್ಲ ನಮಗೆ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಮಾಡುತ್ತದೆಂಬ

ಅನುಮಾನ ನಿಮ್ಮಲ್ಲಿತ್ತು. ಆದರೆ, ಕೇಂದ್ರದಿಂದ ಸುಮಾರು 1,857 ಕೋಟಿ ರೂಪಾಯಿಗಳನ್ನು ಎನ್‌ಸಿಸಿಎಫ್ ನಿಂದ ನಿಮಗೆ ಕೊಟ್ಟಿದ್ದಾರೆ. ಮತ್ತೆ ರಾಜ್ಯ ಸರ್ಕಾರ ಕೂಡ ಸಾಕಷ್ಟು ಹಣವನ್ನು ಕೊಟ್ಟಿದೆ ಹಾಗೆಯೇ ಸಂಘ ಸಂಸ್ಥೆಗಳು ಸಹ ಸ್ಪಂದಿಸಿ ಸಂಕಷ್ಟದಲ್ಲಿರುವ ಜನರಿಗೆ ಯಾವರೀತಿಯಾಗಿ ಪುನರ್‌ವಸತಿ ಕಲ್ಪಿಸಬೇಕೆಂಬುದು ಕೇವಲ ಮಾತಿನಲ್ಲಿ ಆಗದೆ ಅದು ಕೃತಿಯಲ್ಲಿಯೂ ಸಹ ಬರಬೇಕೆಂಬುದು ಮಾನ್ಯ ಮುಖ್ಯಮಂತ್ರಿಗಳು ಮತ್ತು ಸರ್ಕಾರ ನಡೆಸುವಂಥ ಪ್ರತಿಯೊಬ್ಬರಿಂದ ಕೂಡ ಆ ರೀತಿಯಾದಂಥ ವಿಚಾರ ನಡೆಯಿತು. ಒಂದು ಕಡೆ ಅಲ್ಲಿನ ಜನರು ಸಂಕಷ್ಟದಲ್ಲಿದ್ದು ಎಲ್ಲರೂ ಗಂಜಿ ಕೇಂದ್ರದಲ್ಲಿದ್ದರು. ಈ ಶತಮಾನದಲ್ಲಿ ಕಂಡರಿಯದ ರೀತಿಯಲ್ಲಿ ಜಲಪ್ರಳಯವಾಗಿದೆ. ಆದರೆ, ಮತ್ತೊಂದು ಕಡೆ ಏನು ಬೆಳವಣಿಗೆ ಆಯಿತ್ತೆಂಬುದರ ಬಗ್ಗೆ ಇವತ್ತು ಚರ್ಚೆ ಮಾಡಬೇಕು. ಆ ಸಂದರ್ಭದಲ್ಲಿ ನಿಮ್ಮಲ್ಲಿ ಏನಾಗಿತ್ತೆಂದರೆ, ಮುಖ್ಯಮಂತ್ರಿಯವರನ್ನು ತೆಗೆಯಬೇಕೆಂಬ ಕಾರ್ಯ ನಡೆಯುತ್ತಿತ್ತು. ಅಲ್ಲಿ ಲಕ್ಷಾಂತರ ಜನರು ವಸತಿ ರಹಿತರಾಗಿ ಸಂಕಷ್ಟದಿಂದ ಎಲ್ಲರೂ ಗಂಜಿ ಕೇಂದ್ರದಲ್ಲಿದ್ದಾರೆ. ಆದರೆ, ಆ ಸಂದರ್ಭದಲ್ಲಿ ನೀವು ಮಾಡಿರುವ ಕೆಲಸಗಳ ಬಗ್ಗೆ ನಿಮ್ಮ ಆತ್ಮ ಸಾಕ್ಷಿಯಾಗಿ ಹೇಳಬೇಕಾಗುತ್ತದೆ. ಅಂದರೆ, ಆ ಒಂದು ವರ್ಷದಲ್ಲಿ ನೀವು ಮಾಡಿರುವಂಥ ಕಲ್ಯಾಣ ಸಾಧನೆ ಏನೆಂಬುದನ್ನು ಹೇಳಬೇಕಾಗುತ್ತದೆ. ಒಂದು ಕಡೆ ಜನರು ಅಲ್ಲಿ ನರಳುತ್ತಿದ್ದಾರೆ. ಇನ್ನೊಂದು ಕಡೆ ಮುಖ್ಯಮಂತ್ರಿಯವರನ್ನು ತೆಗೆಯಬೇಕೆಂಬ ಭಿನ್ನಮತೀಯ ಚಟುವಟಿಕೆಗಳು ಮತ್ತು ಆಂತರಿಕವಾದಂಥ ಕಲಹಗಳು ನಡೆಯುತ್ತಿತ್ತು. ನೀವು ಎಂಥ ನಿಷ್ಕರಣೆಗಳು ಇದ್ದೀರೆಂದು ನಾವು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನಮ್ಮಲ್ಲಿ ಇಲ್ಲವೆಂದು ಹೇಳುತ್ತಿಲ್ಲ. ಪ್ರಜಾಪ್ರಭುತ್ವದಲ್ಲಿ ಎಲ್ಲಾ ಪಕ್ಷಗಳಲ್ಲಿ ಭಿನ್ನಾಭಿಪ್ರಾಯ ಮತ್ತು ಆಂತರಿಕ ಕಲಹ, ಒಳಜಗಳಗಳು ಇರುತ್ತದೆ. ಆದರೆ, ನೀವು ಯಾವ ಸಮಯದಲ್ಲಿ ಮಾಡಿದ್ದೀರಿ? ಲಕ್ಷಾಂತರ ಜನ ಗಂಜಿ ಕೇಂದ್ರಗಳಲ್ಲಿದ್ದಾಗ ಮತ್ತು ಈ ಶತಮಾನದಲ್ಲಿ ಕಂಡರಿಯದೆ ಇರತಕ್ಕಂಥ ಜಲಪ್ರಳಯ ಇದ್ದಂಥ ಸಮಯದಲ್ಲಿ ನಿಮ್ಮ ಅಧಿಕಾರದ ದಾಹ ಎಷ್ಟರಮಟ್ಟಿಗೆ ಇತ್ತೆಂಬುದು ಗೊತ್ತಾಗುತ್ತದೆ. ಒಬ್ಬ ಮುಖ್ಯಮಂತ್ರಿಯ ಮೇಲೆ

ಆಗಿರುವಂಥದ್ದನ್ನು ನೋಡಿದರೆ ನನಗೆ ನಾಚಿಕೆ ಆಗುತ್ತದೆ. ನಾನು ಕೂಡ ಪಾರ್ಲಿಮೆಂಟ್ ಸದಸ್ಯನಾಗಿ 20–25 ವರ್ಷಗಳವರೆಗೆ ಇದ್ದು, ಈ ದೇಶದ ರಾಜ್ಯಾಂಗದ ಮತ್ತು ಆಡಳಿತ ವ್ಯವಸ್ಥೆ ಬಗ್ಗೆ ತಿಳಿದುಕೊಂಡಿದ್ದೇನೆ. ಈ ರಾಷ್ಟ್ರಕ್ಕೆ ಒಬ್ಬ ಪ್ರಧಾನ ಮಂತ್ರಿ ಹೇಗೋ ಅದೇ ರೀತಿಯಾಗಿ ಒಂದು ರಾಜ್ಯಕ್ಕೆ ಒಬ್ಬ ಮುಖ್ಯಮಂತ್ರಿಗೂ ಕೂಡ ಸಂವಿಧಾನದ ಪ್ರಕಾರ ಅಷ್ಟೇ ಗೌರವ ಮತ್ತು ಅಷ್ಟೇ ಜವಾಬ್ದಾರಿ ಕೂಡ ಇರುತ್ತದೆ. ಈ ರಾಷ್ಟ್ರವನ್ನು ಮತ್ತು ರಾಜ್ಯವನ್ನು ಆಳತಕ್ಕಂಥ ಒಂದು ಜವಾಬ್ದಾರಿ ಮತ್ತು ಶಕ್ತಿಯನ್ನು ನಾವು ಸಂವಿಧಾನದಲ್ಲಿ ಕೊಟ್ಟಿದ್ದೇವೆ. ಆ ಒಂದು ಮುಖ್ಯಮಂತ್ರಿಯ ಹುದ್ದೆಯ ಬಗ್ಗೆ ನೀವು ಮಾತನಾಡಿದ್ದೀರಿ. ಈಗ ರೆಡ್ಡಿ ಸಹೋದರರು ಇಲ್ಲಿಲ್ಲ. ನಿಮ್ಮಲ್ಲಿ ಆಂತರಿಕ ಕಲಹ ಬೆಳೆಸಿಕೊಂಡು ಈ ಒಂದು ಹುದ್ದೆಯ ಬಗ್ಗೆ ಒಬ್ಬರಿಗಿಂಥ ಒಬ್ಬರು ಮಾತನಾಡಿದ್ದೀರಿ. ಯಾವ ಸಮಯದಲ್ಲಿ ನಿಮ್ಮ ಭಿನ್ನಮತೀಯ ಚಟುವಟಿಕೆಗಳು ಮಾನ್ಯ ಮುಖ್ಯಮಂತ್ರಿಯವರ ಬಗ್ಗೆ ಮಾತನಾಡಿದಂಥ ಪದಗಳೇನು? ಎಂಥಾ ಒಂದು ಅಸಹನೀಯವಾದಂಥ ಮತ್ತು ಶೋಚನೀಯವಾದಂಥ ಸ್ಥಿತಿಗೆ ಮುಖ್ಯಮಂತ್ರಿಯವನ್ನು ತಾವುಗಳು ತಂದು ನಿಲ್ಲಿಸಿದಿರಿ? ಇಲ್ಲಿ ನಿಮ್ಮ ಗುರಿ ಏನು? ಒಂದು ಕಡೆ ಹಸಿವಿನಿಂದ ಜನರು ತತ್ತರಿಸಿ ಹೋಗಿದ್ದಾರೆ. ಆದರೆ ನಿಮಗೊಂದು ಕಡೆ ಅಜೀರ್ಣವಾಗಿದೆ. ಅಜೀರ್ಣ ಏಕೆಂದರೆ, ನಿಮ್ಮ ಭಿನ್ನಮತ ಚಟುವಟಿಕೆಯಲ್ಲಿದ್ದಂಥ ಸದಸ್ಯರುಗಳು ಯಾರ ಬೆಂಬಲಿಗರೆಂದು ಗೊತ್ತಿಲ್ಲ. ಅಲ್ಲಿ ಜಲಪ್ರಳಯದಿಂದ ಜನರು ತತ್ತರಿಸಿ ಹೋಗಿದ್ದರೆ ಇವರುಗಳು ಹೈದರಾಬಾದ್‌ನ ಪಂಚತಾರಾ ಹೋಟೆಲ್‌ನಲ್ಲಿ ಮತ್ತು ಗೋವಾದಲ್ಲಿನ ರೆಸಾರ್ಟ್‌ನಲ್ಲಿ ಉಳಿದುಕೊಳ್ಳುತೀರಿ. ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಏನು ಹೇಳಿದ್ದಾರೆಂದರೆ, ಗರ್ಭಿಣಿಯರು, ಬಡವರು, ಹೆಂಗಸರು ಆ ಶೆಡ್‌ಗಳಲ್ಲಿ ಇನ್ನೂ ಸಹ ನರಳುತ್ತಿದ್ದಾರೆ. ಆದರೆ, ನೀವು ಮಾಡಿದ್ದು ಏನು? ಒಂದು ವರ್ಷದಲ್ಲಿ ಕಲ್ಯಾಣ ಮಾಡಿದ್ದೇವೆಂದು ರಾಜ್ಯಪಾಲರಿಂದ ಹೇಳಿಸುತ್ತೀರಾ? ಇದರಿಂದ ನಿಮ್ಮ ಸ್ವಾರ್ಥ ಅಧಿಕಾರದ ಲಾಲಸ್ಯ ಎಲ್ಲಿದೆ ಎನ್ನತಕ್ಕಂಥದ್ದು ಗೊತ್ತಾಗುತ್ತದೆ. ಒಂದು ಕಡೆ ಹಸಿದುಕೊಂಡು ಅವರು ಗಂಜಿ ಕೇಂದ್ರಗಳಲ್ಲಿ ಇದ್ದಾಗ ಅವರ

3.40 ಪಿ.ಎಂ.

ಆಕ್ರಂಧನವನ್ನು ಕೇಳುವುದಕ್ಕಾಗುತ್ತಿಲ್ಲ. ನೀವು ಫೈವ್‌ಸ್ಟಾರ್ ಹೊಟೇಲ್‌ಗಳಲ್ಲಿ ಮಜಾ ಮಾಡುತ್ತಿದ್ದಿರಿ. ಹೈದ್ರಾಬಾದಿನ ಫೈವ್‌ಸ್ಟಾರ್ ಹೊಟೇಲ್‌ಗಳಲ್ಲಿ ತಿಂದು ತೇಗಿ ಸಾಕಾಗಿ ಎಲ್ಲರಿಗೂ ಅನಾರೋಗ್ಯ ಕಾಣಿಸಿಕೊಂಡು ಮಾಜಿ ಸಚಿವರಾಗಿದ್ದ ಈಗಿನ ಶಾಸಕರಾದ ಶ್ರೀ ಎಸ್.ಕೆ.ಬೆಳ್ಳುಬ್ಬಿಯವರ ಕೈಯಲ್ಲಿ ಹೇಳಿ ಬಿಜಾಪುರಕ್ಕೆ ಕಳುಹಿಸಿ ಏನು ತರಿಸಿಕೊಂಡಿದ್ದೀರಿ? ಕೆನೆ ಮೊಸರು, ಬಿಜಾಪುರದ ರೊಟ್ಟಿಗಳನ್ನು ತರಿಸಿಕೊಂಡಿರಿ. ಅಜೀರ್ಣವಾಗಿ ನೀವು ಒಂದು ಕಡೆ ಮಾತನಾಡುತ್ತಿದ್ದೀರಿ. ಒಂದು ಕಡೆ ನಿಮಗೆ ಕೆನೆ ಮೊಸರು ಬೇಕು. ಒಂದು ಕಡೆ ಹಸಿವು ಮತ್ತೊಂದು ಕಡೆ ಅಜೀರ್ಣ ಎನ್ನತಕ್ಕಂಥದ್ದು ನೀವು ಯೋಚನೆ ಮಾಡಿ ಒಂದು ಸರ್ಕಾರವನ್ನು ನಡೆಸುವವರು ಆ ಮಾನವೀಯತೆಗೆ ಸ್ಪಂಧಿಸತಕ್ಕಂಥದ್ದು ಆಗಬೇಕು. ಈ ಶತಮಾನದಲ್ಲಿ ಆಗಿರತಕ್ಕಂಥ ಒಂದು ಜಲಪ್ರಳಯದಲ್ಲಿ ಅಲ್ಲಿ ಇವತ್ತಿಗೂ ಕೂಡ ಏನಾಗಿದೆ ಎನ್ನುವುದನ್ನು ನೋಡೋಣ. ಬರೀ ಇವತ್ತು ಮಾತುಗಳನ್ನು ಆಡುತ್ತೀರಲ್ಲಾ? ಅಲ್ಲಿ ಏನೇನು ಪುನರ್ ವಸತಿ ಆಗಿದೆ? ನಿಮಗೆ ಮಾನವೀಯತೆಗಿಂತ ಅಧಿಕಾರವೇ ಜಾಸ್ತಿಯಾಯಿತು. ಮುಖ್ಯಮಂತ್ರಿಗಳ ಕುರ್ಚಿ ಉಳಿಸಿಕೊಳ್ಳಬೇಕು, ಮುಖ್ಯಮಂತ್ರಿಗಳನ್ನು ತೆಗೆಯಬೇಕು ಎನ್ನತಕ್ಕಂಥ ರೀತಿಯಲ್ಲಿ ನೀವು ಬಳಸಿದ ಪದಗಳು. Revenue Minister ಬಳಸಿದ ಪದಗಳು, ಮಾನ್ಯ ಆರೋಗ್ಯ ಸಚಿವರು ಮಾತನಾಡಿದಂಥದ್ದು, ನಿಮ್ಮ ಪ್ರವಾಸೋದ್ಯಮ ಸಚಿವರು ಭಿನ್ನಮತೀಯ ಗುಂಪಿನಲ್ಲಿ ನಡೆಸಿರುವಂಥದ್ದು. ಮಾನ್ಯ ಆರ್.ಅಶೋಕರವರು ಮತ್ತು ಯಾರ್ಯಾರೋ ಅದಕ್ಕೆ ಒಪ್ಪಂದವನ್ನು ಮಾಡಿಸುವುದು ನಿಮ್ಮ ಆ ಪ್ರಯತ್ನಗಳು ವಿಫಲವಾಗಿರುವಂಥದ್ದು. ಇವೆಲ್ಲಾ ಕೂಡ ಇವತ್ತು ಗೊತ್ತಿರತಕ್ಕಂಥದ್ದು. ನೀವು ದೆಹಲಿಯಲ್ಲಿ ಕುಳಿತು ಮಾಡಿದಂಥ ಮಾತುಗಳು ಯಾವ ರೀತಿ ಆಯಿತು? ಮಾನ್ಯ ಜಗದೀಶ್ ಶೆಟ್ಟರರವರು ಮಾಜಿ ಸಭಾಧ್ಯಕ್ಷರು. ನಾನು ನಿಮ್ಮ ಬೆಳವಣಿಗೆಗಳನ್ನು ನೋಡುತ್ತಿದ್ದೆ. ಇವತ್ತು ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರು. ಮೊದಲನೆಯದಾಗಿ ನಿಮ್ಮ

ಮುಖ್ಯಮಂತ್ರಿಗಳ ಮೇಲೆ ಆಪಾದನೆಯನ್ನು ಮಾಡಿದಂಥವರು. ಸತ್ಯವನ್ನು ಒಪ್ಪಿಕೊಳ್ಳಬೇಕಾಗಿರುವಂಥದ್ದು. ಎರಡು ವರ್ಷಗಳ ಅವಧಿಯಲ್ಲಿ ಸಂಪೂರ್ಣವಾಗಿ ಆಡಳಿತ ಕುಸಿದು ಬಿದ್ದಿದೆ ಎಂದು ಹೇಳಿದವರು ವಿರೋಧ ಪಕ್ಷದವರು ಅಲ್ಲ. ಮೊಟ್ಟಮೊದಲಿಗೆ ಹೇಳಿದಂಥವರು ನಿಮ್ಮ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾನ್ಯ ಜಗದೀಶ್ ಶೆಟ್ಟರ್‌ರವರು ನಿಮ್ಮ ಹೈಕಮಾಂಡ್ ಹತ್ತಿರ ಹೇಳಿರುವಂಥದ್ದು. 'ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ' ಎಂದು.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್ : ಮಾನ್ಯ ಶ್ರೀನಿವಾಸ್ ಪ್ರಸಾದರವರು ಬಹಳ ಹಿರಿಯ ನಾಯಕರಿದ್ದಾರೆ. ಬಹಳ ಸಂಸದೀಯ ವಿಚಾರಗಳನ್ನು ಪಡೆದುಕೊಂಡಿರುವಂಥವರು. ಸ್ಪೀಕರ್ ಚುನಾವಣೆಯಲ್ಲಿ ಅವರ ಪಕ್ಷದವರು ಯಾವ ರೀತಿಯಾಗಿ ನಡೆದುಕೊಂಡಿದ್ದಾರೆಂದು ಅವರು ಸ್ವಲ್ಪ ವಿವೇಚನೆ ಮಾಡಿಕೊಂಡರೆ ಬಹಳ ಒಳ್ಳೆಯದು ಎಂದು ನನ್ನ ಅಭಿಪ್ರಾಯ.

ಶ್ರೀ ವಿ.ಶ್ರೀನಿವಾಸ್ ಪ್ರಸಾದ್: ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ಮೊದಲನೆಯ ಪುಟದಲ್ಲಿ ಇರತಕ್ಕಂಥದ್ದು ಸ್ವಲ್ಪ ಓದಬೇಕು. ಜನಕಲ್ಯಾಣ ಎಂದು ಹೇಳಿದ್ದೀರಿ, ಒಂದು ವರ್ಷದಿಂದ ಯಾರ ಕಲ್ಯಾಣ? ಅದಕ್ಕಾಗಿ ತಮಗೆ ನಾನು ಹೇಳುತ್ತಿದ್ದೆ. ಮಾನ್ಯ ಜಗದೀಶ್ ಶೆಟ್ಟರ್‌ರವರು ಈಗ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಆಗ ಸ್ಪೀಕರ್ ಆಗಿದ್ದವರು. ನಿಮ್ಮ ಭಾರತೀಯ ಜನತಾ ಪಕ್ಷದ ಹೈಕಮಾಂಡ್ ವರಿಷ್ಠರಿಗೆ ಕೊಟ್ಟಿರುವ ಬಗ್ಗೆ ಪುಟಗಟ್ಟಲೆ ಸುದ್ಧಿಮಾಧ್ಯಮದಲ್ಲಿ ಬಂದಿದೆ. XXX ಇನ್ನು ಮಾನ್ಯ ಜನಾರ್ದನ ರೆಡ್ಡಿಯವರು ಹೇಳಿರತಕ್ಕಂಥ ಮಾತುಗಳನ್ನು ಬಿಡಿ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಮಾನ್ಯ ಜಗದೀಶ್ ಶೆಟ್ಟರ್‌ರವರು ಯಾವುದೇ ಕಾರಣದಿಂದ... XXX ಎನ್ನುವಂಥ ವಿಚಾರವನ್ನು ಹೇಳಲಿಲ್ಲ.

(ಗೊಂದಲ)

ಶ್ರೀ ವಿ.ಶ್ರೀನಿವಾಸ್ ಪ್ರಸಾದ್: ಜಗದೀಶ್ ಶೆಟ್ಟರ್‌ರವರು ನಾನು ಹೇಳಿಲ್ಲವೆಂದು ಹೇಳಲಿ. ನಿಮ್ಮ ಪಾರ್ಟಿಯಲ್ಲಿ ಎಲ್ಲರಿಗೂ ಗೊತ್ತಿರತಕ್ಕಂಥದ್ದು. ನಾವು ಯಾರೂ ಕೂಡ ಒರೆಗೆ ಹಚ್ಚುವುದಕ್ಕೆ ಹೋಗುವುದಿಲ್ಲ.

XXX ಮಾನ್ಯ ಸಭಾಧ್ಯಕ್ಷರ ಆದೇಶದನ್ವಯ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಬಿ.ಎನ್.ಬಚ್ಚೇಗೌಡ: ಅವರು ಯಾರಿಗೆ ಹೇಳಿದರೆಂದು ತಾವು ಹೇಳುತ್ತೀರಿ? ಇಮ್ಯಾಜಿನೇಶನ್ ಮಾಡಿಕೊಂಡು ಹೇಳಬೇಡಿ.

ಶ್ರೀ ವಿ.ಶ್ರೀನಿವಾಸ್ ಪ್ರಸಾದ್: No, not imagination. It is a fact.

ಶ್ರೀ ಬಿ.ಎನ್.ಬಚ್ಚೇಗೌಡ: ನೀವು facts ಮೇಲೆ ಹೇಳಿ. ನೀವು divert ಮಾಡಬೇಡಿ.

(ಗೊಂದಲ)

ಶ್ರೀ ಬಿ.ಎನ್.ಬಚ್ಚೇಗೌಡ: Don't imagine things. ನೀವು ಆ ತರಹ ಮಾತನಾಡುತ್ತಿದ್ದೀರಿ. ನೀವು divert ಮಾಡಬೇಡಿ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್: ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ನೋಡಿದ್ದೇನೆ.

ಶ್ರೀ ಬಿ.ಎನ್.ಬಚ್ಚೇಗೌಡ: ನಿಮ್ಮ ಮೇಲೆ ಅಪಾರ ಗೌರವ ಇದೆ. ತಾವು ಹಿರಿಯರು ಇದ್ದೀರಿ. ಇಮ್ಯಾಜಿನ್ ಮಾಡಿ ತಾವು ಮಾತನಾಡಬೇಡಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ನೀವು ಹೇಳಿದ್ದು ಸರಿಯೋ, ನಾವು ಹೇಳಿದ್ದು ಸರಿಯೋ ಜನ ತೀರ್ಮಾನ ಮಾಡುತ್ತಾರೆ, ಕುಳಿತುಕೊಳ್ಳಿ.

ಶ್ರೀ ಬಿ.ಎನ್.ಬಚ್ಚೇಗೌಡ: ಇನ್ನೂ ಮೂರು ವರ್ಷ ಇದೆ, ಮುಂದೆ ತೀರ್ಮಾನ ಮಾಡುವುದನ್ನು ನೋಡೋಣ ಬಿಡಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಸ್ವಲ್ಪ ತಾವು ಕುಳಿತುಕೊಳ್ಳುತ್ತೀರಾ? I am not yielding. Please.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಜಗದೀಶ್ ಶೆಟ್ಟರ್‌ರವರು ಇರಲಿಲ್ಲ. ಹೈಕಮಾಂಡ್‌ಗೆ ಈ ರೀತಿ ದೂರನ್ನು ಕೊಟ್ಟರು ಎಂದರು.

(ಗೊಂದಲ)

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಹೇಳಿರುವುದನ್ನು ಒಪ್ಪಿಕೊಳ್ಳಬೇಕಲ್ರಿ.

ಶ್ರೀ ಬಿ.ಎನ್.ಬಚ್ಚೇಗೌಡ:- He is not in the House. ಅವರು ಹೈಕಮಾಂಡ್‌ಗೆ ಈ ರೀತಿ ದೂರನ್ನು ಕೊಟ್ಟರು. XXX ಎಂದು ಹೇಳಿದರೆ, ಈ ರೀತಿ false allegation ತಮ್ಮಂಥವರು ಮಾಡಿದರೆ ನಾವು ಈ ಕಡೆ ಹೇಗೆ ಕುಳಿತುಕೊಳ್ಳಬೇಕೆಂದು ಹೇಳಿ.

XXX ಮಾನ್ಯ ಸಭಾಧ್ಯಕ್ಷರ ಆದೇಶದನ್ವಯ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ಬಚ್ಚೇಗೌಡರನ್ನು admire ಮಾಡುತ್ತಿದ್ದಾರೆ. You stood like a rock behind the Chief Minister. ತೊಂದರೆ ಕೊಟ್ಟಿರುವವರ ಮೇಲೆ ಹೇಳುತ್ತಿದ್ದಾರೆ. ನಿಮ್ಮನ್ನು ಹೊಗಳುತ್ತಿದ್ದಾರೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಮಾನ್ಯ ಬಚ್ಚೇಗೌಡರನ್ನು ಹೊಗಳುವುದು, ತೆಗಳುವುದು ಅದು ಬೇರೆ ಪ್ರಶ್ನೆ. ನೋಡಿ you must know the political background, political track. ನಾವು ನಿಮ್ಮ ಬಗ್ಗೆ ಸುಮ್ಮನೆ ಆಪಾದನೆಗಳನ್ನು ಮಾಡತಕ್ಕಂಥದ್ದಲ್ಲ. It is not at all my fufile imagination. ನನ್ನ ಕಲ್ಪನೆಗಳಿಗೆ ತಕ್ಕಂತೆ ಹೇಳುತ್ತಿಲ್ಲ. I am telling the facts. ನಾನು ಆ ರೀತಿಯಾದಂಥ ಆಧಾರ ರಹಿತವಾದಂಥ ಆಪಾದನೆಗಳನ್ನು ಮಾಡುವುದು ಮತ್ತು ಯಾರ ಚಾರಿತ್ರವಧೆಯನ್ನು ಮಾಡತಕ್ಕಂಥದ್ದು ನನ್ನ ರಾಜಕೀಯದ ಇತಿಹಾಸದಲ್ಲಿ ಖಂಡಿತ ಇಲ್ಲ. ಅದಕ್ಕೆ ಅವಕಾಶ ಕೊಡುವುದಿಲ್ಲ. ಬೇಕು ಎಂದು ಮಾಡತಕ್ಕಂಥವನು ಅಲ್ಲ. Seeing is believing ಎಂದು ಹೇಳುತ್ತಾರೆ. ನಾನು electronic media ದಲ್ಲಿ ನೋಡಿದ್ದೇನೆ. ಸ್ವತ: ಈಗಿನ ನಮ್ಮ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರು ಹೇಳಿದ್ದಾರೆ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಅವರು ಸ್ಪೀಕರ್ ಆಗಿದ್ದರು ಆ ಕಾರಣಕ್ಕಾಗಿ ಅವರು ಯಾರನ್ನೂ ಭೇಟಿ ಮಾಡಲಿಲ್ಲ. ತಪ್ಪು ಮಾಹಿತಿಗಳನ್ನು ಕೊಡಬೇಡಿ.

(ಗೊಂದಲ)

ಶ್ರೀ ಆರ್.ಅಶೋಕ್: ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ಬಹಳ ಚೆನ್ನಾಗಿ ಅವರದೇ ಆದ ಧಾಟಿಯಲ್ಲಿ ಮಾತನಾಡುತ್ತಿದ್ದರು. ರಾಜ್ಯಪಾಲರ ಭಾಷಣ ಏನಿತ್ತು ಅದಕ್ಕೆ ಪೂರಕವಾಗಿ ಮಾತನಾಡಿದರು. ನೀವು ಚೆನ್ನಾಗಿ ಮಾತನಾಡುತ್ತಿದ್ದೀರಿ ಎಂದು ಹೇಳುತ್ತಿದ್ದೇನೆ.

ಶ್ರೀ ಬಿ.ಎನ್.ಬಚ್ಚೇಗೌಡ: ಶ್ರೀನಿವಾಸ ಪ್ರಸಾದ್‌ರವರೆ, in the absence of Mr.Jagadish Shettar, ಅವರು ಹೈಕಮಾಂಡ್ ಮೀಟ್ ಮಾಡಿ XXX ಎನ್ನುವ ಪದಗಳು ರೆಕಾರ್ಡಿಗೆ ಹೋಯಿತು. ಅದಕ್ಕೆ ನಾನೇನು ಹೇಳಿದೆ ಎಂದರೆ, ಜಗದೀಶ್ ಶೆಟ್ಟರ್‌ರವರ absence ನಲ್ಲಿ ಆ ರೀತಿ ಹೇಳಬಾರದು ಅವರು ಹೇಳಲಿಲ್ಲ, ಆ ವಿಷಯವನ್ನು ಹೇಳುವುದಕ್ಕೆ ಅವರು ಹೋಗಲಿಲ್ಲ, ಆ ರೀತಿ ತಾವು ಹೇಳಬಾರದು ಎಂದು ನಾನು ಹೇಳಿದೆ.

ಶ್ರೀ ಆರ್. ಅಶೋಕ : ಮಾನ್ಯ ಅಧ್ಯಕ್ಷರೆ, ಈ ಸಭೆಯ ಕಲಾಪಗಳು ಎಲ್ಲಿಗೋ ಹೋಗುವುದು ಬೇಡ. ತಾವು ಅನುಮತಿಯನ್ನು ಕೊಟ್ಟಿದ್ದೀರಿ ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ಮಾತನಾಡುತ್ತಿದ್ದಾರೆ. ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಪ್ರಾರಂಭದಲ್ಲಿ ಬಹಳ ಚೆನ್ನಾಗಿ ಬಂತು, ಸರ್ಕಾರಕ್ಕೆ ಚುಚ್ಚಿ ನಾವು ಮಾಡುತ್ತಿರುವ ತಪ್ಪುಗಳ ಬಗ್ಗೆ ತಿಳಿ ಹೇಳುತ್ತಿದ್ದರು ಬಹಳ ಸಂತೋಷ. ಆದರೆ ನಮ್ಮ ಪಕ್ಷದ ವಿಚಾರಗಳ ಬಗ್ಗೆ ಮಾತನಾಡುವಂಥ ಸಂದರ್ಭದಲ್ಲಿ, ಅವರು ನಮಗೆ ಯಾವ ಸಂದರ್ಭದಲ್ಲಿ ಬುದ್ಧಿ ಹೇಳಬೇಕೆಂದರೆ, ಮಾನ್ಯ ವೀರಪ್ಪ ಮೊಯಿಲಿಯವರನ್ನು ಹೇಗೆ ಇಳಿಸಿದರು ಎನ್ನುವುದರ ಬಗ್ಗೆ, ವೀರೇಂದ್ರ ಪಾಟೀಲರನ್ನು ಹೇಗೆ ಇಳಿಸಿದರು ಎನ್ನುವುದರ ಬಗ್ಗೆ ಏನೇನು ಆಯಿತು? ಅವತ್ತು ಪತ್ರಿಕೆಗಳಲ್ಲಿ ಏನೇನು ಬಂತು ಎನ್ನುವುದು ಗೊತ್ತಾಗುತ್ತದೆ. ಅದನ್ನು ನಾವೇನು ಹೇಳಲಿಲ್ಲ, ನಾವೇನು ಕೇಳಲಿಲ್ಲ. ಮಾನ್ಯ ಬಂಗಾರಪ್ಪನವರಿಗೆ ಏನೇನು ಆಯಿತು? ಇದೆಲ್ಲಾ ಆಯಾಯ ಪಾರ್ಟಿಗಳಲ್ಲಿ ನಡೆದಿರುವಂಥದ್ದು, ಇಲ್ಲಿ ನಾವು ಚರ್ಚೆ ಮಾಡಿರತಕ್ಕಂಥ ವಿಚಾರ, ನಾವು ಏನು ತಪ್ಪು ಮಾಡಿದ್ದೇವೆ, ನಮ್ಮಿಂದ ಏನೇನು ಲ್ಯಾಪ್ಸ್ ಆಗಿದೆ, ಅದನ್ನು ಹೇಳಿದರೆ ಸರಿ. ಪಾರ್ಟಿ ವಿಚಾರಕ್ಕೆ ಹೋದಾಗ ನಾವು ಪಾರ್ಟಿ ವಿಚಾರಕ್ಕೆ ಹೇಳಿದರೆ, ಅದು ಗೊಂದಲವಾಗುವುದು ಬೇಡ. ಅದಕ್ಕಾಗಿ ನಾನು ವಿನಂತಿಯನ್ನು ಮಾಡುತ್ತೇನೆ. ನಾನು ನಿಮಗೆ ಬೇರೆ ಏನೂ ಹೇಳುತ್ತಿಲ್ಲ.

(ಗೊಂದಲ)

XXX ಮಾನ್ಯ ಸಭಾಧ್ಯಕ್ಷರ ಆದೇಶದನ್ವಯ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಪ್ರವಾಹದ ಸಮಯದಲ್ಲಿ ನಿಮ್ಮಲ್ಲಿ ನಡೆದಿರತಕ್ಕಂಥ ಚಟುವಟಿಕೆಗಳನ್ನು ಹೇಳಿದೆನೇ ಹೊರತು, ಅದನ್ನು ನಾನು ಯಾವುದೇ ರಾಜಕೀಯದಿಂದ ಹೇಳಲಿಲ್ಲ. ಮಾನ್ಯ ಜಯಚಂದ್ರರವರೆ ನಾನು ಹೇಳಿದ್ದೇನೆಂದರೆ, ಒಂದು ಕಡೆ ಜಲಪ್ರಳಯವಾಗಿ ಪ್ರವಾಹ ಬಂದು ಅಲ್ಲಿರುವ ಲಕ್ಷಾಂತರ ಜನ ನರಳುತ್ತಿರುವಂಥದ್ದರಲ್ಲಿ ನಿಮ್ಮಲ್ಲಿ ಆ ಸಂದರ್ಭದಲ್ಲಿ ನಡೆದಿರತಕ್ಕಂಥ ಘಟನೆಗಳು, ಅದರ ಬಗ್ಗೆ ಹೇಳುತ್ತಿದ್ದೇನೆ ಹೊರತು ರಾಜಕೀಯವಾಗಿ ನಾನು ಏನು ಹೇಳುತ್ತಿಲ್ಲ.

(ಗೊಂದಲ)

ಶ್ರೀ ಆರ್. ಅಶೋಕ್ : ಮುಖ್ಯಮಂತ್ರಿಗಳೇನಾದರೂ ಹೋಗಿದ್ದರಾ? ಮುಖ್ಯಮಂತ್ರಿಗಳು ಕೆಲಸ ಮಾಡಿದ್ದಾರೆ.

ಶ್ರೀ ಶ್ರೀನಿವಾಸ ಪ್ರಾಸಾದ : ನಾನು political platform ಮಾಡಿಕೊಂಡು ಮಾತನಾಡುತ್ತಿಲ್ಲ. ಆ ಸಂದರ್ಭದಲ್ಲಿ ಜನರು ತತ್ತರಿಸಿಹೋಗಿ ನರಳುತ್ತಿರುವಂತಹ ಸಂದರ್ಭದಲ್ಲಿ ರಾಜ್ಯದಲ್ಲಿ ನಿಮ್ಮ ಆಂತರಿಕ ಕಲಹದಿಂದ ನಡೆದಿರತಕ್ಕಂತಹ ಘಟನೆಗಳ ಬಗ್ಗೆ ನಾನು ನಿಮ್ಮ ಗಮನವನ್ನು ಸೆಳೆಯುತ್ತಿದ್ದೇನೆಯೇ ಹೊರತು ಇನ್ನೇನೂ ಹೇಳುತ್ತಿಲ್ಲ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಆ ಸಂದರ್ಭದಲ್ಲಿ ಮಾನ್ಯ ಜಗದೀಶ್ ಶೆಟ್ಟರ್‌ರವರು Speaker ಆಗಿದ್ದರು. ಅವರು ಯಾವುದೇ ಸಂದರ್ಭದಲ್ಲಿ ಯಾರನ್ನೂ ಕೂಡ ಭೇಟಿ ಮಾಡಲಿಲ್ಲ. ಅದರ ಬಗ್ಗೆ ಹೇಳಲಿಲ್ಲ. ಇದು ತಪ್ಪು ಮಾಹಿತಿಯಾಗಬಾರದು.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಈ ಬಗ್ಗೆ ಮಾನ್ಯ ಸಚಿವರಾದಂತಹ ಬಚ್ಚೇಗೌಡರು ಮತ್ತು ಅಶೋಕ್‌ರವರು ಹೇಳಿದ್ದಾರೆ.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಾದಂತಹ ಶ್ರೀ ಬಚ್ಚೇಗೌಡರು ಹೇಳಿದ ಮೇಲೆ ....

ಶ್ರೀ ವಿ. ಶ್ರೀನಿವಾಸ ಪ್ರಸಾದ್: ನಾನು ಸಾಂದರ್ಭಿಕದ ಅನುಗುಣವಾಗಿ ನಿಮ್ಮದನ್ನು ಹೇಳಿದೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ತಾವು ಹಿರಿಯರಾಗಿದ್ದೀರಿ. ಯಾವುದೇ ವಿಚಾರವನ್ನು ಹೇಳುವಾಗ ಬಹಳ ವಿಚಾರ ಮಾಡಿಕೊಂಡು ಹೇಳುತ್ತೀರಿ. ಆದರೆ ನನ್ನ ವಿಷಯ ಪ್ರಸ್ತಾಪವಾಯಿತೆಂದು ನಾನು just 5 minutes ಹೊರಗಡೆಗೆ ಹೋಗಿದ್ದೇನೆ. ನಾನು ಬೆಳಿಗ್ಗೆಯಿಂದಲೇ ಇಲ್ಲಿಯೇ ಕುಳಿತಿದ್ದೇನೆ. ನಾನು ಇದ್ದಾಗ ಯಾವುದು ಪ್ರಸ್ತಾಪವಾಗಲಿಲ್ಲ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ನಾನು ಶುರುಮಾಡಿದ್ದು ಈಗ, ನೀವು ಬರುವವರೆಗೂ ನಾನು ಕಾಯುವುದಕ್ಕಾಗುತ್ತಿರಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಅದು correct. ಆದರೆ ನಾನು ಇಲ್ಲಿಯೇ ಇರುವಂತಹವನೆ. ನಮ್ಮ ಮುಂದೆಯೇ ಹೇಳಬಹುದಾಗಿತ್ತು. ಆದರೆ ನನ್ನ ವಿಚಾರವಾಗಿ ಇವತ್ತು ಹೈಕಮಾಂಡ್‌ಗೆ ಹೋದರು, ಹೇಳಿದರು, ಸ್ಪೀಕರ್ ಇದ್ದಾಗ, ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಹೇಳಿದರು ಎಂದು ಹೇಳಿದಿರಿ. ತಾವು ಏನಾದರೂ ನನ್ನ ಜೊತೆಯಲ್ಲಿ ಬಂದಿದ್ದೀರಾ? ಹೈಕಮಾಂಡ್ ಜೊತೆಗೆ ಚರ್ಚೆ ಮಾಡುವಾಗ ತಾವು ಬಂದಿದ್ದೀರಾ? ಇಲ್ಲಿ ಏನಾದರೂ discussion ಆದಾಗ ಬಂದಿದ್ದೀರಾ? ನೋಡಿ, ಅಲ್ಲಿ ಯಾರು ಲೀಡರ್ಸ್‌ಗಳ ಜೊತೆಯಲ್ಲಿ ಅಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ ಏನು ನಡೆದಿದೆ ಎಂಬುದನ್ನು ನೀವು presumption ಮಾಡಿ ಹೇಳಿದರೆ ಅದು ಬಹಳ ಅಪಾರ್ಥ ಕಲ್ಪನೆಯಾಗುತ್ತದೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಖಂಡಿತ ಅಲ್ಲಾ. ನಾನು ಹೇಳದೆ ಹೋದರೂ ಕೂಡ ಏನಾಯಿತು ಎಂದು ಜನರಿಗೆ ಗೊತ್ತಿದೆಯಲ್ಲಾ.

ಶ್ರೀ ಜಗದೀಶ್ ಶೆಟ್ಟರ್: ಇದು ಸರಿಯಲ್ಲ. ನಾನು ಸ್ಪೀಕರ್ ಆಗಿ....

ಶ್ರೀ ವಿ. ಶ್ರೀನಿವಾಸ ಪ್ರಸಾದ್: ನಾನು ಏನು ಹೇಳದೆ ಹೋದರೂ ಕೂಡ ಅದು ಜನರಿಗೆ ಏನಾಯಿತು ಎಂದು ಗೊತ್ತಿದೆ. ನನಗೆ ಒಬ್ಬನಿಗೆ ಗೊತ್ತಿರುವಂತಹದ್ದು ಅಲ್ಲ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಶ್ರೀನಿವಾಸ ಪ್ರಸಾದ್‌ರವರೆ, ತಾವು ಹೇಳಿರುವಂತಹ ಮಾತುಗಳ ಬಗ್ಗೆ ಸ್ವತ: ಅವರೇ ಇಲ್ಲಿಗೆ ಬಂದು

ವಿವರಣೆಯನ್ನು ಕೊಟ್ಟ ಮೇಲೆಯೂ ಸಹಿತ ನೀವು ಆ ಮಾತಿಗೆ ಗಟ್ಟಿಯಾಗಿ ನಿಂತುಕೊಂಡು ಮಾತನಾಡುವುದು ಸರಿಯಲ್ಲ. ನೀವು ಮಾತನಾಡಿರುವಂತಹ ಮಾತುಗಳನ್ನು ಹಿಂದೆ ಪಡೆಯಬೇಕಾದುದು ಸಾಧುವಾದುದು.

ಶ್ರೀ ವಿ. ಶ್ರೀನಿವಾಸ ಪ್ರಸಾದ್: I am sorry for your ignorance.

ಶ್ರೀ ಸಿ.ಎಂ. ಉದಾಸಿ : ಅವರೇ ಹೇಳುತ್ತಿರಬೇಕಾದರೆ ಈ ಮಾತನ್ನು ಮತ್ತಷ್ಟು ಅದನ್ನು ಪ್ರತಿಪಾದನೆ ಮಾಡುವುದಾದರೆ ಅದು ಸರಿಯಾದುದಲ್ಲ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಮಾನ್ಯ ಉದಾಸಿಯವರೆ, ನಾನು ಹೇಳದೇ ಇರಬಹುದು, ಶೆಟ್ಟರ್‌ರವರೆ, ನಾನು ಹೇಳದೇ ಇರಬಹುದು. ಅದು ಜಗಜ್ಜಾಹಿರವಾಗಿದೆ. ಇದೆಲ್ಲಾ ಗೊತ್ತಿದೆ. ನಾನು ಸೂಕ್ಷ್ಮವಾಗಿ ಹೇಳಿದ್ದೇನೆ. ಏಕೆ ಇಲ್ಲವೆಂದು ಹೇಳುವುದಕ್ಕೆ ಹೋಗುತ್ತೀರಾ ನೀವು? ನಾನು ನಿಮ್ಮ ಮೇಲೆ ಆಪಾದನೆಯನ್ನು ಮಾಡಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಆದರೆ ಒಬ್ಬ ಸ್ಪೀಕರ್ ಆಗಿ ಯಾವ ರೀತಿಯಾಗಿ ನಡೆದುಕೊಳ್ಳಬೇಕು, ಆ ಸಂದರ್ಭದಲ್ಲಿ ಆ ರೀತಿಯಾಗಿ ನಡೆದುಕೊಂಡಿದ್ದೇನೆ. ಅದನ್ನು ಮಾತ್ರ ಹೇಳಬೇಡಿ. ಎಲ್ಲಿಯಾದರೂ ಒಂದು ಸಣ್ಣ statement ನನ್ನ ಕಡೆಯಿಂದ ಬಂದಿದೆಯಾ?

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಖಂಡಿತ ಇಲ್ಲಾ.

ಶ್ರೀ ಜಗದೀಶ್ ಶೆಟ್ಟರ್: ಎಲ್ಲಿಯಾದರೂ small statement ಬಂತಾ? ಈ ರೀತಿಯಾಗಿ ತಾವು ನನ್ನ ಬಗ್ಗೆ ತಾವು ಹೇಳುವುದು ಸರಿಯಲ್ಲ ಅದು ಒಳ್ಳೆಯದಲ್ಲ. It is not in good taste.

ಒಬ್ಬ ಮಾನ್ಯ ಸದಸ್ಯರು: ತಾವು ಮಾತನಾಡಿರುವ ಬಗ್ಗೆ ತಾವು ದಾಖಲೆಯನ್ನು ತೆಗೆಸಿನೋಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಾನು ಎಲ್ಲಿಯಾದರೂ ಬಹಿರಂಗವಾಗಿ ಹೇಳಿದ್ದೇನೆಯೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ನಾನು ಸಾಂದರ್ಭಿಕವಾಗಿ ಹೇಳಿದ್ದೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಿಮ್ಮ ಬಗ್ಗೆ ನಮಗೆ ಗೌರವವಿದೆ.

ಶ್ರೀ ಸಿ.ಎಂ. ಉದಾಸಿ : ತಾವು ನೇರವಾಗಿ ಆಪಾದನೆಯನ್ನು ಮಾಡಿದ್ದೀರಿ. ನೀವು ಹೇಳಿರುವುದೇನು, ಪತ್ರಿಕೆಯಲ್ಲಿ ಬಂತು ಟಿ.ವಿ.ಯಲ್ಲಿ ಬಂತು ಎಂದು ಹೇಳಿದ್ದೀರಿ. ನಾನು ಒಂದು ಉದಾಹರಣೆಯನ್ನು ನಿಮ್ಮ ಹತ್ತಿರ ಹೇಳುವುದಕ್ಕೆ ಬಯಸುತ್ತೇನೆ. ಪತ್ರಿಕೆಯಲ್ಲಿ ಮತ್ತು ಟಿ.ವಿ.ಯಲ್ಲಿ ಬಂದಿರುವಂತಹ ಒಂದು ಉದಾಹರಣೆ ಇದೆ. ಆಂಧ್ರದ ಮುಖ್ಯಮಂತ್ರಿಗಳು ಅಲ್ಲಿ ದುರ್ಘಟನೆ ಆದಾಗ ಪತ್ರಿಕೆಯಲ್ಲಿ ಹಾಗೂ ಟಿ.ವಿ.ಯಲ್ಲಿ ವರದಿ ಬಂದಿರುವುದನ್ನು ನಾನು ನೋಡಿದ್ದೇನೆ. ಅದರ ನಂತರ ಏನಾಯಿತು ಎಂದರೆ ಅನೇಕ ಜನರು ಆತ್ಮಹತ್ಯೆ ಮಾಡಿಕೊಂಡರು ಎಂದು ಬಂತು. ನೂರಾರು ಜನರು ಆತ್ಮಹತ್ಯೆ ಮಾಡಿಕೊಂಡರು ಎಂದು ಬಂತು. ನಾನು ಪೂರ್ತಿ ಹೇಳಿದ ಮೇಲೆ ತಾವು ಮಾತನಾಡಿ. ನೂರಾರು ಜನರು ಆತ್ಮಹತ್ಯೆ ಮಾಡಿಕೊಂಡರು ಎಂದು ಪತ್ರಿಕೆಯಲ್ಲಿ ಹಾಗೂ, ಟಿ.ವಿ.ಯಲ್ಲಿ ಬಂತು. ನಂತರ 500 ಜನರು ಎಂದು ಬಂತು. ಕೊನೆಗೆ ಒಂದು ಸಲ ಏನು ಬಂತೆಂದರೆ ಅವರ ಹುಟ್ಟೂರಿನಲ್ಲಿ ಒಂದೂ ಆತ್ಮಹತ್ಯೆ ಆಗಲಿಲ್ಲವೆಂದು ಸಹ ಪತ್ರಿಕೆಯಲ್ಲಿ ಬಂತು. ಕೊನೆಗೆ ಒಂದು ಸಲ ಏನು ಬಂತೆಂದರೆ ಸಹಜ ಸಾವು ಆಗಿರುವುದನ್ನು ಆ ಸಂಬಂಧಿಕರ ಕಡೆಯಿಂದ ಹೇಳಿಕೆಯನ್ನು ಈ ರೀತಿಯಾಗಿ ಕೊಡಿಸಿದರು. 5 ರಿಂದ 10 ಸಾವಿರ ರೂಪಾಯಿಗಳನ್ನು ಕೊಟ್ಟು ಹೇಳಿಕೆಯನ್ನು ಕೊಡಿಸಿದ್ದಾರೆಂಬುದು ಕೂಡ ಪತ್ರಿಕೆಯಲ್ಲಿ ಬಂತು. ನಾವು ಯಾವುದನ್ನು ನಂಬಬೇಕು? ನಿಮಗೆ ಏನಾದರೂ ಆಧಾರಸಹಿತವಾಗಿ ಮಾತನಾಡಬೇಕೆಂದರೆ ನೀವು ಅವರ ಜೊತೆಗೆ ಹೋಗಿದ್ದೀರಾ ಎಂಬ ಮಾತುಗಳನ್ನು ಅವರು ಹೇಳಿದ್ದಾರೆ. ನೀವು ಮಾತನಾಡಬೇಕಾದಾಗ ಅವರ ಜೊತೆಯಲ್ಲಿ ಹೋಗಿದ್ದೀರಾ?

(ಗೊಂದಲ)

ಶ್ರೀ ವಿ. ಶ್ರೀನಿವಾಸ ಪ್ರಸಾದ್: Mr.Speaker, I seek your protection. ನೀವು ಹೇಳಬೇಕು.

ಶ್ರೀ ಸಿ.ಎಂ. ಉದಾಸಿ : No, No. ತಾವು ಹೇಳಿದ ಮಾತು ಅವರ ಜೊತೆ ಹೋಗಿದ್ದೀರಾ ಎನ್ನುವಂತಹ ಪ್ರಶ್ನೆ ಅವರು ಮಾಡುತ್ತಿದ್ದಾರೆ. ನಿಮ್ಮ ಬಗ್ಗೆ ನನಗೆ ಗೌರವವಿದೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಆಯಿತಲ್ಲಾ ಮಾನ್ಯ ಉದಾಸಿಯವರೆ, ಮಾನ್ಯ ಸಚಿವರೆ, ನಾನು ಸಾಂದರ್ಭಿಕವಾಗಿ ಹೇಳಿರುವಂತಹದ್ದು, ಯಾವುದೇ ಉತ್ಪ್ರೇಕ್ಷೆಯಿಂದ ಹೇಳಿರುವುದಿಲ್ಲ. ಏಕೆ ನನ್ನ ಮನಸ್ಸಿಗೆ ನೋವಾಗಿದೆ ಎಂದರೆ ನನ್ನ ತರಹ ಲಕ್ಷಾಂತರ ಜನರ ಮನಸ್ಸಿಗೆ ನೋವಾಗಿರುವಂತಹದ್ದು ಇದೆ.

ಶ್ರೀ ಆರ್. ಅಶೋಕ್ : ನೀವು ಮತ್ತೆ ಎಲ್ಲಿಗೋ ಹೋಗುತ್ತಿದ್ದೀರಿ, ತಾವು direct ಆಗಿ ರಾಜ್ಯಪಾಲರ ಭಾಷಣದ ಬಗ್ಗೆ ವಂದನಾರ್ಪಣೆಯ ಬಗ್ಗೆ ಹೇಳಬೇಕು.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಯಾರ ಮನಸ್ಸನ್ನೂ ಕೂಡ ನೋಯಿಸಬೇಕೆನ್ನುವಂತಹದ್ದಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಒಬ್ಬ ಹಿರಿಯ ಸಂಸದೀಯ ಪಟು ಆಗಿರುವವರು ಮಾತನಾಡುವಾಗ ಈ ರೀತಿಯಾಗಿ ಮಾಡಬಾರದು.

ಶ್ರೀ ಸಿದ್ದರಾಮಯ್ಯ : ಮಾನ್ಯ ಪ್ರಸಾದ್‌ರವರು ಕೇಂದ್ರದಲ್ಲಿ ಮಂತ್ರಿಯಾಗಿ ಕೆಲಸವನ್ನು ಮಾಡಿದ್ದಾರೆ.

ಅಧ್ಯಕ್ಷರು: ಆಯಿತು. ಮಾತನಾಡಲಿ.

ಶ್ರೀ ಸಿದ್ದರಾಮಯ್ಯ : What is his ides ? How to play? ಎಂಬುದು ಅವರಿಗೆ ಗೊತ್ತಿದೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಮಾನ್ಯ ಅಶೋಕ್‌ರವರೆ, ನಾನು ಯಾರ ಮೇಲೆಯೂ ಕೂಡ ಹೇಳುವುದಕ್ಕೆ ಹೋಗುವುದಿಲ್ಲ. ನಾನೊಬ್ಬನೆ ದೃಶ್ಯಮಾಧ್ಯಮದಲ್ಲಿ ನೋಡಿದ್ದೇನೆ, ನಾನೊಬ್ಬನೆ print media ದಲ್ಲಿ ಸುದ್ದಿ ಮಾಧ್ಯಮದಲ್ಲಿ ಓದಿದೆ ಎನ್ನುವುದಲ್ಲ. ಅದು ಎಲ್ಲರ ಮನಸ್ಸಿನಲ್ಲಿರುವಂತಹದ್ದು. ಅದನ್ನು ಮರೆಯೋಣ, ನೀವು ಅದನ್ನು ಮರೆತಿರಬಹುದು, ಇದು ಆಗಿದೆ, ಜಗದೀಶ್ ಶೆಟ್ಟರ್‌ರವರು ಸ್ಪೀಕರ್

ಆಗಿದ್ದವರು ಇವತ್ತು ಸಚಿವರಾಗಿದ್ದಾರೆ. ನಾನು ಅದರ ಬಗ್ಗೆ ನೀವು ಏಕೆ ಆದಿರಿ, ಏನಾದಿರಿ ಎನ್ನುವಂತಹದ್ದಲ್ಲ. ಅದು ನಿಮ್ಮ ಪಕ್ಷದಲ್ಲಿರುವಂತಹ, ಅದು ಮುಖ್ಯಮಂತ್ರಿಗಳ ತೀರ್ಮಾನ, It is the prerogative of the Chief Minister ನಾನು ಅದನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಯಾವ ಸಂದರ್ಭದಲ್ಲಿ ಏನು ನಡೆಯಿತು ಎನ್ನುವುದು ಅವತ್ತಿನ ಸಂದರ್ಭದಲ್ಲಿ ಸುದ್ದಿಯಾಯಿತು. ನೀವು ಏತಕ್ಕಾಗಿ ವೈಯಕ್ತಿಕವಾಗಿ ತೆಗೆದುಕೊಳ್ಳುತ್ತಿದ್ದೀರಿ?

ಶ್ರೀ ಜಗದೀಶ್ ಶೆಟ್ಟರ್ : ನೀವು ಹೇಳಿರುವುದು ಹೈಕಮಾಂಡ್ ಇದೆ ಎನ್ನುವುದನ್ನು ....

ಶ್ರೀ ವಿ. ಶ್ರೀನಿವಾಸ ಪ್ರಸಾದ್: ತಾವು ಸ್ಪೀಕರ್ ಆಗಿದ್ದಾಗ ನಾನು ತಮಗೆ congratulate ಮಾಡಿದಾಗ ನಾನು ಈ ಮಾತನ್ನು ಹೇಳಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಅದು ರೆಕಾರ್ಡ್‌ನಲ್ಲಿ ಉಳಿಯಬಾರದು. ಆ ಸಂದರ್ಭದಲ್ಲಿ ಜಗದೀಶ್ ಶೆಟ್ಟರ್‌ರವರು ಹೇಳಿದರು. ಮುಖ್ಯಮಂತ್ರಿಯ ಬಗ್ಗೆ ಈ ರೀತಿಯಾಗಿ ಹೇಳಿದರು ಎಂದು ಏನು ಹೇಳಿಕೆ ಇದೆಯಲ್ಲಾ ಅದು ಸರಿಯಲ್ಲ. ಅದು ಕಡತದಲ್ಲಿದ್ದರೆ ಹೇಗೆ ?

(ಗೊಂದಲ)

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ತಾವು ಕಡತವನ್ನು ತೆಗೆದು ನೋಡಿ. ಅವರು ನೇರವಾಗಿ ಮಾತನಾಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಸಿದ್ದರಾಮಯ್ಯನವರು ಹಲವಾರು ಬಾರಿ ಹೇಳಿದರು. ಕರುಣಾಕರ ರೆಡ್ಡಿಯವರು ಏನು ಹೇಳಿದರು. ಪತ್ರಿಕೆಯಲ್ಲಿ ಬಂದಿರುವುದನ್ನು ಹಲವಾರು ಜನರು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : XXX ಎಂದು ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ನನ್ನ ಯಾವುದಾದರೂ ಹೇಳಿಕೆ ಪತ್ರಿಕೆಯಲ್ಲಿ ಬಂದಿದೆಯಾ? ಬಂದಿದ್ದರೆ ಆ ಪತ್ರಿಕೆಯನ್ನು ತೋರಿಸಿ. ಆದರೆ ಈ ರೀತಿಯಾಗಿ ...

XXX ಮಾನ್ಯ ಸಭಾಧ್ಯಕ್ಷರ ಆದೇಶದನ್ವಯ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಅದು ಕಡತದಲ್ಲಿದೆ.

ಶ್ರೀ ಜಗದೀಶ್ ಶೆಟ್ಟರ್: ಅದು ರೆಕಾರ್ಡ್‌ನಲ್ಲಿ ಉಳಿಯಬಾರದು.

ಅಧ್ಯಕ್ಷರು : ಅದನ್ನು ತೆಗೆಯಬೇಕು. ಮಾನ್ಯ ಶ್ರೀನಿವಾಸ ಪ್ರಸಾದ್ ರವರು XXX ಎಂದು ಹೇಳಿದ್ದಾರೆ. ಅದನ್ನು ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಹೆಚ್.ಡಿ. ರೇವಣ್ಣ: ಮುಂದಿನ ತಿಂಗಳು ಜಗದೀಶ್‌ಶೆಟ್ಟರ್‌ರವರು ಮುಖ್ಯಮಂತ್ರಿಯಾಗುತ್ತಾರೆ ಎಂದು ಹೇಳುವುದಕ್ಕೆ ಬದಲಾಗಿ indirect ಆಗಿ ಹೇಳಿದ್ದಾರೆ. ಅದಕ್ಕೆ ನೀವು ಏತಕ್ಕಾಗಿ ತಲೆಕೆಡಿಸಿಕೊಳ್ಳುವುದಕ್ಕೆ ಹೋಗುತ್ತೀರಿ? ಜಗದೀಶ್ ಶೆಟ್ಟರ್‌ರವರ ಮೇಲೆ ಪ್ರೇಮ ಇದ್ದು ಹೇಳಿರುವುದರಿಂದ ಅವರು ಮುಂದಿನ ತಿಂಗಳು ಮುಖ್ಯಮಂತ್ರಿಯಾಗುತ್ತಾರೆ ಎಂದು ಹೇಳಿದ್ದಾರೆ.

ಅಧ್ಯಕ್ಷರು: ಆ ವಿಚಾರವು ಚರ್ಚೆಗೆ ಬೇಡ please.

ಶ್ರೀ ವಿ. ಶ್ರೀನಿವಾಸ ಪ್ರಸಾದ್: .ತಾವು Speaker ಆಗಿದ್ದಾಗ ನಾನು ಮೊದಲನೆಯದಾಗಿ ಈ ಸದನದಲ್ಲಿ ಮಾತನಾಡಿದ್ದು. You are a custodian of the House ಎಂದು ಹೇಳಿದಾಗ, ಯಾವ ರೀತಿಯಾಗಿ ಸದನದಲ್ಲಿ ಫಲಿತಾಂಶವು ಬಂದಿದೆ, ಹಿಂದಿನ ರೀತಿ ಅಲ್ಲ ಎಂದು ನಮ್ಮ Speakerರವರ ಜವಾಬ್ದಾರಿ ಹೇಗೆ ಇರುತ್ತದೆ. ಬಹುಶ: first of its kind in Karnataka; ಕರ್ನಾಟಕದಲ್ಲಿ ಈ ರೀತಿಯಾದಂತಹ people's mandate ಜನರ ಆದೇಶ ಬಂದಿರುವಂತಹದ್ದು clear cut ಆಗಿದೆ. ನೀವು ಮತ್ತು ನಾವು ಹತ್ತಿರದಲ್ಲಿದ್ದೇವೆ. ನಾವು ಮತ್ತು ಜೆಡಿ(ಎಸ್) ನವರು ಸೇರಿದರೆ ಎಷ್ಟು ಹತ್ತಿರದಲ್ಲಿದ್ದೇವೆ . ಎಂದು ಹೇಳಿದ್ದೆ. ಅವರು independentsರವರನ್ನು ತೆಗೆದುಕೊಂಡಂತಹ ಸಂದರ್ಭದಲ್ಲಿ ಸರ್ಕಾರ ಮಾಡಿದ್ದಾರೆ, ಯಾವ ರೀತಿಯಾಗಿ Speaker ರವರು ಅದನ್ನು ನಿಭಾಯಿಸಬೇಕೆಂದು ಹೇಳಿ ನಾನು ಅದರ ಬಗ್ಗೆ ಬಹಳ ತಮಾಷೆಯಾಗಿ ಮಾತನಾಡಿದ್ದೇನೆ. ತಾವು ನಗುಮೊಗದಿಂದ ಅದನ್ನು ಸ್ವೀಕಾರ ಮಾಡಿದ್ದೀರಿ. ನಮ್ಮ Speaker ರವರಿಗೆ ಯಾಕೋ Speaker ಆಗಬೇಕೆಂದು ಇಲ್ಲ, ಸಚಿವರಾಗಬೇಕೆಂದು ಇತ್ತು,

---

XXX ಮಾನ್ಯ ಸಭಾಧ್ಯಕ್ಷರ ಆದೇಶದನ್ವಯ ಕಡತದಿಂದ ತೆಗೆದುಹಾಕಲಾಗಿದೆ.

ಬಲವಂತದಿಂದ ಕೂರಿಸಿದ್ದಾರೆಂದು ಹೇಳುವಾಗಲೂ ಕೂಡ ತಾವು ಕೋಪವನ್ನು ಮಾಡಿಕೊಳ್ಳಲಿಲ್ಲ. ಹೇಳುವುದಕ್ಕೆ ಸಾಧ್ಯವಾದಂತಹ ಮಾತುಗಳನ್ನು ಹೇಳಬೇಕಾಗಿದೆ. ಹಾಗೆಯೇ ಸಾಂದರ್ಭಿಕವಾಗಿ ನಾನು ಪ್ರಸ್ತಾಪ ಮಾಡಿದ್ದೇನೆ. ಇದು ನಡೆಯುವಂತಹ ಘಟನೆಯನ್ನು ನೋಡಿದಾಗ ನಮ್ಮ ಮನಸ್ಸಿಗೆ ನೋವಾಗಿ ಹೇಳಿದೆ ಮಾನ್ಯ ಉದಾಸಿಯವರೆ, ನಿಮಗೂ ಕೂಡ ಆಗಿದೆ. ಇದು ಆಗಬಾರದಿತ್ತು, ಇದು ಎಲ್ಲರಿಗೂ ಆಗಿದೆ. ಹಾಗಾಗಿ ಅವತ್ತಿನ ಸಂದರ್ಭದಲ್ಲಿ ಏನು ನಡೆಯಿತು ಎನ್ನುವುದನ್ನು ನಾನು ಸಾಂದರ್ಭಿಕವಾಗಿ ಸೂಕ್ಷ್ಮವಾಗಿ ಹೇಳಿದ್ದೇನೆ. ಅದನ್ನು ನಾನು ಅಲ್ಲಿಗೆ ನಿಲ್ಲಿಸುತ್ತೇನೆ. ನಾನು ಮತ್ತೆ ಅದನ್ನು ಎಳೆದುಕೊಂಡು ಹೋಗುವುದಿಲ್ಲ. ಅದು ಆದ ಮೇಲೆ ನೀವು ಹೇಗೆ ಆದಿರಿ, ಏನು ಮಾಡಿದ್ದೀರಿ ಎಂದು ಅದು ನನಗೆ ಸಂಬಂಧವಿಲ್ಲ. ನೀವು ಹೇಗೆ ಮಂತ್ರಿಗಳಾದಿರಿ, ಏನಾಯಿತು, ನಿಮ್ಮ ಮಾತುಕತೆಗಳು ಅದು ನಮಗೆ ಸಂಬಂಧವಿಲ್ಲ, ಅದು ಖಂಡಿತ ಇಲ್ಲ. ನೀವು ಯಾವ ರೀತಿಯಾಗಿ ಸಚಿವರಾದಿರಿ ಎಂಬುದರ ಬಗ್ಗೆ ಪ್ರಸ್ತಾಪವನ್ನು ಕೂಡ ಮಾಡುವುದಿಲ್ಲ. ಅವತ್ತು ನಡೆಯುತ್ತಿರುವಂತಹ ಘಟನೆಯಲ್ಲಿ ನಾನು ಹೇಳಿದೆ ಒಂದು ಕಡೆಯಲ್ಲಿ ಹಸಿವು ಮೊತ್ತೊಂದು ಕಡೆ ಅಜೀರ್ಣವಾಗಿರುವಂಥವರು ನಿಮ್ಮಲ್ಲಿ ಯಾವ ಜನ ಕಲ್ಯಾಣ ಇತ್ತು ಸ್ವಾಮಿ ಎಂದು ಪ್ರಶ್ನೆಯನ್ನು ಮಾಡುತ್ತಿದ್ದೆ. ನಾನು ಮಾನ್ಯ ಮುಖ್ಯಮಂತ್ರಿಗಳ ಬಗ್ಗೆಯೂ ಕೂಡ ಮಾತನಾಡಿದ್ದೇನೆ. ಯಾವ ರೀತಿಯಾದಂತಹ ರೀತಿಯಲ್ಲಿ ನಿಮ್ಮ ಪಾರ್ಟಿಯವರೆ, ಸಂವಿಧಾನಬದ್ಧವಾದಂತಹ ಗೌರವಯುತವಾದಂತಹ ಒಂದು ಜವಾಬ್ದಾರಿಯುತವಾದ ಹುದ್ದೆಗೆ ಯಾವ ರೀತಿಯಾಗಿ ಅವಹೇಳನಕಾರಿಯಾದಂತಹ ಪದಗಳನ್ನು ಬಳಸಿದ್ದೀರಿ. ಎಷ್ಟು ಮಾನಸಿಕವಾದಂತಹ ಹಿಂಸೆಯನ್ನು ನೀವು ಮುಖ್ಯಮಂತ್ರಿಗಳಿಗೆ ಕೊಟ್ಟಿರಿ ಎಂದು ಹೇಳಿದೆ. ಅದು ನಾವಲ್ಲ. ನೀವು ಕೊಟ್ಟಿರುವುದನ್ನು ನೋಡಿದರೆ ಬಹುಶ: ನಾವೆಲ್ಲರೂ ಕೂಡ ತಲೆತಗ್ಗಿಸುವಂಥದ್ದು ಆಗುತ್ತದೆ. ಈಗ ನಾನು ಅದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಇವತ್ತು ಹೇಳಿರುವಂತಹದ್ದು, ಯಾವ ರೀತಿಯಾದಂತಹ ರೀತಿಯಲ್ಲಿ

ನಡೆದುಕೊಂಡಿದ್ದೀರಿ, ಎಂತಹ ಘಟನೆಗಳು ನಡೆಯಿತು ಅದು ಆದ ಮೇಲೆ ಏನಾಯಿತು. ನೀವು ಇನ್ನು ಕು.ಶೋಭಾ ಕರಂದ್ಲಾಜೆಯವರ ಪ್ರಶ್ನೆಗೆ ಇನ್ನೂ ಉತ್ತರವನ್ನು ಕೊಟ್ಟಿಲ್ಲ ನೀವು. ಯಾವುದಕೋಸ್ಕರ ನಾನು ರಾಜೀನಾಮೆಯನ್ನು ಕೊಡಬೇಕು? ಯಾವ ತಪ್ಪಿಗಾಗಿ ನನಗೆ ಶಿಕ್ಷೆ? ಎಂದು ಅವರು ಕೇಳಿದರು. ಅವರಿಗೆ ನೀವು ಉತ್ತರವನ್ನು ಕೊಟ್ಟಿದ್ದೀರಾ? ನಿಮ್ಮಲ್ಲಿ ನಡೆದಿರುವಂತಹ ಆಂತರಿಕ ಚರ್ಚೆಯು ನಮಗೆ ಬೇಕಾಗಿಲ್ಲ. ಏನು ಮಾಡಿದ್ದೀರಿ, ಏನು ಬಿಟ್ಟಿದ್ದೀರಿ, ಎನ್ನುವಂತಹ ಪ್ರಶ್ನೆಯಲ್ಲ. ನಾನು ಹೇಳಿದ್ದು, ರಾಜ್ಯಪಾಲರ ಭಾಷಣದ ಪ್ರಾರಂಭದಲ್ಲಿಯೇ ಜನರ ಕಲ್ಯಾಣಕ್ಕಾಗಿ ಒಂದು ವರ್ಷ ಕಳೆದಿದ್ದೇವೆಂದು ಹೇಳಿದ್ದೀರಲ್ಲಾ, ಅದು ಒಂದು ವರ್ಷದಲ್ಲಿ ನಡೆದಿರುವಂತಹದ್ದು ಜನರ ಕಲ್ಯಾಣಕ್ಕಾಗಿ ಅಲ್ಲ. ಮುಖ್ಯಮಂತ್ರಿ ಕುರ್ಚಿಯ ಉಳಿವಿಗಾಗಿ, ಅವರ ಸ್ಥಾನವನ್ನು ಭದ್ರಪಡಿಸುವುದಕೋಸ್ಕರ ನೀವು ಮುಂದೆಯೂ ಪ್ರಯತ್ನವನ್ನು ಮಾಡಬೇಕಾಗಿದೆ. ನೀವು irreparable damage ಮಾಡಿಕೊಂಡು ಬಿಟ್ಟಿದ್ದೀರಿ. ಇವತ್ತು ಹೇಳುವುದಲ್ಲ, irreparable damage ಎಂದರೆ ಸರಿಪಡಿಸುವುದಕ್ಕೆ ಆಗದೆ ಇರುವಂತಹದ್ದನ್ನು ಹಾಳುಮಾಡಿಕೊಂಡಿದ್ದೀರಿ. We are not responsible for that. ಅದಕ್ಕೆ ನಾವು ಜವಾಬ್ದಾರರಲ್ಲ. ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ನೀವು patch up ಮಾಡಿ ಎಷ್ಟು ಸಾರಿ ಆಯಿತು? ಮಾನ್ಯ ಅಶೋಕ್‌ರವರೆ, ತಾವು ಕುಳಿತುಕೊಳ್ಳಿ. Just listen, ಒಂದು ನಿಮಿಷ ಕೇಳಿ, ನನಗೆ ಅನುಭವ ಇದೆ ತಾವು ಕೇಳಿ. ನಿಮಗಿಂತ ಹೆಚ್ಚು ಅನುಭವ ನನಗೆ ಇದೆ. ನಾನು ನಿಮ್ಮ ದೃಷ್ಟಿಯಲ್ಲಿ ಹೇಳುತ್ತಿದ್ದೇನೆ ಕೇಳಿ.

ಶ್ರೀ ಆರ್. ಅಶೋಕ್ : ಅದು ನಿಮ್ಮ ಅನುಭವವೇ, ಅಥವಾ ಹಿರಿಯರ ಅನುಭವವೇ? ಅದು ನಿಮ್ಮ ಪಾರ್ಟಿಯ ಅನುಭವವೇ, ಅಥವಾ ನಮ್ಮ ಪಾರ್ಟಿಯ ಅನುಭವವೇ?

ಶ್ರೀ ವಿ. ಶ್ರೀನಿವಾಸ ಪ್ರಸಾದ್: I am not yielding. ನಾನು Yield ಆಗಿರುವುದಿಲ್ಲ. ತಾವು ದಯಮಾಡಿ don't allow them to speak.

ಅಧ್ಯಕ್ಷರು: ಆಯಿತು.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ನಾವು ಪ್ರಶ್ನೆ ಮಾಡಿಲ್ಲ. ಸ್ಪೀಕರ್ ಎಲೆಕ್ಷನ್‌ನಲ್ಲಿ ಏನು ನಡೆಯಿತು ಎಂದು ನಮಗೆ ಗೊತ್ತಿದೆ. Irreparable damage ಎಂದು ಹೇಳುತ್ತಿದ್ದೇನೆ. ನಾನು ಅದನ್ನು ಪ್ರಶ್ನೆ ಮಾಡುತ್ತಿಲ್ಲ. ನೀವು ಏನು ಮಾಡಿಕೊಂಡಿದ್ದೀರಿ ಅದೊಂದೆ ಅಲ್ಲ. ಸ್ಪೀಕರ್ ಎಲೆಕ್ಷನ್ ಆಗುವಾಗ ನಾವು candidate ಹಾಕುತ್ತೇವೆ ಎನ್ನುವಾಗ ಏನೇನು ಆಯಿತು, ಯಾರ್‍ಯಾರನ್ನೂ ಮಂತ್ರಿ ಮಾಡಿದ್ದೀರಿ ಎನ್ನುವುದು ನಮ್ಮ ಪ್ರಶ್ನೆಯಲ್ಲ. ನಿಮ್ಮಲ್ಲಿ ಇನ್ನೂ ಸರಿಹೋಗಿಲ್ಲ ಎನ್ನುವುದಕ್ಕೆ ಹೇಳಿದೆ. ಏಕೆ ಹೇಳಿದೆಯೆಂದರೆ, ರಾಜ್ಯಪಾಲರ ಭಾಷಣದಲ್ಲಿ ಮುಂದಿನ ವರ್ಷದಲ್ಲಿಯೂ ಈ ರಾಜ್ಯದ ಕಲ್ಯಾಣಕ್ಕಾಗಿ ಅಲ್ಲ, ನಿಮ್ಮಲ್ಲಿರುವಂಥ ಆಂತರಿಕ ಕಲಹ, ಭಿನ್ನಾಭಿಪ್ರಾಯಗಳು ಕೂಡ ಆಗಾಗ್ಗೆ ನಡೆಯುತ್ತಿದೆ. ಇದನ್ನು ಸರಿಪಡಿಸಿಕೊಂಡು ಮುಖ್ಯಮಂತ್ರಿಯ ಕುರ್ಚಿಯ ಉಳಿವಿಗಾಗಿ ಇನ್ನು ಎರಡು ಮೂರು ವರ್ಷಗಳ ಕಾಲ ಈ ಪ್ರಯತ್ನ ಮಾಡಬೇಕಾಗುತ್ತದೆ. ರಾಜ್ಯಪಾಲರ ಭಾಷಣದಲ್ಲಿ ಅಂದು ಹೇಳಿಸಿರುವಂಥದ್ದು ಅಷ್ಟು ಸಮರ್ಥನೀಯವಾಗಿ ಕಾಣುತ್ತಿಲ್ಲವೆನ್ನುವ ರೀತಿಯಲ್ಲಿ ಹೇಳಿದೆ, ಯಾವ ರೀತಿಯಲ್ಲಿ ಸಂದರ್ಭಗಳು ನಡೆಯುತ್ತಿವೆ ಎಂದು ತಿಳಿಸಬೇಕೆಂದು ಇವತ್ತು ನಾನು ಹೇಳಿದೆ, ಅಲ್ಲಿಗೆ ಅದನ್ನು ಬಿಡೋಣ. ನಾನು ಹೆಚ್ಚಿಗೆ ಮಾತನಾಡಲಿಕ್ಕೂ ಈಗ ಹೋಗುವುದಿಲ್ಲ. ಏಕೆಂದರೆ ನಾಳೆ general budget. Budget ಅನ್ನು ನಾಳೆ ನೀವು presentation ಮಾಡುತ್ತಿದ್ದೀರಿ. ಅದು ಬಜೆಟ್ ಮೇಲೆ ನಡೆಯಬೇಕಾಗಿರುವುದು, ಯಾವ ಭರವಸೆಗಳು, ಕಾರ್ಯಕ್ರಮಗಳು, ಏನು ಅನುಷ್ಠಾನಕ್ಕೆ ತಂದಿದ್ದೀರಿ, ಹೇಗಿದೆ? ಯಡಿಯೂರಪ್ಪನವರ ಕಳೆದ ಐದು ವರ್ಷಗಳ ಬಜೆಟ್‌ಗಳು ಇವೆ. ಬಹುಮತ ಬಂದ ಮೇಲೆ ಇದು ಮೂರನೆಯದು. ಹಿಂದೆ ಅವರು ಸಮ್ಮಿಶ್ರ ಸರ್ಕಾರದಲ್ಲಿದ್ದಾಗಲೂ ಅವರು ಎರಡು ಬಜೆಟ್ ಅನ್ನು ಕೊಟ್ಟಿದ್ದಾರೆ. ಈ ಎರಡು ಬಜೆಟ್‌ನಲ್ಲಿ ಏನೇನಾಗಿದೆ ಅದರ ಬಗ್ಗೆ ಚರ್ಚೆಗೆ ಬರೋಣ. ನಾಳೆಯಿಂದ ಅದರ ಬಗ್ಗೆ ಚರ್ಚೆ ಶುರುವಾಗುತ್ತದೆ. ಅದರಲ್ಲಿ ನಿಜವಾದಂಥ ಚರ್ಚೆಗಳು ಇರುತ್ತವೆ. ಪ್ರತಿಯೊಂದು ಇಲಾಖೆಗಳ ಬಗ್ಗೆ ರಾಜ್ಯದ ಹಣಕಾಸಿನ ಸ್ಥಿತಿಗತಿಗಳ ಬಗ್ಗೆ,

ಅಭಿವೃದ್ಧಿ ಕಾರ್ಯಕ್ರಮಗಳು, ಇವೆಲ್ಲವೂ ಆಯವ್ಯಯದ ಮೇಲೆ ನಾವು ಚರ್ಚೆ ಮಾಡುವಂಥ ಸಂದರ್ಭದಲ್ಲಿ ಬರುವುದು. ಈಗ ನಮ್ಮ ಮುಂದೆ ಇರುವ ಪ್ರಶ್ನೆ ಏನೆಂದರೆ ಜಲ ಪ್ರಳಯ ಆಗಿ ಇದುವರೆಗೆ ಮೂರ್‍ನಾಲ್ಕು ತಿಂಗಳುಗಳಾಗಿವೆ. ಇದುವರೆಗೆ ಒಂದು ಸಮಗ್ರವಾದ ಚಿತ್ರ ಇಲ್ಲ. ಇಡೀ ರಾಜ್ಯ ತತ್ತರಿಸಿ ಹೋಗಿದೆ. ಇಡೀ ರಾಷ್ಟ್ರದ ಗಮನವನ್ನು ಸೆಳೆದಿರುವಂಥ ಜಲ ಪ್ರಳಯವಾಗಿದೆ. ಕೇಂದ್ರ ಸರ್ಕಾರ ನೆರವನ್ನು ಕೊಟ್ಟಿರುವಂಥದ್ದು ಇದೆ. ಇವತ್ತಿನವರೆಗೆ ಅವರ rehabilitation ಬಗ್ಗೆ ಪುನರ್‌ವಸತಿಯ ಬಗ್ಗೆ ಸ್ಪಷ್ಟವಾದ ಚಿತ್ರವನ್ನು ಸರ್ಕಾರ ಕೊಟ್ಟಿದೆಯೇ? ಲಕ್ಷಾಂತರ ಹೆಕ್ಟೇರ್ ಭೂಮಿ ಹಾಳಾಗಿರುವಂಥದ್ದು, ಅದರಲ್ಲಿ ಯಾವ ರೈತನಿಗೂ ತನ್ನ ಜಮೀನಿನ ಗುರುತು ಪತ್ತೆ ಮಾಡಲಿಕ್ಕಾಗದೇ ಇರುವಂಥ ರೀತಿಯಲ್ಲಿ ಹಾಳಾಗಿದೆ. ಇಷ್ಟು ಲಕ್ಷ ಹೆಕ್ಟೇರ್ ಭೂಮಿ ಹಾಳಾಗಿದೆ, ಇದಕ್ಕೆ ಏನು ಪ್ರಯತ್ನ ಮಾಡಿದಿರಿ? ಇದನ್ನು ಸರಿಪಡಿಸುವುಕ್ಕೆ ಕೃಷಿ ಇಲಾಖೆ ಇರಬಹುದು, ಮತ್ತೊಂದು ಇಲಾಖೆಯಿರಬಹುದು, ಇದನ್ನು ಸರಿಪಡಿಸಲಿಕ್ಕೆ ಯಾವ ರೀತಿಯಾದಂಥ ಪ್ರಯತ್ನಗಳಾಗಿವೆ ಎಂಬ ಬಗ್ಗೆ ಸ್ಪಷ್ಟವಾದ ಚಿತ್ರಗಳು ಬೇಕಲ್ಲವೇ? ಸಾವು ನೋವುಗಳು ಆಗಿರುವುದಕ್ಕೆ ಯಾವ ರೀತಿ ಪರಿಹಾರ ಕೊಟಿದ್ದೀರಾ? ಯಾವರೀತಿ ವಸತಿ ಸಮಸ್ಯೆಗಳನ್ನು ನೀಗಿಸಲಿಕ್ಕೆ ಎಷ್ಟು ಲಕ್ಷ ಮನೆಗಳನ್ನು ನಿರ್ಮಾಣ ಮಾಡಬೇಕು? ಇವತ್ತು ಬೇಕಾದಷ್ಟು ಸಂಘಸಂಸ್ಥೆಗಳು ಮುಂದೆ ಬಂದಿವೆ. ಕೇಂದ್ರಸರ್ಕಾರ ಹಾಗೂ ರಾಜ್ಯ ಸರ್ಕಾರಗಳಿಂದ ಹಣ ಬಂದಿದೆ. ಎರಡೂ ರೀತಿಯಾದಂಥ ಪುನರ್‌ವಸತಿ ಮಾಡಬೇಕೆಂದಿದ್ದೀರಿ. ಯಾವುದೇ, ಎಷ್ಟೇ ಪ್ರವಾಹ ಬಂದರೂ ಕೂಡ ಇವತ್ತು ಅವರಿಗೆ ತೊಂದರೆಯಾಗದ ರೀತಿಯಲ್ಲಿ ಅಲ್ಲಿ ಸಿಗುವಂಥ ಭೂಮಿಯನ್ನು ವಶಕ್ಕೆ ತೆಗೆದುಕೊಂಡು ಅವರಿಗೆ ಶಾಶ್ವತವಾದ ರೀತಿಯಲ್ಲಿ ಮನೆಗಳನ್ನು ಕಟ್ಟಬೇಕು. ಎಷ್ಟು ಭೂಮಿಯನ್ನು ಅಕ್ವೈರ್ ಮಾಡಿದ್ದೀರಿ? ಎಷ್ಟು ಶಾಶ್ವತವಾದ ಮನೆಗಳು, ಯಾರ್‍ಯಾರು ಎಷ್ಟು ಮಠಾಧಿಪತಿಗಳು ಅಥವಾ ಮಠಗಳು ಅಥವಾ ಸ್ವಯಂ ಸೇವಾ ಸಂಘ ಸಂಸ್ಥೆಗಳು, ಯಾರ್‍ಯಾರು ಕೈಗಾರಿಕೋದ್ಯಮಿಗಳು, Philanthropists, ಯಾರ್‍ಯಾರು ಏನೇನು ಭರವಸೆಗಳನ್ನು ಕೊಟ್ಟಿದ್ದಾರೆ? ಎಷ್ಟು ಮನೆಗಳನ್ನು

ಎಲ್ಲೆಲ್ಲಿ ಕಟ್ಟಿದ್ದಾರೆ? ಯಾವರೀತಿ ಆಗಿವೆ? ಸರ್ಕಾರದಿಂದ ನೀವು ಎಷ್ಟೆಷ್ಟು ಮನೆಗಳನ್ನು ಕಟ್ಟಿದ್ದೀರಿ? ಪುನರ್ ವಸತಿಯ ಬಗ್ಗೆ ಸ್ಪಷ್ಟವಾದ ರೀತಿಯಲ್ಲಿ ಮತ್ತು ಪರಿಹಾರವನ್ನು ಯಾವ ರೀತಿಯಲ್ಲಿ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೀರಿ? ಇದರ ಬಗ್ಗೆ ನಿಮ್ಮಲ್ಲಿ ಇವತ್ತಿನವರೆಗೂ ಸ್ಪಷ್ಟ ಚಿತ್ರಣ ಇಲ್ಲ. ನಮಗೆ ತಿಳಿದಿರುವ ಮಟ್ಟಿಗೆ ಇವತ್ತು ಕೇವಲ ನೂರು ಮನೆಗಳನ್ನು ಮಾತಾ ಅಮೃತಾನಂದಮಯಿಯವರು ಬೀಗದಕೈಗಳನ್ನು ನಿಮ್ಮ ಕೈಯಲ್ಲಿ ಕೊಟ್ಟಿರುವುದನ್ನು ಬಿಟ್ಟರೆ ಪುನರ್‌ವಸತಿಯ ಬಗ್ಗೆ ಏನೇನು ಕೆಲಸಗಳನ್ನು ಕೈಗೊಂಡಿರುವಿರಿ, ಅದರ ಪ್ರಗತಿಯ ಬಗ್ಗೆ ಏನೇನಾಗಿದೆ ಎಂಬ ಬಗ್ಗೆ ನಿಮ್ಮಲ್ಲಿ ಸ್ಪಷ್ಟ ಚಿತ್ರಣ ಇದುವರೆಗೂ ಕೂಡ ಬಂದಿಲ್ಲ. ತಾವು ಮರೆಮಾಚುತ್ತಿದ್ದೀರಿ. ಕೇವಲ ಮಾತಿನಲ್ಲೇ ಮನೆ ಕಟ್ಟಲಿಕ್ಕೆ ಹೋಗುತ್ತಿರುವಂಥವರು. ಹಾಗಾಗಿ ನೀವು ಈ ಬಗ್ಗೆ ಯೋಚನೆ ಮಾಡಬೇಕು. ಸರ್ಕಾರದವರು ಈ ಬಗ್ಗೆ ಈ ಸದನದಲ್ಲಿಯಾದರೂ ಇಡಬೇಕು. ಅಥವಾ ಹೊರಗಡೆಯಾದರೂ ಈ ಬಗ್ಗೆ ಮುಖ್ಯಮಂತ್ರಿಗಳು ಏನು ಹೇಳುತ್ತಿದ್ದಾರೆ? ಪುನರ್‌ವಸತಿಯ ಬಗ್ಗೆ ಏನೇನಾಗಿದೆ ಎಂಬುದನ್ನು ಸ್ಪಷ್ಟವಾದ ರೀತಿಯಲ್ಲಿ ಚಿತ್ರಗಳನ್ನು, ಮಾಹಿತಿಯನ್ನು ನೀವು ಸರ್ಕಾರದವರು ಇವತ್ತು ಕೊಡಬೇಕೆಂದು ನಾವು ಕೇಳುತ್ತಿದ್ದೇವೆ. ಮುಖ್ಯಮಂತ್ರಿಯಾದವರು ಮಾತನಾಡುವ ರೀತಿ ಹೇಗೆ? ನಮ್ಮ ಮನಸ್ಸಿಗೆ ಬಹಳ ನೋವಾಗುತ್ತದೆ. ಈಗ ವಿದ್ಯುತ್ ಬಗ್ಗೆ ನಾನು ಮಾತನಾಡಲಿಕ್ಕೆ ಹೋಗುವುದಿಲ್ಲ. Power generation ಒಂದೇ ನೀವು ಮಾತನಾಡಿರುವುದು. ನಾನು ಇದರ ಬಗ್ಗೆ ಪ್ರಶ್ನೆ ಮಾಡುವುದಿಲ್ಲ. ಇವತ್ತು ಹೇಳಿದ್ದೀರಿ, ಇದರ ಬಗ್ಗೆ ಸಾಕಷ್ಟು ಇಲ್ಲಿರುವವರೆಲ್ಲರ ಕಂಠ ಶೋಷಣೆಗಳಾಗಿವೆ. ಮುಖ್ಯಮಂತ್ರಿಗಳೂ ಕೂಡ ಯಾವ ಅಧಿಕಾರಿಗಳು ಉತ್ತರ ಕೊಡುತ್ತಾರೆ ಅದನ್ನೇ ಉತ್ತರ ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳು ಈಗ ಕೊಟ್ಟಿರುವ ಉತ್ತರವನ್ನೇ ಹತ್ತು ಹದಿನೈದು ದಿವಸಗಳ ಹಿಂದೆ ಕೆ.ಪಿ.ಟಿ.ಸಿ.ಎಲ್.ನ ಎಂ.ಡಿ ಕೊಟ್ಟಿರುವುದನ್ನು ನೋಡಿದ್ದೇವೆ. ಅದನ್ನೇ repeat ಮಾಡಿದ್ದಾರೆ. ಅವರು ಬಿಡಿ, ಅಧಿಕಾರಿಗಳು ಕೊಡುತ್ತಾರೆ, ಅವರು IAS steel frame ಒಳಗೆ ಮಾಡುತ್ತಾರೆ. ಅವರಿಗೆ ಜನಗಳ obligation ಇದೆಯೇ?

ಅದೇನು ಹೊರಗಡೆ ಬರುವುದಿಲ್ಲ. ಕೆ.ಪಿ.ಟಿ.ಸಿ.ಎಲ್. ಎಂ.ಡಿ.ಯವರು power crisis ಬಗ್ಗೆ ಏನು ಉತ್ತರ ಕೊಟ್ಟಿದ್ದಾರೆಂದು ನಾನು ನೋಡಿದ್ದೇನೆ. ಪ್ರಶ್ನೆ ಕೇಳಿದಾಗ ಅವರು ಹೇಳುತ್ತಿದ್ದರು. ಬೆಂಗಳೂರಿಗೆ 22 ಗಂಟೆ ವಿದ್ಯುತ್ ಕೊಡುತ್ತೇವೆ. 20 ಗಂಟೆ ಮೈಸೂರಿನಂಥ ಪಟ್ಟಣಗಳಿಗೆ ಕೊಡುತ್ತೇವೆ. Single phase, three phase ನಲ್ಲಿ ಹಳ್ಳಿಗಳಿಗೆ ಎಷ್ಟು ಕೊಡುತ್ತೇವೆಂದು ಹೇಳಿದರು. ಹಾಗಾದರೆ ಎಲ್ಲರೂ ದೂರು ಕೊಡುತ್ತಿದ್ದಾರಲ್ಲಾ? ಇನ್ನೂ ಕೂಡ ವಿದ್ಯುತ್ ಸಮಸ್ಯೆ ಇದೆ, ಅವರು ಹೇಳುವುದೆಲ್ಲಾ ಸುಳ್ಳು, ಅದು ಸರಿಯಲ್ಲ ಎಂದು ನಿಮ್ಮ ಕೆ.ಪಿ.ಟಿ.ಸಿ.ಎಲ್. ಎಂ.ಡಿ. ಯವರು ಹೇಳಿದರೆ, ಅದನ್ನೇ ನಿಮ್ಮ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಆತ ಹಾಗೆ ಹೇಳುತ್ತಾರೆ ಬಿಡಿ. He does not have any people`s obligation. ಅವರಿಗೆ ಜನರ ಹಂಗು ಗೊತ್ತಿಲ್ಲ, ನಾನು ಹೇಳಿದಂತೆ ಒಂದು IAS Steel frame ಒಳಗೆ ಇರುತ್ತಾರೆ, ಅದನ್ನು ಹೇಳಿಬಿಟ್ಟು ಮನೆಗೆ ಹೋಗುತ್ತಾರೆ. ವಿದ್ಯುತ್‌ನ ಸಮಸ್ಯೆ ಹೇಗಿದೆ ಎಂದು ಹೇಳಿ ಮುಖ್ಯಮಂತ್ರಿಗಳಿಗೆ, ನಿಮ್ಮ ಪಕ್ಷದ ಶಾಸಕರು ಹೇಳುವುದಕ್ಕೆ ಗೊತ್ತಿಲ್ಲವೇ? ನಿಮ್ಮ ಪಕ್ಷದ ಕಾರ್ಯಕರ್ತರು ಹೇಳುತ್ತಿಲ್ಲವೇ? ನಿಮಗೆ vote ಕೊಟ್ಟಂಥವರು ಹೇಳುತ್ತಿಲ್ಲವೇ? ವಿರೋಧ ಪಕ್ಷದಲ್ಲಿರುವ ನಾವು ಹೇಳುತ್ತಿಲ್ಲವೇ? ಮತ್ತೆ ಅವರು ಹೇಳಿದ್ದನ್ನೆ ನೀವು ಬಂದು ಇಲ್ಲಿ ಉತ್ತರ ಕೊಡುವಂಥದ್ದೇ? ಮುಂದೆ ನಾವೇನು ಮಾಡುತ್ತೇವೆ? ಹಿಂದಿನ ಸರ್ಕಾರಗಳ ಬಗ್ಗೆ ಹೇಳುವುದು. ನಮ್ಮ ಅವಶ್ಯಕತೆಗೆ ತಕ್ಕಂತೆ ವಿದ್ಯುತ್ ಉತ್ಪಾದನೆ ಆಗಿಲ್ಲ, ಸಾಮರ್ಥ್ಯವನ್ನು ನಾವು ವಿಸ್ತರಣೆ ಮಾಡಲಿಕ್ಕೆ ಹೋಗಲಿಲ್ಲ. ಈಗ ನಾವು ಮಾಡುತ್ತೇವೆ ಎನ್ನುವುದು. ನೀವು ಮಾಡಿ. ಎಷ್ಟು ಮೆಗಾವ್ಯಾಟ್ ಬೇಕು, ಎಲ್ಲಿ ಎಷ್ಟು ವಿದ್ಯುತ್ ಖರೀದಿಸುತ್ತೀರಿ? ಎಂಬುದರ ಬಗ್ಗೆ ನಾವು ಪ್ರಶ್ನೆ ಮಾಡಲಿಕ್ಕೆ ಹೋಗುವುದಿಲ್ಲ. ನಾವು ಪ್ರಶ್ನಿಸುವುದು ನಿಮ್ಮ ಸರ್ಕಾರ ಬಂದಂಥ ದಿನದಿಂದಲೂ ಕೂಡ ವಿದ್ಯುತ್ ಬಗ್ಗೆ ಕೇವಲ ಉಡಾಫೆ ಉತ್ತರ ಬರುತ್ತಿದೆ. ನಿರಂತರ ವಿದ್ಯುತ್ ಕೊಡುತ್ತೇವೆಂದು ನಿರಂತರ ಸುಳ್ಳು ಹೇಳುವಂಥವರು ಒಬ್ಬರು ಸಚಿವ ಸಂಪುಟದಲ್ಲಿದ್ದಾರೆಂದರೆ ಅವರು ಇವತ್ತಿನ ಬಿಜೆಪಿಯ ಅಧ್ಯಕ್ಷರಾಗಿರುವಂಥ ಶ್ರೀ ಈಶ್ವರಪ್ಪನವರು ಅವರು ಇಂಧನ ಸಚಿವರಾಗಿದ್ದಾಗ

ಒಂದು ದಿನವಾದರೂ ಸತ್ಯವನ್ನೇ ಹೇಳಿಲ್ಲ. Availability of power ಏನಿದೆ ಎಂದು ನಾವು ಕೇಳುವಂಥದ್ದು. ಅದರಲ್ಲಿ demand and supplyಯಲ್ಲಿ supply ಮಾಡಲಿಕ್ಕಾಗದೆ ಬೇಡಿಕೆಯನ್ನು ಯಾವ ರೀತಿಯಲ್ಲಿ ಚಾಕಚಕ್ಯತೆಯಿಂದ ಅದನ್ನು ಕೊಡುವಿರಿ ಎನ್ನುವುದು ನಮ್ಮ ಪ್ರಶ್ನೆ ವಿದ್ಯುತ್ ತೊಂದರೆ ನಿಮಗೆ ಮಾತ್ರ ಬಂದಿಲ್ಲವೆಂಬುದು ನಮಗೂ ಗೊತ್ತಿದೆ. ನೀವು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿಬಿಟ್ಟಿದ್ದೀರಿ, ಈಗ ಬಜೆಟ್‌ನಲ್ಲಿ ಬರುತ್ತದೆ, ನೀವು election manifesto ದಲ್ಲಿ vote ತೆಗೆದುಕೊಳ್ಳುವುದಕ್ಕೆ ಹೇಳಿದಿರಿ. Election manifesto ದಲ್ಲಿ ನಿಮ್ಮ ಭರವಸೆಗಳೇನು? ಒಂದು ಲಕ್ಷ ಕೋಟಿ ರೂಪಾಯಿಗಳು ಬೇಕಾಗಿತ್ತು. ನಾಳೆ ಅಧಿಕಾರಕ್ಕೆ ಬಂದರೆ ಏನು ಮಾಡುತ್ತೀರಿ? ಎಲ್ಲಿಂದ ಒಂದು ಲಕ್ಷ ಕೋಟಿ ರೂಪಾಯಿಗಳ resourceಅನ್ನು mobilize ಮಾಡುತ್ತೀರಿ ? ಎಂದು ಮಾಧ್ಯಮದ ಸ್ನೇಹಿತರು ಇದನ್ನು ಪ್ರಶ್ನೆ ಮಾಡಿದರು. ನಿಮಗೂ ಏನು ಕನಸಲ್ಲವೇ? ಅಧಿಕಾರಕ್ಕೆ ಬರಬೇಕೆನ್ನುವುದು ನಿಮಗೂ ಏನು ಕನಸಲ್ಲವೇ? ಆಯಿತು, ಹೇಳಿದ್ದೇವೆ, ನೋಡೋಣ ಎಂದು ಅಧಿಕಾರಕ್ಕೆ ಬಂದ ಮೇಲೆ ನೋಡಿಕೊಂಡರಾಯಿತು, ಬಿಡಿ ಮಾಡುತ್ತೇವೆಂದು. ಏನಾಗಿದೆ ಎರಡು ಬಜೆಟ್‌ನಿಂದ ಅದು ಬೇರೆ, ಅದು ನಾಳೆ ಬಜೆಟ್‌ನಲ್ಲಿ ಬರುತ್ತದೆ, ಖೋತಾ ಎಷ್ಟು? Resource ಎಷ್ಟು? ಎಲ್ಲಾದರೂ ಉಂಟೇ? ಮುಖ್ಯಮಂತ್ರಿಗಳೆ, finance portfolio ಇಟ್ಟುಕೊಂಡು ನಿಮ್ಮ ನೂರೆಂಟು ರಗಳೆಯಿಂದ, ಆಗುತ್ತದೆಯೇ? ನಿಮ್ಮ ಅಧಿಕಾರಿಗಳ ಕುತ್ತಿಗೆ ಮೇಲೆ ಕೂತು ಸಂಪನ್ಮೂಲಗಳನ್ನು ತಂದು ಟ್ರೆಜರಿ ತುಂಬಿದರೆ ಸರ್ಕಾರ ನಡೆಯುತ್ತದೆ, ಏನಿಲ್ಲ. Mining, Forest, Electricity ಎಲ್ಲಾ ನಿಮ್ಮ ಮುಖ್ಯಮಂತ್ರಿಗಳದ್ದೇ, ಅವರೇನು ಮಾಡಬೇಕು? ಜೊತೆಗೆ ನಿಮ್ಮ ಆಂತರಿಕ ಕಲಹಗಳು ಬೇರೆ. ಯಾರನ್ನು ತೆಗೆಯಬೇಕು? ಒಂದು ಪೋಸ್ಟ್ ಆದರೆ ರಿಸಾರ್ಟ್‌ನಲ್ಲಿ ನೀವು ಯಾರ್‍ಯಾರು ಸೇರುತ್ತೀರಿ? ಏನು ಕೊಡುತ್ತೀರಿ? ಇದೇನು ಸರ್ಕಾರವನ್ನು ನಡೆಸಿ ಅಂದರೆ ಏನು ಹೇಳುತ್ತೀರಿ? ನಾನು ಅದನ್ನು ಕೇಳಿಲ್ಲ. Erratic load shedding ಬಗ್ಗೆ ನಾವು ಕೇಳಿದ್ದು. Erratic power supply ಏಕೆ ಆಗುತ್ತಿದೆ ಎಂದು ನಾವು ಪ್ರಶ್ನೆ ಕೇಳಿದ್ದೇವೆ.

ನೀವು ಐದು ಗಂಟೆಯೇ ವಿದ್ಯುತ್ ಕೊಡಿ, ನೀವು ಕೊಡುವಂಥದ್ದನ್ನು ನಿರ್ದಿಷ್ಟವಾಗಿ ಹೇಳಿ ಎಂದು ರೇವಣ್ಣನವರು ಹೇಳಿದರು. ನಾವು ಚುನಾಯಿತ ಪ್ರತಿನಿಧಿಗಳು ಹೇಳುತ್ತೇವೆ, ನಮ್ಮ ಕ್ಷೇತ್ರದಲ್ಲಿ ಒಬ್ಬ ನಾನು ಊಟ ಮಾಡುತ್ತಿದ್ದೆ, ಸ್ವಾಮಿ ಕರೆಂಟ್ ಹೋಯಿತು. ನಾವು ಅವರಿಗೆ ಉತ್ತರ ಕೊಡಬೇಕಾದವರು. ಅವರನ್ನು ಏಕಪ್ಪಾ ಎಂದು ಕೇಳಿದೆ? ನಾವು ನಿಮಗೆ vote ಕೊಟ್ಟಿಲ್ಲ ಸ್ವಾಮಿ. ಈಗ ಊಟ ಮಾಡುವಾಗ ಗೊತ್ತಾಯಿತು ಯಾರಿಗೆ vote ಕೊಟ್ಟು ತಪ್ಪು ಮಾಡಿದೆ ಎಂದು ಹೇಳಿದರು. ಇದನ್ನು ರಾಜಕೀಯ ಮಾಡುತ್ತಿದ್ದೇನೆಂದು ತಿಳಿಯಬೇಡಿ, ಅವರ ಮನಸ್ಸಿನಲ್ಲಿದ್ದುದನ್ನು ಹೇಳುತ್ತಾರೆ. ಜನರ ಭಾವನೆಗಳೇನು ಎಂದು ಅರ್ಥ ಮಾಡಿಕೊಳ್ಳಬೇಕು. ಆತ ಮಾತನಾಡುತ್ತಾ ಹೇಳಿದರು. ಯಾವ ಟೈಮ್‌ನಲ್ಲಿ ಕರೆಂಟ್ ಕೊಡುತ್ತೀರಿ ಎಂದು ಹೇಳಿದರೆ ಆ ಸಮಯದಲ್ಲಿ ಅವರು ಊಟ ಮಾಡುತ್ತಾರೆ. ನೀವು ಕರೆಂಟ್ ಕೊಡುವಾಗ ಒಬ್ಬ ಕೃಷಿಕ, ಕೈಗಾರಿಕೋದ್ಯಮಿ, ವಿದ್ಯಾರ್ಥಿಗಳಿಗಾಗಲಿ, ಗೃಹ ಕೃತ್ಯಗಳಿಗಾಗಲಿ ನೀವು ಯಾವ ಸಮಯಕ್ಕೆ ವಿದ್ಯುತ್ ಕೊಡುತ್ತೀರಿ ಎಂದು ಒಂದು ತಿಳಿವಳಿಕೆ ಬರುವಂಥ ರೀತಿಯಲ್ಲಿ ಯಾವ ರೀತಿ ಲೋಡ್ ಶೆಡ್ಡಿಂಗ್ ಮಾಡಬೇಕು ಎನ್ನುವ ಬಗ್ಗೆ ಚಿಂತನೆ ಮಾಡಿ, ಇಷ್ಟನ್ನಾದರೂ ಮಾಡಬಾರದೇ? ಇದರ ಬಗ್ಗೆ ಯಾವತ್ತಾದರೂ, ಇಲ್ಲಿಯವರೆಗೆ ಹೇಳಿದ್ದೀರಾ? ನಿರಂತರವಾಗಿ ಸುಳ್ಳು ಹೇಳುತ್ತಿದ್ದೀರಿ, ಇಲ್ಲಿಯವರೆಗೆ ನಿಮಗೆ ವಿದ್ಯುತ್ ಕೊಡಲಿಕ್ಕಾಗಲಿಲ್ಲ. ಒಂದು ಸಾವಿರ ಕೋಟಿ ರೂಪಾಯಿಗಳಿಗೆ ತರುತ್ತೇವೆ, ಮಾಡುತ್ತೇವೆಂದು ಹೇಳಿದ್ದೀರಿ. ಇನ್ನು ಮೇಲಾದರೂ ನಿರಂತರವಾಗಿ ವಿದ್ಯುತ್ ಬಗ್ಗೆ ಏನು ಚರ್ಚೆ ಆಯಿತು, ಅದರ ಬಗ್ಗೆ ಉತ್ತರಿಸುವ ಸಂದರ್ಭದಲ್ಲಿ ಹೇಳಿ. ನಿಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಉತ್ಪಾದನೆ ಮಾಡಿ. Power generation ಹೇಗೆ ಮಾಡಬೇಕೆಂದು ನೀವು ಮಾಡಿ, ಆದರೆ ಇರುವಂಥದ್ದನ್ನಾದರೂ ಕೊಡಬೇಕೆನ್ನುವ ಮಾತನ್ನು ನೀವು ಉಳಿಸಿಕೊಳ್ಳದಿದ್ದರೆ ಹೇಗೆ? ನಮ್ಮ ವಿರೋಧ ಪಕ್ಷದ ನಾಯಕರೆ, ಮುಖ್ಯಮಂತ್ರಿಗಳನ್ನು ಕೇಳುವಾಗ ನಮಗೆ ಭಯವಾಗುತ್ತಿತ್ತು. ಏಕೆಂದರೆ ಹೆಚ್ಚು ಕಡಿಮೆ ಮಾಡಿದರೆ ಕಷ್ಟ. ಯಾರಾದರೂ ಆಗಲಿ ಕ್ರಿಶ್ಚಿಯನ್‌ರಿಗೆ ಏನಾದರೂ

ತೊಂದರೆಯಾದಾಗ ಯಾರೇ ಆಗಲಿ, ಒಬ್ಬ ಮುಖ್ಯಮಂತ್ರಿಗಳು ಆ ರೀತಿ ಕೈ ಕಡಿಯಿರಿ ಎಂಬ ಮಾತನ್ನು ಹೇಳಿಬಿಡುವುದೆ? ಏಕೆ ಹೇಳುತ್ತೇನೆಂದರೆ ವಿದ್ಯುತ್ ಸಮಸ್ಯೆ ಬಂದಾಗಲೂ ಸಹ ಹೇಳಿಲ್ಲವೆಂಬ ನೆಮ್ಮದಿಯಿಂದ, ಕಡಿದು ಬಿಡಿ ಎಂದು ಹೇಳಲಿಲ್ಲ. ಯಾರಾದರೂ ಇವತ್ತು ನಿಮ್ಮ ಸರ್ಕಾರದಲ್ಲಿ ನಿಮ್ಮ ಟ್ರೆಜರಿ ಖಾಲಿಯಾಗಿದೆ, ಆರ್ಥಿಕ ಸಮಸ್ಯೆ ಇದೆ. ಹಣಕಾಸಿನ ಮುಗ್ಗಟ್ಟು ಇದೆ, ಕೆಲಸಗಳು ನಡೆಯುತ್ತಿಲ್ಲ. ಬಡವರಿಗೆ ಸಹಾಯವಾಗುತ್ತಿಲ್ಲ, ಹಾಗಾದರೆ ಯಡಿಯೂರಪ್ಪನವರು ಒಬ್ಬ ಅಸಮರ್ಥ ಮುಖ್ಯಮಂತ್ರಿ ಅಥವಾ ಹಣಕಾಸಿನ ಸಚಿವರು ಎಂದು ಹೇಳಿದರೆ ಅವನ ನಾಲಿಗೆ ಸೀಳಿ ಎಂದು ಹೇಳಿಬಿಡುವುದು. ಈಗ ಅವರು ಇಂಧನ ಸಚಿವರು, ಸ್ವಾಮಿ ನಮಗೆ ಕರೆಂಟ್ ಕೊಡಿ ಎಂದು ಕೇಳಿದರೆ ಯಾರಿಗೆ ಕರೆಂಟ್ ಕೊಡುವುದು, ಅವರಿಗೆ ಕರೆಂಟ್ ಶಾಕ್ ಕೊಡಿ ಎಂದು ಹೇಳಿಲ್ಲ ಸಧ್ಯ. ಅದನ್ನು ಹೇಳಿಬಿಡಬೇಕಾಗಿತ್ತು, ಅದನ್ನು ಹೇಳುತ್ತಾರೇನೋ ಎಂದಿದ್ದೆವು. ಈ ರೀತಿಯಲ್ಲಿ ಮುಖ್ಯಮಂತ್ರಿಗಳು ಮಾತನಾಡಬಾರದು. ಅವರಿಗೆ ತಾಳ್ಮೆ ಇರಬೇಕು. ಜನರಿಗೆ ಮನವಿ ಮಾಡಬೇಕು, ವಸ್ತುಸ್ಥಿತಿಯನ್ನು ತಿಳಿಸಿ ಹೇಳಬೇಕು. ಅದು ಬೇಕು. ಬಹುಶ: ಈ ರೀತಿಯಲ್ಲಿ ವಿದ್ಯುತ್ ಬಗ್ಗೆ ಕೂಡ ಅವರು ಮಾತನಾಡುತ್ತಿರುವುದು ನನಗೆ ಅಷ್ಟಾಗಿ ಸಮಂಜಸವಾಗಿ ಕಾಣಲಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಅವರು ಭಾವುಕರಾಗಿ ಮಾತನಾಡುವಾಗ ಆ ರೀತಿ express ಮಾಡಿದ್ದಾರೆ ವಿನಾ:

4.10 ಪಿ.ಎಂ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : Opposition ನಲ್ಲಿದ್ದುಕೊಂಡು ನಾವು advise ಮಾಡಬಾರದೇ ನಿಮಗೆ ? ಪ್ರತಿಯೊಂದಕ್ಕೂ ಈ ರೀತಿ ಕೇಳಿದರೆ ಹೇಗೆ?

ಶ್ರೀ ಬಿ.ಎನ್. ಬಚ್ಚೇಗೌಡ : ಅವರು ಭಾವುಕರಾಗಿ ಹೇಳಿದ್ದಾರೆಯೇ ವಿನಾಃ, ಕೈ ಕಡಿಯಿರಿ ಎಂದು ಹೇಳಿದರು ಎಂದು ತಾವು ಪದೇ ಪದೇ ಅದನ್ನೇ ಹೇಳುತ್ತಿದ್ದೀರಿ ಅದಕ್ಕೆ ಹೇಳಿದೆ ಅಷ್ಟೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ನಮ್ಮ ಬಚ್ಚೇಗೌಡರಷ್ಟು ಮಾನ್ಯ ಮುಖ್ಯಮಂತ್ರಿಗಳನ್ನು ಓಲೈಸುವರು ಯಾರೂ ಇಲ್ಲಿ ಕಾಣಲಿಲ್ಲವಲ್ಲ ಏಕೆ ?

ನೀವು ಮಾನ್ಯ ಮುಖ್ಯಮಂತ್ರಿಗಳನ್ನು ಬಹಳಷ್ಟು ಓಲೈಸುತ್ತೀರಿ. ಇಲ್ಲಲ್ಲ. even ಹೊರಗಡೆ ಬಹಳ emotional ಆಗಿ ಕೆಲವು ಪತ್ರಿಕಾ ಗೋಷ್ಠಿಯಲ್ಲಿ ನೀವು ಮಾತನಾಡುವುದನ್ನು ನಾನು ನೋಡಿದ್ದೇನೆ. ಏಕೆಂದರೆ, ನಾವು ಸ್ನೇಹಿತರು, we have been good friends. ಈಗಲ್ಲ, 1977 ನಿಂದಲೂ ನಾವು ಹಾಗೂ ಬಚ್ಚೇಗೌಡರು ತುಂಬಾ ಸ್ನೇಹಿತರು. ಆದರೆ ಕೆಲವು ಸಲ ಬಹಳ ಉದ್ವೇಗಕ್ಕೆ ಒಳಗಾಗುವುದು ಬೇಡ. ರಾಜಕಾರಣಿಗಳು ನಾವು ಎಲ್ಲಿ ತುಂಬಾ ಉದ್ವೇಗಕ್ಕೆ ಒಳಗಾಗುತ್ತೇವೋ ಅಲ್ಲಿ ನಮ್ಮದೆಲ್ಲಾ brainless decision ಆಗುತ್ತವೆ. We think that we are out-spoken ಎಂದು. ಖಂಡಿತ ಅಲ್ಲ. ಅದನ್ನು ಮಾಡುವುದಕ್ಕೆ ಹೋಗಬೇಡಿ. ದಯವಿಟ್ಟು ಕೇಳಿ. ನಾನು ಹೇಳುತ್ತಿರತಕ್ಕಂಥದ್ದು, ವಿದ್ಯುತ್‌ನ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ. ಇನ್ನು ಮುಂದೆ ಲೋಡ್ ಶೆಡ್ಡಿಂಗ್ ಬಗ್ಗೆ ಮಾತನಾಡಿ ಇನ್ನೇನು ಇಲ್ಲ. ಲೋಡ್ ಶೆಡ್ಡಿಂಗ್ ಮಾಡುವಾಗಲೂ ಕೂಡ ನೀವು ಬುದ್ಧಿವಂತಿಕೆಯಿಂದ ಅದನ್ನು ಯಾವ್ಯಾವ ಸಮಯದಲ್ಲಿ ಯಾರ್ಯಾರಿಗೆ ಕೊಡುತ್ತೇವೆ ಎನ್ನುವುದನ್ನು ಹೇಳಿದರೆ, ಬಹುಶಃ ಅದಕ್ಕೆ ತಕ್ಕಂತೆ ಉಪಯೋಗ ಪಡೆಯುವಲ್ಲಿ ತೊಂದರೆಗೀಡಾಗದಂತಹ ರೀತಿಯಲ್ಲಿ ಅದು ಆಗುತ್ತದೆ ಎಂದು ಇವತ್ತು ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ. ಬಹಳ ಮುಖ್ಯವಾದಂತಹ ವಿಚಾರ ಈ ಸದನದಲ್ಲಿ ಆಗಬೇಕಾಗಿತ್ತು. ಏಕೆ ಆಗಲಿಲ್ಲ? ಮಾನ್ಯ ರೇವಣ್ಣನವರೆ, ನೀವೂ ಪ್ರಸ್ತಾಪ ಮಾಡಲಿಲ್ಲ? ಇವತ್ತು ಇಡೀ ರಾಜ್ಯ ಹೊತ್ತು ಹೊರಿಯುತ್ತದೆ. ನೈಸ್ ವಿಷಯ ಎಲ್ಲಿ ನಿಂತುಕೊಳ್ಳುತ್ತದೆಯೋ ಗೊತ್ತಿಲ್ಲ. ನೈಸ್ ವಿಷಯ ಇವತ್ತು ಎಲ್ಲಿಗೆ ಬಂದಿದೆ ಗೊತ್ತಿದೆಯೇ? ನಾನು ಕೂಡ ಲೋಕಸಭೆಯಲ್ಲಿ ಬೋಫೋರ್ಸ್ ಬಗ್ಗೆ ಮಾತನಾಡಿದ್ದೇನೆ. ಹಲವು ಕೋಟಿ ರೂಪಾಯಿಯ ಬೋಫೋರ್ಸ್ ಹಗರಣದಲ್ಲಿ ಕ್ವಟ್ರೋಚಿ ಹಾಗೂ ಇನ್ನಿತರರ ತನಿಖೆ ಇವತ್ತಿಗೂ ಮುಗಿದಿಲ್ಲ. ಸುಮಾರು 60–70 ಕೋಟಿ ರೂ.ಗಳ kick-back ಹೋಗಿರಬಹುದು. ಇವತ್ತಿಗೂ ತನಿಖೆ ನಡೆಯುತ್ತಿದೆ. ಆದರೆ ನಿಮ್ಮ ನೈಸ್ ಕಂಪನಿಯ ವಿಷಯಕ್ಕೆ ಬಂಗಾಗ, this is the great great grandfather of Bofors ಒಬ್ಬರು ಮಾಜಿ ಪ್ರಧಾನ ಮಂತ್ರಿಗಳು

ಹೇಳುವ ಹಾಗೆ 20–30 ಸಾವಿರ ಕೋಟಿ ರೂ.ಗಳು ಲೂಟಿಯಾಗುವ ರೀತಿಯಲ್ಲಿ ಆಗುತ್ತಿದೆ. ಏನಿದು? ನೈಸ ಕಂಪನಿಯದ್ದು ಎಲ್ಲಿಯವರೆಗೂ ಆಗುತ್ತಿದೆ ಎಂದು ಮಾನ್ಯ ಬಚ್ಚೇಗೌಡರೇ ತಮಗೇ ಗೊತ್ತಿದೆ ಯಾವ ತರಹ ಉದ್ವಿಗ್ನವಾಗುತ್ತಿದೆ ಎಲ್ಲಿಗೆ ಹೋಗಿ ನಿಲ್ಲುತ್ತದೆ ಎಂದು ಗೊತ್ತಿಲ್ಲ. Is this House not competent to discuss all these things? ನೈಸ್ ವಿಚಾರದ ಬಗ್ಗೆ ನಾವು ಮಾತನಾಡಬಾರದೇ? ನೈಸ್ ವಿಚಾರ ಎಲ್ಲಿಗೆ ಹೋಗಿ ನಿಲ್ಲುತ್ತದೋ ಏನೋ? ಒಂದು ಕಡೆ Ex-Prime Minister ಅವರು "come what may, we will see. ಇದನ್ನು ಬಿಡುವುದಿಲ್ಲ" ಎಂದು ಶಪಥ ಮಾಡಿದ್ದಾರೆ. ನಿರಂತರವಾದಂತಹ ಹೋರಾಟ ಯಾವ ರೀತಿ ನಡೆಯುತ್ತಿದೆ ಎಂದು ತಮಗೆ ಗೊತ್ತಿದೆ. ಅದಕ್ಕೆ ಪ್ರತಿಯಾಗಿ ಖೇಣಿಯವರು ಯಾವ ರೀತಿ ಹೇಳಿಕೆಗಳನ್ನು ಕೊಡುತ್ತಾರೆ, ಅದಕ್ಕೆ ಪ್ರತಿಯಾಗಿ ಮುಖ್ಯಮಂತ್ರಿಗಳು ಯಾವ ರೀತಿ ಹೇಳಿಕೆ ಕೊಡುತ್ತಿದ್ದಾರೆ, ಮುಖ್ಯಮಂತ್ರಿಗಳ ಹೇಳಿಕೆಯನ್ನು ನಾನು ಒಪ್ಪುತ್ತೇನೆ. ನಮ್ಮದ್ದಲ್ಲ ಅದು, ಎಲ್ಲಿಂದ ನೈಸ್ ಕಂಪನಿ ಬಂದಿತು, ಯಾವ ಮುಖ್ಯಮಂತ್ರಿಗಳಿಂದ ಏನೇನು ಪ್ರಾರಂಭವಾಯಿತು, ಯಾವ ರೀತಿ ಒಡಂಬಡಿಕೆಯಾಗುತ್ತಿತ್ತು. ಯಾವ ರಿತಿ agreement ಆಗುತ್ತಿತ್ತು., ಯಾರ್‍ಯಾರ ಕಾಲದಲ್ಲಿ ಏನಾಗಿದೆ. ಎಲ್ಲಿ violation ಆಗಿದೆ, ಎಲ್ಲಿ deviate ಆಗಿದೆ, ಇದಕ್ಕೆ ಯಾರು ಕಾರಣಕರ್ತರು ಎಂದು ಈ ಸದನದಲ್ಲಿ ಚರ್ಚೆ ಮಾಡುವುದು ಬೇಡವೇ? ಏಕೆ ರಾಜ್ಯಪಾಲರ ಭಾಷಣದಲ್ಲಿ ನೈಸ್ ವಿಷಯ ತರಲಿಲ್ಲ? ಏಕೆ ಇದರಲ್ಲಿ ಚರ್ಚೆ ಮಾಡಬಾರದು? ಇದರಲ್ಲಿ ಬರಲಿ. ಯಾವ್ಯಾವ ಗೋಡೌನ್‌ನಲ್ಲಿ ಏನೇನು ಹೆಗ್ಗಣಗಳು ಇವೆಯೋ ಎಂದು ಹೊರಗಡೆ ಬಂದಾಗ ಅಲ್ಲವೇ ಗೊತ್ತಾಗುವುದು ಎಷ್ಟು ಬರುತ್ತಿವೆ ಎಂಬುದು. ಈಗ ಬರುತ್ತಿವೆ. ಬರತಕ್ಕಂಥದ್ದನ್ನು ನಾವು ಕಾಣುತ್ತಿದ್ದೇವೆ. ನೈಸ್ ವಿಷಯ ಈ ಸದನದಲ್ಲಿ ಚರ್ಚೆಯಾಗಲೇಬೇಕು. ಒಂದಲ್ಲ ಎರಡಲ್ಲ ಮೂರು ದಿನಗಳ ಕಾಲ ಆಗಲಿ ಸದನದಲ್ಲಿ ಮುಕ್ತವಾಗಿ ಚರ್ಚೆಯಾಗಬೇಕು. ಇದು ಬಹಳ ದೊಡ್ಡ ಹಗರಣವಾಗಿರತಕ್ಕಂಥದ್ದು ಇಡೀ ಜನರಿಗೆ ಗೊತ್ತಿರತಕ್ಕಂಥದ್ದು, law and order problem ಕೂಡ ಆಗುತ್ತದೆ. ತುರಿದು ಹೋಗಿಬಿಡುತ್ತದೆ. ಬೇಡಿ,

ದಯಮಾಡಿ ಈ ಸದನದಲ್ಲಿ ಚರ್ಚೆಯಾಗಬೇಕು, ಬಹುಶಃ ಸುಪ್ರೀಂಕೋರ್ಟ್ ಸಹ, Experts Committee ಮಾಡಿ, ಅಂದರೆ ಅದರ ಮುಖಾಂತರ ವಿಷಯಗಳನ್ನು ತೆಗೆದುಕೊಂಡು ನಮ್ಮಂತಹ Assembly ಯಲ್ಲಿ ಚರ್ಚೆಯಾಗಬೇಕೆಂದು ಅವರು ಸಲಹೆ ಕೊಟ್ಟಿರುವುದನ್ನು ನಾವು ನೋಡುತ್ತಿದ್ದೇವೆ. ಯಾವ್ಯಾವ ರೀತಿಯಲ್ಲಿ ಇವತ್ತು ನಡೆಯುತ್ತಾ, ಹೆಚ್ಚಿಗೆ ಮಾತನಾಡದೆ, ಶಾಂತ ಕರ್ನಾಟಕದ ಬಗ್ಗೆ ಕೂಡ ಮಾಡಿದ್ದೀರಿ. ನೀವು ಹೇಳಿದಾಗ ಚೆನ್ನಾಗಿತ್ತು. ಒಂದು ವರ್ಷದಿಂದ law and order problem ಆಗಲಿಲ್ಲ. ಗೋಲಿಬಾರ್‌ನಲ್ಲಿ ಯಾರೂ ಕೂಡ ಸತ್ತಿಲ್ಲ. ನಕ್ಸಲ್ ಬಾರಿ stop ಮಾಡಿದ್ದೇವೆ, ಏನೂ ಇಲ್ಲವೆಂದು ಹೇಳಿದ್ದೀರಿ. ಪಾಪ ನಿಮ್ಮ ಗ್ರಹಚಾರವೋ ಅಥವಾ ಏನೋ ಗೊತ್ತಿಲ್ಲ. ನಿಮ್ಮ ಮನಸ್ಸಿನಲ್ಲಿ hidden agenda ಏನೋ firing ಆಗಬೇಕೆಂದು ಇದೆಯೋ? ಕೆಲವು ಅಹಂ ಶಕ್ತಿಗಳೂ ಕೂಡ ಇವತ್ತು ಅದರಲ್ಲಿ ಇದ್ದಾರೆ ಎನ್ನುವುದನ್ನು ನಾನು ತಿಳಿಸಿ ಹೇಳಬೇಕಾಗುತ್ತದೆ. ಏಕೆಂದರೆ, ಶಾಂತಿಯುತ ಕರ್ನಾಟಕದಲ್ಲಿ ಹೇಳಿದಿರಿ, ಐದು ವರ್ಷಗಳಲ್ಲಿ ಮೊಟ್ಟ ಮೊದಲ ಬಾರಿಗೆ ಕಳೆದ ಒಂದು ವರ್ಷದಲ್ಲಿ ಪೋಲೀಸ್ ಗೋಲಿಬಾರ್‌ನಿಂದ ಯಾರೂ ಸತ್ತಿಲ್ಲವೆಂದು ಹೇಳಿದಿರಿ. ಇದಾದ ಮಾರನೇ ದಿನವೇ ನಿಮಗೆ ಗೊತ್ತಿದೆ ಎಂತಹ ಕ್ಷುಲ್ಲಕ ವಿಚಾರಗಳಿವೆ "ಪರ್ದಾ ಹೈ ಪರ್ದಾ" ಎಂಬ ಡಾ: ತಸ್ಲೀಮ್ ರವರ ಲೇಖನದ ಹಿನ್ನೆಲೆಯಲ್ಲಿ ಯಾವ ರೀತಿಯಾದಂಥ ಪ್ರಕ್ಷುಬ್ಧ ವಾತಾವರಣ ಆಗಿದೆ ಎನ್ನುವುದು. ಸಧ್ಯ ಸರ್ಕಾರ ಪ್ರಯತ್ನ ಮಾಡುತ್ತಿದೆ. ಇಲ್ಲವೆಂದು ಹೇಳುತ್ತಿಲ್ಲ. ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರಯತ್ನ ಮಾಡಬೇಕು. ಏಕೆಂದರೆ, ಎಲ್ಲೋ ಅಲ್ಪಸಂಖ್ಯಾತರಲ್ಲಿ ಒಂದು ರೀತಿಯಾದಂಥ ಭಯ ಇರತಕ್ಕಂಥದ್ದು, ನೀವುಗಳಿಲ್ಲದಿದ್ದರೂ ಬಚ್ಚೇಗೌಡರೆ, ನಿಮ್ಮ ಸಂಘಟನೆಗಳ ಅಹಂ ಇದೆಯಲ್ಲಾ ಬಹಶಃ ಅದು ಇನ್ನೂ ಹೋಗಿಲ್ಲ. ನಮ್ಮಿಂದ ಸರ್ಕಾರ ಬಂದಿದೆ; ನಮ್ಮ ಸರ್ಕಾರ, ನಾವು ಏನು ಬೇಕಾದರೂ ಮಾಡಿ ಜಯಗಳಿಸುತ್ತೇವೆ, ಮಾಡತಕ್ಕಂಥ ಹಕ್ಕಿದೆ ಎನ್ನುವ ರೀತಿಯಲ್ಲಿ ಕೆಲವು ಸಂಘಟನೆಗಳು ಇವೆ. ಮಾನ್ಯ ಕಾಗೇರಿಯವರೆ, ನಾನು ಎಲ್ಲರಿಗೂ ಎಂದು ಹೇಳುತ್ತಿಲ್ಲ. ಅದರ ಬಗ್ಗೆ ನಾವು ಎಚ್ಚರಿಕೆಯಿಂದ ಇರಬೇಕು. ಆ

ತರಹದ ಪರಿಸ್ಥಿತಿಗಳು ಕೆಲವು ಸಲ ಬರತಕ್ಕಂಥದ್ದು ಇದೆ. ನೀವು ಹೇಳಿದ ಸ್ವಲ್ಪ ದಿನಕ್ಕೇ ಗೋಲಿಬಾರ್ ಆಯಿತು. ನಕ್ಸಲ್ ವಾರಿಯಿಂದ ಚಿಕ್ಕಮಗಳೂರಿನಲ್ಲಿ encounter ಆಗಿ ಒಬ್ಬ ಹೋಗಿರುವುದನ್ನು ನಾವು ಕಾಣುತ್ತಿದ್ದೇವೆ. ಶಾಂತಿಯುತ ಕರ್ನಾಟಕದಲ್ಲಿ ಒಂದು ರೀತಿಯಲ್ಲಿ ಅಲ್ಲಲ್ಲೇ ಪ್ರಕ್ಷುಬ್ಧ ವಾತಾವರಣ ಇದೆ. ಸರ್ಕಾರ ಇದರ ಬಗ್ಗೆ ಎಚ್ಚರಿಕೆ ವಹಿಸಬೇಕೆಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ನಾನು ನೈಸ್ ಬಗ್ಗೆ ಹೇಳುತ್ತಿದ್ದೆ. ಅದು ಒಂದು ತರಹ ಇರಾನ್ ಮತ್ತು ಇರಾಕ್ ಯುದ್ಧದ ರೀತಿ ಯಾಗಬಾರದು. Ceasefire ಆಗಲಿಲ್ಲ. ಈ ನೈಸ್ ಕಂಪನಿ ಆ ರೀತಿ ಆಗುತ್ತಿದೆ. ಇರಾನ್ ಮತ್ತು ಇರಾಕ್ ಯುದ್ಧ ಪ್ರಾರಂಭವಾಗಿ ಅದು ಯಾವತ್ತು ನಿಲ್ಲುತ್ತದೋ ಏನೋ ಎಂದು ಗೊತ್ತಾಗುತ್ತಿರಲಿಲ್ಲ. ಅದು ಆ ರೀತಿ ಆಗಬಾರದು. ಎಲ್ಲೋ ಒಂದು ಕಡೆ ಇದಕ್ಕೆ ಸಮಸ್ಯೆಯನ್ನು ಬಗೆಹರಿಸುವ ರೀತಿಯಲ್ಲಿ ಅದಕ್ಕೆ ಪರಿಹಾರವನ್ನು ಕಂಡುಹಿಡಿಯುವ ರೀತಿಯಲ್ಲಿ ಪ್ರಯತ್ನವನ್ನು ಮಾಡಬೇಕೆಂದು ಆ ಸಂದರ್ಭದಲ್ಲಿ ತಿಳಿಸುತ್ತಿದ್ದೇನೆ.

ನಾವು ಈಗ ಪಾರ್ಲಿಮೆಂಟ್‌ನಲ್ಲಿ ಚರ್ಚೆ ಮಾಡುತ್ತಿದ್ದೇವೆ. ಏನೆಂದರೆ, ಹೆಚ್ಚು ಕಡಿಮೆ ಪಾರ್ಲಿಮೆಂಟ್ ಮತ್ತು ಅಸೆಂಬ್ಲಿಯಲ್ಲಿ ಮಹಿಳೆಯರಿಗೆ 33% ಕೊಡಬೇಕೆಂದು ಎರಡು ಕಡೆ ಉಳಿದಿದೆ. ಸುಮಾರು 10–15 ವರ್ಷಗಳಿಂದಲೂ ಮಹಿಳಾ ಮೀಸಲಾತಿ ಬಗ್ಗೆ ಚರ್ಚೆ ನಡೆಯುತ್ತಿದೆ. Other democratic institutions ನಲ್ಲಿ ಬಂದಿದೆ except parliament and Assembly. ಇನ್ನು ಉಳಿದಂತೆ ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್, ಮಹಾನಗರ ಪಾಲಿಕೆ, ಪುರಸಭೆ ಎಲ್ಲಾ ಕಡೆ ಇವತ್ತು ಮಹಿಳಾ ಮೀಸಲಾತಿ ಇದೆ. ಬಹಳ ರೀತಿಯಲ್ಲಿ ಚರ್ಚೆ ನಡೆಯುತ್ತದೆ. ಬಹಶಃ ಅದಕ್ಕೆ ಮೀಸಲಾತಿಗೆ ನಾನು ರಾಜ್ಯ ಸರ್ಕಾರದವರು ಕೂಡ ಅಥವಾ ಈ ಸದನದಲ್ಲಿಯೂ ಕೂಡ ನಮ್ಮ ಬೆಂಬಲವಿದೆ ಎಂದು ಹೇಳುವುದಕ್ಕೆ ಈ ಸರ್ಕಾರಕ್ಕೆ ಸ್ವಲ್ಪ ಹಿಂಜರಿತವೋ ಏನೋ, ಏಕೆಂದರೆ ಅಲ್ಲಿ ಶೋಭಾ ಕರಂದ್ಲಾಜೆ ಅವರ ಪ್ರಶ್ನೆ ಬಂದು ಬಿಡುತ್ತದೆ ಎಂದು. ಅಲ್ಲಿ ಒಂದು ಕಡೆ ಮಹಿಳೆಯರಿಗೆ 33% ಮೀಸಲಾತಿ ಕೊಡಬೇಕೆಂದು ಹೇಳುತ್ತಾರೆ. ನಾನು ನಿಮ್ಮ

ಪರ ಮಾತನಾಡುತ್ತಿದ್ದೇನೆ ಶೋಭಾ ಕರಂದ್ಲಾಜೆ ಅವರೆ. ಅಲ್ಲಿ ಹೋರಾಟ ಮಾಡಿ, ಕ್ಯಾಬಿನೆಟ್ decision ಆಗಿ ಅದನ್ನು ಸಂಸತ್ತಿನಲ್ಲೂ ಮಂಡಿಸಿ, ಅಲ್ಲಿ ಬಹುಶಃ decision ತೆಗೆದುಕೊಳ್ಳುವಂಥದ್ದು ಇದು. ನಮ್ಮಲ್ಲಂಥೂ ವಿರೋಧ ಪಕ್ಷದಲ್ಲಿ ಕೆಲವೇ ಕೆಲವು ಮಹಿಳೆಯರು ಆರಿಸಿ ಬಂದಿದ್ದಾರೆ. ಜೆ.ಡಿ.(ಎಸ್)ನಲ್ಲಿ ಸ್ವಲ್ಪ ಜಾಸ್ತಿ ಜನ ಆರಿಸಿ ಬಂದಿದ್ದಾರೆ, ಬಿ.ಜೆ.ಪಿ. ಯಲ್ಲಿಯೂ ಕೂಡ ನೀವು ಬಂದಿರತಕ್ಕಂಥದ್ದು. ಅಂತಹ ಸಂದರ್ಭದಲ್ಲಿ ಮಹಿಳೆಯರಿಗೆ ನ್ಯಾಯಬದ್ಧವಾದಂತಹ ರೀತಿಯಲ್ಲಿ ಅವರಿಗೆ ಪ್ರಜಾಪ್ರಭುತ್ವ ಸಂಸ್ಥೆಗಳಲ್ಲಿ ಅವಕಾಶ ಕೊಡಬೇಕು, ಅವರು ಪ್ರಾತಿನಿಧ್ಯ ಇರಬೇಕು. ಕಾನೂನು ನೀತಿ ನಿಯಮಗಳನ್ನು ರೂಪಿಸುವಲ್ಲಿ ಅವರ participation ಕೂಡ ಇರಬೇಕು, ಅವರ involvement ಕೂಡ ಇರಬೇಕು ಎಂದು ಹೇಳುವ ಸಂದರ್ಭದಲ್ಲಿ ಇರತಕ್ಕಂಥ ಒಬ್ಬ ಮಹಿಳೆಯನ್ನೂ ಕಿತ್ತುಹಾಕಿದರೆ, ನೀವು ಮಹಿಳೆಯರಿಗೆ ಮೀಸಲಾತಿ ಕೊಡಿ ಎಂದು ನೀವು ಇಲ್ಲಿಂದ ಏನು ಮಾಡುತ್ತೀರಿ? ನಿಮ್ಮ ಎಂ.ಪಿ.ಗಳು ಏನು ಹೇಳುತ್ತಾರೆ? ಬಿ.ಜೆ.ಪಿ. ಯಿಂದ 19 ಎಂ.ಪಿ.ಗಳು ಕೂತಿದ್ದಾರಲ್ಲಾ ಅವರು ಏನು ಹೇಳುತ್ತಾರೆ? ಏಕೆಂದರೆ, ಅವರದ್ದೇ ತೆಗೆದುಕೊಂಡು ಹೇಳಿದೆ. 'ಯಾವ ತಪ್ಪಿಗಾಗಿ ನನ್ನ ರಾಜೀನಾಮೆ?' ಎಂದು ಹೇಳಿದ್ದಾರೆ. ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಪಾಪ ಹೆಂಗರುಳು! ನಿಮ್ಮಲ್ಲಿ ಉತ್ತರವಿಲ್ಲ. ಶೋಷಿತವರ್ಗದಲ್ಲಿ ಯಾರು ಹೆಣ್ಣು ಮಕ್ಕಳು ಬರುತ್ತಾರೆ, ಅವರಿಗೆ ನ್ಯಾಯಬದ್ಧವಾಗಿ ಏನು ಕೊಡಬೇಕೆಂದು ಇದೆ, ಬಹಶಃ ಆ ಒಂದು ನೈತಿಕ ಹಕ್ಕು ಇಲ್ಲವೆಂದು ಹೇಳಬೇಕಾಗುತ್ತದೆ. ಇನ್ನು ಮೇಲಾದರೂ ಬದಲಾಯಿಸಿಕೊಳ್ಳಿ. ಇನ್ನೂ ಅವಕಾಶವಿದೆ. ಮಹಿಳೆಯರಿಗೆ ಏನು ಅವಕಾಶ ಕೊಡಬೇಕು, ನಿಮ್ಮ ಮಂತ್ರಿಮಂಡಲದಲ್ಲಿ ಏನು ಕೊರತೆಯಾಗಿದೆ ಅದನ್ನು ಮೊದಲು ಸರಿಪಡಿಸಿ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಕೊನೆಯದಾಗಿ. ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ, ಏಕೆಂದರೆ ಅದರಲ್ಲಿ ನಮ್ಮದೂ ಕೂಡ ಸ್ವಲ್ಪ ಹೋರಾಟ ಇದೆ. Classical language, ಶಾಸ್ತ್ರೀಯ ಭಾಷೆಯ ಬಗ್ಗೆ

ನಾನು ಮೊನ್ನೆ ಪತ್ರಿಕೆಗಳಲ್ಲಿ ನೋಡಿದೆ. ಮೊದಲನೆಯದಾಗಿ ನಮಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಸಿಗುತ್ತದೆ ಎಂದು ಗೊತ್ತಿರಲಿಲ್ಲ. ನಮ್ಮ ಸಾಹಿತಿಗಳಿಗೂ, ವಿಚಾರವಂತರಿಗೂ ಗೊತ್ತಿರಲಿಲ್ಲ, ಸರ್ಕಾರಗಳಿಗಂತೂ ಗೊತ್ತೇ ಇರಲಿಲ್ಲ. ಸಂಸ್ಕೃತ ಭಾಷೆಗಳಷ್ಟೆ ಶಾಸ್ತ್ರೀಯ ಸ್ಥಾನಮಾನ ಸಿಗುತ್ತದೆ ಎಂದು ತಿಳಿದುಕೊಂಡಿದ್ದೆವು. ಅದಾದನಂತರ ನಮಗೆ ತಮಿಳು ಭಾಷೆಗೆ ಶಾಸ್ತ್ರೀಯ ಸ್ಥಾನ ಮಾನ (classical status) ಕೊಟ್ಟ ಮೇಲೆ ಗೊತ್ತಾಯಿತು ಇತರ ಭಾಷೆಗಳಿಗೂ ಕೂಡ ಕೊಡಬೇಕಾಗಿದೆ ಎಂದು ಗೊತ್ತಾಯಿತು. ಅದಕ್ಕೆ ಏನು ಮಾನದಂಡ ಎನ್ನುವುದನ್ನೂ ನಾವು ತಿಳಿದುಕೊಂಡೆವು. ನಾವು ಹೋರಾಟವನ್ನು ರೂಪಿಸಿದೆವು. ನಮಗೂ ಸಹ ಹೆಮ್ಮೆಯಾಗುತ್ತದೆ. ಇವತ್ತು ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ ಕೊಡಬೇಕೆಂದು ಕೇಳೀದಾಗ ತೆಲುಗು ಭಾಷೆಗೂ ಸೇರಿಸಿ ಕೊಟ್ಟಿದ್ದಾರೆ. ಕನ್ನಡ ಭಾಷೆಗೆ ಒಂದು ಶಾಸ್ತ್ರೀಯ ಭಾಷೆಗೆ ಇರಬೇಕಾದ ಮಾನದಂಡ ಎರಡು ಸಾವಿರ ವರ್ಷ ಇತಿಹಾಸ ಅದಕ್ಕೆ ಇರಬೇಕು. ಅದು ಆಡುಭಾಷೆಯಾಗಿರಬೇಕು. ಲಿಪಿ ಇರಬೇಕು, ಶಾಸನಗಳು ಇರಬೇಕು ಇದು ಶಾಸ್ತ್ರೀಯ ಭಾಷೆಗೆ ಇರುವ ಮಾನದಂಡ. ಇವೆಲ್ಲವೂ ಇದೆ ಎಂದು ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ಕೊಡಲಾಗಿದೆ. ಒಂದು public interest litigation ಎಂದು ತಮಿಳುನಾಡಿನಲ್ಲಿ ಮಾತ್ರ, ಅದು ಒಂದು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಇದೆ. ಅದು ನಡೆದುಕೊಳ್ಳಲಿ ಅದರಲ್ಲೇನೂ ಇಲ್ಲ. ಅದು ಯಾರೋ ಕೊಟ್ಟಿದ್ದಾರೆ ಎಂದು ಮಾನ್ಯ ಕರುಣಾನಿಧಿಯವರು ಕೂಡ ಹೇಳಿದ್ದಾರೆ. ಅದರ ಬಗ್ಗೆ ಗಮನ ಕೊಡುವುದಿಲ್ಲ. ಆದರೆ ಇನ್ನೆರಡು ಭಾಷೆಗಳಿಗೆ, ತಮಿಳು ಮತ್ತು ಸಂಸ್ಕೃತ ಭಾಷೆಯ ಜೊತೆಗೆ ಕನ್ನಡ ಮತ್ತು ತೆಲುಗಿಗೂ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಬಂದಿರುವ ಸಂದರ್ಭದಲ್ಲಿ ಇವತ್ತು ತೆಲುಗಿಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಸಿಕ್ಕಿದ ಮೇಲೆ ಅದರ ಸಂಶೋಧನೆಗಳಿಗೆ ಬೇರೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಕೂಡ ಯಾವ ರೀತಿ ಸಂಶೋಧನೆಗಳು, ಚರ್ಚೆಗಳು ಆಗಬೇಕು, ಯಾವ್ಯಾವ ರೀತಿಯಲ್ಲಿ ಆ ಭಾಷೆಯ ಮುಂದಿನ ಬೆಳವಣಿಗೆಯ ಬಗ್ಗೆ ಕಾರ್ಯಚಟುವಟಿಕೆಗಳನ್ನು

ನಡೆಸಬೇಕೆಂದು ಒಂದು ಕ್ರಿಯಾ ಯೋಜನೆ, ಆ ರೀತಿಯಾದಂಥ ರೀತಿಯಲ್ಲಿ ನಾವು ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕಳುಹಿಸಿಕೊಡಬೇಕು. ಈಗಾಗಲೇ ತೆಲುಗಿನವರು ಕಳುಹಿಸಿಕೊಟ್ಟಿದ್ದಾರೆ. ಆಂಧ್ರದವರು ನಮ್ಮಲ್ಲಿ ಕೊಟ್ಟಿಲ್ಲ ಎಂದು ಹೇಳುತ್ತಿದ್ದಾರೆ. ಹಾಗಾಗಿ ಅದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರ ಜವಾಬ್ದಾರಿ ಕೂಡ ಆಗಿದೆ, ತಕ್ಷಣವೇ ಮಾಡಬೇಕು. ಇದಕ್ಕೆ ನಾನು ಮೈಸೂರಿನಲ್ಲಿ ಹೋರಾಟ ಪ್ರಾರಂಭ ಮಾಡಿದ್ದೆವು. ನಮ್ಮ ನಾಡೋಜ ದೇಜಗೌರವರು, ನಾವೂ ಕೂಡ ಅವರ ಜೊತೆಯಲ್ಲಿದ್ದು ಚಳವಳಿ ಪ್ರಾರಂಭಿಸಿ, ಆ ವಿಚಾರ ಕೇವಲ ಸಂಸತ್ತಿನಲ್ಲಿ ನಡೆಯುವುದರ ಜೊತೆಗೆ ಇದಕ್ಕೆ ಹೊರಗಡೆಯಿಂದಲೂ ಜನರ ಬೆಂಬಲವೂ ಇದೆ, ಜನಶಕ್ತಿ ಇದೆ, ಜನರೂ ಹೋರಾಟ ಮಾಡಬೇಕಾಗುತ್ತದೆ. ನಾವು ಈ ಅನ್ಯಾಯವನ್ನು ಸಹಿಸುವುದಿಲ್ಲವೆಂಬ ಎಚ್ಚರಿಕೆ ಕೊಟ್ಟೆವು. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಸಿಗಬೇಕು, ಕನ್ನಡ ಭಾಷೆಗೆ ಎಲ್ಲಾ ಅರ್ಹತೆಗಳೂ ಇವೆ ಎಂಬುದರ ಕುರಿತು ಹೋರಾಟ ನಡೆದಿದೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಸರ್ವಪಕ್ಷ ನಿಯೋಗವನ್ನು ನವದೆಹಲಿಗೆ ಕರೆದುಕೊಂಡು ಹೋಗಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡಿದ್ದೀರಿ. ಅದು ಸಿಕ್ಕಿದೆ.

ಮುಂದುವರೆದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಕನಕದಾಸರ ಜಯಂತಿ ಮಾಡಿದ್ದೇವೆಂದು ಅಷ್ಟು ಕೊಟ್ಟಿದ್ದಾರಷ್ಟೆ. ಪಾಪ! ಇನ್ನೂ ಅದರ ಬಗ್ಗೆ ಅವರಿಗೆ ಯೋಚನೆಯೇ ಇಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಕೇಂದ್ರ ಸರ್ಕಾರದೊಂದಿಗೆ ಈ ನಿಟ್ಟಿನಲ್ಲಿ ಯಾವ ರೀತಿಯಾಗಿ ವ್ಯವಹರಿಸಬೇಕು, ಈ ಸಂಬಂಧ ಎಷ್ಟು ಅನುದಾನ, ನೆರವು ಬರುತ್ತದೆ, ಇದಕ್ಕೆ ತಕ್ಕಂತೆ ಯಾವ್ಯಾವ ರೀತಿ ಕಾರ್ಯಕ್ರಮಗಳನ್ನು ರೂಪಿಸಬೇಕು ಎನ್ನುವುದರತ್ತ ಆಲೋಚಿಸಿದರೆ ಅನುಕೂಲವಾಗುತ್ತದೆ. ಈಗಾಗಲೇ ಕೇಂದ್ರ ಸರ್ಕಾರದಲ್ಲಿ ನಮ್ಮ ರಾಜ್ಯದವರೇ ಕಾನೂನು ಸಚಿವರಾಗಿರುವ ಶ್ರೀ ವೀರಪ್ಪ ಮೊಯಿಲಿಯವರು ರಾಜ್ಯ ಸರ್ಕಾರದ ಗಮನವನ್ನು ಸಾಕಷ್ಟು ಸೆಳೆದಿದ್ದಾರೆ ಎಂಬ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಇನ್ನು ಜನಸ್ಪಂದನ ಕಾರ್ಯಕ್ರಮ ಕುರಿತಂತೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಬಹಳ ಚೆನ್ನಾಗಿ ಹೇಳಿದರು. ಜನಸ್ಪಂದನ ಉತ್ತಮ ಕಾರ್ಯಕ್ರಮವಾಗಿದೆ. ಆದರೆ, loud demand ಏನಿದೆ, ಜನರ ಕೂಗು ಏನಿದೆ ಎಂಬುದನ್ನೂ ಈ ಸಂದರ್ಭದಲ್ಲಿ ಗಮನಿಸಬೇಕಾಗುತ್ತದೆ. ಕೇವಲ ಸಂಧ್ಯಾ ಸುರಕ್ಷಾ ಯೋಜನೆ, physically disabledಗೆ ನೆರವು ಒದಗಿಸುವುದು, ವೃದ್ಧಾಪ್ಯ ವೇತನದ ಜೊತೆ ಜೊತೆಗೆ ಬಹಳ ಮುಖ್ಯವಾಗಿ ಪ್ರತಿಯೊಬ್ಬರೂ ಕೇಳುವುದೇನೆಂದರೆ, ಸರ್ಕಾರ ಎರಡು ವರ್ಷಗಳಿಂದ ಮಾಡಿಲ್ಲ. ಆಶ್ರಿಯ ಯೋಜನೆಯಡಿ ನೀವು ಮನೆಗಳನ್ನು ಕೊಟ್ಟಿಲ್ಲ. ಶಾಸಕರಾಗಿರುವ ನಾವು ಜನಸ್ಪಂದನ ಕಾರ್ಯಕ್ರಮಗಳಿಗೆ ಹೋದಾಗ ಜನರು ಮುಖ್ಯವಾಗಿ ಕೇಳುವುದೇನೆಂದರೆ, ಅವರುಗಳಿಗೆ ಆಶ್ರಯ ಯೋಜನೆಯಡಿ ಮನೆ ಮತ್ತು ನಿವೇಶನಗಳನ್ನು ಒದಗಿಸಿಕಕೊಡಬೇಕು. ಇದನ್ನು ಖಂಡಿತವಾಗಿಯೂ ಒಪ್ಪಿಕೊಳ್ಳಬೇಕಾಗುತ್ತದೆ. ಶಾಸಕರಾಗಿರುವ ನೀವುಗಳು ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ಆಶ್ರಯ ಯೋಜನೆಯಡಿ ಮನೆ, ನಿವೇಶನಗಳನ್ನು ಕಲ್ಪಿಸಿಕೊಡಲು ಎಷ್ಟು ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದೀರಿ? ಎಷ್ಟು ನಿವೇಶನಗಳನ್ನು ಮಾಡಿದ್ದೇವೆ? ಎಷ್ಟು ಮನೆಗಳನ್ನು ಕೊಟ್ಟಿದ್ದೇವೆ ಎನ್ನುವುದನ್ನೂ ಯೋಚಿಸಬೇಕಾಗಿದೆ. ಹಾಗಾಗಿ, ಬಹುಶಃ, ಇದರಲ್ಲಿ ಬಹಳಷ್ಟು ಹಿಂದುಳಿದಿರುವುದರಿಂದ ಈ ಕುರಿತಂತೆ ತಾವು ಆದ್ಯತೆ ಕೊಡಬೇಕಾಗುತ್ತದೆಂಬ ಮಾತನ್ನು ಹೇಳಬಯಸುತ್ತೇನೆ.

ಬಹಳ ಮುಖ್ಯವಾಗಿ ಒಂದು ಸರ್ಕಾರ ಇವತ್ತು ಕೇಂದ್ರ ಸರ್ಕಾರದ ನೆರವಿನಿಂದ ಉಳಿದಿದೆ. ಕೇಂದ್ರ ಸರ್ಕಾರದ ನೆರವಿನಿಂದ ಜನರು ಇವತ್ತು ಎಷ್ಟೋ ನೆಮ್ಮದಿಯಿಂದಿದ್ದಾರೆ. ಇದು ಉತ್ಪ್ರೇಕ್ಷೆಯ ಮಾತಲ್ಲ. ಕೇಂದ್ರದ ನೆರವನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಳ್ಳಬೇಕು. ಮೊದಲನೆಯದು, ಆಹಾರ ಭದ್ರತೆಯಾದರೆ; ಎರಡನೆಯದು ಉದ್ಯೋಗ ಭರವಸೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಎಷ್ಟು ಬೇಕಾದರೂ ನೆರವು ಕಲ್ಪಿಸಿಕೊಡಬಹುದಾಗಿದೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮೊನ್ನೆ ಚಾಮರಾಜನಗರಕ್ಕೆ

ಬಂದಿದ್ದರು. ಆ ಕುರಿತಂತೆ ತಾವು ಸಂಪೂರ್ಣ ತಿಳಿದುಕೊಂಡಿದ್ದು, ಚರ್ಚಿಸಿದ್ದೀರಿ. ತಾವೂ ಅಧಿಕಾರಿಗಳಿಗೆ ಹೇಳಿದ್ದೀರಿ. ಹೆಚ್ಚೆಚ್ಚು ರೀತಿಯಲ್ಲಿ ಕ್ರಿಯಾ ಯೋಜನೆಗಳನ್ನು ತಯಾರಿಸಬೇಕು, ಯಾವ್ಯಾವ ಇಲಾಖೆಗಳಿಗೆ ಎಷ್ಟೆಷ್ಟು ಮಹತ್ವವಿದೆ, ಎಷ್ಟೆಷ್ಟು ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ. ಅದರಲ್ಲೂ ದುರುಪಯೋಗವಾಗದ ರೀತಿಯಲ್ಲಿ ಎಷ್ಟು ಎಚ್ಚರಿಕೆ ವಹಿಸಬೇಕು, ನಮ್ಮ ಕೈಗೆ ಅಧಿಕಾರ ಮತ್ತು ಹಣ ಸಿಕ್ಕಿದರೆ ಎಷ್ಟು ದುರುಪಯೋಗವಾಗುತ್ತದೆ ಎಂದು ವಿಶೇಷವಾಗಿ ಹೇಳಿದ್ದೀರಿ. ಇವತ್ತು ಗ್ರಾಮೀಣಾಭಿವೃದ್ಧಿಯ ವಿಕಾಸವಾಗಬೇಕಾದರೆ, ಅದರ ಬೆಳವಣಿಗೆಯಾಗಬೇಕಾದರೆ, ಬಹಳ ಮಹತ್ತರವಾದ ಕೇಂದ್ರ ಸರ್ಕಾರದ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಕುರಿತು ಅಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಸಿಕೊಟ್ಟಿದ್ದೀರಿ.

ಇವತ್ತು ಆಹಾರ ಭದ್ರತೆ ಒದಗಿಸಬೇಕಾಗುತ್ತದೆ. ದೇಶಕ್ಕೆ ಸ್ವಾತಂತ್ರ್ಯ ಬಂದು 63 ವರ್ಷಗಳಾದರೂ 30 to 40% of the people are still struggling for two square meals a day ಎಂದು ಹೇಳುತ್ತೇವೆ. ಎರಡು ಹೊತ್ತಿನ ಊಟಕ್ಕೂ ತುಂಬಾ ಕಷ್ಟಪಡುತ್ತಿರುವ ಕುಟುಂಬಗಳಿವೆ. ಗಂಡ-ಹೆಂಡತಿ ಇಬ್ಬರು ದುಡಿದರೂ ತಮ್ಮ ಮಕ್ಕಳಿಗೆ ಹೊಟ್ಟೆ ತುಂಬುವಷ್ಟು ತಂದು ಹಾಕಲು ವರಮಾನ ಸಾಕಾಗುತ್ತಿಲ್ಲ. ನಾನು ಕೇಂದ್ರದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಮಂತ್ರಿಯಾಗಿದ್ದೆ, ಹಾಗಾಗಿ, ಯಾವುದಾದರೂ ರೀತಿಯಲ್ಲಿ ಆಹಾರ ಉತ್ಪಾದನೆ ಜಾಸ್ತಿಯಾಗಿ, ಆಹಾರ ಉತ್ಪಾದನೆಗಳಿದ್ದ ಸಂದರ್ಭದಲ್ಲಿ ಮತ್ತು ಕೇಂದ್ರ ಸರ್ಕಾರ ಕೂಡ ಇದಕ್ಕೆ ಸಹಾಯ ಮಾಡುವ ರೀತಿಯಲ್ಲಿ ವಿಶೇಷವಾದ ಕಾರ್ಯಕ್ರಮ ಇದಾಗಿದೆ. ಆಹಾರದ ಭದ್ರತೆಗೋಸ್ಕರ 3 ರೂ.ಗೆ 25 ಕೆ.ಜಿ. ಅಕ್ಕಿ ಕೊಡುವ ಸಂಬಂಧ ಬಿಪಿಎಲ್ ಕಾರ್ಡುಗಳನ್ನು ವಿತರಿಸಲು ನೀವು ಕ್ರಮ ಕೈಗೊಳ್ಳಬೇಕು. ಏಕೆಂದರೆ, ನೀವು ಕೇಳಿದಷ್ಟು ನಾವು ಕೊಡುವುದಿಲ್ಲವೆಂದು ಕೇಂದ್ರ ಸರ್ಕಾರ ಹೇಳಿದೆ. ನಾವು ಅನೇಕ ಸಲ ಹೇಳಿದ್ದೇವೆ. ನೀವು ಏನು ಬಿಪಿಎಲ್ ಕಾರ್ಡುಗಳನ್ನು ಐಡೆಂಟಿಫೈ ಮಾಡುತ್ತೀರಿ, ಅಷ್ಟೂ ಬಿಪಿಎಲ್ ಕಾರ್ಡುಗಳಿಗೆ ಕೇಂದ್ರ ಸರ್ಕಾರವು subsidized rateಗೆ ಕೊಡುವುದಿಲ್ಲ. ನಮ್ಮದೇ ಆದ ರೀತಿಯಲ್ಲಿ

ನಾವು Planning Commission ಅವರೊಂದಿಗೆ ಮಾತುಕತೆ ನಡೆಸಿ, Experts Committee ನೇಮಿಸಿಕೊಂಡು ಅದರ ಮುಖಾಂತರ throughout the country identify ಮಾಡುತ್ತೇವೆ. ಇಡೀ ರಾಷ್ಟ್ರದಲ್ಲಿ ಯಾವ್ಯಾವ ರಾಜ್ಯದಲ್ಲಿ ಬಿಪಿಎಲ್ ಕಾರ್ಡುಗಳಿಗೆ ಎಷ್ಟೆಷ್ಟು ಅವಶ್ಯಕತೆ ಇದೆಯೋ, ಅಷ್ಟಕ್ಕೆ ಮಾತ್ರ ನಾವು subsidized rate ನಲ್ಲಿ ಕೊಡುತ್ತೇವೆ. ಅದರ ಮೇಲೆ ಬರುವ ಹೊರೆ ನಿಮ್ಮದಾಗಿರುತ್ತದೆ. ಯಾರನ್ನೋ ಓಲೈಸಿ ಅಥವಾ ಯಾವುದೋ ರೀತಿಯಲ್ಲಿ ಕಾರ್ಯಕ್ರಮವನ್ನು ಸಡಿಲಿಸಿ ಕೊಡುವುದಕ್ಕೆ ಹೋದರೆ ನಿಮಗೆ ಬಹಳಷ್ಟು ಹೊರೆಯಾಗುತ್ತದೆ, ನೀವು ಆಗ ಅಷ್ಟು ಹಣವನ್ನು ಕೊಡುವುದಕ್ಕಾಗುವುದಿಲ್ಲ. ಆದುದರಿಂದ, ಬಹಳ ಎಚ್ಚರಿಕೆಯಿಂದ ಬಿಪಿಎಲ್ ಫಲಾನುಭವಿಗಳು ಯಾರಿದ್ದಾರೆ, ಅವರೆಲ್ಲರಿಗೂ ಕಾರ್ಡುಗಳನ್ನು ವಿತರಿಸಬೇಕು. ಇದೊಂದು ಒಳ್ಳೆಯ ಕಾರ್ಯಕ್ರಮವಾಗಿದೆ. ಕೇಂದ್ರ ಸರ್ಕಾರದಲ್ಲಿ ಬಹಳ ಚೆನ್ನಾಗಿರುವ ಪ್ರಧಾನಮಂತ್ರಿ ಗ್ರಾಮೀಣ ಸಡಕ್ ಯೋಜನೆ ಮತ್ತು ನಬಾರ್ಡ್ ಯೋಜನೆಯಡಿ ರಸ್ತೆಗಳ ಕಾರ್ಯಕ್ರಮಗಳು ಬರುತ್ತವೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರೆ, ನಮ್ಮ ಹಳ್ಳಿಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ದುಡ್ಡು ಬರುತ್ತಿಲ್ಲ. ಇರುವುದರಲ್ಲಿ ಸ್ವಲ್ಪ ಬರುತ್ತಿದೆ. ರಸ್ತೆಗಳಿಗೆ ಸಂಬಂಧಿಸಿದಂತೆ ನಾವು ಇನ್ನೂ ಹೆಚ್ಚಿನ ಹಣ ನಿರೀಕ್ಷಿಸಿದ್ದೇವೆ. ಹಣ ಬರಬೇಕಾಗಿದೆ. ಈ ಸಲ ಬಜೆಟ್‌ನಲ್ಲಾದರೂ ಕೂಡ ಅದರ ಬಗ್ಗೆ ತಾವು ಹೆಚ್ಚಿನ ಒತ್ತು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ನಾನು ಮಾತನಾಡುವಾಗ ಮಧ್ಯೆ ಮಧ್ಯೆ interrupt ಮಾಡಿದರೂ ಅದನ್ನು ನೀವು ಯಾವುದೇ ರೀತಿಯಲ್ಲಿ ದುರುದ್ದೇಶಪೂರ್ವಕವಾಗಿ ಮಾಡುತ್ತಿದ್ದೀರೆಂದು ಹೇಳುವುದಿಲ್ಲ. ನಾವು ಹೇಳುವುದು ಕೆಲವೊಮ್ಮೆ ನಿಮ್ಮ ಮನಸ್ಸಿಗೆ ಹಿಡಿಸುವುದಿಲ್ಲ. ಆದುದರಿಂದ, ಇವತ್ತು ಒಟ್ಟಾಗಿ ರಾಜ್ಯದ ಅಭಿವೃದ್ಧಿಗೆ, ಬೆಳವಣಿಗೆಗೆ ನಾನು ಈ ಮೊದಲೇ ಹೇಳಿರುವಂತೆ ಶೋಷಿತರ ಕಣ್ಣೀರು ಒರೆಸುವ ರೀತಿಯಲ್ಲಿ ನಾವೆಲ್ಲರೂ ಕೂಡ ಪ್ರಾಮಾಣಿಕ ಪ್ರಯತ್ನ ಮಾಡಿದರೆ, ರಾಜ್ಯಪಾಲರ ಭಾಷಣ ಸಾರ್ಥಕವಾಗುತ್ತದೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಶ್ರೀಕಾಂತ್ ಕುಲಕರ್ಣಿ (ಜಮಖಂಡಿ) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣವನ್ನು ಸ್ವಾಗತಿಸುವ ಸಂದರ್ಭ ಬಂದಾಗ ನನಗೆ ಮಾತನಾಡಲು ತಾವು ಕೊಟ್ಟಿರುವ ಅವಕಾಶಕ್ಕಾಗಿ ತಮಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಿನ್ನೆ ಇಬ್ಬರು ಮಾನ್ಯ ಶಾಸಕರು ರಾಜ್ಯಪಾಲರ ಭಾಷಣವನ್ನು ಸ್ವಾಗತಿಸುತ್ತಾ ಅನೇಕ ವಿಷಯಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಬಹುಶಃ, ಅವೆಲ್ಲಾ ಅಂಕಿ-ಅಂಶಗಳನ್ನು ನಾನು ಪುನರಾವರ್ತಿಸದೆ ಕೆಲವು ವಿಷಯಗಳನ್ನು ಮಾತ್ರ ಇಲ್ಲಿ ಮಾತನಾಡ ಬಯಸುತ್ತೇನೆ.

ಸನ್ಮಾನ್ಯ ರಾಜ್ಯಪಾಲರು ಇಲ್ಲಿ ಮಾಡಿರುವ ಭಾಷಣ, ಅದರಲ್ಲೂ ವಿಶೇಷವಾಗಿ ಮುಂದಿನ ಕರ್ನಾಟಕ ರಾಜ್ಯದ ಅಭಿವೃದ್ಧಿ ಹಿನ್ನೆಲೆಯಲ್ಲಿ 2020ನೇ ಇಸವಿಯವರೆಗೆ ಸಮಗ್ರ ಬದಲಾವಣೆ ಮಾಡಿ ಸುಮಾರು 12 ವಿವಿಧ ಕ್ಷೇತ್ರಗಳನ್ನು ಆಯ್ಕೆ ಮಾಡಿ, ಸುಮಾರು 15 ಕಾರ್ಯಪಡೆಗಳನ್ನು ರಚಿಸಿ, ಅವರೆಲ್ಲರೂ ಸರ್ಕಾರಕ್ಕೆ ರಚನಾತ್ಮಕವಾಗಿ ಮಾರ್ಗದರ್ಶನ ನೀಡುತ್ತಾ, ಕರ್ನಾಟಕವನ್ನು ಸಂಪೂರ್ಣ ಅಭಿವೃದ್ಧಿ ಹೊಂದಿದ ರಾಜ್ಯವನ್ನಾಗಿ ಮಾಡಬೇಕೆಂಬ ಹಿನ್ನೆಲೆಯಲ್ಲಿ ಇವತ್ತು ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂಬ ಮಾತನ್ನು ಅವರು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದ್ದಾರೆ. ಸನ್ಮಾನ್ಯ ರಾಜ್ಯಪಾಲರ ಭಾಷಣವು ಈ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಒಂದು ದಿಕ್ಸೂಚಿಯ ಭಾಷಣವೆಂದು ಕರೆಯುವುದಕ್ಕೆ ನಾವು ಇಚ್ಛೆಪಡುತ್ತೇನೆ.

ಇತ್ತೀಚೆಗೆ, 2009ರ ಅಕ್ಟೋಬರ್ ತಿಂಗಳಿನಲ್ಲಿ ರಾಜ್ಯದ ಸುಮಾರು 15 ಜಿಲ್ಲೆಗಳಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ, ಹಿಂದೆಂದೂ ಕಂಡರಿಯದಂತೆ ಕುಂಭ-ದ್ರೋಣ ಮಳೆಯಾಗಿ ಭಾರಿ ಪ್ರಮಾಣದಲ್ಲಿ ಉತ್ತರ ಕರ್ನಾಟಕದಲ್ಲಿ ಹಾನಿಯಾಯಿತು. ಅದಕ್ಕೆ ಸರ್ಕಾರದ ಸ್ಪಂದನ ಕೂಡ ಅಷ್ಟೇ ಅಗತ್ಯವಿತ್ತು. ಈ ಮಳೆ ಮಹಾರಾಷ್ಟ್ರದ ಸಹ್ಯಾದ್ರಿ ಬೆಟ್ಟದಲ್ಲಿ ಏನಾದರೂ ಸುರಿದಿದ್ದರೆ ಕೃಷ್ಣಾ ನದಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಮಹಾಪೂರವುಂಟಾಗಿ ಈಗ ಆಗಿರುವ ಅನಾಹುತಕ್ಕಿಂತಲೂ ದೊಡ್ಡ ಪ್ರಮಾಣದಲ್ಲಿ ಅನಾಹುತವುಂಟಾಗುತ್ತಿತ್ತು ಎಂಬ ಭಯ ಬಹಳಷ್ಟು ಪರಿಣಿತರಿಗೆ ಗೊತ್ತಿದೆ. ಆದರೆ, ಆ ಸಂದರ್ಭದಲ್ಲಿ ಸನ್ಮಾನ್ಯ

ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಮ್ಮ ಸರ್ಕಾರ ಸಾವಿರಾರು ಗಂಜಿ ಕೇಂದ್ರಗಳನ್ನು ತೆರೆದು, ಸುಮಾರು 12 ರಿಂದ 15 ಜಿಲ್ಲೆಗಳಲ್ಲಿ ನೊಂದಿರುವ, ಶೋಷಿತರಾದ, ನೆರೆಪೀಡಿತರಾದ ಬಡವರ ರಕ್ಷಣೆಗೆ ಮುಂದಾಗಿದ್ದು ಒಂದು ಇತಿಹಾಸವೆಂಬ ಹೇಳಬಯಸುತ್ತೇನೆ.

ಅನೇಕ ಸಂದರ್ಭಗಳಲ್ಲಿ ಉತ್ತರ ಕರ್ನಾಟಕದ ಗ್ರಾಮೀಣ ಭಾಗಗಳಲ್ಲಿ ನಾವು ಜನರನ್ನು ಮಾತನಾಡಿಸಿದರೆ ಅವರು ಹೇಳುತ್ತಿದ್ದರು. ಈ ರೀತಿ ನೈಸರ್ಗಿಕ ವಿಕೋಪ ಹಿಂದೆಂದೂ ಆಗಿರಲಿಲ್ಲ ಮತ್ತು ನೈಸರ್ಗಿಕ ವಿಕೋಪವಾದ ನಂತರ ಇಂತಹ ದೊಡ್ಡ ಪ್ರಮಾಣದಲ್ಲಿ ಹಿಂದೆಂದೂ ಇಂತಹ ಪರಿಹಾರ ಸಿಕ್ಕಿರಲಿಲ್ಲವೆಂದು ಸಾಮಾನ್ಯ ಜನರು ಹೇಳುವುದನ್ನು ನಾವು ಅಲ್ಲಿ ಪ್ರತ್ಯಕ್ಷವಾಗಿ ಕಂಡೆವು. ಸಾವಿರಾರು ಸಂಖ್ಯೆಯಲ್ಲಿ ಗಂಜಿ ಕೇಂದ್ರಗಳನ್ನು ತೆರೆದು ಲಕ್ಷಾಂತರ ಜನರಿಗೆ ಆಹಾರ ಒದಗಿಸುತ್ತಾ, ಭಾಗಶಃ, ಬಿದ್ದ ಮನೆಗಳಿಗೆ, ಪೂರ್ತಿ ಬಿದ್ದ ಮನೆಗಳಿಗೆ ಪರಿಹಾರ ಕೊಡುವುದಾಗಿರಬಹುದು, ಯಾರ್‍ಯಾರು ಪ್ರಾಣ ಕಳೆದುಕೊಂಡಿರಬಹುದು, ನೀರಿನಲ್ಲಿ ಮುಳುಗಿರಬಹುದು, ಗೋಡೆ ಬಿದ್ದಿರಬಹುದು, ಇನ್ನೊಂದಾಗಿರಬಹುದು. ಪ್ರಾಣ ಕಳೆದುಕೊಂಡಿರುವ ಸಂಬಂಧಿಕರಿಗೆ ಒಂದೇ ವಾರದಲ್ಲಿ 1 ಲಕ್ಷ ರೂ. ಪರಿಹಾರ ಕೊಟ್ಟಿದ್ದಲ್ಲದೆ, ಕೇಂದ್ರದಿಂದಲೂ 1 ಲಕ್ಷ ರೂ. ಪರಿಹಾರ ಕೊಡುವ ವ್ಯವಸ್ಥೆಯಾಯಿತು. ಜಾನುವಾರುಗಳಿಗೂ ಪರಿಹಾರ, ಬೆಳೆ ಹಾನಿಗೂ ಪರಿಹಾರ, ಈ ರೀತಿ ಎಲ್ಲಾ ದೃಷ್ಟಿಯಿಂದಲೂ ಸರ್ಕಾರದಿಂದ ಏನೇನು ಮಾಡಲು ಸಾಧ್ಯವಿತ್ತೋ, ಎಲ್ಲಾ ವ್ಯವಸ್ಥೆಯನ್ನೂ ಸರ್ಕಾರ ಮಾಡಿತು. ಈ ರೀತಿಯ ನೈಸರ್ಗಿಕ ವಿಕೋಪವುಂಟಾದಾಗ ಅನೇಕ ಕಡೆಗಳಲ್ಲಿ ಕುಡಿಯುವ ನೀರಿಗೆ ಸಂಚಕಾರ ಬಂತು. ಅನೇಕ ಭಾಗಗಳಲ್ಲಿ ವಿದ್ಯುತ್ ಕಂಬಗಳು, ಬಿದ್ದು ಹೋಗಿ ವಿದ್ಯುತ್ ವ್ಯತ್ಯಯವುಂಟಾಯಿತು. ಮಾನ್ಯ ಬಿ.ಎಸ್. ಯಡಿಯೂರಪ್ಪನವರ ಸರ್ಕಾರ ಇದಕ್ಕೆ ತಕ್ಷಣ ಸ್ಪಂದಿಸಿ ಮೊಬೈಲ್ ಟೀಮ್‌ಗಳನ್ನು ಪ್ರತಿ ಜಿಲ್ಲೆ, ತಾಲ್ಲೂಕಿನಲ್ಲಿ ಮಾಡಿ ಇವುಗಳು ತಕ್ಷಣ ರಿಪೇರಿಯಾಗಬೇಕು ಎನ್ನತಕ್ಕ ದೃಷ್ಟಿಯಿಂದ ಎಲ್ಲಾ ವ್ಯವಸ್ಥೆಯನ್ನು ಮಾಡಿ ಸಕಾಲದಲ್ಲಿ ರಿಪೇರಿ ಮಾಡಿರತಕ್ಕದ್ದು ಶ್ಲಾಘನೀಯವೆಂದು

ಹೇಳಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ರಾಜ್ಯ ಸರ್ಕಾರ ಮಾಡಿದಂಥ ಪ್ರಯತ್ನಗಳ ಬಗ್ಗೆ ಎಲ್ಲೂ ಕೂಡ ಬೆನ್ನು ತಟ್ಟಲಿಲ್ಲ. ಆದರೆ ನಿಜವಾಗಿಯೂ ನಮ್ಮೆಲ್ಲಾ ಜಿಲ್ಲಾ ಉಸ್ತುವಾರಿ ಮಂತ್ರಿಗಳು, ಮುಖ್ಯಮಂತ್ರಿಗಳು ಸಂಬಂಧಪಟ್ಟ ಆಡಳಿತ ಯಂತ್ರವನ್ನು ಕ್ರಿಯಾಶೀಲವನ್ನಾಗಿ ಮಾಡಿ ಪ್ರತಿ ಜಿಲ್ಲೆಯಲ್ಲೂ ಹಗಲೂ ರಾತ್ರಿ ಹೋರಾಟ ಮಾಡಿ ಜನರ ಕಷ್ಟಸುಖಗಳಿಗೆ ಸ್ಪಂದನೆ ಮಾಡಿದ್ದನ್ನು ನಾವೆಲ್ಲಾ ಮುಕ್ತವಾಗಿ ಹೊಗಳಬೇಕಾಗುತ್ತದೆ. ಇವತ್ತು ಸುಮಾರು 341 ಕೋಟಿ ರೂಪಾಯಿ ಸಾರ್ವಜನಿಕರಿಂದ ವಂತಿಗೆ ಬಂದಿದ್ದು ಅನೇಕ ಸಂಘ ಸಂಸ್ಥೆಯವರು, ಮಠಾಧೀಶರುಗಳು 63 ಸಾವಿರ ಮನೆಗಳನ್ನು ಕಟ್ಟಿಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿರುವುದನ್ನು ತಾವು ಹೊಗಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಬೇರೆಬೇರೆ ಮಠಾಧೀಶರಿಗೆ ಅವರ ಧಾರ್ಮಿಕ ಕಾರ್ಯಕ್ರಮಗಳಿಗೆ, ಚಟುವಟಿಕೆಗಳಿಗೆ ಉಪಯೋಗವಾಗಲಿ ಎಂದು ಅಲ್ಲಷ್ಟು, ಇಲ್ಲಷ್ಟು ಧನಸಹಾಯ ಮಾಡಿದಾಗ ಕೆಲವು ಟೀಕೆಗಳು ಬಂತು. ಆದರೆ, ಇವತ್ತು ಅದೇ ಮಠಾಧೀಶರುಗಳು ಸಮಾಜಕ್ಕೆ, ರಾಜ್ಯಕ್ಕೆ ತೊಂದರೆ ಬಂದಾಗ ಏನು ಸಹಾಯಕ್ಕೆ ಬಂದರು ಅಷ್ಟೇ ಮುಖ್ಯವಾಗಿ ಅವರನ್ನೂ ಹೊಗಳಬೇಕಾಗುತ್ತದೆ. ಅವರ ಕ್ರಮವನ್ನು ನಾವು ಸ್ವಾಗತಿಸಬೇಕಾಗುತ್ತದೆ. ಇತ್ತೀಚೆಗೆ ಬಹಳ ದೊಡ್ಡ ಪ್ರಮಾಣದಲ್ಲಿ ಪುನರ್ವಸತಿ ವ್ಯವಸ್ಥೆ ಮಾಡಬೇಕು, ಮನೆಗಳನ್ನು ಕಟ್ಟಬೇಕು ಎಂಬ ದೃಷ್ಟಿಯಲ್ಲಿ ಹಗಲು ರಾತ್ರಿ ಪ್ರಯತ್ನಗಳು ನಡೆದಿದೆ. ನಮ್ಮ ವಿರೋಧ ಪಕ್ಷದ ಅನೇಕ ಮುಖಂಡರು ಆ ಭಾಗಕ್ಕೆ ಹೋದಾಗ ಪತ್ರಿಕೆಯಲ್ಲಿ ಏನೂ ಕೆಲಸ ಆಗಿಲ್ಲ, ಪುನರ್ವಸತಿ ಬಗ್ಗೆ ಸರ್ಕಾರ ನಿರ್ಲಕ್ಷ್ಯ ತಾಳಿದೆಯೆಂದು ಆರೋಪ ಮಾಡಿ ಹೇಳಿಕೆಗಳನ್ನು ಕೊಡುತ್ತಾರೆ. ಆದರೆ, ಇವತ್ತು ಸಕ್ರಿಯವಾಗಿ ಮುಂಬರುವಂಥ ಮೇ, ಜೂನ್ ತಿಂಗಳಿನೊಳಗಾಗಿ ಹೊಸ ಮನೆಗಳನ್ನು ಕಟ್ಟಬೇಕು ಎಂಬ ದೃಷ್ಟಿಯಿಂದ ಸಂಪೂರ್ಣವಾದ ಸಿದ್ಧತೆಯನ್ನು ನಮ್ಮ ಸರ್ಕಾರ ಮಾಡಿಕೊಂಡಿದೆ. Rome is not built in a day ಎಂದು ಹೇಳುತ್ತಾರೆ. ರೋಮ್ ನಗರ ಕಟ್ಟಬೇಕಾದರೆ ಬಹುಶ: ಒಂದೇ ದಿವಸದಲ್ಲಿ ಆಗುವುದಿಲ್ಲ. ಅದೇ ರೀತಿ

ಇವತ್ತು ಪುನರ್ವಸತಿ ಕೇಂದ್ರಗಳನ್ನು ಮಾಡಬೇಕಾದರು ಕೂಡ ತನ್ನದೇ ಆದಂಥ ಸಮಯ ಬೇಕಾಗುತ್ತದೆ. ಆ ಸಮಯಕ್ಕೆ ಅನುಸಾರವಾಗಿ ಪುನರ್ವಸತಿ ಮಾಡತಕ್ಕ, ಜವಾಬ್ದಾರಿಯಿಂದ ಕೆಲಸ ಮಾಡತಕ್ಕ ಸರ್ಕಾರ, ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ಯಾವ ಅನಾಹುತ ಪ್ರಕೃತಿ ವಿಕೋಪದಿಂದ ಆಯಿತು ಅದರ ಸ್ಪಂದನೆಗೆ ಸರ್ಕಾರ ಸಕಾಲಕ್ಕೆ ಮಾಡುತ್ತದೆ ಎಂಬ ವಿಶ್ವಾಸ ನನಗಿದೆ. ಬಹುಶ: ಕಾನೂನು ಮತ್ತು ಸುವ್ಯವಸ್ಥೆ ಕೂಡ ಕರ್ನಾಟಕ ರಾಜ್ಯದಲ್ಲಿ ಬಹಳ ವ್ಯವಸ್ಥಿತವಾಗಿ ನಡೆದುಕೊಂಡು ಬಂದಿದೆ. ಅಲ್ಲಲ್ಲಿ ಸಣ್ಣ ಪುಟ್ಟ ಘಟನೆಗಳು ಆಗಿರಬಹುದು. ಕಾಣದ ಯಾವುದೋ ಒಂದು ಶಕ್ತಿ ಬಹುಶ: ಸರ್ಕಾರದ ಹೆಸರನ್ನು, ಮಾನ್ಯ ಮುಖ್ಯಮಂತ್ರಿಯವರ ಹೆಸರನ್ನು ಕೆಡಿಸಬೇಕೆಂಬ ದೃಷ್ಟಿಯಿಂದ ಅಪ್ರತ್ಯಕ್ಷವಾಗಿ ಕೆಲಸ ಮಾಡುತ್ತಾ ಇವತ್ತು ರಾಜ್ಯದ ಶಾಂತಿಯನ್ನು ಕದಡುವಂಥ ಕೆಲಸವನ್ನು ಮಾಡುತ್ತಿವೆ. ಆದರೆ, ಅದಕ್ಕೂ ಕೂಡ ನಮ್ಮ ಸರ್ಕಾರ ಸಕಾಲಕ್ಕೆ ಸ್ಪಂದಿಸಿ ರಾಜ್ಯದಲ್ಲಿ ಸಂಪೂರ್ಣವಾಗಿ ಶಾಂತಿ ನೆಲೆಸುವ ಕೆಲಸವನ್ನು ಮಾಡುತ್ತಿದೆ. ಕಳೆದ ವರ್ಷ ರಾಜ್ಯದಲ್ಲಿ ನಕ್ಸಲೀಯರ ಚಟುವಟಿಕೆ ನಡೆಯುತ್ತಿತ್ತು. ಬಹಳ ದೊಡ್ಡ ಪ್ರಮಾಣದಲ್ಲಿ ನಕ್ಸಲೀಯರ ಚಟುವಟಿಕೆಯನ್ನು ಹತ್ತಿಕ್ಕುವ ಪ್ರಯತ್ನವನ್ನು ನಮ್ಮ ಸರ್ಕಾರ ಮಾಡುತ್ತಿದೆ. ಮಾನ್ಯ ಯಡಿಯೂರಪ್ಪನವರ ಸರ್ಕಾರ ರೈತರ ಪರವಾಗಿ ಕೆಲಸ ಮಾಡುವಂಥ, ರೈತರ ಹೆಸರಿನ ಮೇಲೆ ಪ್ರಮಾಣವಚನ ತೆಗೆದುಕೊಂಡು ಮುಖ್ಯಮಂತ್ರಿಯಾಗಿರುವವರು ಎಂದು ನನಗೆ ಗೊತ್ತಿದೆ. ಅವರು ತಮ್ಮ ಜೀವನದ ತುಂಬಾ, ಅದು ವಿಧಾನ ಸಭೆಯ ಒಳಗಿರಲಿ, ಹೊರಗಿರಲಿ ರೈತರ, ಬಡವರ ಬಗ್ಗೆ ವಿಶೇಷವಾಗಿ ಹೋರಾಟ ಮಾಡಿದಂಥ ಮಹಾನ್ ನಾಯಕರು. ಅವರು, ರೈತರಿಗೆ ಅನುಕೂಲವಾಗುವಂಥ ಕಾರ್ಯಕ್ರಮಗಳನ್ನು ಈಗಾಗಲೇ ಘೋಷಣೆ ಮಾಡಿದ್ದಾರೆ. ಬಹುಶ: ನಾಳೆ ಮಂಡಿಸುವಂಥ ಬಜೆಟ್‌ನಲ್ಲೂ ವಿಶೇಷವಾಗಿ ರೈತರ ಪರವಾದ ಬಜೆಟ್ ಕೊಡುತ್ತಾರೆ ಎಂಬ ನಿರೀಕ್ಷೆಯಲ್ಲಿ ಕರ್ನಾಟಕ ರಾಜ್ಯದ ಜನರಿದ್ದಾರೆ. ಅವರು ನಿಶ್ಚಿತವಾಗಿ ಅದನ್ನು ಮಾಡಿಯೇ ಮಾಡುತ್ತಾರೆ. ಆದರೆ, ಇವತ್ತು ವಿದ್ಯುತ್ ಸಮಸ್ಯೆ ಇದೆ. ವಿರೋಧ ಪಕ್ಷದವರು ಆಡಳಿತ ನಡೆಸುತ್ತಿರುವ ನಮ್ಮ ಪಕ್ಷದ

ಮೇಲೆ ಆರೋಪ ಮಾಡುವ ಪ್ರಯತ್ನ ಮಾಡಿದರು. ಆದರೆ, ಈ ಹಿಂದೆ ಅಧಿಕಾರ ನಡೆಸಿದಂಥ ಸರ್ಕಾರಗಳು ದೂರದೃಷ್ಟಿಯಿಂದ ಏನಾದರು ವಿದ್ಯುತ್ ಉತ್ಪಾದನೆ ಮಾಡುವ ಯೋಜನೆಗಳ ಬಗ್ಗೆ ಕಾರ್ಯಪ್ರವೃತ್ತರಾಗಿದ್ದರೆ ಬಹುಶ: ಇಂಥ ಧಾರುಣವಾದಂಥ ವಿದ್ಯುತ್ ಸಮಸ್ಯೆ ಕರ್ನಾಟಕ ರಾಜ್ಯಕ್ಕೆ ಬರುತ್ತಿರಲಿಲ್ಲ. ಈ ದೃಷ್ಟಿಯಲ್ಲಿ ನಮ್ಮ ಸರ್ಕಾರ ಮುಂಬರುವ ಎರಡು ವರ್ಷಗಳಲ್ಲಿ ವಿದ್ಯುತ್‌ನಲ್ಲಿ ಕರ್ನಾಟಕ ಸಂಪೂರ್ಣವಾಗಿ ಸ್ವಾವಲಂಬಿಯಾಗಬೇಕು, ಆ ದೃಷ್ಟಿಯಿಂದ ಏನೇನು ಯೋಜನೆಗಳನ್ನು ಮಾಡಬೇಕು ಎಂಬ ದೃಷ್ಟಿಯಿಂದ ಸಾಕಷ್ಟು ಪ್ರಯತ್ನಗಳನ್ನು ಸರ್ಕಾರ ಮಾಡಿದೆ ಈ ಸದನದಲ್ಲಿ ಈಗಾಗಲೇ ಚರ್ಚೆ ಕೂಡ ಆಗಿದೆ, ಅದರ ಬಗ್ಗೆ ವಿವರಗಳನ್ನು ಮಾನ್ಯ ಮುಖ್ಯಮಂತ್ರಿಯವರು ಮತ್ತು ಶಾಸಕರುಗಳು ಮಾತನಾಡುವಾಗ ಹೇಳಿದ್ದಾರೆ. ನಿರಂತರ ಜ್ಯೋತಿ ಎಂದಾಗ, ಮಾನ್ಯ ಈಶ್ವರಪ್ಪನವರು ಇಂಧನ ಸಚಿವರಾಗಿದ್ದಾಗ ಗುಜರಾತ್‌ನಲ್ಲಿ ಮಾನ್ಯ ನರೇಂದ್ರ ಮೋದಿಯವರು ಯಾವರೀತಿಯಾಗಿ ನಿರಂತರ ಜ್ಯೋತಿಯನ್ನು ಜಾರಿಗೆ ತಂದರೋ ಅದೇ ರೀತಿ ಕರ್ನಾಟಕದಲ್ಲೂ ಜಾರಿಗೆ ತರಬೇಕು ಎಂಬ ಕಲ್ಪನೆಯ ಬಗ್ಗೆ ಚರ್ಚೆಯಾದಾಗ ವಿರೋಧ ಪಕ್ಷದವರು ಬಹಳ ಮೂಗು ಮುರಿಯುತ್ತಾರೆ. ನಿರಂತರ ಜ್ಯೋತಿಯ ಬಗ್ಗೆ ಕೇವಲ ಟೀಕೆಗಳನ್ನು ಮಾಡುತ್ತಾರೆ. ಆದರೆ, ನಿರಂತರ ಜ್ಯೋತಿಯನ್ನು ಜಾರಿಗೆ ತರಬೇಕಾದರೆ 2500 ಕೋಟಿ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಇಷ್ಟು ಹಣವನ್ನು ಖರ್ಚು ಮಾಡಿ ನಿರಂತರ ಜ್ಯೋತಿಯನ್ನು ಕರ್ನಾಟಕದಲ್ಲಿ ಅಳವಡಿಸಿದರೆ ಸಾವಿರ ಮೆಗಾವ್ಯಾಟ್ ವಿದ್ಯುತ್‌ನ್ನು ಉತ್ಪಾದನೆ ಮಾಡುವುದಕ್ಕೆ ಸಮಾನವಾಗುತ್ತದೆ. ಬಹುಶ: ಒಂದು ಮೆಗಾವ್ಯಾಟ್ ವಿದ್ಯುತ್‌ನ್ನು ಉತ್ಪಾದನೆ ಮಾಡಬೇಕಾದರೆ ಕನಿಷ್ಠ 5 ಕೋಟಿ ರೂ. ಖರ್ಚಾಗುತ್ತದೆ. ಹಾಗಾಗಿ ಒಂದು ಸಾವಿರ ಮೆಗಾವ್ಯಾಟ್ ವಿದ್ಯುತ್‌ನ್ನು ಉತ್ಪಾದನೆ ಮಾಡಬೇಕಾದರೆ ಐದು ಸಾವಿರ ಕೋಟಿ ಹಣ ಬೇಕಾಗುತ್ತದೆ. ಆದರೆ, ಇಲ್ಲಿ ಕೇವಲ 2500 ಕೋಟಿ ಖರ್ಚುಮಾಡುವುದರ ಮೂಲಕ ಕರ್ನಾಟಕದಲ್ಲಿ ಈ ರೀತಿಯ ನಿರಂತರ ಜ್ಯೋತಿಯನ್ನು ಜಾರಿಗೆ ತಂದಿದ್ದಾದರೆ ಇಲ್ಲಿ ಕುಡಿಯುವ ನೀರು,

ಗ್ರಾಮಾಂತರ ಭಾಗದಲ್ಲಿ ಎಲ್ಲಿ ಜನವಸತಿ ಇರುತ್ತದೆ ಅಲ್ಲೂ ಕೂಡ 24 ಗಂಟೆಗಳ ಕಾಲ ತಡೆರಹಿತವಾದ ವಿದ್ಯುತ್‌ನ್ನು ನಾವು ಕೊಡಬಹುದು. ಪಂಪ್‌ಸೆಂಟ್‌ಗಳಿಗೆ ಎಷ್ಟು ವಿದ್ಯುತ್ ಉತ್ಪಾದನೆ ಆಗುತ್ತದೆ ಅದರ ಪ್ರಕಾರ ಬೇರೆ ಮಾರ್ಗದ ಮೂಲಕ 6-8 ಗಂಟೆಗಳ ಕಾಲ ವಿದ್ಯುತ್ ಕೊಡಲು ಸಾಧ್ಯವಾಗುತ್ತದೆ. ಆದರೆ ವಿದ್ಯುತ್‌ನ ಬಗ್ಗೆ ಕೇವಲ ಸರ್ಕಾರದ ಮೇಲೆ ಗೂಬೆ ಕೂರಿಸಲಾಗುತ್ತಿದೆ. ವಿದ್ಯುತ್‌ನ ಬೇಡಿಕೆ ದಿನದಿಂದ ದಿನಕ್ಕೆ, ತಿಂಗಳಿನಿಂದ ತಿಂಗಳಿಗೆ, ವರ್ಷದಿಂದ ವರ್ಷಕ್ಕೆ ಜಾಸ್ತಿಯಾಗುತ್ತದೆ. ಆ ಬೇಡಿಕೆಯ ಅನುಸಾರ ವಿದ್ಯುತ್‌ನ ಉತ್ಪಾದನೆ ಇಲ್ಲ. ವಿದ್ಯುತ್ ಉತ್ಪಾದನೆ ಮಾಡುವ ಬಗ್ಗೆ ಹಿಂದಿನ ಸರ್ಕಾರಗಳು ನಿಶ್ಚಿತವಾದ ಯೋಜನೆಗಳನ್ನು ಮಾಡಿದ್ದರೆ ಬಹುಶ: ಈ ಸಮಸ್ಯೆ ಆಗುತ್ತಿರಲಿಲ್ಲ. ಆದರೆ, ಮಾನ್ಯ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ದೊಡ್ಡ ಪ್ರಮಾಣದಲ್ಲಿ ಮುಂದಿನ ಸಂದರ್ಭದಲ್ಲಿ ವಿದ್ಯುತ್‌ನ್ನು ಉತ್ಪಾದನೆ ಮಾಡಬೇಕೆಂದು, ಛತ್ತೀಸ್‌ಘಡದಲ್ಲಿರುವ ಕಾರ್ಯಕ್ರಮ ಇರಬಹುದು, ಬಿಜಾಪುರದ ಹತ್ತಿರದ ಕೂಡಗಿ ಯೋಜನೆ ಇರಬಹುದು, ಬೇರೆ ಬೇರೆ ಸೌರ ಶಕ್ತಿಯ ಮೂಲಕ ಇರಬಹುದು, ಗಾಳಿಯ ಆಧಾರದ ಮೇಲೆ ಇರಬಹುದು, ವಿದ್ಯುತ್‌ನ್ನು ಉತ್ಪಾದನೆ ಮಾಡುವಂಥ ಯೋಜನೆಯನ್ನು ಮಾಡಿದ್ದಾರೆ. ಅದನ್ನು ನಾವುಗಳು ಸ್ವಾಗತಿಸಬೇಕಾಗುತ್ತದೆ. ಇವತ್ತು ಸಾಕಷ್ಟು ಮಳೆಯಾಗಿದೆ, ಜಲಾಶಯಗಳು ತುಂಬಿವೆ, ವಿದ್ಯುತ್‌ನ ಕೊರತೆಯಾಗುವುದಿಲ್ಲವೆಂದು ಕೆಲವರು ಪ್ರಶ್ನೆ ಮಾಡುತ್ತಾರೆ. ಜಲಾಶಯಗಳು ತುಂಬಿದ್ದರೂ ಕೂಡ ಉತ್ತರ ಕರ್ನಾಟಕದಲ್ಲಿ ಸುರಿದಂಥ ಮಳೆ ಈ ಭಾಗದಲ್ಲಿ ಸುರಿದಿಲ್ಲ. ಯಾವ ಜಲಾಶಯಗಳಿಂದ ನೀರನ್ನು ಉಪಯೋಗ ಮಾಡಿ ವಿದ್ಯುತ್‌ನ್ನು ಉತ್ಪಾದನೆ ಮಾಡಬೇಕಾಗುತ್ತದೋ ಆ ಜಲಾಶಯಗಳು ತುಂಬಿಲ್ಲ. ಅಕಸ್ಮಾತ್ ತುಂಬಿದ್ದರೂ ಜಲಾಶಯದಿಂದ ಉತ್ಪಾದನೆಯಾಗುತ್ತಿರುವ ವಿದ್ಯುತ್ ನಮ್ಮ ರಾಜ್ಯದ ಬೇಡಿಕೆಯ ಕೇವಲ 30 ಪರ್ಸೆಂಟ್ ಮಾತ್ರ ಪೂರೈಸಬಲ್ಲದು. ಉಳಿದಂಥ 70 ಪರ್ಸೆಂಟ್ ವಿದ್ಯುತ್‌ನ್ನು ಕಲ್ಲಿದ್ದಲಿನ ಆಧಾರದ ಮೇಲೆ, ಡೀಸೆಲ್ ಆಧಾರದ ಮೇಲೆ, ಸೆಂಟ್ರಲ್ ಗ್ರಿಡ್‌ನಿಂದ, ಸಕ್ಕರೆ ಕಾರ್ಖಾನೆಗಳಿಂದ, ಬೇರೆ ಬೇರೆ ರಾಜ್ಯಗಳಿಂದ

ಖರೀದಿ ಮಾಡಬೇಕೇ ಹೊರತು ಬೇರೆ ದಾರಿ ಇಲ್ಲ. ಕಳೆದ ವರ್ಷವೂ ಅನಾವೃಷ್ಟಿಯಾಗಿ ಮಳೆಯಾಗದಿದ್ದಾಗ ಜಲಾಶಯಗಳು ಸಂಪೂರ್ಣವಾಗಿ ಖಾಲಿ ಇದ್ದಾಗಿಯೂ ರಾಜ್ಯದ ಭವಿಷ್ಯವೇನು ಎಂಬ ಚಿಂತನೆ ಇದ್ದಾಗ, ಒಬ್ಬ ಧೈರ್ಯದ ಮುಖ್ಯಮಂತ್ರಿ ಅತ್ಯಂತ ಅಗತ್ಯವಾದ ನಿರ್ಣಯವನ್ನು ತೆಗೆದುಕೊಂಡು ಸುಮಾರು 3500 ರೂ. ಕೋಟಿ ಖರ್ಚು ಮಾಡಿ, ಒಂದೊಂದು ಯೂನಿಟ್‌ಗೆ 7, 8 ಅಗತ್ಯ ಬಿದ್ದರೆ 10 ರೂಪಾಯಿ ಕೊಟ್ಟಾದರೂ ವಿದ್ಯುತ್‌ನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಿ ಅದರಂತೆ ನಡೆದುಕೊಂಡು ಕರ್ನಾಟಕ ರಾಜ್ಯದ ಜನತೆಗೆ ವಿದ್ಯುತ್‌ನ್ನು ಕೊಟ್ಟರು. ಅದನ್ನು ನಾವು ಯಾರೂ ಮರೆಯುವಂತಿಲ್ಲ. ಈ ವರ್ಷವೂ ಇಂಥ ಭೀಕರವಾದ ಪರಿಸ್ಥಿತಿ ಇದ್ದರೂ ಕೂಡ ಏನಾದರು ವ್ಯವಸ್ಥೆಯನ್ನು ಸರ್ಕಾರದಲ್ಲಿ ಮಾಡಿಕೊಂಡು ನಿಶ್ಚಿತವಾಗಿ ವಿದ್ಯುತ್‌ನ್ನು ಖರೀದಿ ಮಾಡುತ್ತೇವೆ, ಇಡೀ ರಾಜ್ಯದ ತುಂಬಾ ಗ್ರಾಮಾಂತರ ಭಾಗಕ್ಕೂ ಸಹ ಎಷ್ಟು ಸಾಧ್ಯವೋ ಅಷ್ಟು ವಿದ್ಯುತ್‌ನ್ನು ಕೊಡುತ್ತೇವೆ ಎಂಬ ಆಶ್ವಾಸನೆಯನ್ನು ಮಾನ್ಯ ಮುಖ್ಯಮಂತ್ರಿಯವರು ಈ ಸದನದಲ್ಲಿ ನಿನ್ನೆ ತಾನೆ ಹೇಳಿದ್ದಾರೆ. ವಿಶೇಷವಾಗಿ ನಮ್ಮ ದೇಶ ಕೃಷಿ ಪ್ರಧಾನವಾದಂಥ ರಾಷ್ಟ್ರ. ನಮಗೆಲ್ಲಾ ಗೊತ್ತಿರುವಂತೆ ಇದು ಗೋವು ಆಧಾರಿತ ಕೃಷಿ ಪ್ರಧಾನವಾದ ರಾಷ್ಟ್ರ.

(ಡಾ: ಹೆಚ್.ಸಿ. ಮಹದೇವಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

4.40 ಪಿ.ಎಂ.

ಕರ್ನಾಟಕದಲ್ಲಿ ಕೂಡ ಕೃಷಿ ಬಗ್ಗೆ ವಿಶೇಷವಾದ ಒಲವು ಕೊಟ್ಟು, ರೈತರು ಸ್ವಾವಲಂಬಿಯಾಗಿ, ಸ್ವಾಭಿಮಾನದಿಂದ ಜೀವನ ಮಾಡಬೇಕೆನ್ನುವ ಹಿನ್ನೆಲೆಯಲ್ಲಿ ಸಾವಯವ ಕೃಷಿಗೆ ವಿಶೇಷವಾದಂತಹ ಮಹತ್ವವನ್ನು ಕೊಟ್ಟು, ಸಾವಯವ ಕೃಷಿ ಮಿಷನ್‌ವೊಂದನ್ನು ಸ್ಥಾಪಿಸಲಾಗಿದೆ. ಬಹುಶಃ ಇಡೀ ದೇಶ ಇವತ್ತು ಅದನ್ನು ಸ್ವಾಗತ ಮಾಡಬೇಕಾಗುತ್ತದೆ. ಆ ದೃಷ್ಟಿಯಲ್ಲಿ 100 ಕೋಟಿ ರೂ.ಗಳನ್ನು ಅದಕ್ಕಾಗಿ ಮೀಸಲಿಟ್ಟು, ಸಾವಯವ ಕೃಷಿ ಮೂಲಕ ಜನರಲ್ಲಿ ಜಾಗೃತಿಯನ್ನು ತಂದು, ಅದರ ಮೂಲಕ ಒಂದು ಹೊಸ ವ್ಯವಸ್ಥೆ ಮಾಡಬೇಕೆಂದು ಇವತ್ತೇನು ನಮ್ಮ ಸರ್ಕಾರ ಹೊರಟಿದೆ, ಅದನ್ನು

ನಾವೆಲ್ಲರೂ ಸ್ವಾಗತ ಮಾಡಬೇಕಾಗುತ್ತದೆ. ಕೃಷಿ ಜೊತೆಗೆ ಕೃಷಿಗೆ ಪೂರಕವಾಗುವಂತಹ ಉದ್ಯೋಗ ಎಂದರೆ ಈ ದೇಶದಲ್ಲಿ ಹೈನುಗಾರಿಕೆ ಉದ್ಯೋಗ. ಅದು ರಾಜ್ಯದಲ್ಲೂ ಕೂಡ ಯಶಸ್ವಿಯಾಗಲಿ ಎಂದು ಬಹಳ ದೊಡ್ಡ ಪ್ರಮಾಣದಲ್ಲಿ ನಮ್ಮ ಸರ್ಕಾರ ಹೈನುಗಾರಿಕೆಗೆ ಆದ್ಯತೆಯನ್ನು ಕೊಟ್ಟಿದ್ದರಿಂದ, ಇವತ್ತು ಪ್ರತಿ ದಿವಸಕ್ಕೆ ಸುಮಾರು ನಾಲ್ಕೂವರೆ ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುವಂತಹ ಪರಿಸ್ಥಿತಿಗೆ ಬಂದಿದೆ. ಇಡೀ ಜಗತ್ತಿನಲ್ಲಿ ಹಾಲು ಉತ್ಪಾದನೆ ಮಾಡುವುದರಲ್ಲಿ No.1 ದೇಶ ಭಾರತ. ಇಡೀ ಭಾರತ ದೇಶದಲ್ಲಿ ಹಾಲು ಉತ್ಪಾದನೆ ಮಾಡುವಲ್ಲಿ ಎರಡನೇ ಸ್ಥಾನ ಪಡೆದಿರುವುದು ಕರ್ನಾಟಕ. ಹಾಲು ಉತ್ಪಾದನೆ ಮಾಡತಕ್ಕವರು ಕೃಷಿ ಕಾರ್ಮಿಕರು ಇರಬಹುದು, ರೈತರು ಇರಬಹುದು. ಅವರು ಉತ್ಪಾದನೆ ಮಾಡಿದಂತಹ ಹಾಲಿಗೆ ಲೀಟರ್‌ಗೆ 2 ರೂ. ಸಬ್ಸಿಡಿ ಹಣವನ್ನು ಕೊಡುವಂತಹ ಘೋಷಣೆಯನ್ನು ನಮ್ಮ ಸರ್ಕಾರ ಮಾಡಿ, ದೊಡ್ಡ ಪ್ರಮಾಣದಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತಂದಿದೆ. ಕರ್ನಾಟಕ ರಾಜ್ಯದಲ್ಲಿ ಇವತ್ತು ಕೋಟಿ ಕೋಟಿ ಜನ ಇದನ್ನು ಸ್ವಾಗತ ಮಾಡುತ್ತಿದ್ದಾರೆ. ನೀರಾವರಿ ಹಿನ್ನೆಲೆಯಲ್ಲಿ, ಕೃಷ್ಣಾ ಇರಬಹುದು, ಕಾವೇರಿ ಇರಬಹುದು, ಬಹಳ ದಿವಸಗಳಿಂದ ಅಪೂರ್ಣವಾಗಿ ಉಳಿದಿರುವಂತಹ ಯೋಜನೆಗಳನ್ನು ಸಕಾಲದಲ್ಲಿ ಪೂರ್ಣ ಮಾಡಿ ದೊಡ್ಡ ಪ್ರಮಾಣದಲ್ಲಿ ನೀರಾವರಿ ಮಾಡಬೇಕೆಂದು ಸರ್ಕಾರ ಈಗಾಗಲೇ ತೀರ್ಮಾನವನ್ನು ತೆಗೆದುಕೊಂಡು, ಅದಕ್ಕೆ ಬೇಕಾಗುವಷ್ಟು ದುಡ್ಡನ್ನು ಕೊಟ್ಟು ಒಂದು ವ್ಯವಸ್ಥೆಯನ್ನು ಮಾಡತಕ್ಕ ಸಂಕಲ್ಪವನ್ನು ಸನ್ಮಾನ್ಯ ಯಡಿಯೂರಪ್ಪನವರ ಸರ್ಕಾರ ಮಾಡಿದೆ. ಅದನ್ನೂ ಕೂಡ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಉಲ್ಲೇಖ ಮಾಡಿದ್ದನ್ನು ನಾನು ಇವತ್ತು ಸ್ವಾಗತ ಮಾಡುತ್ತೇನೆ. ಬಹುಶಃ ನಮ್ಮ ವಿರೋಧ ಪಕ್ಷದ ಮುಖಂಡರುಗಳೆಲ್ಲಾ ಮಾತನಾಡುವಾಗ ಕೇಂದ್ರ ಸರ್ಕಾರ ನಮ್ಮ ಮೇಲೆ ಯಾವುದೇ ರೀತಿಯ ಮಲತಾಯಿ ಧೋರಣೆ ತೋರಿಲ್ಲ ಎನ್ನುವಂತಹ ಮಾತನ್ನು ಆಗಾಗ ಹೇಳಿದರು. ಆದರೆ ತಮಗೆಲ್ಲಾ ಗೊತ್ತಿರಲಿ. ಬಹಳ ದೊಡ್ಡ ಪ್ರಮಾಣದಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗುತ್ತಿದೆ. ಕೇಂದ್ರ ಸರ್ಕಾರ ಮಲತಾಯ ಧೋರಣೆ

ತೋರುತ್ತಿದೆ. ಇವತ್ತು ಹುಬ್ಬಳ್ಳಿ-ಧಾರವಾಡದಂತಹ ಮಹಾನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. 30 ವರ್ಷಗಳ ಹಿಂದೆ ಮಲಪ್ರಭಾ ನದಿಯಿಂದ ಕುಡಿಯುವ ನೀರಿನ ಯೋಜನೆ ಇತ್ತು. ಇವತ್ತು ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ 10 ದಿವಸಕ್ಕೊಮ್ಮೆ ಕುಡಿಯುವ ನೀರನ್ನು ಕೊಡುತ್ತಾರೆ. ಅಂದರೆ ಒಂದು ತಿಂಗಳಿನಲ್ಲಿ ಕೇವಲ 3 ಬಾರಿ ಕುಡಿಯುವ ನೀರನ್ನು ಕೊಟ್ಟರೆ, ಅಲ್ಲಿನ ಜನ ಹೇಗೆ ಜೀವನ ಮಾಡಬೇಕು? ಇದರ ಬಗ್ಗೆ ಸನ್ಮಾನ್ಯ ಈಶ್ವರಪ್ಪನವರು ದೊಡ್ಡ ನೀರಾವರಿ ಮಂತ್ರಿಗಳಿದ್ದಾಗ ಒಂದು ನಿರ್ಣಯ ತೆಗೆದುಕೊಂಡು, ಸುಮಾರು ಎಂಟೂವರೆ ಟಿ.ಎಂ.ಸಿ. ನೀರನ್ನು ಮಹದಾಯಿ ಯೋಜನೆ ಮೂಲಕ lift ಮಾಡಿ ಕುಡಿಯುವ ನೀರಿಗಾಗಿ ಬಳಸಬೇಕೆನ್ನುವ ತೀರ್ಮಾನವನ್ನು ತೆಗೆದುಕೊಂಡರು. ಸುಮಾರು 200 ಟಿ.ಎಂ.ಸಿ. ನೀರಿನಲ್ಲಿ ಕರ್ನಾಟಕ ರಾಜ್ಯದ ಪಾಲು 50 ಟಿ.ಎಂ.ಸಿ. ಇದೆ. ಈ 50 ಟಿ.ಎಂ.ಸಿ. ನೀರಿನಲ್ಲಿ ಎಂಟೂವರೆ ಟಿ.ಎಂ.ಸಿ. ನೀರನ್ನು ಕುಡಿಯುವ ನೀರಿಗಾಗಿ ಯೋಜನೆ ಮಾಡಬೇಕೆಂಬ ತೀರ್ಮಾನವನ್ನು ತೆಗೆದುಕೊಂಡು, ಕಾರ್ಯಕ್ರಮ ಶುರು ಮಾಡುವಂತಹ ಸಂದರ್ಭದಲ್ಲಿ, ನಮ್ಮ ಕೇಂದ್ರ ಸರ್ಕಾರದಿಂದ ಇದಕ್ಕೆ ಅನುಮತಿ ಕೊಡದೇ, ಕೋರ್ಟ್‌ನಲ್ಲಿ ಆ ಬಗ್ಗೆ ಚರ್ಚೆ ನಡೆಯುತ್ತಿರುವಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಟ್ರಿಬ್ಯೂನಲ್ ರಚನೆ ಮಾಡಿತು. ಅದರಿಂದ ನಮಗೆ ಎಂಟೂವರೆ ಟಿ.ಎಂ.ಸಿ. ಕುಡಿಯುವ ನೀರು ಸಾರ್ವಜನಿಕರಿಗೆ ಕೊಡುವಂತಹ ವ್ಯವಸ್ಥೆ ಏನಿತ್ತೋ, ಅದಕ್ಕೆ ತೊಂದರೆಯಾಗಿ ಆ ಟ್ರಿಬ್ಯೂನಲ್ ಮೂಲಕ ನಮ್ಮ ಹಕ್ಕನ್ನು ಹತ್ತಿಕ್ಕಿದ್ದಾರೆ. ನನಗೇನು ಅನಿಸುತ್ತದೆ ಎಂದರೆ, ಕರ್ನಾಟಕದಿಂದ ಇವತ್ತು 3 ಜನ ಮಂತ್ರಿಗಳು ಕೇಂದ್ರದಲ್ಲಿದ್ದಾರೆ. ಅದರಲ್ಲಿ ಇಬ್ಬರಾದ ಸನ್ಮಾನ್ಯ ಎಸ್.ಎಂ.ಕೃಷ್ಣ ಮತ್ತು ಸನ್ಮಾನ್ಯ ವೀರಪ್ಪ ಮೊಯ್ಲಿಯವರು ಈ ರಾಜ್ಯದ ಇಬ್ಬರು ಮಾಜಿ ಮುಖ್ಯಮಂತ್ರಿಗಳಾಗಿದ್ದಾರೆ. ಈ ಮೂರು ಜನ ಮಂತ್ರಿಗಳು ಕೇಂದ್ರ ಸರ್ಕಾರದ ಮೇಲೆ ಪ್ರಭಾವ ಹಾಕಿ ಕರ್ನಾಟಕಕ್ಕೆ ಮತ್ತು ಉತ್ತರ ಕರ್ನಾಟಕದಲ್ಲಿ ಅಗತಕ್ಕಂಥ ಈ ಒಂದು ಅನ್ಯಾಯದ ವಿರುದ್ಧ ಅಲ್ಲಿ ಧ್ವನಿ ಎತ್ತಿದರೆ ಬಹುಶಃ ನ್ಯಾಯ ಕೊಡಿಸಿದರೆ, ಈ ಮಹದಾಯಿ ಯೋಜನೆ ಮೂಲಕ ನಮ್ಮದೊಂದು ಬೇಡಿಕೆಯನ್ನು

ಈಡೇರಿಸಲಿಕ್ಕೆ ಸಾಧ್ಯವಾಗುತ್ತದೆ ಎನ್ನುವಂತಹ ಮಾತನ್ನು ಈ ಸದನದಲ್ಲಿ ಇರತಕ್ಕಂಥ ವಿರೋಧ ಪಕ್ಷದ ಮುಖಂಡರ ಗಮನಕ್ಕೆ ತರಲಿಕ್ಕೆ ನಾನು ಇಚ್ಛೆಪಡುತ್ತೇನೆ. ತಾಂತ್ರಿಕ ಶಿಕ್ಷಣದಲ್ಲಿ ಕರ್ನಾಟಕ ಇಡೀ ದೇಶದಲ್ಲೇ No.1 ಸ್ಥಾನ ಪಡೆದಿದೆ. ತಾಂತ್ರಿಕ ಶಿಕ್ಷಣದಲ್ಲಿ ಇಡೀ ದೇಶಕ್ಕೆ ನಾಯಕತ್ವ ಕೊಡತಕ್ಕ ಶಕ್ತಿ ಕರ್ನಾಟಕ ರಾಜ್ಯಕ್ಕಿದೆ. ಇದೊಂದು IT Capital ಎಂದೂ ಸಹ ಕರೆಯುತ್ತಾರೆ. ಇವತ್ತು ಈ ರಾಜ್ಯಕ್ಕೆ Indian Institute of Technology ಕೊಡಬೇಕೆನ್ನುವ ಬೇಡಿಕೆ ಈಡೇರಿಲ್ಲ. ನಮ್ಮ ರಾಜ್ಯದಿಂದ ಆಯ್ಕೆಯಾಗಿ ಹೋಗಿರುವಂತಹ ಆಡಳಿತ ಪಕ್ಷದಲ್ಲಿರುವಂತಹ ನಾಯಕರು ಮನಸ್ಸು ಮಾಡಿದ್ದರೆ ಬಹುಶಃ ಇದು ಆಗುತ್ತಿತ್ತು. ಇದರನ್ನು ಅವರು ಮಾಡದೇ ಬಹಳ ದೊಡ್ಡ ಪ್ರಮಾಣದಲ್ಲಿ ನಮಗೆ ಅನ್ಯಾಯವಾಗಲಿಕ್ಕೆ ಆವಕಾಶ ಮಾಡಿದ್ದಾರೆಂದು ನಾನು ನೇರವಾಗಿ ಆರೋಪ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕರ್ನಾಟಕ ರಾಜ್ಯದ ಅಭಿವೃದ್ಧಿ ಬಗ್ಗೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಏನೇನು ಮಾಡಿದ್ದೇವೆ ಎನ್ನುವಂತಹ ಸಂಪೂರ್ಣವಾದ ವಿವರವಾದ ಮಾಹಿತಿಯನ್ನು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಕರ್ನಾಟಕದಲ್ಲಿ ಪ್ರಗತಿ ಸಮತೋಲನ ಆಗಬೇಕು. ಹಳೆಯ ಮೈಸೂರು ಅಥವಾ ಉತ್ತರ ಕರ್ನಾಟಕ, ಈ ರೀತಿ ಭೇದಭಾವ ಆಗದೇ, ಎಲ್ಲಾ ಕಡೆಗೂ ಸಂಪೂರ್ಣವಾಗಿ ಅಭಿವೃದ್ಧಿಯಾಗಬೇಕು ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಬಹುಶಃ ಬೆಂಗಳೂರು, ಮೈಸೂರು ಮಹಾನಗರ ಅಭಿವೃದ್ಧಿಗೆ ಸಾವಿರಾರು ಕೋಟಿ ರೂ.ಗಳನ್ನು ಸರ್ಕಾರ ಖರ್ಚು ಮಾಡುತ್ತಿದೆ. ಅದಕ್ಕೆ ನಮ್ಮದೇನೂ ವಿರೋಧವಿಲ್ಲ. ಅದಕ್ಕೆ ನಮ್ಮ ಸ್ವಾಗತವಿದೆ. ಆದರೆ ಅದೇ ರೀತಿ ಉತ್ತರ ಕರ್ನಾಟಕಕ್ಕೂ ಕೂಡ, ಜಿಲ್ಲಾ ಕೇಂದ್ರಗಳು ಇರಬಹುದು, ಬೇರೆ ಬೇರೆ ರಸ್ತೆಗಳ development ಮಾಡತಕ್ಕದ್ದು ಇರಬಹುದು, ನೀರಾವರಿ ಯೋಜನೆಗಳು ಇರಬಹುದು, ಒಟ್ಟಾರೆ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಯಾವುದೇ ರೀತಿಯ ಕುಂಠಿತವಾಗದೆ, ಅವೆಲ್ಲಕ್ಕೂ ಕೂಡ ಸರಿಯಾದಂತಹ ಯೋಜನೆ ರೂಪಿಸಿ, ಅದನ್ನು ಜಾರಿಗೊಳಿಸಿ, ಕರ್ನಾಟಕದ ಪ್ರಗತಿ

ಸಮತೋಲನವಾಗಿರುವಂತೆ ನೋಡಿಕೊಳ್ಳಬೇಕು ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡತಕ್ಕಂಥ ಈ ದಿನಗೂಲಿ ನೌಕರರು ಕರ್ನಾಟಕ ರಾಜ್ಯದ ಅಭಿವೃದ್ಧಿಯಲ್ಲಿ ತಮ್ಮದೇ ಆದಂತಹ ಪಾತ್ರವನ್ನು ನಿರ್ವಹಿಸುತ್ತಾರೆ. ನನ್ನ ಅಭಿಪ್ರಾಯದಲ್ಲಿ ಈ 19 ಸಾವಿರ ಜನ ದಿನಗೂಲಿ ನೌಕರರನ್ನು ಖಾಯಂ ಏನಾದರೂ ಮಾಡಿದರೆ, ಬೇರೆ ಬೇರೆ ಇಲಾಖೆಗಳಲ್ಲಿಕೆಲಸ ಮಾಡತಕ್ಕ ಅವರಿಗೆ ಸಂಪೂರ್ಣವಾಗಿ ಜವಾಬ್ದಾರಿ ಕೊಟ್ಟು ಕೆಲಸಕ್ಕೆ ಹಚ್ಚಿದರೆ, ನಮ್ಮ ನಿರೀಕ್ಷೆಗೂ ಮೀರಿ ಕರ್ನಾಟಕ ರಾಜ್ಯದಲ್ಲಿ ಅಭಿವೃದ್ಧಿ ಆಗಬಹುದು ಎಂದು ನನಗನಿಸುತ್ತದೆ.

ಛೇರ್ಮನ್ : ಮಾನ್ಯ ಶ್ರೀಕಾಂತ್ ಕುಲಕರ್ಣಿಯವರೆ, ದಯವಿಟ್ಟು ಬೇಗ ಮುಗಿಸಿ.

ಶ್ರೀ ಶ್ರೀಕಾಂತ್ ಕುಲಕರ್ಣಿ : ಇನ್ನು ಎರಡು ನಿಮಿಷಗಳಲ್ಲಿ ಮುಗಿಸುತ್ತೇನೆ. ಇತ್ತೀಚೆಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಹುಬ್ಬಳ್ಳಿಯಲ್ಲಿ ಸುಮಾರು 143 ಕಾಲೇಜುಗಳಿಗೆ ಶಂಕುಸ್ಥಾಪನೆ ನೆರವೇರಿಸಿದ್ದಾರೆ. ಆದರೆ ಇವತ್ತು ಪ್ರತಿ ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲೂ ಕೂಡ ಕೇವಲ BA, BSc degree ಪಡೆಯುವುದರಿಂದ ಯಾವುದೇ ಯುವಕ ಜೀವನದಲ್ಲಿ ಅಭಿವೃದ್ಧಿ ಸಾಧಿಸಲಿಕ್ಕಾಗುವುದಿಲ್ಲ. ಹೀಗಾಗಿ ಪ್ರತಿ ತಾಲ್ಲೂಕಿನಲ್ಲಿ ITI, Polytechnicಗಳನ್ನು ಪ್ರಾರಂಭಿಸಿ, ಈ ತಾಂತ್ರಿಕ ಶಿಕ್ಷಣ ಪಡೆಯುವಂತಹ ಅವಕಾಶವನ್ನು ಯುವಕರಿಗೆ ಒದಗಿಸಬೇಕು. ಆ ದೃಷ್ಟಿಯಿಂದ ಯೋಜನೆಯೊಂದನ್ನು ಸರ್ಕಾರ ಮಾಡಬೇಕೆಂದು ಆ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅದೇ ರೀತಿ ಇವತ್ತು ಬೇರೆ ಬೇರೆ ಹಂತಗಳಲ್ಲಿ ಆಗತಕ್ಕ ಕೆಲಸಗಳು ಇರಬಹುದು, ವಿದ್ಯುತ್ತಿನ ವ್ಯವಸ್ಥೆ ಇರಬಹುದು, ನೀರಾವರಿ ಇರಬಹುದು, ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಭಾಷಣದ ಮೂಲಕ 2020ನೇ ಇಸವಿಗೆ ಕರ್ನಾಟಕ ಯಾವ ರೀತಿ ಇರಬೇಕು ಎನ್ನುವ ಬಗ್ಗೆ ದೊಡ್ಡ ಪ್ರಮಾಣದಲ್ಲಿ ಯೋಜನೆಯನ್ನು ಮಾಡಿ, ಈ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಇವತ್ತು ನಮಗೆಲ್ಲಾ ಒಂದು

ಸಂದೇಶವನ್ನು ನೀಡಿದ್ದಾರೆ. ಬೇರೆ ಬೇರೆ ಸಂದರ್ಭಗಳಲ್ಲಿ ಮಾನ್ಯ ವಿರೋಧ ಪಕ್ಷದ ಮುಖಂಡರುಗಳೆಲ್ಲಾ ಮಾತನಾಡುವಾಗ, ನಮ್ಮ ಪಕ್ಷದ ಒಳಗೆ ಆಂತರಿಕ ಭಿನ್ನಾಭಿಪ್ರಾಯಗಳ ಬಗ್ಗೆ ಉಲ್ಲೇಖ ಮಾಡಿದರು. ಸನ್ಮಾನ್ಯ ಅಧ್ಯಕ್ಷರೆ, ಯಾರ ಮನೆಯ ದೋಸೆಯಾದರೂ, ಅದರಲ್ಲಿ ತೂತು ಇದ್ದದ್ದೇ. ನಮ್ಮ ದೋಸೆಯಲ್ಲಿ ರಂಧ್ರಗಳು ಕಡಿಮೆ ಇರಬಹುದು, ಅವರಲ್ಲಿ ಜಾಸ್ತಿ ಇರಬಹುದು, ಅದು ನನಗೆ ಗೊತ್ತಿಲ್ಲ. ನಮ್ಮದೊಂದು ರಾಷ್ಟ್ರೀಯ ಪಕ್ಷ, ಒಂದು ಸಿದ್ಧಾಂತ, ಒಂದು ಗುರಿಯನ್ನಿಟ್ಟುಕೊಂಡು ಕೆಲಸ ಮಾಡತಕ್ಕಂಥ ಸಂಘಟನೆ ನಮ್ಮದಾಗಿದೆ. ಭಿನ್ನಾಭಿಪ್ರಾಯಗಳಿದ್ದರೂ ಕೂಡ ನಾಲ್ಕು ಗೋಡೆಗಳ ಮಧ್ಯೆ ಮಾತನಾಡಿಕೊಂಡು, ಬಗೆಹರಿಸಿಕೊಂಡು, ಕರ್ನಾಟಕ ರಾಜ್ಯಕ್ಕೆ ಬೇಕಾಗಿರುವಂತಹ ಅಗತ್ಯವಾದಂತಹ ನೇತೃತ್ವವನ್ನು ಸನ್ಮಾನ್ಯ ಯಡಿಯೂರಪ್ಪನವರು ಕೊಟ್ಟಿದ್ದಾರೆ. ಯಾವುದೇ ಸಂದರ್ಭದಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯಕ್ಕೆ ಅವಕಾಶ ಕೊಡದೇ, ಸಂಪೂರ್ಣ ರಾಜ್ಯವನ್ನು ಅಭಿವೃದ್ಧಿ ದೃಷ್ಟಿಯಿಂದ ಪ್ರಗತಿ ಪಥದಲ್ಲಿ ಒಯ್ಯಲಿಕ್ಕೆ ನಾವೆಲ್ಲಾ ಸಂಕಲ್ಪ ತೊಟ್ಟಿದ್ದೇವೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಸನ್ಮಾನ್ಯ ರಾಜ್ಯಪಾಲರ ಭಾಷಣವನ್ನು ಅತ್ಯಂತ ಹೃತ್ಪೂರ್ವಕವಾಗಿ ಸ್ವಾಗತಿಸಿ, ಆ ಭಾಷಣಕ್ಕೆ ಬೆಂಬಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ (ದೇವರ ಹಿಪ್ಪರಗಿ) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯವನ್ನು ವಿರೋಧಿಸುತ್ತಾ, ನಾನು ಸದನದಲ್ಲಿ ಕೆಲವು ನನ್ನದೇ ಆದಂತಹ ವಿಚಾರಗಳನ್ನು ಮಂಡನೆ ಮಾಡುವುದಕ್ಕೆ ತಮ್ಮ ಅಪ್ಪಣೆಯನ್ನು ಕೇಳುತ್ತಿದ್ದೇನೆ. ಬಹುಶ: ನಾನು ಮೊದಲನೆ ಬಾರಿ ಶಾಸಕನಾಗಿ ಈ ವಿಧಾನಸಭೆಯ ಒಳಗಡೆ ಬರುವುದಕ್ಕಿಂತ ಮುಂಚಿತವಾಗಿ ನಾನು ಕನ್ನಡಿಗನಾಗಿ ಯುವಕನಾಗಿ ಬಹಳಷ್ಟು ಕನಸುಗಳನ್ನು ಹೊತ್ತುಕೊಂಡು ಬಂದೆ. ಈ ವಿಧಾನಸಭೆಯ ಮುಖಾಂತರವಾಗಿ ಕರ್ನಾಟಕ ರಾಜ್ಯದ ಅಭಿವೃದ್ಧಿ, ಈ ದೇಶದ ಅಭಿವೃದ್ಧಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿಯೊಬ್ಬ ಭಾರತೀಯನೂ, ಕನ್ನಡಿಗನು ಕೂಡ ಹೆಮ್ಮೆಯಿಂದ ಶ್ರೀಮಂತವಾದಂಥ, ಸಮೃದ್ಧವಾದಂಥ ಬಾಳನ್ನು,

ಬದುಕನ್ನು ಕಟ್ಟುವುದಕ್ಕೆ ಇಲ್ಲಿಂದ ಯೋಜನೆಗಳು ಪ್ರಾರಂಭವಾಗುತ್ತದೆ, ಆ ಯೋಜನೆಗಳ ಅನುಷ್ಠಾನವಾಗುತ್ತದೆ, ಈ ರಾಜ್ಯದಲ್ಲಿರುವ ಕಟ್ಟಕಡೆಯ ಗುಡಿಸಲಿನ ಮನುಷ್ಯನನ್ನು ಅರೆಬೆನ್ನಿನಲ್ಲಿ ಕೂರಿಸುವಂಥ ಚಿಂತನೆಗಳು, ಯೋಜನೆಗಳು ಇಲ್ಲಿಂದ ಬರುತ್ತದೆನ್ನುವ ಕನಸನ್ನು ಹೊತ್ತುಕೊಂಡು, ಬಹುಶ: ಕಾಲೇಜಿನ 18 ವರ್ಷಗಳ ಯುವಕನಾಗಿದ್ದಾಗಿನಿಂದ, ನನ್ನ 38 ವರ್ಷಗಳ ಕನಸು ವಿಧಾನಸಭೆ ಒಳಗಡೆ ಬರಬೇಕೆನ್ನುವುದು. ಎರಡು ವರ್ಷಗಳಲ್ಲಿ ವಿಧಾನಸಭೆಯಲ್ಲಿ ನಡೆಯುವ ಚರ್ಚೆಗಳು ಮತ್ತು ಮಂಡನೆಯಾಗಿರುವ ಆಯವ್ಯಯಗಳು, ಅದರ ಮೂಲವಾದ ಅನುಷ್ಠಾನ, ಇದರ ವಿಚಾರಗಳನ್ನು ತೆಗೆದುಕೊಂಡು ವಾಸ್ತವಿಕ ಸತ್ಯಗಳನ್ನು ಮುಂದಿಟ್ಟುಕೊಂಡು ನೋಡಿದರೆ ಏನು ಅನಿಸುತ್ತದೆಂದರೆ, ಇದು ಸುಳ್ಳಿನ ಕಂತೆ, ಕೇವಲ ಮಾತಿನ ಸಂತೆ, ಇಲ್ಲಿಲ್ಲ ಅನುಷ್ಠಾನದ ಚಿಂತೆ, ಏತಕ್ಕಾಗಿ ಈ ಪ್ರಜಾಪ್ರಭುತ್ವದ ವ್ಯವಸ್ಥೆ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಏಕೆ ಈ ಮಾತನ್ನು ಹೇಳುತ್ತೇನೆಂದರೆ, ಬಹುಶ: 2009-10ನೇ ಸಾಲಿಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಒಂದು ಬಜೆಟ್ ಅನ್ನು ಮಂಡನೆ ಮಾಡಿದರು. ಆ ಬಜೆಟಿನ ಒಟ್ಟು ಹಣ ಸುಮಾರು 56,000 ಕೋಟಿ ರೂ. ಇದರಲ್ಲಿ ಯೋಜನಾ ಮತ್ತು ಯೋಜನೇತರ ವೆಚ್ಚಗಳು ಇವೆ ಬಹುಶ: ದೇಶದ ಕಟ್ಟಕಡೆಯ ಮನುಷ್ಯನನ್ನು ಸಮೃದ್ಧಿಯತ್ತ ತರಬೇಕಾಗಿದ್ದರೆ ಯೋಜನಾ ವೆಚ್ಚದಲ್ಲಿ ಎಷ್ಟು ನಿಷ್ಠೆಯಿಂದ ಎಷ್ಟು ಹಣವನ್ನು ಖರ್ಚು ಮಾಡುತ್ತೇವೆಂಬುದು ಬಹಳ ಮುಖ್ಯ. 29,500 ಕೋಟಿ ರೂಪಾಯಿಗಳು ಒಟ್ಟು ಯೋಜನಾ ವೆಚ್ಚ ಮಾಡಿರುವುದು, ಅದರಲ್ಲಿ ಇಲ್ಲಿಯವರೆಗೆ ಖರ್ಚಾಗಿರುವುದು, 12,412 ಕೋಟಿ ರೂ, ಬಹುಶ: ಸ್ವಲ್ಪ ಹೆಚ್ಚು ಕಡಿಮೆ ಇರಬಹುದು. ಅಂದರೆ ಒಟ್ಟು ಬಜೆಟ್‌ಗೆ ಹೋಲಿಕೆ ಮಾಡಿ ನೋಡಿದರೆ, below 25%. ಬಜೆಟ್‌ನಲ್ಲಿಟ್ಟಿರುವ ಆಯವ್ಯಯ, ಈ ಸರ್ಕಾರವೇನು 29,500 ಕೋಟಿಯ project ಮಾಡಬೇಕೆಂದು ಒಂದು ಗುರಿಯನ್ನು ಇಟ್ಟಿತ್ತೊ, ಅದರಲ್ಲಿ ಖರ್ಚು ಮಾಡಿದ್ದು ಕೇವಲ 42%, This is a fact. ಇದು ಅನುಷ್ಠಾನ. ಹಾಗಾದರೆ ಅನುಷ್ಠಾನ ಮಾಡುವ ಸಮಯದಲ್ಲಿ

ಬರುವಂಥ ಸಮಸ್ಯೆಗಳೇನು? ಇವತ್ತಿನ ವ್ಯವಸ್ಥೆ ಏನಿದೆ ಈ ರಾಜ್ಯದ ಲೋಕಾಯುಕ್ತರು ಅಲ್ಲಿ ಕುಳಿತಿರುವ ಕಾರ್ಯಾಂಗದ ಮೇಲೆ, ಇಲ್ಲಿ ಕುಳಿತಿರುವ ಶಾಸಕಾಂಗದ ಮೇಲೆ ಆರೋಪ ಮಾಡುತ್ತಾರೆ. ಲೋಕಾಯುಕ್ತರಿಗೆ ಸಂಪೂರ್ಣವಾದ ಅಧಿಕಾರವನ್ನು ಕೊಟ್ಟರೆ, ವಿಕಾಸ ಸೌಧ, ವಿಧಾನ ಸೌಧ ಖಾಲಿ ಖಾಲಿ ಎಂದು ಹೇಳುತ್ತಾರೆ, ಏನು ಸ್ವಾಮಿ ಇದರ ಅರ್ಥ? ಒಬ್ಬ ಲೋಕಾಯುಕ್ತರು ಗಂಭೀರವಾದ ಆರೋಪವನ್ನು ಮಾಡಿದ್ದಾರೆ, ನಾವು ಅನುಷ್ಠಾನ ಮಾಡುವುದರಲ್ಲಿ ಎಷ್ಟು ಪ್ರಾಮಾಣಿಕರು ಎಂಬುದು ಇದರಿಂದ ತಿಳಿಯುತ್ತದೆ. ಇವತ್ತು ಏನಾಗುತ್ತಿದೆ ಎಂದರೆ, ಈ ರಾಜ್ಯ ಜನ ಪ್ರತಿಬಾರಿ more than 50%, 224ಜನರಲ್ಲಿ ಸುಮಾರು 100 ರಿಂದ 110 ಜನ ಹೊಸ ಮುಖಗಳ ಶಾಸಕರನ್ನು ವಿಧಾನ ಸಭೆಗೆ ಕಳುಹಿಸುತ್ತಿದ್ದಾರೆ, ಕಾರಣವೇನು? They want change, they want better people and they want better administration. ಆದರೆ ಇವತ್ತೇನು ಆಗುತ್ತಿದೆ? ಇಲ್ಲಿಗೆ ಬಂದ ತಕ್ಷಣ ವ್ಯವಸ್ಥೆ ಏನು ಮಾಡುತ್ತದೆ ಎಂದರೆ you have to adjust and digest, otherwise vomit, ಅಂದರೆ ಹೊರಟು ಹೋಗು ಎಂದು. You have to adjust and digest the corruption, digest the favouritism ಏತಕ್ಕೆ ಸ್ವಾಮಿ? ಇವತ್ತು ನಾವು ಸುಮಾರು ರೂ. 15,000 ಕೋಟಿಯನ್ನು implement ಮಾಡಿದ್ದೇವೆ. ಹಾಗಾದರೆ ಕಟ್ಟಕಡೆಯ ಗ್ರಾಮದಲ್ಲಿ ಹೋಗಿ ನಾವು ಎಷ್ಟು ಅನುಷ್ಠಾನ ಮಾಡಿದ್ದೇವೆಂದು ಯೋಚನೆ ಮಾಡಿದರೆ, ಒಂದು ಉದಾಹರಣೆಯನ್ನು ಹೇಳುತ್ತೇನೆ, ಶೋಭಾ ಕರದ್ಲಾಂಜೆ ಅಕ್ಕನವರು ನನ್ನ ಕ್ಷೇತ್ರಕ್ಕೆ ಬಂದು ವಾಸ್ತವ್ಯವನ್ನು ಕೂಡ ಮಾಡಿದ್ದಾರೆ, ನೋಡಿದ್ದಾರೆ, ತಾವು ನೋಡಿದ್ದೀರಿ. ಮಳೆ ಬಂದು, ಪ್ರವಾಹ ಬಂದು ಆ ಗ್ರಾಮದಲ್ಲಿರುವ 62 ಕುಟುಂಬಗಳಲ್ಲಿ ಇವತ್ತು 22 ಕುಟುಂಬಗಳಿಗೆ shed ಹಾಕಿಕೊಟ್ಟಿದ್ದಾರೆ, 40 ಕುಟುಂಬಗಳು ಅಲ್ಲಿ ಅವರ ಸಂಬಂಧಿಕರ ಮನೆಗಳಲ್ಲಿ adjust ಮಾಡಿಕೊಂಡು ಇದ್ದಾರೆ. ಸ್ವಾಮಿ, ಮುಖ್ಯಮಂತ್ರಿಗಳ ಕಚೇರಿಯಿಂದ ಜಂಟಿ ಕಾರ್ಯದರ್ಶಿಯವರು ಒಂದು ಆದೇಶ ಮಾಡುತ್ತಾರೆ, ಯಾಳವಾರ ಗ್ರಾಮ ಪಂಚಾಯತಿ

ವ್ಯಾಪ್ತಿಯಲ್ಲಿ ಬರುವಂಥ 115 ಅತಿವೃಷ್ಟಿಯಿಂದ ಮನೆಗಳನ್ನು ಕಳೆದುಕೊಂಡಿರುವ ಕುಟುಂಬಗಳಿಗೆ ಮನೆಗಳನ್ನು ತಕ್ಷಣ ಮಂಜೂರು ಮಾಡಬೇಕೆಂದು ಪಟ್ಟಿಗಳ ಸಮೇತ ಮಂಜೂರಾತಿಯನ್ನು ಕೊಡುತ್ತಾರೆ. ನನಗೆ ತುಂಬಾ ನೋವೆನಿಸುತ್ತದೆ, 115 ಕುಟುಂಬಗಳ ಪಟ್ಟಿಯಲ್ಲಿ, ಶೆಡ್‌ನಲ್ಲಿರುವ ಒಬ್ಬನೇ ಒಬ್ಬ ವ್ಯಕ್ತಿಯ ಹೆಸರಿಲ್ಲ. ಎಷ್ಟು ಲಕ್ಷ ಮನೆಗಳನ್ನು ಕೊಡುತ್ತೀರಿ? ಯಾರಿಗೆ ಮನೆಗಳನ್ನು ಕೊಡುತ್ತಿದ್ದೀರಿ? ಅದನ್ನು ಯಾರು ಲೂಟಿ ಮಾಡುತ್ತಿದ್ದಾರೆ? ಇದಕ್ಕೆ ವ್ಯವಸ್ಥೆ ಬೇಕಾ? ಇದಕ್ಕೆ ಇಷ್ಟು ಖರ್ಚು ಮಾಡಬೇಕಾ? ಇದಕ್ಕೆಲ್ಲಾ ಬಜೆಟ್ ಬೇಕಾ? ಲೂಟಿ ಮಾಡುವುದಕ್ಕೆ ಬಜೆಟ್ ಏತಕ್ಕೆ ಬೇಕು ಸ್ವಾಮಿ? 115 ಮನೆಗಳಲ್ಲಿ 20 ರಿಂದ 40 ಎಕರೆ ಹೊಂದಿರುವಂಥ ರಾಜಕೀಯದಲ್ಲಿ ಪ್ರಭಾವ ಹೊಂದಿರುವ ವ್ಯಕ್ತಿಗಳು, ಇವತ್ತು ಮನೆಗಳನ್ನು ಹಾಕಿಕೊಳ್ಳುತ್ತಾರೆ, ಒಬ್ಬೊಬ್ಬ ವ್ಯಕ್ತಿಗೆ 40,000 ರೂ., 50,000 ರೂ. ಲೂಟಿ, ಇನ್ನು 50 ಲಕ್ಷ ಮನೆಗಳನ್ನು ಕೊಡಿ, ಕೋಟಿ ಮನೆಗಳನ್ನು ಕೊಡಿ, ಗುಡಿಸಲಿನಲ್ಲಿರುವವನು ಗುಡಿಸಲಿನಲ್ಲೇ ಇರುತ್ತಾನೆ, ಲೂಟಿ ಮಾಡುವವನು ಲೂಟಿ ಮಾಡುತ್ತಲೇ ಇರುತ್ತಾನೆ, ಇದು ವಾಸ್ತವಿಕವಾಗಿರುವ ಸ್ಥಿತಿ. Implementation ಮಾಡುವುದರಲ್ಲಿ, ಅನುಷ್ಠಾನ ಮಾಡುವುದರಲ್ಲಿ ಇವತ್ತು ನಾವು ತಪ್ಪಿದ್ದೇವೆ. ನಾನು ಮುಖ್ಯಮಂತ್ರಿಗಳಿಗೆ, ನನ್ನ ಕ್ಷೇತ್ರದಲ್ಲಿ ಭ್ರಷ್ಟಾಚಾರರಹಿತವಾದ ಆಡಳಿತ ನಡೆಸಲು ನನಗೆ ಅವಕಾಶ ಮಾಡಿಕೊಡಬೇಕೆಂದು ಪತ್ರವನ್ನು ಬರೆದಿದ್ದೆ. ಆದರೆ, ತಲೆತಗ್ಗಿಸಬೇಕಾಗುತ್ತದೆ, ಬಸವಣ್ಣನ ಗುಡಿಯ ಮುಂದೆಯೆ ಲಂಚ ತಿನ್ನುವುದನ್ನು ನೋಡಿದಾಗ ಶಾಸಕರಾಗಿ ನಮಗೆ ಆಕ್ರೋಶ ಬರುತ್ತದೆ. ಈ ವ್ಯವಸ್ಥೆಯಲ್ಲಿ ನೀವು ಎಷ್ಟು ಕೋಟಿ ಖರ್ಚು ಮಾಡಿದರೂ ಮುಟ್ಟುವಂಥ ವ್ಯಕ್ತಿಗೆ ಮುಟ್ಟುತ್ತಿಲ್ಲವೆನ್ನುವುದು ನನ್ನ ವಾದ, ಬಹುಶ: ಇದನ್ನು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆಂದು ಹೇಳುತ್ತೇನೆ. ರಾಜಕೀಯ ಆರೋಪಗಳು ಪ್ರತ್ಯಾರೋಪಗಳು, yes, ಬಿಜೆಪಿ ಸರ್ಕಾರವಿದ್ದಾಗಷ್ಟೆ ಇದೆ ಎಂದಲ್ಲ, ಎಲ್ಲಾ ಸರ್ಕಾರಗಳಲ್ಲೂ ಕೂಡ ಇದೆ. ಭ್ರಷ್ಟಾಚಾರಕ್ಕೊಂದು ಮಿತಿ ಇದೆ, ತೆಗೆದುಕೊಳ್ಳಲಿ ಪರವಾಗಿಲ್ಲ, ಆದರೆ ಕಸಿದುಕೊಳ್ಳುವಂಥ ಕೆಲಸ ಮಾಡಬಾರದು ತಾನೆ, ಕಿತ್ತುಕೊಳ್ಳುವಂಥ ಕೆಲಸ

ಮಾಡಬಾರದು ತಾನೆ? ಬಿಜೆಪಿ ಸರ್ಕಾರ ಬಂದ ಮೇಲೆ ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡುತ್ತಿಲ್ಲ, ಕಸಿದುಕೊಳ್ಳುವಂಥ ಕೆಲಸವನ್ನು ಮಾಡುತ್ತಿದ್ದೀರೆಂದು ನಾನು ಆರೋಪ ಮಾಡುತ್ತಿದ್ದೇನೆ, ಇದು ವಾಸ್ತವಿಕವಾದ ಸ್ಥಿತಿ. ಮನೆ ಮುಟ್ಟುವುದಿಲ್ಲ ಸ್ವಾಮಿ, ನೀವು ಇಂದಿರಾ ಆವಾಸದಲ್ಲಾದರೂ ಕೊಡಿ, ಆಶ್ರಯದಲ್ಲಾದರೂ ಕೊಡಿ, ಬಡವರಿಗಂತೂ ದೇವರ ಆಣೆಗೂ ಮುಟ್ಟುವುದಿಲ್ಲ. ಹಾಗಾದರೆ ಇದನ್ನು ಮಾಡತಕ್ಕಂಥವರ್ಯಾರು, ಶಿಕ್ಷೆ ಮಾಡತಕ್ಕಂಥವರ್ಯಾರು? ಕಾನೂನಿನ ಚೌಕಟ್ಟಿನಲ್ಲಿ ಯಾವ ಅಧಿಕಾರಿ ತಪ್ಪನ್ನು ಮಾಡುತ್ತಾನೆ, ಯಾವ ರಾಜಕಾರಣಿ ತಪ್ಪನ್ನು ಮಾಡುತ್ತಾನೆ, ಅವನನ್ನು ಶಿಕ್ಷಿಸುವಂಥ ವ್ಯವಸ್ಥೆ ಈ ನಾಡಿನಲ್ಲಿ, ಈ ದೇಶದಲ್ಲಿ ಎಲ್ಲಿಯವರೆಗೆ ಬರುವುದಿಲ್ಲ, ಅಲ್ಲಿಯವರೆಗೆ ವ್ಯವಸ್ಥೆಯಲ್ಲಿ ಅಭಿವೃದ್ಧಿಯನ್ನು ಕಾಣುವುದಕ್ಕೆ ಸಾಧ್ಯವೇ ಇಲ್ಲ, ಇದು ನನ್ನ ವೈಯಕ್ತಿಕ ಅಭಿಪ್ರಾಯ. ಒಬ್ಬ ಮನುಷ್ಯನಿಗೆ ದುಡಿಯುವುದಕ್ಕೆ 25 ವರ್ಷಗಳಿರುತ್ತದೆ, ಅದರಲ್ಲಿ 12 ವರ್ಷ ರಾತ್ರಿ ಹೊತ್ತು ಕಳೆದು ಹೋಗುತ್ತದೆ, ಉಳಿಯುವುದು 12 ವರ್ಷ, 12 ವರ್ಷದಲ್ಲಿ ಈ ನಾಡಿಗೆ, ಈ ದೇಶಕ್ಕೆ ಏನು ಮಾಡುತ್ತೇವೆ ಎನ್ನುವುದು ಬಹಳ ಮುಖ್ಯ. ಇಲ್ಲಿ ಏನಾಗಿದೆ ಎಂದರೆ, ಬಹುಶ: ನಾನು, ಏನೇನು ಬಜೆಟ್‌ನಲ್ಲಿ ಖರ್ಚು ಮಾಡಿದ್ದೀರೆನ್ನುವ ಅಂಕಿ ಅಂಶಗಳನ್ನು ನೋಡುತ್ತಿದ್ದೇನೆ, ಹೇಳುವುದೊಂದು, ಮಾಡುವುದು ಇನ್ನೊಂದು. 42% ನಾನು digest and adjust ಎಂದು ನಿಮಗೆ ಹೇಳಿದೆನಲ್ಲ, ಎಷ್ಟು per cent ಸ್ವಾಮಿ? ಆಡಳಿತ ನಡೆಸುವವರು ನೀವೆ ಹೇಳಬೇಕು, ನಾವು ವಿರೋಧ ಪಕ್ಷದಲ್ಲಿದ್ದೇವೆ. Digest and adjust ಎಷ್ಟು per cent? 42% ನಲ್ಲಿ ಕಳೆದರೆ ಎಷ್ಟು ಉಳಿಯುತ್ತದೆ, ನೀವು ಪಾಸೋ, ಫೇಲೊ ಎನ್ನುವುದು ಅಂಕಿಸಂಖ್ಯೆಗಳು ಹೇಳುತ್ತದೆ. ಹಾಗಾದರೆ ಇದನ್ನು ಅನುಷ್ಠಾನ ಮಾಡಬೇಕಾಗಿದ್ದರೆ, ನಮಗೆ ಬೇಕಾಗಿರುವ ಬಹಳ ಮುಖ್ಯವಾಗಿರುವ ಒಂದು ಕೆಲಸವನ್ನು ಮಾಡಬೇಕಾಗುತ್ತದೆ. ಮಾನ್ಯ ಸಭಾಧ್ಯಕ್ಷರೆ, ಒಬ್ಬ ಗುರು ಇರುತ್ತಾನೆ, ಅವನು ತನಗೆ ತಿಳಿದ ವಿದ್ಯಾಭ್ಯಾಸವನ್ನು ಕೊಟ್ಟು ಮೂರು ಶಿಷ್ಯರನ್ನು ಕರೆದು ಮೂವರ ಕೈಯಲ್ಲಿ ಒಂದೊಂದು ಬಂಗಾರದ ನಾಣ್ಯಗಳನ್ನು ಕೊಡುತ್ತಾನೆ. ಇಷ್ಟು ವರ್ಷ ನನ್ನ

ಬಳಿ ಸೇವೆ ಮಾಡಿದಿರಿ, ಮೂರು ಬಂಗಾರದ ನಾಣ್ಯಗಳು ನನ್ನ ಬಳಿ ಇವೆ, ತೆಗೆದುಕೊಂಡು ಹೋಗಿ, ನಾನು ಯಾವತ್ತು ವಾಪಸ್ ಕೇಳುತ್ತೇನೆ ಆಗ ತಂದು ಕೊಡಿ ಎಂದು ಹೇಳುತ್ತಾನೆ. ಒಬ್ಬನು ಗುರುಗಳು ಕೊಟ್ಟಿದ್ದು ಎಂದು ಹೇಳಿದ ಅವನು ಪ್ರತಿನಿತ್ಯ ನಾಣ್ಯವನ್ನು ಇಟ್ಟುಕೊಂಡು ಪೂಜೆ ಮಾಡುತ್ತಾವೆ, ಇನ್ನೊಬ್ಬನು ಗುರುಗಳು ಕೇಳಿದಾಗ ಕೊಟ್ಟರೆ ಆಯಿತು ಎಂದು ಆ ನಾಣ್ಯವನ್ನು ಕುಡಿದು ತಿಂದು ಹಾಳು ಮಾಡುತ್ತಾನೆ. ಇನ್ನೊಬ್ಬನು ಬುದ್ಧಿವಂತ ಇರುತ್ತಾರೆ, ಒಂದು ಬಂಗಾರದ ನಾಣ್ಯವನ್ನು ಒಂದಕ್ಕೆ ಎರಡು, ಎರಡಕ್ಕೆ ನಾಲಕ್ಕು, ನಾಲಕ್ಕಕ್ಕೆ ಎಂಟು, ಎಂಟಕ್ಕೆ ಹದಿನಾರು, ಹದಿನಾರಕ್ಕೆ 32, 32ಕ್ಕೆ 64, 64ಕ್ಕೆ 128 ಮಾಡುತ್ತಾನೆ. ಆಗ ಒಂದು ದಿನ ಗುರು ಮೂರೂ ಜನ ಶಿಷ್ಯರಿಗೆ ವಾಪಸ್ ಕರೆದು ಕೇಳುತ್ತಾರೆ, ನಾನು ಏನು ನಿಮಗೆ ನಾಣ್ಯಗಳನ್ನು ಕೊಟ್ಟಿದ್ದೆ ಅದನ್ನು ವಾಪಸ್ ಕೊಡಿ ಎಂದು ಕೇಳುತ್ತಾನೆ. ಪೂಜೆ ಮಾಡಿದವರು ಆ ನಾಣ್ಯವನ್ನು ತಂದು ಗುರುವಿಗೆ ಕೊಟ್ಟು ನಮಸ್ಕಾರ ಮಾಡುತ್ತಾನೆ. ಇನ್ನೊಬ್ಬ ಗುರುಗಳೇ ನನಗೆ ಸ್ವಲ್ಪ ಸಮಯ ಕೊಡಿ ನಾನು ಖರ್ಚು ಮಾಡಿಕೊಂಡಿದ್ದೇನೆ, ನಂತರ ತಂದು ಕೊಡುತ್ತೇನೆಂದು ಹೇಳುತ್ತಾನೆ. ಆದರೆ ಮೂರನೆಯವರು ಒಂದು ನಾಣ್ಯದಿಂದ 128 ನಾಣ್ಯಗಳನ್ನು ಗಳಿಕೆ ಮಾಡಿರುತ್ತಾನೆ. ಒಂದಕ್ಕೆ ಇನ್ನೊಂದು ಹಾಕಿ ಎರಡು ಗುರುಗಳಿಗೆ ಕೊಟ್ಟು ಗುರುವೇ ನನಗೆ ವಿದ್ಯೆಯನ್ನು ಕಲಿಸಿದ್ದಿರಿ, ಹೋಗಬೇಕಾದರೆ ಒಂದು ರೂಪಾಯಿಯ ಬಂಗಾರದ ನಾಣ್ಯ ಕೊಟ್ಟಿದ್ದಿರಿ, ನಾನು ಒಂದಕ್ಕೆ 128 ಮಾಡಿದ್ದೇನೆ, ಅದಕ್ಕೆ ಒಂದಕ್ಕೆ ಒಂದು ಎರಡನ್ನು ಮತ್ತೆ ನಾನು ತಮಗೆ ನೀಡುತ್ತಿದ್ದೇನೆಂದು ಹೇಳಿ ಗುರುವಿಗೆ ನಮಸ್ಕಾರ ಮಾಡುತ್ತಾನೆ. ನಮ್ಮ ರಾಜ್ಯದಲ್ಲಿ ಪ್ರತಿಯೊಬ್ಬ ಯುವಕನನ್ನು ಯಾವ ರೀತಿಯಾಗಿ ನಾವು ತಯಾರು ಮಾಡಬೇಕೆಂಬುದು ಬಹಳ ಮುಖ್ಯ ಇದೆ. ಆ ವ್ಯಕ್ತಿಗೆ ಒಂದು ನಾಣ್ಯ ಈ ದೇಶದ ಸಂಪತ್ತು. ಈ ನಾಡಿನ ಸಂಪತ್ತನ್ನು ಅವನ ಕೈಯಲ್ಲಿ ಕೊಟ್ಟರೆ ಅವನ ಬುದ್ಧಿಶಕ್ತಿಯಿಂದ ಈ ನಾಡನ್ನು ಕಟ್ಟತಕ್ಕಂತಹ ಒಂದಕ್ಕೆ ನೂರು ಮಾಡತಕ್ಕಂತಹ ವಿದ್ಯಾ ಶಕ್ತಿಯನ್ನು ನಾವು ಬೆಳೆಸಬೇಕಾಗಿದೆ. ಆದರೆ ಇವತ್ತು ನಮ್ಮ ಶಿಕ್ಷಣ ವ್ಯವಸ್ಥೆ ಹೇಗಿದೆ? ಎಲ್ಲಿದೆ ನಮ್ಮ ಶಿಕ್ಷಣ ವ್ಯವಸ್ಥೆ? ಯಾವ

ತಾಂತ್ರಿಕ ಶಿಕ್ಷಣವನ್ನು ಇವತ್ತು ನಾವು ನಮ್ಮ ಯುಕರಿಗೆ ಕೊಡುತ್ತಿದ್ದೇವೆ? ಯಾವುದೇ ರೀತಿಯ ಶಿಕ್ಷಣವನ್ನು ಕೊಡುತ್ತಿಲ್ಲ ನಾವು. ಕೇವಲ ಮೂಲಭೂತವಾದ ಅಕ್ಷರ ವಿದ್ಯಾಭ್ಯಾಸವನ್ನು ನಾವು ಮಾಡಿಸುತ್ತಿದ್ದೇವೆ. ಶಿಕ್ಷಣ ಕ್ಷೇತ್ರದಲ್ಲಿ ಇವತ್ತು ವ್ಯಾಪಕವಾದ ಬದಲಾವಣೆಯನ್ನು ತರಬೇಕಾಗಿದೆ. ಈ ಸರ್ಕಾರಕ್ಕೆ ನನ್ನ ವೈಯಕ್ತಿಕವಾದ ಸಲಹೆ, please allow all the industries. ಈ ರಾಜ್ಯದಲ್ಲಿ ಎಷ್ಟು ಜನ ಕೈಗಾರಿಕೋದ್ಯಮಿಗಳಿದ್ದಾರೆ, IT BT ಅವರಿಗೆ permission ಕೊಡಿ. Technical College ಗಳನ್ನು ಕಟ್ಟಲಿ. ಅವರು ಯಾವ ರೀತಿಯ ತಂತ್ರಜ್ಞಾನವನ್ನು ಕಲಿತಂತಹ ಇಂಜಿನಿಯರ್‌ಗಳನ್ನು ತಯಾರು ಮಾಡಬೇಕೆಂದು ಆ ಸಂಸ್ಥೆಗಳು ಮಾಡಲಿ. ಇದರ ಜೊತೆಗೆ ನಾನು ಇನ್ನೊಂದು ಹೇಳುತ್ತೇನೆ, ದಿನ ಭಾಷಣದಲ್ಲಿ ಬರುತ್ತದೆ, ಲಕ್ಷ್ಮೀ ಮಿತ್ತಲ್ ಬರುತ್ತಾರೆ, ಉಕ್ಕಿನ ಕಾರ್ಖಾನೆ ಮಾಡುತ್ತಾರೆ, ಸಿಮೆಂಟ್ ಕಾರ್ಖಾನೆ ಮಾಡುತ್ತಾರೆ, Food processing Unit ಆಗುತ್ತದೆ, ಆಹಾರ ಸಂಸ್ಕರಣಾ ಸ್ಥಾವರಗಳನ್ನು ಹಾಕುತ್ತೇವೆಂದು ಯಾವ ಕೈಗಾರಿಕೋದ್ಯಮಿಗಳು ಬರಲಿಲ್ಲವೇ? 100ಕ್ಕೆ 62% ಜನ ರೈತರು. Food product ಗಳನ್ನು export ಮಾಡಬೇಕು. ಇಡೀ ದೇಶದಲ್ಲಿ ಬಹುಶಃ ನನಗನ್ನಿಸಿದ ಮಟ್ಟಿಗೆ ಜಗತ್ತಿನ ಭೂಪಟದಲ್ಲಿ 12 ತಿಂಗಳುಗಳ ಕಾಲ ಬೆಳೆಗಳನ್ನು ಬೆಳೆಯತಕ್ಕಂತಹ ವಾತಾವರಣ ಮತ್ತು ಭೂಮಿ ಎಲ್ಲಾದರೂ ಇದ್ದರೆ, ಅದು ಭಾರತದೇಶದಲ್ಲಿದೆ, ವಿಶೇಷವಾಗಿ ಕರ್ನಾಟಕ ರಾಜ್ಯದಲ್ಲಿದೆ. ವ್ಯಾಲ್ಯೂ ಆ್ಯಡೆಡ್ ಪ್ರಾಡಕ್ಸ್‌ಗಳನ್ನು ಮಾಡಿ ಸಂಸ್ಕರಣ ಮಾಡಿ ಅದನ್ನು ಎಕ್ಸ್‌ಪೋರ್ಟ್ ಮಾಡತಕ್ಕಂತಹ ವ್ಯವಸ್ಥೆ ಮಾಡಿ, ಕೊಳೆತು ಹೋಗತಕ್ಕಂತಹ ಹಣ್ಣು ತರಕಾರಿ ಏನಿದೆ, ಅದನ್ನು ಒಂದು ವರ್ಷದವರೆಗೆ ಉಪಯೋಗ ಮಾಡುವಂತಹ ರೀತಿಯಲ್ಲಿ ಟೆಕ್ನಾಲಜಿ ಬಂದಿದೆ, ತಾಂತ್ರಿಕತೆ ನಮ್ಮಲ್ಲಿದೆ, ಅದನ್ನು ಬಳಸಿಕೊಂಡು ಇಂಡಸ್ಟ್ರೀಗಳನ್ನು ಕಟ್ಟತಕ್ಕಂತಹ industrialist ಗೆ ನೀವು ಪುಕ್ಕಟೆಯಾಗಿ ವಿದ್ಯುತ್ ಕೊಡಿ. ಪುಕ್ಕಟೆಯಾಗಿ ಭೂಮಿಯನ್ನು ಕೊಡಿ. ರೈತರ ಭೂಮಿಯನ್ನೇ ಕೊಡಿ. ಆದರೆ ನೀವು ನೈಸ್‌ನವರಿಗೆ ಭೂಮಿಯನ್ನು ಕೊಡುವುದಕ್ಕೆ ಹೊರಟಿದ್ದೀರಿ. ರೈತರ ಫಲವತ್ತಾದ ಭೂಮಿಯನ್ನು ನಾವು

ಯಾರಿಗೆ ಕೊಡುತ್ತಿದ್ದೇವೆ? ರೈತರ ಬೆಳೆಗೆ ಉತ್ತರ ಬೆಲೆಯನ್ನು ತರುವಂತಹ ಯಾವ ಕೈಗಾರಿಕೋದ್ಯಮಿ ಈ ರಾಜ್ಯದಲ್ಲಿ ಬರುತ್ತಾನೆ ಅವನಿಗೆ ಸ್ವಾಗತ ಮಾಡೋಣ. ಪುಕ್ಕಟೆಯಾಗಿ ನೀರು ಕೊಡೋಣ, ಪುಕ್ಕಟೆಯಾಗಿ ಭೂಮಿ ಕೊಡೋಣ, ಪುಕ್ಕಟೆಯಾಗಿ ವಿದ್ಯುಚ್ಛಕ್ತಿ ಕೊಡೋಣ, ಕೊಡಿ, ಏಕೆ ಅಭಿವೃದ್ಧಿ ಆಗುವುದಿಲ್ಲ? ಅದಕ್ಕೆ ಭೂಮಿ ಕೊಡುವುದಿಲ್ಲ. ಲಕ್ಷ್ಮಿ ಮಿತ್ತಲ್ ಬರುತ್ತಾರೆ, ಲಕ್ಷ್ಮಿ ಮಿತ್ತಲ್ ಬಂದು ಏನು ಮಾಡುತ್ತಾರೆ? ನಾನೇನು ನೋಡಿಲ್ಲವಾ? ಜಿಂದಾಲ್ ಕಾರ್ಖಾನೆ ಹಾಕಬೇಕಾದರೆ ನಾನು ಅಲ್ಲಿಯೇ ಇದ್ದೆ. ಭೂ ವಿಜ್ಞಾನಿ ಆಗಿ ಕೆಲಸ ಮಾಡುತ್ತಿದ್ದೆ. ನನಗೆ ಗೊತ್ತಿದೆ, ನಾನು ಕೂಡ ಕನಸು ಕಂಡಿದ್ದೆ. ಜಿಂದಾಲ್ ಕಂಪನಿ ಬಂದರೆ ನನಗೂ ಆ ಕಂಪನಿಯಲ್ಲಿ ಕೆಲಸ ಸಿಗುತ್ತದೆ ಎಂದು ಆಸೆ ಇಟ್ಟುಕೊಂಡಿದ್ದೆ. ಸಿಗಲಿಲ್ಲ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ವಾಸ್ತವಿಕ ಸ್ಥಿತಿಯನ್ನು ಬಿಟ್ಟು ಕೇವಲ ಬಾಯಿ ಮಾತಿನಿಂದ ನಾವು ಉದ್ಧಾರ ಮಾಡುವುದಕ್ಕಾಗುವುದಿಲ್ಲ. ನಾವೇನಾದರೂ ಉದ್ಧಾರ ಆಗಬೇಕಾಗಿದ್ದರೆ, ನಮ್ಮ ನಾಡು ಉದ್ಧಾರ ಆಗಬೇಕಾದರೆ ನಮ್ಮ ರೈತ ಬೆಳೆದಂತಹ ಬೆಳೆಗಳನ್ನು ಸಂಸ್ಕರಣೆ ಮಾಡತಕ್ಕಂತಹ ಸಂಗ್ರಹಣೆ ಮಾಡತಕ್ಕಂತಹ ಪ್ರೊಸೆಸ್ ಮಾಡತಕ್ಕಂತಹ ಎಕ್ಸ್‌ಪೋರ್ಟ್ ಮಾಡತಕ್ಕಂತಹ ವ್ಯವಸ್ಥೆ ಹಾಗೂ ಕೈಗಾರಿಕೆಗಳು ರಾಜ್ಯದಲ್ಲಿ ಸ್ಥಾಪನೆ ಆಗಬೇಕು. ಆಗ ಮಾತ್ರ ನಮ್ಮ ರೈತನ ಬದುಕು ಹಸನಾಗುತ್ತದೆ ಎನ್ನತಕ್ಕಂಥದ್ದು ನನ್ನ ವಾದ. ಉದಾಹರಣೆಗೆ ಹೇಳಬೇಕೆಂದರೆ, ಮೊನ್ನೆ ನಾನು ಟಿ.ವಿ.ಯಲ್ಲಿ ನೋಡುತ್ತಿದ್ದೆ, ಬಹಶಃ ಬಾಗೇಪಲ್ಲಿ ಇರಬಹುದು. ಆ ಬಾಗೇಪಲ್ಲಿಯಲ್ಲಿ ಟೊಮ್ಯಾಟೋ ಬೆಳೆ ಬೆಳೆದಂತಹ ರೈತ ಒಂದು ಕೆ.ಜಿ.ಗೆ 25 ಪೈಸೆ ಮಾರ್ಕೆಟ್ ವ್ಯಾಲ್ಯುಗೆ ಯಾರೂ ತೆಗೆದುಕೊಳ್ಳುವುದಕ್ಕೆ ಇಲ್ಲದೆ ಅವನು ರಸ್ತೆಗೆ ಹಾಕುತ್ತಾನೆ. ಅದರಿಂದ ಏನೇನು ಮಾಡಬಹುದು? ಅದರ ಬಗ್ಗೆ ಏಕೆ ನಾವು ಚಿಂತನೆ ಮಾಡುತ್ತಿಲ್ಲ? ಲಕ್ಷ್ಮಿ ಮಿತ್ತಲ್ ನಮಗೆ ಏಕೆ ಬೇಕು? ಸಿಮೆಂಟ್ ಕಾರಿಡಾರ್ ಏಕೆ ಬೇಕು? ನಮಗೆ ಬಹಳ ಮುಖ್ಯವಾಗಿ ಬೇಕಾಗಿರುವುದು ರೈತರ ಬೆಳೆಗಳನ್ನು ಸಂಸ್ಕರಣೆ ಮಾಡುವಂಥದ್ದು, ಕೈಗಾರಿಕೋದ್ಯಮಿಗಳನ್ನು ತರುವುದರಲ್ಲಿ ಈ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎನ್ನತಕ್ಕಂತಹ ಮಾತನ್ನು ನಾನು

ಹೇಳಬೇಕಾಗಿದೆ. ರಾಜಕೀಯ ತಾರತಮ್ಯ ಇದೆ. ಯಾವನ್ಯಾವನೋ ಯಾವನ್ಯಾವನಿಗೋ ಮುಗಿಸುವುದು. ಕನಸುಗಳನ್ನು ಕಾಣುವುದು. ಇವನು ಕಾಂಗ್ರೆಸ್‌ನವರು, ಅವನು ಬಿಜೆಪಿಯವನು. ದುಡ್ಡು ಕೊಡುವುದರಲ್ಲಿ ರಾಜಕೀಯ. ಇವತ್ತು ನಮ್ಮ ಕ್ಷೇತ್ರಗಳಲ್ಲಿ ನಾವು ನೋಡುತ್ತಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಮಳೆ ಬರಬೇಕಾದರೆ ಕ್ಷೇತ್ರ ನೋಡಿ ಬರುವುದಿಲ್ಲ ಇದು ಕಾಂಗ್ರೆಸ್‌ನ ಎ.ಎಸ್. ಪಾಟೀಲ್ ನಡಹಳ್ಳಿ ಕ್ಷೇತ್ರ, ಅವರಿಗೆ ದುಡ್ಡು ಜಾಸ್ತಿ ಕೊಡುವುದಿಲ್ಲ, ಇಲ್ಲಿ ಮಳೆ ಜಾಸ್ತಿ ಬರಬೇಕೆಂದು ಬರಲಿಲ್ಲ. ಮಳೆ ನೈಸರ್ಗಿಕವಾಗಿ ಬಂದಿತು. ನಾನು ನನ್ನ ಕ್ಷೇತ್ರದಲ್ಲಿ ಪ್ರವಾಹಕ್ಕೆ ಒಳಗಾಗಿರುವಂತಹ ರಸ್ತೆಗಳ ಸುಧಾರಣೆಗಾಗಿ ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿದೆ. ಸುಮಾರು 28 ದಿನ ಹಳ್ಳಿ ಹಳ್ಳಿಗಳಲ್ಲಿ ತಿರುಗಿ ವಾಸ್ತವಿಕ ಸ್ಥಿತಿಯನ್ನು ಜಿಲ್ಲಾಧಿಕಾರಿಗಳಿಗೆ ಒಪ್ಪಿಸಿ ಅವರು ಟೆಕ್ನಿಕಲ್ ಅಪ್ರೂವಲ್ ಕೊಟ್ಟರು. ಕೊಟ್ಟಮೇಲೆ ಕೆಲಸವೂ ಆಯಿತು. ಈಗ ಜಿಲ್ಲಾಧಿಕಾರಿಗಳಿಗೆ ಆದೇಶ ಮಾಡುತ್ತಾರೆ. ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಅದು ಕಾಂಗ್ರೆಸ್‌ನವರ ಕ್ಷೇತ್ರ ಅಲ್ಲಿಗೆ ಏಕೆ ನೀವು ದುಡ್ಡು ಜಾಸ್ತಿ ಕೊಡುತ್ತೀರಿ? 62 ಲಕ್ಷ ರೂಪಾಯಿ ಪೆಂಡಿಂಗ್ ಇಟ್ಟಿದ್ದಾರೆ. ಕಾರಣವೇನೆಂದರೆ ನಾನು ಕಾಂಗ್ರೆಸ್‌ನವರು. ಅಷ್ಟೇ ಅಲ್ಲ. ಇವರು ಏನು ರಾಜ್ಯಪಾಲರ ಭಾಷಣದಲ್ಲಿ ಎಲ್ಲರಿಗೂ ಮನೆಗಳಿಗೆ ಪರಿಹಾರವನ್ನು ಕೊಟ್ಟುಬಿಟ್ಟಿದ್ದೇವೆಂದು ಹೇಳಿಕೊಂಡಿದ್ದಾರೆ. ಸಿಂಧಗಿ ತಾಲ್ಲೂಕಿನಲ್ಲಿ ನನ್ನ ಸ್ನೇಹಿತ ಶಾಸಕರು ಆಡಳಿತ ಪಕ್ಷದವರು ಇದ್ದಾರೆ. ಅವರು ಹೇಳದೆ ಇದ್ದರೂ ಪರವಾಗಿಲ್ಲ; ಅವರ ಪರವಾಗಿ ನಾನು ಹೇಳುತ್ತೇನೆ. ಅವರ ಕ್ಷೇತ್ರದಲ್ಲಿ ಕೂಡ ಅನೇಕ ಹಳ್ಳಿಗಳಿಗೆ ಹಾಗೂ ನನ್ನ ಕ್ಷೇತ್ರದಲ್ಲಿ ಸುಮಾರು 9 ಹಳ್ಳಿಗಳಿಗೆ ಒಂದೂವರೆ ಸಾವಿರ, ಎರಡು ಸಾವಿರ, ಮೂರು ಸಾವಿರ, ನಾಲ್ಕು ಸಾವಿರ, ಕೊಡುತ್ತಿದ್ದರು. ಆ ಚೆಕ್ ಹಣವನ್ನೂ ಕೂಡ ಇವತ್ತಿನವರೆಗೆ ಕೊಟ್ಟಿಲ್ಲ. ನನ್ನ ಕ್ಷೇತ್ರದಲ್ಲಿ ಬರತಕ್ಕಂತಹ 23 ಹಳ್ಳಿಗಳ ತೋಟಗಾರಿಕಾ ಬೆಳೆಗಳು ಹಾಳಾಗಿವೆ. ರೈತರಿಗೆ ಕೊಡಬೇಕಾದ ಒಂದು ಸಾವಿರ, ಎರಡು ಸಾವಿರ ರೂಪಾಯಿಗಳನ್ನು ಇವತ್ತಿನವರೆಗೂ ಕೊಟ್ಟಿಲ್ಲ. ಅವನು ಯಾರಿಗೆ ಕೇಳಬೇಕು? ನಾನು ಜಿಲ್ಲಾಧಿಕಾರಿಗಳಿಗೆ ಕೇಳಿದೆ,

5.10 ಪಿ.ಎಂ.

ಏನೋ ಅವ್ಯವಹಾರವಾಗಿದೆ, ಯಾರು ಅರ್ಹ ಫಲಾನುಭವಿಗಳು ಇಲ್ಲ ಅವರಿಗೆ ಹೋಗಿದೆ, ಅದನ್ನು ಮತ್ತೆ ಅವರಿಂದ ವಾಪಸ್ ತೆಗೆದುಕೊಂಡು ಇವರಿಗೆ ಕೊಡುತ್ತೇನೆಂದು ಹೇಳುತ್ತಾರೆ. ಅಲ್ಲಿಯವರೆಗೆ ಅವರೇನು ಮಾಡಬೇಕು? ಇದು ವಾಸ್ತವಿಕವಾದ ಸ್ಥಿತಿ. ಬಹಳ ಜನ ನನ್ನ ಪತ್ರಿಕಾ ಮಿತ್ರರು ಮಳೆ ಬರುವಂತಹ ಸಂದರ್ಭದಲ್ಲಿ ಹಳ್ಳಿಗಳಲ್ಲಿದ್ದರು. ನಾನು ಟಿ.ವಿ.ಯಲ್ಲಿ ನೋಡುತ್ತಿದ್ದೆ. ಉತ್ತರ ಕರ್ನಾಟಕದಲ್ಲಿ ಆಗಿರತಕ್ಕಂತಹ ಅನಾಹುತಗಳಿಗೆ ಇಡೀ ಕರ್ನಾಟಕದ ಜನ ಮರುಕ ಪಟ್ಟರು. ಬೆಂಗಳೂರಿನಿಂದ ನನ್ನ ಮಿತ್ರರು ಬಹಳ ಜನ ಮಾತನಾಡುವ ಸಂದರ್ಭದಲ್ಲಿ ಮಹಾಸ್ವಾಮಿಗಳನ್ನು ಅಭಿನಂದನೆ ಮಾಡಿದರು. ಮತ್ತು ಅನೇಕ ಕೈಗಾರಿಕೋದ್ಯಮಿಗಳನ್ನು ಅಭಿನಂದನೆ ಮಾಡಿದರು. ಆದರೆ ಸ್ವಾಮಿ ಒಂದು ಮಾತನ್ನು ನಾನು ಹೇಳುತ್ತೇನೆ. ಅದು ಅವರ ಧರ್ಮ. It is their responsibility. It is their duty. ಆದರೆ ಯಾರನ್ನು ಅಭಿನಂದಿಸಬೇಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲೇನೋ ಬೀದಿಯಲ್ಲಿ ಪ್ರವಾಹಕ್ಕೆ ಒಳಗಾದಂಥ ಜನರಿಗೋಸ್ಕರವಾಗಿ ಹಣವನ್ನು ಸಂಗ್ರಹ ಮಾಡುವಂಥ ಸಂದರ್ಭದಲ್ಲಿ ಒಬ್ಬ ಭಿಕ್ಷುಕ ಬಂದು 10 ರೂಪಾಯಿಯನ್ನು ಕೊಟ್ಟ ಎಂದು ಒಂದು ಸಾರಿ ಇಲ್ಲಿ ಮುಖ್ಯಮಂತ್ರಿಗಳು ಹೇಳಿದ್ದರು. ಕಾಯಿಪಲ್ಲೆ ಮಾರತಕ್ಕಂಥವರು, ಬಾಳೆಹಣ್ಣು ಮಾರತಕ್ಕಂಥ ಬಡವರು ನೂರು ರೂಪಾಯಿ ಕೊಟ್ಟರು, ಇನ್ನೂರು ರೂಪಾಯಿ ಕೊಟ್ಟರು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರಲ್ಲ, ಅಂಥವರನ್ನು ಅಭಿನಂದನೆ ಮಾಡಬೇಕು. ಅಂಥವರಿಗೆ ಅಭಿನಂದನೆ ಮಾಡಿದರೆ ಬಹುಶ: ಈ ಸಭೆಗೆ ಬಹಳ ಶೋಭೆ ತರುತ್ತದೆಂದು ನಾನು ಅಂದುಕೊಳ್ಳುತ್ತೇನೆ. ಏಕೆಂದರೆ ಕೈಗಾರಿಕೋದ್ಯಮಿಗಳು ದಾನ ಕೊಡುವುದು ದೊಡ್ಡದಲ್ಲ, ನಾನು ಮಾಡುವುದು ದೊಡ್ಡದಲ್ಲ ಅಥವಾ ಒಬ್ಬ ಶಾಸಕ ದಾನ ಮಾಡುವುದು ದೊಡ್ಡದಲ್ಲ. ಒಬ್ಬ ಸ್ವಾಮಿಗಳು ದಾನ ಮಾಡುವುದು ದೊಡ್ಡದಲ್ಲ. ಒಬ್ಬ ಕೈಗಾರಿಕೋದ್ಯಮಿ ದಾನ ಮಾಡುವುದು ದೊಡ್ಡದಲ್ಲ. ಆದರೆ ದಿನಕ್ಕೆ ಕೇವಲ ನೂರು ರೂಪಾಯಿ ದುಡಿಯುವಂಥ ಒಬ್ಬ ಬಡವ

ಐವತ್ತು ರೂಪಾಯಿ ದಾನ ಮಾಡಿದ್ದಾನಲ್ಲ he is great. ಅವನನ್ನು ನಾವು ಮೊದಲು ಅಭಿನಂದನೆ ಮಾಡತಕ್ಕಂಥ ಕೆಲಸ ಈ ಸದನದಲ್ಲಿ ಆಗಬೇಕೆನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಕೊನೆಯದಾಗಿ ಹೇಳಬಯಸುವುದೇನೆಂದರೆ, ಈಗ ಇನ್ನೊಂದು ಹೊಸ ಬಜೆಟ್ ಬರುತ್ತಿದೆ ಸ್ವಾಮಿ. ಸಂತೆ, ಮಾತಿನ ಸಂತೆ, ಸುಳ್ಳಿನ ಕಂತೆ, ಈ ರೀತಿಯಲ್ಲಿ ಇನ್ನೊಂದು ಬಜೆಟ್ 5ನೇ ತಾರೀಖು ಬರುತ್ತದೆ.

(ಗೊಂದಲ)

ಶ್ರೀ ರಮೇಶ್ ಭೂಸನೂರು:– ಸತ್ಯಕ್ಕೆ ದೂರವಾದ ರೀತಿಯಲ್ಲಿ ತಾವು ಮಾತನಾಡಬಾರದು.

ಶ್ರೀ ಎ.ಎಸ್. ಪಾಟೀಲ್ : ಸ್ವಾಮಿ, ನಾನು ವಾದ ಮಂಡನೆ ಮಾಡಿರುವುದನ್ನು ತಾವೆಲ್ಲರೂ ಕೂಡ ಕೇಳಿದ್ದೀರಿ. ಅನುಷ್ಠಾನ ಮಾಡುವುದರಲ್ಲಿ ಸ್ವಾತಂತ್ರ್ಯ ಬಂದಾಗಿನಿಂದ ನಾವೆಲ್ಲರೂ ಕೂಡ ವಿಫಲರಾಗಿದ್ದೇವೆ.

ಶ್ರೀ ರಮೇಶ್ ಭೂಸನೂರು : ಪರಿಹಾರದ ಹಣವನ್ನು ಕೊಟ್ಟಿಲ್ಲವೆಂದು ಇವರು ಹೇಳುತ್ತಾರೆ. 15 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ.

(ಗೊಂದಲ)

ಛೇರ್ಮನ್ : ಪಾಟೀಲ್‌ರವರೆ, ತಾವು ಭಾಷಣ ಕನ್‌ಕ್ಲೂಡ್ ಮಾಡಿ.

ಶ್ರೀ ಎ.ಎಸ್. ಪಾಟೀಲ್ : ಭೂಸನೂರ್‌ರವರೆ, ನಾನು 15 ಕೋಟಿ ರೂಪಾಯಿಗಳನ್ನು ಕೊಟ್ಟಿಲ್ಲವೆಂದು ಹೇಳಲಿಲ್ಲ. ನಾನು ಹೇಳಿದ್ದೇನೆಂದರೆ, ನನ್ನ ಕ್ಷೇತ್ರದ 9 ಹಳ್ಳಿಗಳಲ್ಲಿ ಸರ್ಕಾರದಿಂದ ಏನು ಸರ್ವೆ ಮಾಡಿದ್ದಾರೆ ಅವರಿಗೆ ಇನ್ನೂ ಪರಿಹಾರದ ಹಣ ಕೊಟ್ಟಿಲ್ಲವೆಂದು ಹೇಳಿದ್ದೇನೆ. ನೀವು ಬೇಕಾದರೆ ದಾಖಲಾತಿಯನ್ನು ತರಿಸಿ ನೋಡಿ. ಅದೇ ರೀತಿ ನನ್ನ ಶಾಸಕ ಮಿತ್ರರ ಕೆಲವು ಹಳ್ಳಿಗಳಲ್ಲಿ ಪರಿಹಾರದ ಹಣವನ್ನು ಕೊಟ್ಟಿಲ್ಲವೆಂದು ಹೇಳಿದ್ದೇನೆ. 15 ಕೋಟಿ ರೂ. ಕೊಟ್ಟಿಲ್ಲವೆಂದು ಹೇಳಿಲ್ಲ. ನನ್ನ ಕ್ಷೇತ್ರದ 23 ಹಳ್ಳಿಗಳಲ್ಲಿ ತೋಟಗಾರಿಕೆ ಬೆಳೆಗಳಿಗೆ ಬರಬೇಕಾದಂಥ ಪರಿಹಾರವನ್ನು

ಕೊಟ್ಟಿಲ್ಲವೆಂದು ಹೇಳಿದ್ದೇನೆ. ಸುಮ್ಮನೆ ಸರಿಯಾಗಿ ನೀವು ತಿಳಿದುಕೊಳ್ಳದೆ ವಿರೋಧಕ್ಕೋಸ್ಕರ ವಿರೋಧ ಮಾಡುವಂಥದ್ದು ಸರಿಯಲ್ಲ. ವಾಸ್ತವಿಕವಾಗಿ ಇವತ್ತು ಅನುಷ್ಠಾನ ಮಾಡುವುದರಲ್ಲಿ ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಸುಳ್ಳು ಹೇಳತಕ್ಕಂಥದ್ದು, ಸುಳ್ಳು ಭರವಸೆಗಳನ್ನು ಕೊಡತಕ್ಕಂಥದ್ದು ಈ ಸರ್ಕಾರದ ಮೂಲ ಮಂತ್ರವಾಗಿದೆ ಎಂದು ಹೇಳಬಹುದು. ಅಭಿವೃದ್ಧಿ ಮಂತ್ರವಲ್ಲ. ಸುಳ್ಳು ಹೇಳುವುದು, ಸುಳ್ಳು ಭರವಸೆಗಳನ್ನು ಕೊಡತಕ್ಕಂಥದ್ದು. ಇನ್ನು ಭ್ರಷ್ಟಾಚಾರದ ಬಗ್ಗೆ ಹೇಳಬೇಕೆಂದರೆ, ಬಹುಶಃ ನನಗನ್ನಿಸುತ್ತಿದೆ, ಕಡೆಯ ತಿಂಗಳು ಬಂದಿದೆ ಸ್ವಾಮಿ, ಒಂದು ವರ್ಷದಲ್ಲಿ ಎಲ್ಲ ಅಧಿಕಾರಿಗಳ ಕಂಟ್ರ್ಯಾಕ್ಟ್ ಮುಗಿಯುತ್ತಾ ಬಂತು. ಈಗ ಡಬ್ಬಲ್ ರೇಟ್ ಆಗಿಬಿಟ್ಟಿದೆ. ಅದನ್ನು ಹೇಳುವುದಕ್ಕೆ ನಾನು ಹೋಗುವುದಿಲ್ಲ. ನಾನು ನನ್ನ ಕ್ಷೇತ್ರದಲ್ಲಿ ಒಬ್ಬ ಶಾಸಕ. ಅಲ್ಲಿರುವಂಥ ಯಾವುದೋ ಒಬ್ಬ ವ್ಯಕ್ತಿ ಒಬ್ಬ ಪಿ.ಎಸ್.ಐ. ರವರನ್ನು ಹಾಕಿಸಿಕೊಳ್ಳುತ್ತಾನೆ. ಪ್ರತಿನಿತ್ಯ ಪೊಲೀಸ್ ಸ್ಟೇಶನ್‌ನಲ್ಲಿ ಕುಳಿತಿರುತ್ತಾನೆ. ಅಣ್ಣ ತಮ್ಮ ಜಗಳವಾಡಿ ಬಂದರು ಎಂದರೆ start ಆಗುತ್ತದೆ dealing. ನಾಚಿಕೆಯಾಗುತ್ತದೆ, ನಾವು ಆ ಕ್ಷೇತ್ರದ ಶಾಸಕರಿದ್ದೇವೆ, I have every right. ಆದರೆ ನನಗನ್ನಿಸುತ್ತಿದೆ; ನೀವೇನು ಅಧಿಕಾರಿಗಳನ್ನು ವರ್ಗಾವಣೆ ಮಾಡುವಂಥ ಸಂದರ್ಭದಲ್ಲಿ ಯಾವುದೇ ಸರ್ಕಾರ ಭ್ರಷ್ಟಾಚಾರಕ್ಕೆ ಇಳಿದರೆ ಅಂಥ ಸರ್ಕಾರ ಜನವಿರೋಧಿ ಸರ್ಕಾರವಾಗುತ್ತದೆ. ಆ ಸರ್ಕಾರ ಯಾವತ್ತೂ ಕೂಡ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಆದರೆ ಇವತ್ತು ಭ್ರಷ್ಟಾಚಾರ ಯಾವ ಮಟ್ಟಕ್ಕೆ ಹೋಗಿದೆ ಎನ್ನುವುದನ್ನು ಬಿಚ್ಚಿ ಹೇಳಬೇಕಾದಂಥ ಅವಶ್ಯಕತೆ ಇಲ್ಲ. ಬೇಕಾದರೆ ಬಿಚ್ಚಿ ಹೇಳಿ ಎಂದರೆ ಅದರ ಬಗ್ಗೆ ಹೇಳಲು ನಾನು ಬೇಕಾದರೆ ಅದನ್ನು ರೂಲ್ 69 ರಡಿಯಲ್ಲಿ ಚರ್ಚೆಗೆ ತರುತ್ತೇನೆ. ಚರ್ಚೆ ಮಾಡೋಣ. ಯಾವ ಯಾವ ಅಧಿಕಾರಿಗೆ ಎಷ್ಟೆಷ್ಟು ರೇಟ್ ಎನ್ನತಕ್ಕಂಥದ್ದರ ಬಗ್ಗೆ ಚರ್ಚೆ ಮಾಡೋಣ. ಇವತ್ತು ಆಡಳಿತ ಪಕ್ಷದ ತಾವು ಶಾಸಕರಿದ್ದೀರಿ, ಸಂತೋಷ, ಭ್ರಷ್ಟಾಚಾರಕ್ಕೂ ಒಂದು ಲಿಮಿಟ್ ಇರಬೇಕು. ನಾನು ಆಗಲೇ ಅದನ್ನೇ ನಿಮಗೆ ಹೇಳಿದ್ದು. ಈಸ್ಕೊಳ್ಳುವ ಹಾಗೆ ಮಾಡಿದರೆ ಪರವಾಗಿಲ್ಲ

ಸ್ವಾಮಿ, ಆದರೆ ಕಸಿದುಕೊಳ್ಳುವಂಥ ಕೆಲಸವನ್ನು ಮಾಡಬೇಡಿ ಎನ್ನತಕ್ಕಂಥದ್ದನ್ನು ನಾನು ಹೇಳಿದ್ದು. ಒಬ್ಬ ಅಧಿಕಾರಿಯಿಂದ ಹಣವನ್ನು ವಸೂಲು ಮಾಡಿ ತಾವು ವರ್ಗಾವಣೆ ಮಾಡಿದ್ದೇ ಆದರೆ ಅವನು ಅಲ್ಲಿ ಅಭಿವೃದ್ಧಿ ಕೆಲಸಗಳನ್ನು ಪ್ರಾಮಾಣಿಕವಾಗಿ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ದಯಮಾಡಿ ನನ್ನ ಕ್ಷೇತ್ರದಲ್ಲಾದರೂ ಕೂಡ ನೀವು ಹಸ್ತಕ್ಷೇಪ ಮಾಡುವುದನ್ನು ಬಿಡಿ. ಕನಿಷ್ಠ ನನ್ನ ಕ್ಷೇತ್ರಕ್ಕಾದರೂ ಕೂಡ ಉತ್ತಮವಾದಂಥ ಅಧಿಕಾರಿಗಳನ್ನು ಹಾಕತಕ್ಕಂಥ ಕೆಲಸವನ್ನು ಈ ಸರ್ಕಾರ ಮಾಡಬೇಕು ಎನ್ನತಕ್ಕಂಥ ಮನವಿಯನ್ನು ಮಾಡಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿರತಕ್ಕಂಥ ಸಭಾಧ್ಯಕ್ಷರಿಗೆ ವಂದಿಸಿ, ತಾವೇನು ರಾಜ್ಯಪಾಲರ ಭಾಷಣಕ್ಕೆ ಇಲ್ಲಿ ವಂದನಾ ನಿರ್ಣಯವನ್ನು ಮಂಡನೆ ಮಾಡಿದ್ದೀರಿ, ಆ ಭಾಷಣದಲ್ಲಿ ಮಾಡಿರತಕ್ಕಂಥ ಎಲ್ಲ ಅಂಶಗಳು ಸತ್ಯಕ್ಕೆ ದೂರವಾಗಿವೆ, ಅಭಿವೃದ್ಧಿಗೆ ಪೂರಕವಾಗಿಲ್ಲವೆನ್ನತಕ್ಕಂಥ ವಾದವನ್ನು ಮಂಡನೆ ಮಾಡಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ. ನಮಸ್ಕಾರ.

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಛೇರ್ಮನ್‌ರವರೆ, ಘನತೆವೆತ್ತ ರಾಜ್ಯಪಾಲರ ಭಾಷಣದ ಬಗ್ಗೆ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ಧನ್ಯವಾದಗಳು. ರಾಜ್ಯಪಾಲರ ಭಾಷಣದ ಪ್ರತಿಯನ್ನು ನಾನು ಒಂದೆರಡ್ಮೂರು ಸಲ ತಿರುವಿ ಹಾಕಿ ನೋಡಿದೆ. ಯಾವುದೇ T.V. on ಮಾಡಲಿ ಅಥವಾ ಯಾವುದೇ ಪತ್ರಿಕೆಯನ್ನು ತೆಗೆದು ಓಪನ್ ಮಾಡಲಿ ಅಥವಾ ಯಾವುದೇ ಭಾಷಣದಲ್ಲಿ ನೋಡಿದರೂ, ನಮ್ಮ ಸರ್ಕಾರದ ಅಭಿವೃದ್ಧಿಯ ಮಂತ್ರ ಎಂದು ಹೇಳಿರುವುದನ್ನು ಬಹುಶ: ಈ ರಾಜ್ಯದ ಜನರು ಓದಿರುತ್ತಾರೆ. ಆದರೆ ಈ ರಾಜ್ಯಪಾಲರ ಭಾಷಣದಲ್ಲಿ ನೋಡಿದರೆ ಎಲ್ಲಿಯೂ ಕೂಡ ಅಭಿವೃದ್ಧಿ ಕಾಣುತ್ತಿಲ್ಲ. ಸರ್ಕಾರದ 29,500 ಕೋಟಿ ರೂ. ಬಜೆಟ್ ಏನಿದೆ, ಇಲ್ಲಿಯವರೆವಿಗೆ ಕೇವಲ 13,500 ಕೋಟಿ ರೂ. ಅಥವಾ 14,000 ಕೋಟಿ ರೂ.ಗಳ ಹಣ ಮಾತ್ರ ವ್ಯಯವಾಗಿದೆ. ನಾಳೆ ದಿವಸ ಹೊಸ ಬಜೆಟ್‌ನ್ನು ಮಾನ್ಯ ಮುಖ್ಯಮಂತ್ರಿಗಳು ಮಂಡನೆ ಮಾಡುತ್ತಾರೆ. ಅಂದರೆ

ಇನ್ನಾವ ಅಭಿವೃದ್ಧಿ ಮಂತ್ರ ಮಾಡುತ್ತಾರೆ ಎನ್ನತಕ್ಕಂಥ ಆಶ್ಚರ್ಯಕರ ಚಿಂತನೆ ನನ್ನದಾಗಿದೆ. ಕಡೇ ಪಕ್ಷ ಒಂದಿಪ್ಪತ್ತು, ಇಪ್ಪತ್ತೈದು ಸಾವಿರ ಕೋಟಿ ರೂ.ಗಳನ್ನಾದರೂ ಖರ್ಚು ಮಾಡಿದ್ದರೆ ಆ ಮಾತಿಗೆ ಒಂದು ಮೌಲ್ಯ ಉಳಿಯುತ್ತಿತ್ತು. ಆದರೆ ಕೇವಲ 43 ಪರ್ಸೆಂಟ್‌ನಷ್ಟು ಹಣವನ್ನು ಮಾತ್ರ ಖರ್ಚು ಮಾಡಿ 50 ಪರ್ಸೆಂಟ್‌ನ್ನು ಕೂಡ ಕ್ರಾಸ್ ಮಾಡುವುದಕ್ಕೆ ಇವರ ಕೈಯಿಂದ ಆಗಿಲ್ಲ. ಇದು ಇನ್ನೆಂಥ ಅಭಿವೃದ್ಧಿ ಎಂದು ನನಗೆ ಆಶ್ಚರ್ಯ ತರತಕ್ಕಂಥ ವಿಚಾರಧಾರೆಯಾಗಿದೆ. ಇನ್ನು ನೆರೆ ಪೀಡಿತರ ಕಷ್ಟದ ಬಗ್ಗೆ ನಮ್ಮ ಹಲವಾರು ಶಾಸಕರು ಈಗಾಗಲೇ ಮಾತನಾಡಿದ್ದಾರೆ. ಅವರ ಪರಿಸ್ಥಿತಿ ಏನಾಗಿದೆಯೆಂದರೆ, ಬಾಂಡಲಿಯಿಂದ ಬೆಂಕಿಗೆ ತೆಗೆದುಕೊಂಡು ಹಾಕಲಾಗಿದೆ. ಅವರು ಭೂಮಿ ಮೇಲಿಲ್ಲ. ಬಾಂಡಲಿಯಿಂದ ತೆಗೆದುಕೊಂಡು ಹೋಗಿ ಬೆಂಕಿಗೆ ಹಾಕಿ ಸುಡುತ್ತಿದ್ದಾರೆ. ಬೆಂಗಳೂರಿನಂಥ ಕಡೆಯೇ 33 ರಿಂದ 35 ಡಿಗ್ರಿ ಸೆಲ್ಸಿಯಸ್ ಇರತಕ್ಕಂಥ ನಗರದಲ್ಲಿ ಮತ್ತು ದಕ್ಷಿಣ ಕರ್ನಾಟಕದಲ್ಲಿಯೇ ನಾವು ವಾಸ ಮಾಡುವುದಕ್ಕೇ ಕಷ್ಟವಾಗಿದೆ. ಆದರೆ ಆ ಕಡೆ ಇವರು zinc ಶೀಟ್ ಹಾಕಿರುವ ತಾತ್ಕಾಲಿಕ ಮನೆಗಳಲ್ಲಿ ಜನರು ಕಳೆದ ಸೆಪ್ಟೆಂಬರ್‌ನಿಂದಲೂ ಉತ್ತರ ಕರ್ನಾಟಕದಲ್ಲಿ ಇದ್ದಾರೆ. ಅವರ ಬದುಕು ಬಹಳ ಕಷ್ಟಕರವಾಗಿದೆ. ನಮ್ಮ ಶ್ರೀನಿವಾಸ ಪ್ರಸಾದ್‌ರವರು ಬಹಳ ಸೊಗಸಾಗಿ ಅದನ್ನು ಈ ಸದನದಲ್ಲಿ ವಿಶ್ಲೇಷಣೆಯನ್ನು ಮಾಡಿದ್ದಾರೆ. ಆದರೂ ಸಹ ಏನು ನಾವು ಪತ್ರಿಕೆಯಲ್ಲಿ ನೋಡಿದಂತೆ ಬಹಳ ಜನರು ಅಲ್ಲಿ ಸಂಕಷ್ಟದಲ್ಲಿದ್ದಾರೆ. ಹಲವಾರು ಸ್ವಾಮೀಜಿಗಳು, ಕೈಗಾರಿಕೋದ್ಯಮಿಗಳು, ಮಾನ್ಯ ಮುಖ್ಯಮಂತ್ರಿಗಳು, ಅನೇಕ ಸಚಿವರು ಹಣವನ್ನು ಕಲೆಕ್ಟ್ ಮಾಡಿ ನಾವು ವಂತಿಗೆಯನ್ನು ಕೊಡುತ್ತೇವೆಂದು ಅನೌನ್ಸ್ ಮಾಡಿದರು. ಆದರೆ ಬಹುಶ: ಒಂದು ಕಡೆ ಮಾನ್ಯ ಮುಖ್ಯಮಂತ್ರಿಗಳು ಬಾಗಲಕೋಟೆಯಲ್ಲಿ ಶಿಲಾನ್ಯಾಸ ಮಾಡಿದರೆ, ಸಿರಗುಪ್ಪದಲ್ಲಿ ಅವರ cabinet colleague ಇನ್ನೊಂದು ಕಡೆ ಶಿಲಾನ್ಯಾಸವನ್ನು ಮಾಡುತ್ತಾರೆ. ಮತ್ತೊಂದು ಕಡೆ ಕೊಪ್ಪಳದಲ್ಲಿ ಮಾಡಿದರೆ, ಮತ್ತೊಬ್ಬರು ರಾಯಚೂರಿನಲ್ಲಿ ಮಾಡುತ್ತಾರೆ. ಹೀಗಾಗಿ ಈ ಸರ್ಕಾರದಲ್ಲಿ ಮುಖ್ಯಮಂತ್ರಿಗಳು ಒಂದು ಕಡೆ ಶಿಲಾನ್ಯಾಸ ಮಾಡಿದರೆ ಅವರ cabinet

colleague ಒಂದು ಕಡೆ ಶಿಲಾನ್ಯಾಸ ಮಾಡುತ್ತಾರೆ. ಹೀಗಾಗಿ ಶಿಲಾನ್ಯಾಸ ಮಾಡಿದಂಥ ಅನೇಕ ಗ್ರಾಮಗಳಲ್ಲಿ ಇಲ್ಲಿಯವರೆವಿಗೂ ಸಹ ಯಾವುದೇ ಮನೆಗಳನ್ನು ಕಟ್ಟುವುದಕ್ಕೆ ಸಂಪೂರ್ಣವಾಗಿ ವಿಫಲರಾಗಿದ್ದಾರೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಮಾತಾ ಅಮೃತಾನಂದಮಯಿಯವರು ಕೇವಲ ನೂರು ಮನೆಗಳನ್ನು ಕಟ್ಟಿ ನೂರು ಜನರಿಗೆ ಅವರು ಮನೆಯನ್ನು ಕೊಟ್ಟಿದ್ದಾರೆ. ಬೇರೆ ಇನ್ನು ಯಾವ ಮನೆಯೂ ಕೂಡ ಇಲ್ಲಿಯವರೆವಿಗೂ ಆಗಿಲ್ಲ. ಮೊನ್ನೆ ಆದಿಚುಂಚನಗಿರಿಯ ಮಠಾಧೀಶರು ಹತ್ತು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರು ಎಂಬುದನ್ನು ನಾನು ಪೇಪರ್‌ನಲ್ಲಿ ಓದಿದ್ದೇನೆ. ಅವರಿಗೆ ಈ ಮೂಲಕ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

(ಈ ಹಂತದಲ್ಲಿ ಸಭಾಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯನವರು ಅಧ್ಯಕ್ಷ ಪೀಠದಲ್ಲಿ ಆಸೀನರಾದರು)

ಆದರೆ ಇನ್ನು ಯಾವ ಮಂತ್ರಿಗಳಾಗಲಿ ಅಥವಾ ಮಠಾಧೀಶರಾಗಲಿ ಅದರ ಬಗ್ಗೆ ಗಮನ ಹರಿಸದೇ ಇರತಕ್ಕಂಥದ್ದು ಕೇವಲ ಪ್ರಚಾರಕ್ಕೆ ಸೀಮಿತವಾಗಿದೆಯೋ ಅಥವಾ ಪ್ರಾಮಾಣಿಕವಾಗಿ ಅಲ್ಲಿ ಕೆಲಸ ನಡೆಯುತ್ತಿದೆಯೋ ಎಂಬ ಬಗ್ಗೆ ನಾವು ಈ ಸಂದರ್ಭದಲ್ಲಿ ಚಿಂತನೆ ಮಾಡಬೇಕಾಗಿದೆ. ಕೆಲವು ಕಡೆ ಒಂದು ಲಕ್ಷದ ಎಪ್ಪತ್ತೆಂಟು ಮನೆಗಳನ್ನು ಕಟ್ಟುವುದಕ್ಕೆ ಕಂಟ್ರ್ಯಾಕ್ಟ್‌ಗಳಲ್ಲಿ ಪೈಪೋಟಿ. ಇಲ್ಲಿ ಪತ್ರಿಕೆಯಲ್ಲಿ ಏನು ಹೇಳುತ್ತಾರೆ ಎಂದರೆ ಮರೆತೆವು ನಾವು ಮುಳುಗಡೆಯಾದವರ ಎಂದು ಹೇಳುತ್ತಾರೆ. ನಾವು ಮುಳುಗಡೆಯಾದವರನ್ನು ಮರೆತು ಹೋಗಿದ್ದೀವಿ ಎಂದು ಪದ್ಮರಾಜ್ ದಂಡಾವತಿಯವರು ವಿಶ್ಲೇಷಣೆ ಮಾಡಿ ಹೇಳುತ್ತಾರೆ. ಸುಮಾರು ಒಂದು ಲಕ್ಷ ಮನೆಗಳನ್ನು ಕಟ್ಟುವುದಕ್ಕೆ ಟೆಂಡರ್ ಮಾಡಿ, ಗುತ್ತಿಗೆಯನ್ನು ಆಂಧ್ರದ ಒಬ್ಬ ಮಾಜಿ ಮುಖ್ಯಮಂತ್ರಿ ಮಗ ಯಾರಿಗೆ ಹೇಳುತ್ತಾರೆ ಅವರಿಗೆ ಕೊಡುವುದಕ್ಕೆ ಈ ಸರ್ಕಾರ ತಲೆಬಾಗುತ್ತದೆ. ಏನು development ಮಾಡುವುದಕ್ಕೆ ನಮ್ಮ ಕೈಯಲ್ಲಿ ಆಗುತ್ತದೆ ಎಂದು ಅವರು ಬೆನ್ನನ್ನು ನೋಡಿಕೊಳ್ಳಬೇಕು. ಇಲ್ಲಿಯವರೆಗೂ ಆಡಳಿತ ಪಕ್ಷದ ನನ್ನ

ಸ್ನೇಹಿತರು ಮಾತನಾಡಿದರು. ಆದರೆ ಈಗ ಇಲ್ಲಿ ನಮ್ಮ ಸ್ನೇಹಿತರಾದ ರಾಜ ನರಸಿಂಹ ನಾಯಕ್ ಅವರು ಇಲ್ಲ. ಅವರು ಬಹಳ ಸೊಗಸಾಗಿ ಮಾತನಾಡುವ ಮುಖಾಂತರ ಅವರ ಬೆನ್ನನ್ನು ಬಹಳ ಚೆನ್ನಾಗಿ ತಟ್ಟಿಕೊಂಡಿದ್ದಾರೆ. ನಾವು ಯಾವುದೇ ಸರ್ಕಾರವನ್ನು appreciate ಮಾಡಬೇಕಾದರೆ, ವಿರೋಧ ಪಕ್ಷದವರು appreciate ಮಾಡಬೇಕು, ವಿರೋಧ ಪಕ್ಷದ ನಾಯಕರು appreciate ಮಾಡಬೇಕು. ಆಗ ಸರ್ಕಾರಕ್ಕೆ ಅತಿ ಹೆಚ್ಚಿನ ಗೌರವ ಬರುತ್ತದೆ. ಅದು ಬಿಟ್ಟು ನನ್ನ ಬೆನ್ನನ್ನು ನಾನೇ ತಟ್ಟಿಕೊಂಡರೆ ಅದೆಷ್ಟು ಗೌರವ ಬರುತ್ತದೆ ಎನ್ನುವುದನ್ನು ಚಿಂತನೆ ಮಾಡಬೇಕು. ಇವತ್ತಿನವರೆಗೂ ಸಹ ಮನೆ ಕಟ್ಟಿಲ್ಲ. ಇವತ್ತಿಗೂ ಸಹ ಕೆಲವು ಗ್ರಾಮಗಳಲ್ಲಿ ಡುಂಡಾಪುರ ಹಳ್ಳಿ, ಅಮೃತಾನಂದ, ಮುಂತಾದ ಅನೇಕ ಗ್ರಾಮಗಳಲ್ಲಿ ಇನ್ನೂ ಮರದ ಕೆಳಗೆ ವಾಸ ಮಾಡುತ್ತಿದ್ದಾರೆ. ನಾನು ಟಿ.ವಿ.ಯಲ್ಲಿ ನೋಡಿದೆ. ಮನುಷ್ಯ ಐದೂವರೆ–ಆರಡಿ ಇದ್ದರೆ ಅವನು ಕಟ್ಟಿಕೊಂಡಿರುವ ತಗಡುಗಳು ನಾಲ್ಕೂವರೆ–ಐದಡಿ ಎತ್ತರ ಇದೆ. ಅಲ್ಲಿ ಮಲಗುವುದು ಹೇಗೆ? ಮಕ್ಕಳನ್ನು ಇಟ್ಟುಕೊಂಡು ಜೀವನ ಮಾಡುವುದು ಹೇಗೆ? ಹಾಗಾಗಿ ದಯಮಾಡಿ ಈ ಸರ್ಕಾರ ಅದರ ಕಡೆ ಹೆಚ್ಚು ಗಮನವನ್ನು ಹರಿಸಬೇಕಾಗುತ್ತದೆ. ಅಲ್ಲಿ ಈ ಘಟನೆ ಸೆಪ್ಟೆಂಬರ್‌ನಲ್ಲಿ ನಡೆದು ಸುಮಾರು ಆರು ತಿಂಗಳಾಗಿದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಒಂದು ಕಡೆ, ನನಗೆ ಕೇವಲ ಒಂದು ತಿಂಗಳು ಸಮಯ ಕೊಡಿ, ನಾನು ಪೂರ್ಣ ಮಾಡಿ ಕೊಡುತ್ತೇನೆ, ನನಗೆ ಕುರ್ಚಿಯ ವ್ಯಾಮೋಹ ಇಲ್ಲವೆಂದು ಜನತೆಯ ಕ್ಷಮೆ ಕೋರಿ ಹೇಳುತ್ತಾರೆ. ಈಗಾಗಲೇ ಆರು ತಿಂಗಳಾಗಿದೆ; ಅಲ್ಲಿ ಜನ ಬೆಂಕಿಯಲ್ಲಿ ಬೇಯುತ್ತಿದ್ದಾರೆ. ಅದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕಾಗಿದೆ. ಏಕೋ ಏನೋ ಇವರ ವೈಯುಕ್ತಿಕವಾದಂತಹ ರಾಜಕಾರಣದಿಂದ ಕೆಲಸ ಆಗಿಲ್ಲ. ಅವರ ಪಕ್ಷದ ವಿಚಾರವಾಗಿ ನಾನು ವ್ಯಾಖ್ಯಾನ ಮಾಡುವುದಿಲ್ಲ. ಆದರೆ ರಾಜ್ಯದ ಆಡಳಿತ ದೃಷ್ಟಿಯಿಂದ ಮತ್ತು ಅಲ್ಲಿ ಬೇಯುತ್ತಿರುವ ಜನತೆಯ ದೃಷ್ಟಿಯಿಂದ ನಾನು ವ್ಯಾಖ್ಯಾನ ಮಾಡುವುದಕ್ಕೆ ಬರುತ್ತಿದ್ದೇನೆ. ದಯಮಾಡಿ ಕೂಡಲೇ ಇದಕ್ಕೆ ಒಂದು

ಪರಿಹಾರವನ್ನು ಕಂಡುಹಿಡಿಯಬೇಕೆಂದು ಹೇಳುತ್ತೇನೆ. ಇವತ್ತು ಮನೆ ಹಂಚಿಕೆ ಬಗ್ಗೆ ಬಹಳಷ್ಟು ಸದಸ್ಯರು ಮಾತನಾಡಿದರು. ನಾನು ಅದನ್ನು ಪೇಪರ್‌ನಲ್ಲಿ ಓದಿದ್ದೆ. ಅಲ್ಲಿ ಜನ ಬಹಳ ಸೋತಿದ್ದಾರೆ, ಬಹುಶ: ಅಲ್ಲಿ ನಾವು ಅವರ ಹತ್ತಿರ ಏನೂ ಮಾತನಾಡುವುದಕ್ಕಾಗುವುದಿಲ್ಲ. ಅವನು ಅಲ್ಲಿ ತನ್ನ ಆಸ್ತಿ, ಜಾನುವಾರು, ಮಕ್ಕಳು-ಮನೆ ಕಳೆದುಕೊಂಡಿದ್ದಾನೆ. ಅಲ್ಲಿರುವಂತಹ ಎಲ್ಲರಿಗೂ zinc ಶೀಟ್ ಹಾಕಿಕೊಡುವುದಕ್ಕಾಗಿಲ್ಲ. ಅಲ್ಲಿ ಅನೇಕ ಜನ ಇವತ್ತೂ ಕೂಡ ಮುರುಕಲು ಮನೆಯಲ್ಲಿ ವಾಸ ಮಾಡುತ್ತಿದ್ದಾರೆ. ಅಲ್ಲಿ ಏನು ದಂಧೆ ನಡೆದಿದೆ ಎಂದರೆ illicit liquor ತಯಾರು ಮಾಡಿ ಮಾರುತ್ತಿದ್ದಾರೆ. ಅದಕ್ಕೆ ಸರ್ಕಾರ ಕೂಡಲೇ ಕಡಿವಾಣ ಹಾಕಬೇಕು. ರೈತನ ನೋವು ಏನು ಎಂದು ನನಗೆ ಗೊತ್ತಿದೆ. ಅವನು ಆಸ್ತಿ, ಮನೆ ಕಳೆದುಕೊಂಡು, ಅವನ ಬದುಕು ಬಡತನದ ಬೇಗೆಯಲ್ಲಿ ಬೇಯುತ್ತಿದ್ದಾನೆ. ಹಾಗಾಗಿ ಅವನು ಯಾವುದಕ್ಕಾದರೂ ಮಾರು ಹೋಗುತ್ತಾನೆ. ಅದು ಮನುಷ್ಯನ ಸಹಜ ಗುಣ. ಅದಕ್ಕೆ ನಮ್ಮ ಸರ್ಕಾರ ಕಡಿವಾಣ ಹಾಕದಿದ್ದರೆ ಆ ಮನುಷ್ಯ ಹಾಳಾಗುತ್ತಾನೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಏನು ರಸ್ತೆ ಮಾಡಿದ್ದೇವೆಂದು ಹೇಳಿದ್ದಾರೆ, ಯಾವ ಊರಿನಲ್ಲೂ ರಸ್ತೆಯಾಗಿಲ್ಲ. ಯಾವ ಊರಿನಲ್ಲೂ ಚರಂಡಿಯಾಗಿಲ್ಲ. ಯಾವ ಊರಿಗೂ ಕುಡಿಯುವ ನೀರು ಕೊಟ್ಟಿಲ್ಲ. ಅದರಿಂದ ಇವತ್ತು ಅವರು ನಿರಾಶ್ರಿತರು ಇದ್ದಹಾಗೆ ಇದ್ದಾರೆ. ಅವರನ್ನು ನೋಡಿದರೆ ಹೊಟ್ಟೆ ಉರಿಯುತ್ತದೆ. ಅವರು ಆಸ್ತಿ ಕಳೆದುಕೊಂಡು ನಿರಾಶ್ರಿತರು ಇದ್ದಹಾಗೆ ಇದ್ದಾರೆ. ಬಾಂಗ್ಲಾದವರು ಬೆಂಗಳೂರಿಗೆ ಬಂದು ಭಿಕ್ಷೆ ಬೇಡುತ್ತಾರಲ್ಲ, ಅದಕ್ಕಿಂತ ಬಹಳ ಕಷ್ಟದಲ್ಲಿ ಅವರು ಜೀವನವನ್ನು ನಡೆಸುತ್ತಿದ್ದಾರೆ. ಏಕೋ ಏನೋ ಸರ್ಕಾರ ಹೆಚ್ಚು ಒತ್ತನ್ನು ಕೊಡುವುದಿಲ್ಲ. ನಮ್ಮ ಶೋಭಮ್ಮನವರು ಮಂತ್ರಿ ಸ್ಥಾನವನ್ನು ಕಳೆದುಕೊಂಡರೂ ಸಹ ಈ ಹಳ್ಳಿಯಲ್ಲಿರುವವರ ಸೇವೆ ಮಾಡುವುದಕ್ಕೆ ಹೋದರೆ ನಮ್ಮ ಶಾಸಕ ಮಿತ್ರರು, ಅವರಿಗೆ ಅಲ್ಲಿ ಏನು ಕೆಲಸ, ಅವರು ಅಲ್ಲಿಗೆ ಏಕೆ ಹೋಗಬೇಕೆಂದು comment ಮಾಡುತ್ತಾರೆ. ಅಲ್ಲಿಗೆ ಹೋಗುವುದಕ್ಕೆ ಯಾರಿಗೂ ಹಕ್ಕಿಲ್ಲವೇ? ಯಾವ ಶಾಸಕರು ಎಲ್ಲಿ

ಬೇಕಾದರೂ ಕೆಲಸ ಮಾಡಬಹುದು. ಅದರ ಬಗ್ಗೆ ವ್ಯಾಖ್ಯಾನ ಮಾಡುವುದರಲ್ಲಿ, ಅದನ್ನು ಪ್ರತಿಭಟನೆ ಮಾಡುವುದರಲ್ಲಿ ಏನು ಅರ್ಥವಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಯಾರಿಗಾದರೂ ಸಹ ಸೇವೆ ಮಾಡುವುದಕ್ಕೆ ಅವಕಾಶ ಕೊಡಬೇಕು. ಆದಷ್ಟು ಬೇಗ ಅದಕ್ಕೆ ಹೆಚ್ಚಿನ ಒತ್ತು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ಸರ್ಕಾರ ಶಾಂತಿಯುತವಾದಂತಹ ಸರ್ಕಾರ ಎಂದು ಇಲ್ಲಿ statement ಇದೆ. ತಾವು ನೋಡಿದಿರಿ, ಮೊನ್ನೆ ಮೊನ್ನೆ ರೈತರು ಕೈಗೆ ಕೋಳ ಹಾಕಿಸಿಕೊಂಡು ಜೈಲಿನಲ್ಲಿದ್ದರು. ಅದು ಇಡೀ ರಾಜ್ಯದ ಜನತೆಗೆ ಗೊತ್ತಿದೆ. ನಮ್ಮ ಚಾಮರಾಜನಗರದಲ್ಲಿ ಡಿಸಿ, ಎಸ್‌ಪಿ ದೊಣ್ಣೆ ಹಿಡಿದುಕೊಂಡು ರೈತರಿಗೆ ಹೊಡೆಯುತ್ತಾರೆ. ಚರ್ಚ್ ಒಡೆದು ಹಾಕಿದ್ದಾರೆ. ಎಲ್ಲಿದೆ ಶಾಂತಿಯುತ ಸರ್ಕಾರ? ಮಾನ್ಯ ಅಧ್ಯಕ್ಷರೆ, ನೀವು paper open ಮಾಡಿ ಯಾವ ಊರಿನಲ್ಲಿ ನೋಡಿದರೂ ಎಲ್ಲಾ ಕಡೆ strike, ಎಲ್ಲಾ ಕಡೆ ಪ್ರತಿಭಟನೆ, ಪೋಲೀಸರ ದಬ್ಬಾಳಿಕೆ. ಇದರ ಬಗ್ಗೆ ನಮ್ಮ ಶಾಸಕರಾದ ಪಾಟೀಲ್ ನಡಹಳ್ಳಿಯವರು ಪೋಲೀಸರು ಹೇಗೆ ನಡೆದುಕೊಳ್ಳುತ್ತಾರೆಂದು ಮಾತನಾಡಿದ್ದಾರೆ. ಇದು ಶಾಂತಿಯುತವಾದ ಸರ್ಕಾರ ಎಂದು ನೀವು ಒಪ್ಪುತ್ತೀರಾ? ಇದು ಅಶಾಂತಿಯುತವಾದಂತಹ ಸರ್ಕಾರ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ಸಹಕಾರಿ ವಲಯದ ಬಗ್ಗೆ ಹೇಳುವುದಾದರೆ ಮಾನ್ಯ ರೇವಣ್ಣನವರು ಅದರ ಅಧ್ಯಕ್ಷರಾಗಿದ್ದಾಗ ಎರಡು ರೂಪಾಯಿ ದರದಲ್ಲಿ ನಾವು ರೈತರಿಗೆ ಸಹಾಯಧನ ಕೊಡುತ್ತೇವೆಂದು ಬಹಳ ಹೋರಾಟ ಮಾಡಿದರು. ಆದರೆ ಸಚಿವರು ಅದಕ್ಕೆ permission ಕೊಡಲಿಲ್ಲ. ಇವತ್ತೂ ಕೊಟ್ಟಿಲ್ಲ. ಒಂದು ಕಡೆ ಅದರ ಅಧ್ಯಕ್ಷರು ನಾವು 4–5 ರೂಪಾಯಿ ಹಾಲಿನ ದರವನ್ನು ಜಾಸ್ತಿ ಮಾಡುತ್ತೇವೆಂದು ಹೇಳುತ್ತಾರೆ. ಅದರ ಮಧ್ಯದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಜಾಸ್ತಿ ಮಾಡಲು ಆಗುವುದಿಲ್ಲವೆಂದು ಹೇಳುತ್ತಾರೆ. ಯಾವ statement ಅನ್ನು ಈ ರಾಜ್ಯದ ಆರು ಕೋಟಿ ಜನ ಒಪ್ಪಿಕೊಳ್ಳಬೇಕು? ಅಧ್ಯಕ್ಷರು ಹೇಳಿದ್ದು ಒಪ್ಪಿಕೊಳ್ಳಬೇಕೆ? ಮಾನ್ಯ

ಮುಖ್ಯಮಂತ್ರಿಯವರು ಹೇಳಿದ್ದು ಒಪ್ಪಿಕೊಳ್ಳಬೇಕೆ ಎನ್ನುವಂತಹ ಸಂಶಯ ಎಲ್ಲರಿಗೂ ಮೂಡಿದೆ. ದಯಮಾಡಿ ನೀವು ಎಷ್ಟು ಜಾಸ್ತಿ ಮಾಡುತ್ತೀರಿ, ಅದರಲ್ಲಿ 50% ಅನ್ನು ತಾವು ನೇರವಾಗಿ ರೈತರಿಗೆ ಕೊಡಬೇಕೆನ್ನುವುದು ನನ್ನ ಒತ್ತಾಯ.

ನೀರಾವರಿ ಬಗ್ಗೆ ನನ್ನ ಗೆಳೆಯರು ಬಹಳ ಜನ ಮಾತನಾಡಿದರು. ಅಜ್ಜಂಪುರ ಎನ್ನುವ ಕಡೆ ಒಂದು canalಗೆ 2006ರಲ್ಲಿ ಅಂದಾಜು ವೆಚ್ಚ 550 ಕೋಟಿ ರೂಪಾಯಿ ಇತ್ತು. ನಂತರ ಇದಕ್ಕೆ ಒಂದು ಕಮಿಟಿ ಮಾಡಿ ಮತ್ತೆ ಅದಕ್ಕೆ ಚಿಂತನೆ ಮಾಡಿ, Technical Committee ಯವರು ಸಹ 876 ಕೋಟಿ ರೂಪಾಯಿಗೆ ಟೆಂಡರ್ ಮಾಡಬೇಕೆಂದು ತೀರ್ಮಾನ ಮಾಡುತ್ತಾರೆ. ಆದರೆ ಏಕಾಏಕಿ 20ನೇ ತಾರೀಖು ಈ ರಾಜ್ಯದ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದಂತಹ ಒಂದು ಸಭೆಯಲ್ಲಿ ಒಂದು ತೀರ್ಮಾನ ಮಾಡುತ್ತಾರೆ. ಎಲ್ಲವನ್ನು ಬದಿಗೊತ್ತಿ 1,032 ಕೋಟಿ ರೂಪಾಯಿಗೆ ಅಂಗೀಕಾರ ಮಾಡುವುದಕ್ಕೆ ಶಿಫಾರಸ್ಸು ಮಾಡುತ್ತಾರೆ. ಇದು ನಮ್ಮ ನೀರಾವರಿಯಲ್ಲಿ ಆದಂತಹ ಸಾಧನೆ ಎಂದು ಹೇಳಲೆ? ಅಥವಾ ದರೋಡೆ ಎಂದು ಹೇಳಲೆ? ನನಗೆ ಏನೆಂದು ಹೇಳಬೇಕೆಂದು ಅರ್ಥವಾಗುತ್ತಿಲ್ಲ. ಅದನ್ನು ಮಾಡುವುದಕ್ಕೆ ಯಾರಿಗೆ ಕೊಟ್ಟಿದ್ದಾರೆಂದರೆ, the contractor who is in the black list, ಅಂಥವರಿಗೆ ಕೊಡುತ್ತಾರೆ. ಯಾರು ಉತ್ತಮವಾದಂತಹ contractor claim ಮಾಡಿದರೂ ಸಹ ಅವರಿಗೆ ಕೊಡಲಿಲ್ಲ. ಆರ್‌ಎಸ್‌ಎನ್‌ಎಲ್ ಜ್ಯೋತಿ ಎನ್ನುವವರಿಗೆ ಕೊಟ್ಟು 1,032 ಕೋಟಿ ರೂಪಾಯಿ ಎಂದರೆ ಸುಮಾರು 270ರಿಂದ 300 ಕೋಟಿ ರೂಪಾಯಿ escalation amount ಕೊಟ್ಟು tender approve ಮಾಡುವಂತಹ ಅವಶ್ಯಕತೆ ಏನಿತ್ತು ಎಂದು ನನಗೆ ಅರ್ಥವಾಗಿಲ್ಲ. ಇದಕ್ಕೆ ನೇರವಾಗಿ ಮಾನ್ಯ ಮುಖ್ಯಮಂತ್ರಿಯವರು ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಏಕೆಂದರೆ ಅವರ ಅಧ್ಯಕ್ಷತೆಯಲ್ಲಿ ಆದಂತಹ ಸಭೆಯಲ್ಲಿ ತೀರ್ಮಾನವಾಗಿರುವುದು. ಒಬ್ಬ ಕಂಟ್ರ್ಯಾಕ್ಟರ್ 550 ಕೋಟಿ ರೂಪಾಯಿಗೆ ಮಾಡುತ್ತೇನೆ, 876 ಕೋಟಿ ರೂಪಾಯಿಗೆ ಮಾಡುತ್ತೇನೆಂದು ಹೇಳಿದರೂ

ಕೂಡ ಅವನ್ನೆಲ್ಲ ಬದಿಗೊತ್ತಿ 1,032 ಕೋಟಿ ರೂಪಾಯಿಗೆ ಟೆಂಡರ್ ಅಪ್ರೂವ್ ಮಾಡುತ್ತಾರೆ ಎಂದರೆ ಮಾನ್ಯ ಅಧ್ಯಕ್ಷರೆ ತಾವು ದಯವಿಟ್ಟು ಅರ್ಥಮಾಡಿಕೊಳ್ಳಬೇಕು. ಯಾವ ಮಟ್ಟದಲ್ಲಿ ಈ ರಾಜ್ಯದ ಜನತೆಗೆ ಅನ್ಯಾಯವಾಗುತ್ತದೆ ಎಂಬುದನ್ನು ನೋಡಬೇಕು. ಇದನ್ನು ಮಾಡುವಂತಹ ಔಚಿತ್ಯವಾದರೂ ಏನಿದೆ? ದಯಮಾಡಿ ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಬೇಕು.

ವಿದ್ಯುತ್ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ವಿದ್ಯುತ್ ಬಗ್ಗೆ ಏನಾಗಿದೆ ಎಂದರೆ ಬಹುಶ: ನೀವು ಹಳ್ಳಿ ಕಡೆ ಹೋಗುವುದಿಲ್ಲ. ನೀವು Speaker ಆಗಿಬಿಟ್ಟಿದ್ದೀರಿ, ನಿಮ್ಮನ್ನು ಪೊಲೀಸರು ಸುತ್ತುವರೆದು ಬಿಡುತ್ತಾರೆ. ಆದರೆ ನಮ್ಮನ್ನು ಜನ ಹಳ್ಳಿಯಲ್ಲಿ ಬಿಡುವುದಿಲ್ಲ. ಮಾನ್ಯ ಶಿವಲಿಂಗೇಗೌಡರು ಒಳ್ಳೆಯ ಭಾಷೆಯಲ್ಲಿ ಹೇಳಿದ್ದಾರೆ, ಊಟ ಮಾಡುತ್ತಿದ್ದರೂ ಕೂಡ ಕರೆಂಟ್ ಹೋಯಿತು ಎಂದು ಬಯ್ಯುತ್ತಾರೆ. ನಿಮಗೆ ನಾಟಕಕ್ಕೆ ಹೋಗುವ ಅಭ್ಯಾಸವಿಲ್ಲ. ನಾವೆಲ್ಲ ರಾತ್ರಿ ಹೊತ್ತು ನಾಟಕಕ್ಕೆ ಹೋಗಬೇಕು. ನಾನು ರಾತ್ರಿ ಸಿಹೆಚ್ ಪುರಕ್ಕೆ ನಾಟಕಕ್ಕೆ ಹೋಗಿ ಬೆಳಿಗ್ಗೆ ಬಂದೆನು. ಆ ನಾಟಕದಲ್ಲಿ ಅದರ ಪಾತ್ರಧಾರಿಗಳು ಹೇಗೆ ಬಯ್ಯುತ್ತಾರೆ ಎಂದರೆ ಈ ಜನ್ಮದಲ್ಲಿ ಎಂಎಲ್ಎ ಗಿರಿ ಬೇಡ, ಅಂತಹ ಹೊಲಸಾಗಿ ಇವತ್ತು ಬಯ್ಯುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ನಮಗೆ ಸಂಶಯ ಇಷ್ಟೇ, 2006–07ರಲ್ಲಿ 14 ಕೋಟಿ ರೂಪಾಯಿಯ ವಿದ್ಯುತ್ ಖರೀದಿ ಮಾಡುತ್ತಾರೆ. 2007–08ರಲ್ಲಿ 28 ಕೋಟಿ 35 ಲಕ್ಷ ರೂಪಾಯಿ ವಿದ್ಯುತ್ ಖರೀದಿ ಮಾಡುತ್ತಾರೆ. ಆಗ ಸಾಕಷ್ಟು ಕರೆಂಟ್ ಇರುತ್ತಿತ್ತು. ಈ ಬಾರಿ 1,312 ಕೋಟಿ ರೂಪಾಯಿಗಳಿಗೆ ಖರೀದಿ ಆಗಿದೆ. 2009–10ರಲ್ಲಿ 790 ಕೋಟಿ ರೂಪಾಯಿಗಳಿಗೆ ವಿದ್ಯುಚ್ಛಕ್ತಿಯನ್ನು ಖರೀದಿ ಮಾಡಿದ್ದಾರೆ. ಇದು ಎಲ್ಲಿಗೆ ಹೋಯಿತು? ಈ ಸಂಶಯವಿದೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, highest amountನಲ್ಲಿ ಖರೀದಿ ಆಗಿದೆಯಾ ಅಥವಾ ಬರೀ payment ಆಗಿದೆಯಾ ಎಂಬ ಸಂಶಯ ನನಗೆ ಮೂಡುತ್ತಿದೆ. ಮಾನ್ಯ ಅಧ್ಯಕ್ಷರೆ, ಈ ಕರೆಂಟ್ ಬಗ್ಗೆ ಬಹಳ ಮುಖ್ಯವಾಗಿ ಹೇಳಬೇಕೆಂದರೆ ಸದನದಲ್ಲಿ ಒಂದು ತೀರ್ಮಾನವನ್ನು ಮಾಡಬೇಕು. ಮಕ್ಕಳು examಗೆ ಏನು

ಕಟ್ಟಿದ್ದಾರಲ್ಲಾ, ಅವರ ಅಪ್ಪ ಅಮ್ಮಂದಿರು ಕಷ್ಟಪಟ್ಟು donation ಕೊಡುತ್ತಾರೆ, fees ಕಟ್ಟುತ್ತಾರೆ. ಅವರು ಬೆಳಿಗ್ಗೆಯಿಂದ ಸಂಜೆಯವರೆಗೂ ಪಾಠ ಮಾಡಿಸಿಕೊಂಡು ಓದುತ್ತಾರೆ, ರಾತ್ರಿ study ಮಾಡಿ ಬೆಳಿಗ್ಗೆ exam ಬರೆಯುವುದಕ್ಕೆ ಆಗುವುದಿಲ್ಲವೆಂದರೆ ಆ ಮಕ್ಕಳ ಭವಿಷ್ಯ ಏನು ಆಗಬೇಕು? ನೀವು ಸರ್ಕಾರಕ್ಕೆ ಒಂದು ಆದೇಶವನ್ನು ಕೊಡಬೇಕಾಗುತ್ತದೆ. ಈ ಬಾರಿ ಯಾರ್‍ಯಾರು examಗೆ ಕಟ್ಟಿದ್ದಾರೆ, ಅವರನ್ನೆಲ್ಲಾ ಸಾಮೂಹಿಕವಾಗಿ ಪಾಸು ಮಾಡಿ, ಇಲ್ಲವೆಂದರೆ ನಾವು ನೋಡುತ್ತಿದ್ದೇವೆ, ಕಡಿಮೆ percentage ತೆಗೆದುಕೊಂಡಿರುವಂಥ ಮಕ್ಕಳನ್ನು ಅಪ್ಪ-ಅಮ್ಮಂದಿರು ಬಿಡುವುದಿಲ್ಲ. ಅವರನ್ನು ಓದಿ ಓದಿ ಎಂದು ಬೆಳಿಗ್ಗೆಯಿಂದ ಸಂಜೆಯವರೆಗೂ ಹೇಳುತ್ತಿರುತ್ತಾರೆ. ಹಾಗಾಗಿ ಈ ಸಂದರ್ಭದಲ್ಲಿ ಬಹುತೇಕ ಮಕ್ಕಳು ಕಡಿಮೆ marks ತೆಗೆದುಕೊಂಡು suicide ಮಾಡಿಕೊಂಡಿರುವ ವಿಚಾರವನ್ನು ಪ್ರತಿ ದಿವಸ ಪೇಪರ್‌ಗಳಲ್ಲಿ ನೋಡುತ್ತಿದ್ದೇವೆ. ನಮ್ಮ ಸರ್ಕಾರದಿಂದ ಈ ಬಾರಿ ಸುಮಾರು ನೂರಾರು ಮಕ್ಕಳು ಹೋಗಿ ಬಿಡುತ್ತಾರೆ. ತಾವು ದಯಮಾಡಿ ಸರ್ಕಾರಕ್ಕೆ ಒಂದು ಆದೇಶವನ್ನು ಕೊಡಬೇಕಾಗುತ್ತದೆ. ಯಾವ ಮಕ್ಕಳು examಗೆ ಕಟ್ಟಿದ್ದಾರೆ, ಅವರನ್ನೆಲ್ಲಾ ಪಾಸು ಮಾಡಬೇಕೆಂದು ನಮ್ಮ ಚಿಂತನೆ ಎಂಬುದನ್ನು ಹೇಳಬೇಕಾಗುತ್ತದೆ. ಇನ್ನು ಮುಖ್ಯವಾಗಿ ಕಲ್ಲಿದ್ದಲಿನ ಬಗ್ಗೆ ನಿನ್ನೆ ಬಹಳ ಚರ್ಚೆಯಾಗಿದೆ.

ಅಧ್ಯಕ್ಷರು : ತಾವು ಬೇಗ ಮುಗಿಸಿ. ಬೇರೆಯವರು ಮಾತನಾಡುವುದಕ್ಕೆ ಅವಕಾಶವಾಗುವುದಿಲ್ಲ, ಇನ್ನೂ ನಿಮ್ಮ ನಾಯಕರು ಮಾತನಾಡಬೇಕು.

ಶ್ರೀ ಎಂ.ಟಿ. ಕೃಷ್ಣಪ್ಪ : ಎರಡು ನಿಮಿಷ, ಅವರು ಮಾತನಾಡಲಿ. ನಾನು ಏಕೆ ಇಲ್ಲಿ ಹೇಳಬಯಸುತ್ತೇನೆಂದರೆ, problem ಏನು ಎಂದರೆ, ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಯವರು 500 ಕೋಟಿ ರೂಪಾಯಿಗಳನ್ನು ಉಳಿಸಿದ್ದೇನೆಂದು ಹೇಳಿದರು.

ಅಧ್ಯಕ್ಷರು : ಆ ಬಗ್ಗೆ ಮಾನ್ಯ ಶಿವಲಿಂಗೇಗೌಡರು ಬಹಳ detail ಆಗಿ ಮಾತನಾಡಿದ್ದಾರೆ.

ಶ್ರೀ ಎಂ.ಟಿ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಎರಡು ನಿಮಿಷ. ಒಂದು ಕಂಪನಿಯವರು ಮೈನ್ಸ್ ಬಗ್ಗೆ ಯಾವಾಗಲೂ price ಅನ್ನು announce ಮಾಡುತ್ತಾರೆ. 2009ರಲ್ಲಿ price announce ಮಾಡಿದ್ದಾರೆ. ಒಂದು ಟನ್ 3,850 ರೂಪಾಯಿಗಳಿಗೆ ಸಿಗುತ್ತದೆಂದು ಹೇಳಿದ್ದಾರೆ. ನೀವು 7,600 ರೂಪಾಯಿಗಳನ್ನು ಕೊಟ್ಟಿದ್ದೀರಿ. ನೀವು ಎರಡು ವರ್ಷಗಳಿಗೆ ಆಗುವಷ್ಟು ಏಕೆ stock ಮಾಡಿದ್ದೀರಿ? ಈ ರೀತಿ stock ಮಾಡುವ ಅವಶ್ಯಕತೆ ಇತ್ತಾ? ಇದರಿಂದ loss ಆಗಿದ್ದು ಎಷ್ಟು? ಇದು ನಮ್ಮ ನಿಮ್ಮ ಹಣವಲ್ಲ. ಇದು ಹಳ್ಳಿಯ ಬಡ ಬೋರೇಗೌಡನ ದುಡ್ಡು, ಅವರು ನಮ್ಮನ್ನು, ನಿಮ್ಮನ್ನು ಕಾಯುವುದಕ್ಕೆ ಕಳುಹಿಸಿದ್ದಾರೆಯೇ ಹೊರತು, ಈ ರೀತಿ ದುಂದುವೆಚ್ಚ ಮಾಡುವುದಕ್ಕಲ್ಲ, ಇಲ್ಲಿ ದುಂದುವೆಚ್ಚವಾಗಿದೆ. ದುಡ್ಡು ಹೊಡೆದಿದ್ದಾರೆ, corruption ಮಾಡಿದ್ದಾರೆಂದು ಹೇಳುವುದಕ್ಕೆ ಬಯಸುವುದಿಲ್ಲ. ಇಲ್ಲಿ ದುಂದುವೆಚ್ಚವಾಗಿದೆ. ನೀವು advance ಆಗಿ ಏಕೆ ಖರೀದಿ ಮಾಡಿದ್ದೀರಿ? ನೀವು 3,600 ರೂಪಾಯಿಗಳಿಗೆ rate reduce ಆದಮೇಲೆ ಆ rateಗೆ ನೀವು ಖರೀದಿ ಮಾಡಬಹುದಿತ್ತಲ್ಲಾ? ನೀವು ಯಾವುದನ್ನೇ ಆಗಲಿ ಅದು ದೇಶಿಯದ್ದಾಗಲಿ, ಅಥವಾ import ಮಾಡಿಕೊಳ್ಳಿ, that is secondary. ನೀವು advance ಆಗಿ ಕಲ್ಲಿದ್ದಲ್ಲನ್ನು ಖರೀದಿ ಮಾಡಿ ಇಟ್ಟಿದ್ದೀರಿ. ನಮ್ಮ ತುಮಕೂರು ಕ್ಷೇತ್ರದ ಶಿವಣ್ಣನವರು ಇಲ್ಲಿ ಇಲ್ಲ, ಅವರು ರೇವಣ್ಣನವರು ಹೇಳಿದ್ದು 480, 500 ಕೋಟಿ ರೂಪಾಯಿಗಳೆಂದು ಹೇಳುತ್ತಾರೆ. ಇಲ್ಲಿ ಇದು ಎಷ್ಟು ಆಗುತ್ತದೆ? ಸರ್ಕಾರದ ಹಣ 480 ಕೋಟಿ ರೂಪಾಯಿಗಳು ಲಾಸ್ ಆಗಿದೆ. ಇದಕ್ಕೆ ಯಾರು ಹೊಣೆ? ಈ ಸರ್ಕಾರ ಹೊಣೆಯಾಗುತ್ತದಾ? ಮಾನ್ಯ ಮುಖ್ಯಮಂತ್ರಿಯವರು ಹೊಣೆಯಾಗುತ್ತಾರಾ? ಇಂಧನ ಸಚಿವರಾಗಿದ್ದು ಮಾನ್ಯ ಈಶ್ವರಪ್ಪನವರು ರಾಜೀನಾಮೆಯನ್ನು ಕೊಟ್ಟು ಹೊರಟು ಹೋದರು. ಈ ಜವಾಬ್ದಾರಿಯನ್ನು ಹೊರುವವರು ಯಾರು? ಹಾಗಾಗಿ ನಮ್ಮ ರಾಜ್ಯದ ಹಣ ಇವತ್ತು ಲಾಸ್ ಆಗಿದೆ. ಇದರ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಮಾನ್ಯ ರೇವಣ್ಣವರ ಬಗ್ಗೆ ನಮ್ಮ ಆಡಳಿತ ಪಕ್ಷದ ಮಿತ್ರರು ಹೇಳುತ್ತಾರೆ. ಇದು ನಮ್ಮೆಲ್ಲರ ಜಬಾಬ್ದಾರಿಯಾಗಿದೆ.

ಸರ್ಕಾರದ ಹಣ ಎಲ್ಲೇ ಪೋಲಾದರೂ ಅದನ್ನು ಉಳಿಸುವಂಥ ಜವಾಬ್ದಾರಿ ಆಡಳಿತ ಮತ್ತು ವಿರೋಧ ಪಕ್ಷಗಳೆಲ್ಲರ ಜವಾಬ್ದಾರಿ ಇದೆ, ಏಕಾಏಕಿ 485 ಕೋಟಿ ರೂಪಾಯಿಗಳು ಲಾಸ್ ಆಗುವುದಾದರೆ ಏನು ಅರ್ಥ? ಹಾಗಾಗಿ Governor's Speech ಏನು ಇದೆ, ಇದರಲ್ಲಿ ಯಾವುದೇ ವಿಧವಾದ ಚಿಂತನೆ ಮಾಡುವಂಥ ತಿರುಳಿಲ್ಲ. ಇದು ಕೇವಲ ಬರೆದುಕೊಟ್ಟಂಥ ಒಂದು statement ಆಗಿದೆ. ನಾವು ಯಾವಾಗಲೂ ನಮ್ಮ ಭಾಷೆಯಲ್ಲಿ ಪ್ರಗತಿ, ಪ್ರಗತಿ ಎಂದು ಹೇಳುತ್ತೇವೆ. ಇಲ್ಲಿ ಏನಾಗಿದೆ? ಇದರಲ್ಲಿ Agriculture development ಬಗ್ಗೆ ಇದೆಯಾ? Horticulture ಬಗ್ಗೆ ಇದೆಯಾ? ಮತ್ತೊಂದು ವಿಷಯವೇನೆಂದರೆ 1,72,000 ಎಕರೆ agriculture ಭೂಮಿಯನ್ನು acquire ಮಾಡುತ್ತಿದ್ದಾರೆ. ತಾವು ಈ ವಿಷಯವನ್ನು ಪೇಪರ್‌ಗಳಲ್ಲಿ ಓದಿದ್ದೀರಿ. ನನ್ನ ಚಿಂತನೆ ಇಷ್ಟೆ, ತಾವು ಇದನ್ನು ಏಕೆ acquire ಮಾಡುತ್ತಿದ್ದೀರಿ? ತುಮಕೂರು ಜಿಲ್ಲೆಯಲ್ಲೂ ಮಾಡಿದ್ದೀರಿ. ಯಾವ industryಗಳನ್ನು ಹಾಕುತ್ತೀರಿ? ಯಾವ ರೈತನ ಮಗನಿಗೆ ಕೆಲಸ ಕೊಡುತ್ತೀರಿ? ಮಕ್ಕಳಿಗೆ ಓದುವುದಕ್ಕೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಆಗುವುದಿಲ್ಲವೆಂದರೆ, industryಗಳಿಗೆ ಹೇಗೆ ಕೊಡಲು ಸಾಧ್ಯ? ದಯಮಾಡಿ ತಾವು ಜಮೀನನ್ನು acquisition ಮಾಡಿಕೊಳ್ಳುವುದನ್ನು ನಿಲ್ಲಿಸಬೇಕು. ನಮ್ಮ ಗುಬ್ಬಿ ತಾಲ್ಲೂಕಿನಲ್ಲಿ acquire ಮಾಡಿದ್ದಾರೆ.

ಅಧ್ಯಕ್ಷರು: ತಾವು ಮುಕ್ತಾಯಗೊಳಿಸಿ, ಮಾತನಾಡುವವರು ಇನ್ನೂ ಬಹಳ ಜನರು ಇದ್ದಾರೆ.

ಶ್ರೀ ಎಂ.ಟಿ. ಕೃಷ್ಣಪ್ಪ: ತಾವು ಮಾತನಾಡುವುದಕ್ಕೆ ಕೊಡುವುದಿಲ್ಲವೆಂದರೆ reject ಮಾಡಿ, ನಾವು ಸುಮ್ಮನೆ ಎದ್ದು ಹೋಗುತ್ತೇವೆ. ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಲಿಲ್ಲವೆಂದರೆ ಏನು ಅರ್ಥ?

ಅಧ್ಯಕ್ಷರು: ನೀವು ಮಾತನಾಡಬೇಕೆಂದರೆ ಇನ್ನು ಮಾತನಾಡಲು ಸಾಕಷ್ಟು ಜನರು ಇದ್ದಾರೆ.

ಶ್ರೀ ಎಂ.ಟಿ.ಕೃಷ್ಣಪ್ಪ : ಈ Governor's Speechನಲ್ಲಿ ಯಾವುದೇ ತಿರುಳಿಲ್ಲ. ಈ ರಾಜ್ಯದ development ಬಗ್ಗೆ ಗಮನ ಹರಿಸಿಲ್ಲ. ಕೇವಲ

ಅಭಿವೃದ್ಧಿಯೇ ನಮ್ಮ ಮಂತ್ರವೆನ್ನುವುದು big issue ಇದರಲ್ಲಿ ಅಡಗಿದೆಯೆಂದು ಹೇಳಿ, ಇವತ್ತಿನ Governor's Speech ಬಗ್ಗೆ ಎರಡು ಮಾತನ್ನು ಹೇಳಿದ್ದೇನೆ. ತಾವು ಕುಳಿತುಕೊಳ್ಳಿ ಎಂದು ಪದೇ ಪದೇ ಹೇಳುವಂಥದ್ದು ಏನು ಆಗಿದೆಯೆಂದರೆ, ಊಟಕ್ಕೆ ತಟ್ಟೆಯನ್ನು ಕೊಟ್ಟು ಕೈ ಹಿಡಿದುಕೊಂಡು ಬಿಸಿ ನೀರಿನಲ್ಲಿ ಕೈ ತೊಳೆದುಕೊಳ್ಳಿ ಎಂದು ಹೇಳಿದ ಹಾಗೆ ಆಗಿದೆ. ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ಸರ್ವಜ್ಞನಗರ) : ಮಾನ್ಯ ಅಧ್ಯಕ್ಷರೆ, ನನಗೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಂದಿಸುತ್ತೇನೆ. ಈಗಾಗಲೇ ವಿರೋಧಪಕ್ಷದ ನಾಯಕರು ಹಾಗೂ ಶ್ರೀ ಶ್ರೀನಿವಾಸ ಪ್ರಸಾದ್‌ರವರು ಸವಿಸ್ತಾರವಾಗಿ ಎಲ್ಲಾ ವಿವರಗಳನ್ನು ಹೇಳಿದ್ದಾರೆ. ನಾನು ಬೆಂಗಳೂರು ನಗರದ ವಿಚಾರವಾಗಿ ಒಂದೆರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ನಮ್ಮ ರಾಜ್ಯದ ರಾಜಧಾನಿ ಬೆಂಗಳೂರು ನಗರವಾಗಿದ್ದು, ಇಲ್ಲಿ ಸಾಕಷ್ಟು ಸಮಸ್ಯೆಗಳು ಇವೆ. ಅದರಲ್ಲೂ ವಿದ್ಯುತ್ ಸಮಸ್ಯೆ ದೊಡ್ಡ ಸಮಸ್ಯೆಯಾಗಿದೆ. ಇವತ್ತು ಏನಾಗಿದೆಯೆಂದರೆ ಗ್ರಾಮಾಂತರ ಪ್ರದೇಶದಲ್ಲಿ electricity ಯಿಂದ ಎಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ, ಅದಕ್ಕಿಂತಲೂ ಹೆಚ್ಚಿಗೆ ಬೆಂಗಳೂರಿನಿನಲ್ಲಿರುವ ಬಡವರು, ಇಡೀ ರಾಜ್ಯದ ಮೂಲೆ ಮೂಲೆಗಳಿಂದಲೂ ಬಂದಿರುವವರು ಅನುಭವಿಸುತ್ತಿದ್ದಾರೆ.. ಇವತ್ತು electricity ಒಂದು ಸಾರಿ ಹೋದರೆ ನಮ್ಮ drinking waterಗೆ ಏನಾಗುತ್ತಿದೆಯೆಂದರೆ pumping stationನಲ್ಲಿ electricity ಇರುವುದಿಲ್ಲ. ನಿನ್ನೆ ಬೆಳಿಗ್ಗೆ ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಮೀಟಿಂಗ್‌ಗೆ ಕರೆಸಿದ್ದರು. ಅವರ ಇಲಾಖೆಯ ವಿಚಾರದಲ್ಲಿ ಅವರು ಆದಷ್ಟು ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಆದರೆ ಮಾನ್ಯ ಮುಖ್ಯಮಂತ್ರಿಯವರ ಇಲಾಖೆಯಲ್ಲಿ ಈ electricity ಬರುತ್ತದೆ. ಇವತ್ತು ಏನಾಗಿದೆಯೆಂದರೆ pumping stationಗಳಿಗೆ electricity cut ಮಾಡುವಾಗ ನಮ್ಮ ನಮ್ಮ ಕ್ಷೇತ್ರದಲ್ಲಿ, ಬೆಂಗಳೂರಿನ ಕೆಲವು ಭಾಗಗಳಲ್ಲಿ ವಾರಕ್ಕೆ ಒಂದು ಸಾರಿ, 15 ದಿವಸಗಳಿಗೆ

ಒಂದು ಸಾರಿ ನೀರನ್ನು ಕೊಡುತ್ತಾರೆ. ಇದರಿಂದ ಬಡವರಿಗೆ ನೀರನ್ನು stock ಮಾಡುವುದಕ್ಕೆ ಆಗುವುದಿಲ್ಲ. ಅವರಿಗೆ ಸಂಪ್ ಇರುವುದಿಲ್ಲ, ಆದ್ದರಿಂದ ಅವರಿಗೆ ನೀರನ್ನು store ಮಾಡುವುದಕ್ಕೆ ಆಗುವುದಿಲ್ಲ. ಅದು ಅರ್ಧ ಗಂಟೆ, ಒಂದು ಗಂಟೆ ಕಾಲ ನೀರು ಬರುತ್ತದೆ. ಅದು ಸಹಿತ electricity ನಿಂತು ಹೋದರೆ ಸುಮಾರು ಒಂದು ತಿಂಗಳಿಗೆ ಒಂದು ಸಾರಿ, ಎರಡು ಸಾರಿ ನೀರು ಬರುವಂಥ ಪರಿಸ್ಥಿತಿಯಾಗಿದೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಯವರು Electricity Departmentನವರಿಗೆ ಆದೇಶವನ್ನು ಕೊಡಬೇಕು. ತಾವು pumping stationಗೆ electricity cut ಮಾಡಬಾರದು, ಮತ್ತೆ ನಾನು ಮಾನ್ಯ ಸಚಿವರನ್ನು ಪ್ರತಿಯೊಂದು ಜಾಗದಲ್ಲೂ ಜನರೇಟರ್ ಅನ್ನು ಇಡಬೇಕಾಗುತ್ತದೆಂದು ಕೇಳಿಕೊಂಡಿದ್ದೆ, ಮತ್ತೆ Bangalore water supplyಗೆ ಒಂದು captive power, ಅದು ಥರ್ಮಲ್ ಇರಬಹುದು, ಅಥವಾ ನಾಳೆ ಗ್ಯಾಸ್ ಇರಬಹುದು, ಆದ್ದರಿಂದ ತಾವು captive power plant ಅನ್ನು ಒಂದನ್ನು ಇಡಬೇಕಾಗುತ್ತದೆ, ಏಕೆಂದರೆ ನಾವು KEBಯನ್ನು depend ಆಗುವುದಕ್ಕೆ ಆಗುವುದಿಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ಮುಖ್ಯಮಂತ್ರಿಯವರು ಕಾವೇರಿ 4ನೇ ಹಂತದ 2ನೇ ಘಟ್ಟದ ನೀರನ್ನು 500 ಬಿಲಿಯನ್ ಲೀಟರ್ಸ್ per day ತರುವಂಥ ಯೋಜನೆಗೆ ಶಿಲಾನ್ಯಾಸ ಮಾಡಿದ್ದಾರೆ. ಬೆಂಗಳೂರು ನಗರನಲ್ಲಿ ನೀರಿನ ಕೊರತೆ ಇರುವಂಥದ್ದು ನಿಜ. ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವಂಥ ಸಂದರ್ಭದಲ್ಲೂ ಹೇಳಿದ್ದಾರೆ. ಮಾಜಿ ಸಚಿವರು ಆದಂಥ ಸನ್ಮಾನ್ಯ ಜಾರ್ಜ್‌ರವರು ಏನು ಹೇಳಿದ್ದಾರೆ. ಅದು ಒಂದು captive power plant ಹಾಕಬೇಕೆಂದು ಏನು ಪ್ರಸ್ತಾಪ ಮಾಡಿದ್ದಾರೆ. ಇವತ್ತು ಬೆಳಿಗ್ಗೆ "ಅದಕ್ಕೆ ಆಗುವಂಥ ವೆಚ್ಚವನ್ನು ನಾನು ಕೊಡುತ್ತೇನೆ. BWSSB ಸ್ವಂತವಾಗಿ captive power plant ಹಾಕಿಕೊಳ್ಳುವ ಪ್ರಯತ್ನವನ್ನು ಮಾಡಿ" ಎಂದು ಹೇಳಿ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಹಾಗಾಗಿ ತಾವು ಏನು ಹೇಳಿದ್ದೀರಿ, ತಮ್ಮ ಸಲಹೆ ಏನು ಇದೆ, ನಿನ್ನೆ ಕೂಡ ಸುದೀರ್ಘವಾಗಿ ನೀರಿನ ಸಮಸ್ಯೆ ಬಗ್ಗೆ

5.40 ಪಿ.ಎಂ.

ಮಾತನಾಡಿದ್ದಾರೆ. ತಾವು ಕೂಡ Urban Development Minister ಆಗಿ ಕೆಲಸ ಮಾಡಿದ್ದೀರಿ. ಈ ಸಮಸ್ಯೆ ವಿಸ್ತಾರವಾಗಿದೆ. ನಾವು ಆದರ ಬಗ್ಗೆ ವಿಶೇಷವಾದ ಗಮನವನ್ನು ಕೊಟ್ಟಿದ್ದೇವೆ. ಇದರ ಕೆಲಸ 2002ರಲ್ಲಿ ಪ್ರಾರಂಭವಾದರೂ ಕೂಡ ಇಲ್ಲಿಯವರೆಗೂ ಅದಕ್ಕೆ ಚಾಲನೆ ಸಿಕ್ಕಿರಲಿಲ್ಲ. ಕಳೆದ 15 ತಿಂಗಳ ನಿರಂತರ ಪ್ರಯತ್ನದಿಂದ ಇವತ್ತು ಬೆಂಗಳೂರು ನಗರಕ್ಕೆ 850 MLD ನೀರು ಬರುತ್ತಿದೆ, ಅದರ ಜೊತೆಯಲ್ಲಿ 500 MLD ನೀರು ಬರುವಂಥದ್ದು ಅಂದರೆ ಶೇ. 60 ರಷ್ಟು ಹೆಚ್ಚಿಗೆ ನೀರನ್ನು ತರುವಂಥ ಯೋಜನೆಗೆ ಇವತ್ತು ನಾವು ಶಿಲಾನ್ಯಾಸವನ್ನು ಮಾಡಿದ್ದೇವೆ. We are trying our level best to supply the water. ಕೆಲವು ಕಡೆ ಜನರೇಟರ್‌ಗಳನ್ನು ಅಳವಡಿಸಬೇಕೆಂದು ತಾವು ಹೇಳಿದಿರಿ. ಖಂಡಿತವಾಗಿಯೂ ಅದರ ಕಡೆ ಗಮನ ಕೊಡುತ್ತೇವೆ.

ಶ್ರೀ ಕೆ.ಜೆ. ಜಾರ್ಜ್: ಧನ್ಯವಾದಗಳು. ಈಗ ನಾವು ನಮ್ಮ ಎಲ್ಲ ಜನರಿಗೆ ಆಶ್ವಾಸನೆ ಕೊಡುತ್ತಿರುವುದೇನೆಂದರೆ, ಕಾವೇರಿ 4ನೇ ಸ್ಟೇಜ್, 2ನೇ ಫೇಸ್ ಬಂದಾಗ ನಿಮಗೆ ನೀರು ಕೊಡುತ್ತೇವೆ ಎಂದು ಹೇಳುತ್ತಿದ್ದೇವೆ. ಆದ್ದರಿಂದ, ದಯವಿಟ್ಟು ಆದಷ್ಟು ಬೇಗನೆ, ತಾವು ಮಂತ್ರಿಗಳಾಗಿರುವಾಗಲೇ, ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿರುವಾಗಲೇ ಅದನ್ನು ಉದ್ಘಾಟನೆ ಮಾಡುವಂಥ ಕೆಲಸವನ್ನು ಮಾಡಿ.

ಮತ್ತೊಂದು ವಿಷಯವೆಂದರೆ, traffic problem. ಈಗ ಮೆಟ್ರೋ ಬರುತ್ತಿದೆ. ಅದು trunk lineನಲ್ಲಿ ಮಾತ್ರ ಹೋಗುತ್ತದೆ. ಅದಕ್ಕೆ next expansion plan ಯಾವುದು ಎನ್ನುವ ಬಗ್ಗೆ ಈಗಲೇ ತಾವು plan ಮಾಡಬೇಕಾಗುತ್ತದೆ. ಮೆಟ್ರೋ ಸ್ಟೇಷನ್‌ಗಳಿಗೆ feeder line ಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಬೈಯಪ್ಪನಹಳ್ಳಿಯಲ್ಲಿ ಮೆಟ್ರೋ ಸ್ಟೇಷನ್ ಬರುತ್ತಿದೆ. ಹಾಗಾಗಿ ಕಾಕ್ಸ್‌ಟೌನ್, ಬಾಣಸವಾಡಿ, ದೇವರಜೀವನಹಳ್ಳಿ, ಕಾಡುಗೊಂಡನಹಳ್ಳಿ ಈ ಎಲ್ಲ ಕಡೆಗಳಿಂದಲೂ ಬೈಯಪ್ಪನಹಳ್ಳಿಗೆ ಹೋಗಬೇಕಾಗುತ್ತದೆ. ಬೈಯಪ್ಪನಹಳ್ಳಿಗೆ ಹೋಗಲು ಮೋನೋ ರೈಲಿನ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಏಕೆಂದರೆ, ಮೋನೋ ರೈಲು ಸಣ್ಣ ಪಿಲ್ಲರಿನ ಮೇಲೆ ಬರುತ್ತದೆ. ಸಿಂಗಪೂರಿನಲ್ಲಿ, ಆಸ್ಟ್ರೇಲಿಯಾದಲ್ಲಿ ಈ ಎಲ್ಲ ಕಡೆಗಳಲ್ಲಿ

ಆ ರೀತಿ ಇದೆ. ದಯವಿಟ್ಟು ಮೋನೋ ರೈಲನ್ನು ಮೆಟ್ರೋಗೆ feeder lineನ ವ್ಯವಸ್ಥೆಯನ್ನು ತಾವು ಆದಷ್ಟು ಬೇಗನೆ ಮಾಡಬೇಕು. ಮೋನೋ ರೈಲಿಗೆ ಸಾಕಷ್ಟು ಖಾಸಗಿಯವರು ಬಂಡವಾಳ ಹಾಕಲು ಸಿದ್ಧರಿದ್ದಾರೆ. ಅದರಿಂದ ಜನರಿಗೆ ತುಂಬ ಪ್ರಯೋಜನವಾಗುತ್ತದೆ. ಆದ್ದರಿಂದ ಮುಖ್ಯಮಂತ್ರಿಯವರು ದಯವಿಟ್ಟು ABIDe ಮಾಡಿದರೆ ಒಳ್ಳೆಯದು. ಈಗ ಏನಾಗಿದೆ ಎಂದರೆ, ABIDeನಲ್ಲಿ ಸಾಕಷ್ಟು ಒಳ್ಳೆಯವರು ಇದ್ದಾರೆ. ಆದರೆ ಅವರು ಒಂದು ದಿವಸವೂ ಶಾಸಕರಾದ ನಮ್ಮನ್ನು ಕರೆದು ನಮ್ಮ ಸಲಹೆಯನ್ನು ಕೇಳಲಿಲ್ಲ. ನಾವು ದಿನನಿತ್ಯ ಜನರೊಂದಿಗೆ ಸಂಪರ್ಕದಲ್ಲಿರುತ್ತೇವೆ. ಹಾಗಾಗಿ, ಜನರ ಕಷ್ಟ ಏನು ಎನ್ನುವುದು ನಮಗೆ ಗೊತ್ತಿದೆ. ಆದರೆ ABIDeನಲ್ಲಿ ದೊಡ್ಡದೊಡ್ಡ ಜನರಿದ್ದಾರೆ. ಆದರೆ ಅವರಿಗೆ ಜನಸಾಮಾನ್ಯರ ಸಂಪರ್ಕ ಇರುವುದಿಲ್ಲ. ಆದ್ದರಿಂದ, ABIDeನವರು ದಯವಿಟ್ಟು ಆಗಾಗ ಶಾಸಕರ ಸಲಹೆಯನ್ನು ಪಡೆಯಬೇಕು ಎಂದು ತಾವು ಅವರಿಗೆ ಆದೇಶ ಕೊಡಬೇಕು ಎಂದು ಮುಖ್ಯಮಂತ್ರಿಗಳನ್ನು ಕೇಳಿಕೊಳುತ್ತಿದ್ದೇನೆ.

ಮತ್ತೊಂದು ವಿಚಾರವೆಂದರೆ garbage. ಇದರ ಬಗ್ಗೆ ನಮ್ಮ ಮುಖ್ಯಮಂತ್ರಿಗಳೂ ಸಹ ಒಂದು ಸಾರಿ ಹೇಳಿದ್ದಾರೆ. ಇದೊಂದು ದೊಡ್ಡ ಮಾಫಿಯಾ. Garbage clear ಮಾಡಲು 4-5 ವರ್ಷಗಳ ಹಿಂದೆಯೇ contract ತೆಗೆದುಕೊಂಡಿದ್ದಾರೆ, ಈ ಸರ್ಕಾರ ಬರುವುದಕ್ಕೆ ಮೊದಲೇ ಅದು ಆಗಿದೆ. ಆದರೆ ಯಾವುದೇ ರೀತಿ ಕೆಲಸ ಮಾಡುತ್ತಿಲ್ಲ. ದಿನನಿತ್ಯವೂ ಪೇಪರ್‌ಗಳಲ್ಲಿ ಎಲ್ಲಿ ನೋಡಿದರೂ ಸಹ garbage clear ಮಾಡಿಲ್ಲ ಎಂದು ಹೇಳಿ ಅದರ ಫೋಟೋಗಳು ಬರುತ್ತಿರುತ್ತವೆ. ಶಾಸಕರಾದ ನೀವು ಏನು ಮಾಡುತ್ತಿದ್ದೀರಿ ಎಂದು ಜನ ನಮ್ಮನ್ನು ಬಯ್ಯುತ್ತಿದ್ದಾರೆ. ಆದರೆ ಈ ಕಂಟ್ರಾಕ್ಟರ್‌ಗಳು ಯಾರ ಮಾತನ್ನೂ ಕೇಳುತ್ತಿಲ್ಲ. ಈ ತಿಂಗಳ 31ನೇ ತಾರೀಖು ಅವರ contract ಮುಗಿಯುತ್ತದೆ. ಆದ್ದರಿಂದ ಇದನ್ನು ತಾವು ಸ್ಥಳೀಯ ಜನರಿಗೆ, ಅದರಲ್ಲೂ ಸ್ತ್ರೀಶಕ್ತಿ ಗುಂಪುಗಳಿಗೆ ward wise contract ಕೊಟ್ಟರೆ ನಿಜವಾಗಿಯೂ ಅವರು ಒಳ್ಳೆಯ ಕೆಲಸವನ್ನು ಮಾಡುತ್ತಾರೆ. ಆಗ ನಮ್ಮ ಸಿಟಿ clean ಆಗಿರಲು ವ್ಯವಸ್ಥೆಯೂ ಆಗುತ್ತದೆ.

ಮತ್ತೊಂದು ವಿಚಾರವೆಂದರೆ, Health Insurance. ಈಗ ಇದನ್ನು ತಾವು ಗ್ರಾಮಾಂತರ ಪ್ರದೇಶದಲ್ಲಿ ಮಾಡುತ್ತಿದ್ದೀರಿ, ಅದೇ ರೀತಿಯಲ್ಲಿ ನಗರಗಳಲ್ಲಿರುವ ಬಡವರಿಗೂ ಸಹ health insurance ಅನ್ನು ಮಾಡಬೇಕಾಗಿದೆ. ಇವತ್ತು ಯಾರಿಗಾದರೂ ಕ್ಯಾನ್ಸರ್ ಬಂದರೆ ಅದರ ಚಿಕಿತ್ಸೆಗೆ 1–2 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಬಡವರಿಗೆ ಅಷ್ಟು ಕೊಡಲು ಆಗುವುದಿಲ್ಲ. ಈಗ ಮುಖ್ಯಮಂತ್ರಿಯವರು ಅವರ Relief Fund ನಿಂದ ಇಂಥವರಿಗೆ ಸಾಕಷ್ಟು ಸಹಾಯವನ್ನು ಮಾಡುತ್ತಿದ್ದಾರೆ. ಆದರೂ ಸಹ ಈ health insurance ಪದ್ಧತಿ ಬಂದರೆ ಬಡವರಿಗೆ ಬಹಳ ಒಳ್ಳೆಯದಾಗುತ್ತದೆ. ಆದ್ದರಿಂದ ಸರ್ಕಾರದವರು ಆ ವಿಚಾರದಲ್ಲಿ ಸಾಕಷ್ಟು ಗಮನ ಹರಿಸಬೇಕೆಂದು ಹೇಳುತ್ತೇನೆ.

ಇನ್ನು U.G.D. ಬಗ್ಗೆ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿ C.M.C.ಗಳಲ್ಲಿ underground drainage system ಇಲ್ಲದೇ ಅಲ್ಲಿ ಕಾಲಿಡಲು ಸಾಧ್ಯವಾಗುವುದಿಲ್ಲ. ಇದಕ್ಕಾಗಿ world Bank assistance schemeನಲ್ಲಿ ಈಗಾಗಲೇ ಸಾಕಷ್ಟು process ಆಗಿದೆ. ಆದರೂ ಅದು ಏಕೋ ವಿಳಂಬವಾಗುತ್ತಿದೆ. ಇದು ಕಟ್ಟಾ ಸುಬ್ರಮಣ್ಯ ನಾಯ್ಡುರವರಿಗೆ ಬರುತ್ತದೆ. World Bankನಿಂದ team ಬಂದಿದೆ, proposal ಹೋಗಿದೆ. ಆದರೂ ಸಹ 2–3 ವರ್ಷಗಳ ತಡವಾಗುತ್ತಿದೆ. ಆದ್ದರಿಂದ ಆದಷ್ಟು ಬೇಗನೆ U.G.D.ಯನ್ನು ವ್ಯವಸ್ಥೆ ಮಾಡಬೇಕು. ಈಗ contract final stageನಲ್ಲಿದೆ. ಆದರೆ contractors 40% ಜಾಸ್ತಿ ಹಾಕಿದ್ದಾರೆ ಎಂದು ತಡಮಾಡುತ್ತಿದ್ದಾರೆ. ಇದರಲ್ಲಿ ತಾವು interfere ಆಗಿ ಆದಷ್ಟು ಬೇಗನೆ ಆ ಕೆಲಸವನ್ನು ಮಾಡಿಕೊಡಬೇಕಾಗುತ್ತದೆ.

ಮತ್ತೊಂದು ವಿಚಾರವೆಂದರೆ, ಸರ್ಕಾರಿ ಜಮೀನುಗಳನ್ನು ಸಂರಕ್ಷಣೆ ಮಾಡುವುದು. ಇಲ್ಲಿ ಒಂದು ಅಡಿ ಭೂಮಿ 5–6 ಸಾವಿರ ರೂಪಾಯಿ ಬೆಲೆ ಬಾಳುತ್ತದೆ. ಅನೇಕರು ಸರ್ಕಾರಿ ಜಮೀನನ್ನು encroach ಮಾಡುತ್ತಿದ್ದಾರೆ. ಸರ್ಕಾರಿ ಜಮೀನು ತಮ್ಮದು ಎಂದು ಕೋರ್ಟ್‌ನಲ್ಲಿ ಕೇಸ್ ಹಾಕಿದ್ದಾರೆ. ಈ ವಿಚಾರದಲ್ಲಿ ಸರ್ಕಾರಿ ವಕೀಲರು ಸಾಕಷ್ಟು ಆಸಕ್ತಿ ತೆಗೆದುಕೊಳ್ಳುತ್ತಿಲ್ಲ.

ಆದ್ದರಿಂದ ತಾವು ದಯವಿಟ್ಟು ಒಳ್ಳೆಯ ವಕೀಲರನ್ನಿಟ್ಟು, ಸರ್ಕಾರಿ ಜಮೀನನ್ನು ಸಂರಕ್ಷಣೆ ಮಾಡುವಂಥ ಕೆಲಸವನ್ನು ಮಾಡಬೇಕಾಗಿದೆ. ನನ್ನ ಕ್ಷೇತ್ರದಲ್ಲಿ ಕಟ್ಟಾ ಸುಬ್ರಮಣ್ಯ ನಾಯ್ಡುರವರು 2–3 ಸಭೆಗಳನ್ನು ಮಾಡಿದರು. ನನ್ನ ಕ್ಷೇತ್ರದಲ್ಲಿ 52 ಎಕರೆ ಜಾಗವಿದೆ. ಅಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಪಾರ್ಕ್ ಮಾಡಲು, 250 ಹಾಸಿಗೆಗಳ ಆಸ್ಪತ್ರೆ ಮಾಡಬೇಕೆಂದು ತೀರ್ಮಾನವಾಗಿದೆ. ನಮ್ಮಲ್ಲಿ ಕಾಲೇಜುಗಳಿಲ್ಲ. ಇದಕ್ಕೆಲ್ಲ ತಾವು ಆದೇಶ ಕೊಟ್ಟರೂ ಸಹ ಆ ಫೈಲ್ Revenue Departmentನಿಂದ Finance Department, Finance Departmentನಿಂದ Revenue Department, Revenue Departmentನಿಂದ B.D.A. ಎಂದು ಓಡಾಡುತ್ತಿದೆ. ತಾವು ಬೆಂಗಳೂರು ಉಸ್ತುವಾರಿ ಸಚಿವರಾಗಿದ್ದೀರಿ. ಇದು ಆದಷ್ಟು ಬೇಗ cabinet meetingಗೆ ಬಂದು, ತಾವು ಈ ಬಗ್ಗೆ ಆದೇಶ ಮಾಡಿ ಇದನ್ನು B.D.A.ಗೆ handover ಮಾಡಬೇಕು. Public purposeಗಾಗಿ ಆ ಕೆಲಸವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಇನ್ನು, de-silting ವಿಚಾರವನ್ನು ಹೇಳುವುದಾದರೆ, ಮಳೆ ಬರುವಾಗ storm water de-silting ಮಾಡಲು ಹೋಗುತ್ತಿದ್ದೇವೆ. ದಯವಿಟ್ಟು storm water ಆಗಲಿ, drain ಆಗಲಿ, ಇವುಗಳನ್ನು ಈಗ ಎರಡು ತಿಂಗಳಲ್ಲಿ de-silting ಮಾಡಬೇಕಾಗಿದೆ. ಏಕೆಂದರೆ, ಮಳೆ ಬರುವಾಗ ಪ್ರವಾಹ ಇರುತ್ತದೆ, ಸಾಕಷ್ಟು ತೊಂದರೆಯಾಗುತ್ತದೆ.

ಇನ್ನು, minorities ವಿಚಾರವನ್ನು ಹೇಳುವುದಾದರೆ, ಈಗ ಚರ್ಚ್‌ಗಳ ಮೇಲೆ, ಮಸೀದಿಗಳ ಮೇಲೆ ಸಾಕಷ್ಟು ದಾಳಿಗಳಾಗಿವೆ. ಆದರೆ ಇಲ್ಲಿಯವರೆಗೂ culpritsಗೆ ಶಿಕ್ಷೆಯಾಗಿಲ್ಲ, ಅವರ ಮೇಲೆ ಸರಿಯಾದ ಕ್ರಮ ತೆಗೆದುಕೊಂಡಿಲ್ಲ. ನ್ಯಾಯಮೂರ್ತಿ ಸೋಮಶೇಖರ್ ಆಯೋಗದವರು ಈಗಾಗಲೇ ಒಂದು interim report ಕೊಟ್ಟಿದ್ದಾರೆ. ಅವರು ಅದರಲ್ಲಿ ಸವಿಸ್ತಾರವಾಗಿ ಹೇಳಿದ್ದಾರೆ. ಅದರ ಆಧಾರದ ಮೇಲೆ ನೀವು ಕ್ರಮ ತೆಗೆದುಕೊಳ್ಳಬಹುದು. ಆದರೆ ಇನ್ನೂ ನೀವು ತೆಗೆದುಕೊಂಡಿಲ್ಲ. ಯಾರು ದಾಳಿ ಮಾಡುತ್ತಾರೆ ಅವರ ಕೈ ಕಡಿಯಬೇಕು ಎಂದು ಮುಖ್ಯಮಂತ್ರಿಗಳು

ಹೇಳುತ್ತಿದ್ದರು. ನೀವು ಅವರ ಕೈ ಕಡಿಯದಿದ್ದರೂ ಪರವಾಗಿಲ್ಲ, ಆದರೆ ಯಾರು ತಪ್ಪು ಮಾಡಿದ್ದಾರೆ ಅವರನ್ನು ಜೈಲಿಗೆ ಕಳುಹಿಸುವಂಥ ಕೆಲಸವನ್ನು ಮಾಡಿ ಎಂದು ತಮ್ಮನ್ನು ಕೇಳಿಕೊಂಡು, ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಂಜಯ್ ಪಾಟೀಲ (ಬೆಳಗಾವಿ ಗ್ರಾಮಾಂತರ): ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಬೆಳಗ್ಗೆಯಿಂದ ಅನೇಕ ಜನ ಸದಸ್ಯರು ರಾಜ್ಯಪಾಲರ ಭಾಷಣದ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ವಿರೋಧ ಪಕ್ಷದ ಶಾಸಕ ಮಿತ್ರರು ಟೀಕೆ ಮಾಡಿದ್ದಾರೆ, ಆಡಳಿತ ಪಕ್ಷದ ಶಾಸಕರು ಹೊಗಳಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದೇ ಒಂದು ಮಾತನ್ನು ಹೇಳಬಹುದು. ನಮ್ಮ ನಾಯಕರಾದಂಥ, ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ಉಪಮುಖ್ಯಮಂತ್ರಿಗಳಾಗಿದ್ದಾಗ ಎರಡು ಬಜೆಟ್‌ಗಳನ್ನು ಕೊಟ್ಟಿದ್ದರು. ಆ ಬಜೆಟ್ ಅನ್ನು ನೋಡಿ ನಮ್ಮ ನಾಡಿನ ಜನರು ಮತ್ತು ರೈತರು ನಮಗೆ ಆಶೀರ್ವಾದ ಮಾಡಿ, ಯಡಿಯೂರಪ್ಪನವರನ್ನು ಮುಖ್ಯಮಂತ್ರಿ ಮಾಡಿದ್ದಾರೆ. ಅದು ಜನರ ತೀರ್ಮಾನವಾಗಿದೆ. ಅದಕ್ಕಾಗಿ ಇವತ್ತು ನಾವು ಸರ್ಕಾರ ನಡೆಸುತ್ತಿದ್ದೇವೆ. ನಾಳೆ ಮುಖ್ಯಮಂತ್ರಿಗಳು ಬಜೆಟ್ ಅನ್ನು ಮಂಡನೆ ಮಾಡುತ್ತಿದ್ದಾರೆ. ಕನ್ನಡ ನಾಡಿನ ಎಲ್ಲ ಜನ ಆ ಬಜೆಟ್‌ನ ಹಾದಿ ಕಾಯುತ್ತಿದ್ದಾರೆ. ಬೆಳಗಾವಿ ಜಿಲ್ಲೆಗೆ ಸಂಬಂಧಪಟ್ಟ ಒಂದು ವಿಷಯವನ್ನು ಈ ಬಜೆಟ್‌ನಲ್ಲಿ ಸೇರಿಸಬಹುದು ಎನ್ನುವ ಭಾವನೆಯನ್ನಿಟ್ಟುಕೊಂಡೇ, ಇವತ್ತು ಇಲ್ಲಿ ನಾನು ಆ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಬೆಳಗಾವಿ ಜಿಲ್ಲೆ ಗಡಿಭಾಗದ ಜಿಲ್ಲೆಯಾಗಿದ್ದು, ಉತ್ತರ ಕರ್ನಾಟಕದ ಹೃದಯವಾಗಿದೆ. ಬೆಳಗಾವಿ, ಬಾಗಲಕೋಟೆ ಮತ್ತು ಬಿಜಾಪುರ ಈ ಮೂರು ಜಿಲ್ಲೆಗಳು ಶಿಕ್ಷಣದಲ್ಲಿ ಭಾರಿ ಹಿಂದುಳಿದಿವೆ. ಇದರ ಪರಿಹಾರಕ್ಕೆ ಇರುವ ಒಂದೇ ಒಂದು ಮಾರ್ಗವೆಂದರೆ, ಬೆಳಗಾವಿಯಲ್ಲಿ ಒಂದು ವಿಶ್ವವಿದ್ಯಾಲಯ ಸ್ಥಾಪನೆಯಾಗಬೇಕು. ನಮ್ಮಲ್ಲಿ ಒಂದು ವಿಶ್ವವಿದ್ಯಾಲಯ ಬೇಕು ಎನ್ನುವುದು ಉತ್ತರ ಕರ್ನಾಟಕದಲ್ಲಿರುವ ಬೆಳಗಾವಿ ಭಾಗದ ಲಕ್ಷಾಂತರ ಜನರ ಬಹುಕಾಲದ ದೊಡ್ಡ ಕನಸು. ಇದುವರೆಗೆ ಬೇಕಾದಷ್ಟು

ಸರ್ಕಾರಗಳು ಬಂದು ಹೋದರೂ ಈ ಕಡೆ ಯಾವುದೇ ಸರ್ಕಾರ ಗಮನ ಹರಿಸಿಲ್ಲ. ನಮ್ಮ ಸರ್ಕಾರ ಈ ವಿಷಯದ ಕಡೆಗೆ ಗಮನ ಹರಿಸಿ ನಮ್ಮ ಭಾಗದ ಲಕ್ಷಾಂತರ ತಂದೆತಾಯಿಗಳ ಮತ್ತು ವಿದ್ಯಾರ್ಥಿಗಳ ಆಶೋತ್ತರವನ್ನು ಈಡೇರಿಸಿಕೊಡಬೇಕಾಗಿದೆ. ಈಗ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿರುವ 525 ಕಾಲೇಜುಗಳಲ್ಲಿ ಮೇಲೆ ಹೇಳಿದ ಮೂರು ಜಿಲ್ಲೆಗಳಲ್ಲಿ 250 ಕಾಲೇಜುಗಳಿವೆ. ಬೆಳಗಾವಿ ಜಿಲ್ಲೆಯೊಂದರಲ್ಲೇ 150 ಕಾಲೇಜುಗಳಿವೆ. ಪ್ರಸ್ತುತ ಕರ್ನಾಟಕದಲ್ಲಿರುವ ಕೆಲವು ವಿಶ್ವವಿದ್ಯಾಲಯದಲ್ಲಿ ಇದಕ್ಕಿಂತಲೂ ಕಡಿಮೆ ಕಾಲೇಜುಗಳಿವೆ. ಉದಾಹರಣೆಗಾಗಿ ಹೇಳಬೇಕೆಂದರೆ, ತುಮಕೂರಿನಲ್ಲಿ 65 ಕಾಲೇಜುಗಳು ಹಾಗೂ ದಾವಣಗೆರೆಯಲ್ಲಿ 85 ಕಾಲೇಜುಗಳಿಗೆ ಒಂದೊಂದು ವಿಶ್ವವಿದ್ಯಾಲಯ ಪ್ರಾರಂಭವಾಗಿದೆ. ಹಾಗಿರುವಾಗ ಬೆಳಗಾವಿಯಲ್ಲಿ 150 ಕಾಲೇಜುಗಳಿವೆ ಮತ್ತು ಗಡಿ ಭಾಗದಲ್ಲಿರುವ ವಿಶೇಷ ಮಹತ್ವವಿರುವ ಈ ನಗರದಲ್ಲಿ ಒಂದು ವಿಶ್ವವಿದ್ಯಾಲಯ ಆಗಬೇಕು ಎನ್ನುವುದರಲ್ಲಿ ಯಾವುದೇ ತಪ್ಪಿಲ್ಲ. ಈಗಾಗಲೇ ನಮ್ಮ ಉನ್ನತ ಶಿಕ್ಷಣ ಸಚಿವರಾದ ಅರವಿಂದ ಲಿಂಬಾವಳಿಯವರು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಮ್ಮ ನಾಯಕರಾದ ಮುಖ್ಯಮಂತ್ರಿಗಳು ಮೊದಲಿನಿಂದಲೂ ಉತ್ತರ ಕರ್ನಾಟಕಕ್ಕೆ ವಿಶೇಷವಾದ ಮಹತ್ವವನ್ನು ಕೊಟ್ಟಿದ್ದಾರೆ. ಆದ್ದರಿಂದ, ಈ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಲಿಕ್ಕೆ ನಮ್ಮ ಮುಖ್ಯಮಂತ್ರಿಗಳು ಕಾರಣೀಭೂತರಾಗಬೇಕೆಂದು ಹೇಳುತ್ತೇನೆ. ಇದರಿಂದ ಉತ್ತರ ಕರ್ನಾಟಕ ಭಾಗದಲ್ಲಿ ಅವರ ಕೀರ್ತಿ ಇನ್ನೂ ಹೆಚ್ಚಾಗಿ, ಲಕ್ಷಾಂತರ ವಿದ್ಯಾರ್ಥಿಗಳ ಮತ್ತು ತಂದೆತಾಯಿಗಳ ಕನಸು ನನಸಾಗಬೇಕು ಮತ್ತು ನಮ್ಮ ಸರ್ಕಾರಕ್ಕೆ ಕೀರ್ತಿ ಬರಬೇಕು ಎನ್ನುವುದು ನಮ್ಮ ಉದ್ದೇಶ. ಈಗಾಗಲೇ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಒಂದು PG centre ಇದ್ದು ಅದು ಕಳೆದ 28 ವರ್ಷಗಳಿಂದ ಬೆಳಗಾಂನಲ್ಲಿ ಕೆಲಸ ಮಾಡುತ್ತಿದೆ. ಈ ಕೇಂದ್ರಕ್ಕೆ 175 ಎಕರೆ ಭೂಮಿ ಇದ್ದು ಒಂದು ಹೊಸ ವಿಶ್ವವಿದ್ಯಾಲಯಕ್ಕೆ ಬೇಕಾದ ಕನಿಷ್ಠ ಸೌಲಭ್ಯವಿರುತ್ತದೆ. ಈ 175 ಎಕರೆ ಭೂಮಿಯಲ್ಲಿ ವಿಶ್ವವಿದ್ಯಾಲಯ ಪ್ರಾರಂಭವಾದರೆ ಸರ್ಕಾರಕ್ಕೆ ಆರ್ಥಿಕವಾಗಿ ಯಾವುದೇ ಹೆಚ್ಚಿನ ಹೊರೆ

ಆಗುವುದಿಲ್ಲ. ಈ ವಿಶ್ವವಿದ್ಯಾಲಯಕ್ಕೆ 'ಕಿತ್ತೂರು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ' ಎಂದು ಹೆಸರಿಟ್ಟು ಉತ್ತರ ಕರ್ನಾಟಕದ ಕೀರ್ತಿ ಬೆಳೆಸಬೇಕೆನ್ನುವುದೇ ನಮ್ಮ ಭಾವನೆಯಾಗಿದೆ. ಅದಕ್ಕೆ ನಮ್ಮ ಈ ಬಜೆಟ್ ಅಧಿವೇಶನದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಈ ವಿಶ್ವವಿದ್ಯಾಲಯದ ಘೋಷಣೆ ಮಾಡಿ ಉತ್ತರ ಕರ್ನಾಟಕ ಹಾಗೂ ವಿಶೇಷವಾಗಿ ಗಡಿ ಭಾಗದ ಜನರಿಗೆ ಇನ್ನು 8–10 ದಿನಗಳಲ್ಲಿ ಬರುವ ಯುಗಾದಿ ಹಬ್ಬದ ಕೊಡುಗೆಯಾಗಿ ಸಂತೋಷದ ಸುದ್ದಿ ಮುಖಾಂತರ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತಿದ್ದೇನೆ. ಅದನ್ನು ಮಾಡುತ್ತಾರೆನ್ನುವ ವಿಶ್ವಾಸ ನನಗಿದೆ. ನಾಳೆಯ ದಿವಸ ಬಜೆಟ್ ಮಂಡನೆ ಇದೆ. Immediate ಆಗಬಹುದೋ ಇಲ್ಲವೋ ಎನ್ನುವ ಕೆಲವೊಂದು ವಿಷಯ ನನಗೂ ಅರ್ಥವಾಗುತ್ತದೆ. ಆದರೂ, 8–10 ಕೋಟಿ ರೂಪಾಯಿಗಳನ್ನಾದರೂ ಕೊಟ್ಟರೆ ಈ ವಿಶ್ವವಿದ್ಯಾಲಯ ಪ್ರಾರಂಭವಾಗುವುದಕ್ಕೆ ಯಾವುದೇ ತೊಂದರೆ ಬರುವುದಿಲ್ಲವೆನ್ನುವುದು ನನ್ನ ಭಾವನೆಯಾಗಿದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಗಮನಹರಿಸಿ ಬೆಳಗಾಂ ವಿಭಾಗದಲ್ಲಿ ಈ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಈ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್. ಗೋಪಾಲ ಭಂಡಾರಿ (ಕಾರ್ಕಳ): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣವನ್ನು ಓದುವಾಗ ಚೆನ್ನಾಗಿದೆ. ಆದರೆ, ನಮ್ಮ ಕರಾವಳಿ ಜಿಲ್ಲೆಯ ಜನ ಬಹಳ ಆತಂಕದ ಸ್ಥಿತಿಯಲ್ಲಿರುವುದು ಈ ಸದ್ಯದ ಪರಿಸ್ಥಿತಿಯಲ್ಲಿ ಕಾಣುತ್ತಿದೆ. ನಾನು ಮೊನ್ನೆ ನಮ್ಮ ಜಿಲ್ಲೆಯ ಜಿಲ್ಲಾ ಪಂಚಾಯಿತಿಗೆ ಹೋಗಿದ್ದೆ. ಉದಾಹರಣೆಗೆ ಹೇಳುವುದಾದರೆ, ಉಡುಪಿ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯಿತಿಗೆ ಸಂಬಂಧಪಟ್ಟ ರಸ್ತೆಗೆ ಒಂದು ರಸ್ತೆಯ ಗುಂಡಿಯನ್ನು ಮುಚ್ಚಲಿಕ್ಕೂ ಒಂದು ನಯಾಪೈಸೆ ಸಹ ಹಣ ಅಲ್ಲಿಲ್ಲ. 12th Finance ನಿಂದಲೂ ಒಂದು ಪೈಸೆ ಸಹ ಬಂದಿಲ್ಲವೆಂದು ಹೇಳುತ್ತಾರೆ. 5054 head ನಿಂದಲೂ ಸಹ ಜಿಲ್ಲಾಪಂಚಾಯಿತಿಗೆ ಒಂದು ನಯಾಪೈಸೆ ಸಹ ಬಂದಿಲ್ಲವೆಂದು ಹೇಳುತ್ತಾರೆ. ಇಡೀ ಜಿಲ್ಲೆಯ ರಸ್ತೆಗಳಲ್ಲಿನ ಕೇವಲ

ಹೊಂಡ ಮುಚ್ಚಲಿಕ್ಕೂ ಸಹ ಆಗದಿರುವಂಥ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ನಮ್ಮ ಜಿಲ್ಲೆಯಲ್ಲಿ ಅದರಲ್ಲೂ ವಿಶೇಷವಾಗಿ ನಮ್ಮ ಕಾರ್ಕಳ ತಾಲ್ಲೂಕಿನಲ್ಲಿ ಬಹುಶಃ ರಾಜ್ಯದಲ್ಲಿಯೇ ಅಲ್ಲ, ಇಡೀ ದೇಶದಲ್ಲಿಯೇ ಅತ್ಯಂತ ಹೆಚ್ಚು ಮಳೆ ಈ ವರ್ಷ ಬಂದಿದೆ. ಕಳೆದ 40 ವರ್ಷಗಳಿಂದ ಇಷ್ಟು ಮಳೆ ಬಂದಿರಲಿಲ್ಲ. ಇದೊಂದು ದಾಖಲೆಯಾಗಿದೆ. ಆದರೆ ರಸ್ತೆಗಳ ಗುಂಡಿ ಮುಚ್ಚಲಿಕ್ಕೆ ಹಣವಿಲ್ಲ. ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಕೇಳಿದರೆ ಎಲ್ಲಾ ಕಡೆ ಪರಿಹಾರ ಇದ್ದಹಾಗೆ ಕಾಣುತ್ತದೆ. ಆದರೆ, ನಮ್ಮ ಜಿಲ್ಲಾ ಪಂಚಾಯಿತಿಯಲ್ಲಿ ಕಳೆದ ವರ್ಷ ಕುಡಿಯುವ ನೀರಿಗಾಗಿ 13.5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಆದರೆ, ಈ ವರ್ಷ spillover work ಗಳನ್ನು complete ಮಾಡಬೇಕಾದರೂ 14 ಕೋಟಿ ರೂಪಾಯಿಗಳು ಬೇಕೆಂದು ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹೇಳುತ್ತಾರೆ. ಆದರೆ, ನಮ್ಮ ಜಿಲ್ಲಾ ಪಂಚಾಯಿತಿಯಲ್ಲಿ ಈ ವರ್ಷಕ್ಕೆ ಕೇವಲ 1.5 ಕೋಟಿ ರೂಪಾಯಿಗಳಷ್ಟಕ್ಕೆ ಮಾತ್ರ ಅವಕಾಶವಿದೆ ಎಂದು ಹೇಳುತ್ತಾರೆ. MLAಗಳ taskforceಗೆ ಒಂದು ನಯಾಪೈಸೆ ಸಹ ಇಲ್ಲ. ಅದರಲ್ಲಿ ಮೀಟಿಂಗ್ ಮಾಡದೇ ಇರುವಂಥ ಪರಿಸ್ಥಿತಿ ನಮ್ಮ ಜಿಲ್ಲೆಯಲ್ಲಿದೆ. ಈಗಾಗಲೇ ನಮ್ಮ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಗಂಭೀರ ಪರಿಸ್ಥಿತಿಗೆ ತಲುಪಿದೆ. ಇದಿಷ್ಟು ಮಾತ್ರವಲ್ಲ. ತಮಗೆ ಗೊತ್ತಿರುವ ಹಾಗೆ ನಮ್ಮಲ್ಲಿ ವಿದ್ಯುತ್ತಿನ ಸಮಸ್ಯೆ ಸಹ ಬಹಳ ಗಂಭೀರವಾಗಿದೆ. ಯಾವ ಗ್ರಾಮ ಪಂಚಾಯಿತಿಗಳಲ್ಲಿ ಸಹ ಕುಡಿಯುವ ನೀರನ್ನು ಕೊಡಲಿಕ್ಕೆ ಸಾಧ್ಯವಾಗದಿರತಕ್ಕಂಥ ಪರಿಸ್ಥಿತಿ ಇರುವಾಗ ಕೆಲವು ಅಭಿವೃದ್ಧಿ ಕಾಮಗಾರಿಗಳು, ಉದಾಹರಣೆಗೆ NABARD ನಲ್ಲಿ ಮಂಜೂರಾಗಿ tender ಆದಂಥ ಕಾಮಗಾರಿಗಳು ಅನುಷ್ಠಾನವಾಗುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿ 3 ಪ್ರೌಢಶಾಲೆಗಳಿಗೆ NABARD ನಲ್ಲಿ ಒಂದು ವರ್ಷಗಳ ಹಿಂದೆ ಕಟ್ಟಡ ಕಟ್ಟಲಿಕ್ಕೆ ಮಂಜೂರಾಗಿದೆ. ಅದಕ್ಕೆ ಅನುದಾನವಿಲ್ಲವೆನ್ನುವ ಕಾರಣಕ್ಕೆ ಸ್ಥಗಿತಗೊಳಿಸಿದ್ದಾರೆ. ಇನ್ನು ನಮ್ಮಲ್ಲಿ ಲೋಕೋಪಯೋಗಿ ಇಲಾಖೆಯಿಂದ KRDCL ನಿಂದ ಒಂದು ಸೇತುವೆಯನ್ನು ಟೆಂಡರ್ ಆಗಿ Gammon India

company ಯವರಿಗೆ tender ಕೊಟ್ಟು ಅವರು ಅದರ ಕೆಲಸವನ್ನು ಪ್ರಾರಂಭ ಮಾಡಿದರು. Pillar ತೋಡಿ ಅಲ್ಲಿ ಕೆಲಸ ಪ್ರಾರಂಭ ಮಾಡಿ rod ಗಳನ್ನೆಲ್ಲ ತಂದುಹಾಕಿದ್ದರು. ಬಹುಶ: ಈ ಕೆಲಸ ಪೂರ್ಣಗೊಳ್ಳುತ್ತದೆಂದು ನಾವು ಅಂದುಕೊಂಡಿದ್ದೆವು. ಆದರೆ, ಮೊನ್ನೆ ಇದ್ದಕ್ಕಿದ್ದ ಹಾಗೆ ಅಲ್ಲಿದ್ದ ಎಲ್ಲಾ materials ಅನ್ನು ವಾಪಸ್ಸು ತೆಗೆದುಕೊಂಡು ಹೋಗಿದ್ದಾರೆ. ನಾನು Gammon India ದ ಅಧಿಕಾರಿಗಳಿಗೆ ಕೇಳಿದಾಗ, ಸಂಬಂಧಪಟ್ಟ KRDCL ನ ಅಧಿಕಾರಿಗಳಿಗೆ ಕೇಳಿದಾಗ, ಇಡೀ ರಾಜ್ಯದಲ್ಲಿ ಆ ಯೋಜನೆಯಲ್ಲಿ ಕೊಟ್ಟಂಥ ಎಲ್ಲಾ ಕಾಮಗಾರಿಗಳನ್ನು ಸ್ಥಗಿತಗೊಳಿಸಿದ್ದೇವೆಂದು ಹೇಳಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ ನೋಡಿದರೆ ಎಲ್ಲಾ ಸಾರಿಗೆ ಸಂಪರ್ಕದ ವ್ಯವಸ್ಥೆ ಸಂಪೂರ್ಣವಾಗಿದೆ ಎನ್ನುವ ಮಾತನ್ನು ಇಲ್ಲಿ ಹೇಳತಕ್ಕಂಥ ಪರಿಸ್ಥಿತಿ ಕೂಡ ಆಗಿದೆ. ಈ ನಿಟ್ಟಿನಲ್ಲಿ ನನಗನಿಸುವುದೇನೆಂದರೆ, ಅಭಿವೃದ್ಧಿ ಕಾಮಗಾರಿಗಳಿಗೆ ಯಾವುದೇ ರೀತಿಯ ಅನುದಾನವನ್ನು ಸರ್ಕಾರ ಕೊಟ್ಟ ಹಾಗೆ ಇಲ್ಲವೆನ್ನುವುದು ನನ್ನ ಭಾವನೆಯಾಗಿದೆ. ಉದ್ಯೋಗ ಖಾತರಿ ಯೋಜನೆ ಎಂಬ ಯೋಜನೆ ನಮ್ಮಲ್ಲಿ ಪ್ರಾರಂಭವಾಗಿದೆ. ಆದರೆ, ಉದ್ಯೋಗ ಖಾತರಿ ಯೋಜನೆಯಲ್ಲಿ ನಿರೀಕ್ಷೆಯ ಮಟ್ಟದಲ್ಲಿ ಅಲ್ಲಿ ಕಾಮಗಾರಿಗಳನ್ನು ಮಾಡಲಿಕ್ಕೆ engineerಗಳ ಕೊರತೆ ಇದೆ. ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಸಿಗುವುದಿಲ್ಲ. Estimate ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ನಾನು ಮೊನ್ನೆ ಕೇಳಿದ ಹಾಗೆ ಅಲ್ಲಿ ಎಲ್ಲಿಯವರೆಗೆ ಆಗಿದೆ ಎಂದರೆ, ಅಲ್ಲಿದ್ದ ಒಟ್ಟು ಮೊತ್ತದ 40% ನಲ್ಲಿ material componentಗೆ ಖರ್ಚು ಮಾಡಲಿಕ್ಕೆ ಅವಕಾಶವಿದೆ. ಆ 40%ನಲ್ಲಿ ಒಂದು ನಯಾಪೈಸೆ ಸಹ ನಮ್ಮಲ್ಲಿ ಖರ್ಚು ಮಾಡುವುದಕ್ಕೆ ಆಗದಿರುವಂಥ ಸಮಸ್ಯೆಗಳ ನಿರ್ಮಾಣವಾಗಿದೆ. ಎಲ್ಲಿ ಖರ್ಚುಮಾಡಿದ್ದೀರಿ ಎಂದು ಕೇಳಿದರೆ, ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳಿಂದ ಹಿಡಿದು ಜಿಲ್ಲೆಯ ಎಲ್ಲಾ ಅಧಿಕಾರಿಗಳಿಗೆ mobile phone ಅನ್ನು ಅದೇ ಖರ್ಚಿನಲ್ಲಿ ಭರಿಸತಕ್ಕಂಥ ವ್ಯವಸ್ಥೆ, mobile phoneಗಾಗಿ ಅದರ ಹಣವನ್ನು ಅಲ್ಲಿ ಖರ್ಚು ಮಾಡುವಂಥದ್ದನ್ನು ನಾವು ಕಂಡಿದ್ದೇವೆ. ಇನ್ನು ನಿವೇಶನಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಕಳೆದ 5 ವರ್ಷಗಳಿಂದ ನಿವೇಶನ

ಕೊಟ್ಟಿಲ್ಲ. ನಮ್ಮ ಜಿಲ್ಲೆಯಲ್ಲಿ ಈ ವಿಚಾರದಲ್ಲಿ ಬಹಳ ದೊಡ್ಡ ಸಮಸ್ಯೆಯಾಗಿದೆ. ನಿವೇಶನವನ್ನೇ ಕೊಡದೆ ಭೂರಹಿತ ಕಷ್ಟದಲ್ಲಿದ್ದವರು ಸರ್ಕಾರ ಜಾಗ ಎಲ್ಲಿದೆ ಅಲ್ಲಿ ಮನೆ ಕಟ್ಟಿ ಕುಳಿತುಕೊಂಡಿದ್ದಾರೆ. ಅವರು ಅಲ್ಲಿ ಕಟ್ಟಿಕೊಳ್ಳದೆ ಆಕಾಶಕ್ಕೆ ಹಾರುವುದಕ್ಕೆ ಆಗುತ್ತದೆಯೇ? ಅವರಿಗೆ ಬೇರೆ ಕಡೆಗೆ ಅವಕಾಶವೇ ಇಲ್ಲ. ಅವರು ಕುಳಿತುಕೊಂಡಂಥ ಜಾಗದ ಹಕ್ಕುಪತ್ರವನ್ನು ಅವರಿಗೆ ಕೊಡದೆ ಬಹಳ ತೊಂದರೆಯಾಗಿದೆ. ನನ್ನ ತಾಲ್ಲೂಕಿನಲ್ಲಿ ಕನಿಷ್ಠ 2-3 ಸಾವಿರ ಕುಟುಂಬ ಈ ರೀತಿಯಲ್ಲಿದೆ. ದಯವಿಟ್ಟು ಅವರು ಯಾವ ಜಾಗದಲ್ಲಿ ವಾಸಿಸುತ್ತಿದ್ದಾರೆ ಅವರಿಗೆ 94(c) ಅಥವಾ 94(d) ಈ ರೀತಿಯ ಏನಾದರೂ ಒಂದು ತಿದ್ದುಪಡಿ ತಂದು ಅವರಿಗೆ ಹಕ್ಕುಪತ್ರ ಕೊಡುವ ಕೆಲಸವನ್ನು ಮಾಡಬೇಕೆನ್ನುವ ವಿನಂತಿ ಮಾಡುತ್ತೇನೆ. ಜೊತೆಗೆ ಇನ್ನೊಂದು ಬಹಳ ಗಂಭೀರವಾದ ಸಮಸ್ಯೆ ಇದೆ. ನಮ್ಮಲ್ಲಿ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಯ ಮಧ್ಯೆ coordination ಕೊರತೆ ಇದೆ. ನಮ್ಮ ತಾಲ್ಲೂಕಿನಲ್ಲಿ ಕಂದಾಯ ಇಲಾಖೆಯವರು ಕಂದಾಯ ಇಲಾಖೆಯ ದಾಖಲೆಯಲ್ಲಿ ಕಂದಾಯ ಇಲಾಖೆಗೆ ಸೇರಿದ ಜಾಗ ಎಂದು ಇದ್ದಲ್ಲಿ ನಿವೇಶನ ಕೊಟ್ಟರು. ಉದಾಹರಣೆಗೆ ನನ್ನ ಗ್ರಾಮವಾದ ಚಾರಾ ಗ್ರಾಮದಲ್ಲಿ 105ನೇ survey number ನಲ್ಲಿ ಎರಡು ಸಾವಿರ ಎಕರೆ ಭೂಮಿ ಇದೆ. ಅಲ್ಲಿ ಈಗಾಗಲೇ ಹೆಚ್ಚು ಕಡಿಮೆ 600-700 ಕುಟುಂಬದವರಿಗೆ ಹಕ್ಕುಪತ್ರ ಕೊಟ್ಟು ಅವರು ವಾಸ್ತವ್ಯದಲ್ಲಿದ್ದಾರೆ. ಅಲ್ಲಿ ನಾಲ್ಕು ಶಾಲೆಗಳಿವೆ. ಒಂದು ಕೇಂದ್ರ ಸರ್ಕಾರದ ಜವಾಹರ್ ನವೋದಯ ಶಾಲೆಯ ಸುಮಾರು 10 ಕೋಟಿ ರೂಪಾಯಿಗಳ ವೆಚ್ಚದ ಕಟ್ಟಡವಿದೆ. ಅದನ್ನು ಅರಣ್ಯ ಇಲಾಖೆ ನಮ್ಮದು ಎಂದು ಹೇಳುತ್ತದೆ. ಇದು ಅರಣ್ಯ ಇಲಾಖೆಯ ಜಾಗವಲ್ಲವೆಂದು ಲೋಕಾಯುಕ್ತದವರು ಹೇಳಿದರೂ ಸಹ ಅವರು ಕೇಳುತ್ತಿಲ್ಲ. ಉಚ್ಚ ನ್ಯಾಯಾಲಯಕ್ಕೆ ಹೋಗಿ ನಾವು ದಾವೆ ಹಾಕಿದೆವು. ಉಚ್ಚ ನ್ಯಾಯಾಲಯದಲ್ಲಿ ಕೂಡ ಈ ಜಾಗ ಅರಣ್ಯ ಇಲಾಖೆಯದು ಅಲ್ಲವೆಂದು ಹೇಳಿದರು. ಕಂದಾಯ ಜಮೀನು ಎಂದು ಕಂದಾಯ ಇಲಾಖೆಯ ಆದೇಶವೇನಿದೆ ಅದನ್ನು ತಿರಸ್ಕಾರ ಮಾಡಿದ್ದಾರೆ. ಆದರೂ ಕೂಡ ಇದನ್ನು

ಅಪೀಲು ಮಾಡಬೇಕೆಂದು ಹೇಳುತ್ತಾರೆ. ಅರಣ್ಯ ಇಲಾಖೆಗೆ ಮೊನ್ನೆ ಕೇಳಿದರೆ ಅರಣ್ಯ ಇಲಾಖೆಯ wild life ನ DFO ರವರು ಈ ಜಾಗ ನಮಗೆ ಸಂಬಂಧಪಟ್ಟಿದ್ದಲ್ಲ ಎಂದು ಅವರ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಪತ್ರ ಬರೆಯುತ್ತಾರೆ. ಆದರೂ ಕೂಡ ಇಲ್ಲಿ ನ್ಯಾಯ ಸಿಗುತ್ತಿಲ್ಲ. ಈ ರೀತಿಯ ಸಮಸ್ಯೆಗಳು ಅಲ್ಲಿ ನಿರ್ಮಾಣವಾಗಿದೆ. ಇನ್ನು ನಮ್ಮ ಕರಾವಳಿ ಜಿಲ್ಲೆ, ಪಶ್ಚಿಮಘಟ್ಟದ ಮೇಲಿನ ಭಾಗ ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆಯನ್ನು ಸಂಪರ್ಕ ಮಾಡತಕ್ಕಂಥ ಒಂದು ರಾಜ್ಯ ಹೆದ್ದಾರಿ ಆಗುಂಬೆ ಘಾಟಿನಲ್ಲಿ ಹೋಗುತ್ತಿತ್ತು. ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರು ಕಾರ್ಕಳಕ್ಕೆ ಬಂದಿದ್ದಾಗ ಸಹ ಅವರ ಗಮನಕ್ಕೆ ತಂದಿದ್ದೆ. ಆಗುಂಬೆ ಘಾಟ್‌ನಲ್ಲಿ ಅಗಲ ಕಿರಿದಾದ ರಸ್ತೆ ಇರುವುದರಿಂದ, ಅದನ್ನು ಅಗಲ ಮಾಡಿಸಿ ದೊಡ್ಡ ಬಸ್ಸುಗಳು ಸಂಚರಿಸಿದಾಗ ಬಹುಶ: ಶಿರಾಡಿ ಘಾಟ್‌ಗೆ ಒಂದು parallel Ghat ಒಂದು ಆಗುತ್ತದೆ. ಅದರಿಂದ ಆರೇಳು ಜಿಲ್ಲೆಗಳಿಗೆ ಸಂಪರ್ಕ ಮಾಡತಕ್ಕಂಥ ವ್ಯವಸ್ಥೆ ಆಗುತ್ತದೆ. ಅದಕ್ಕೆ ಈಗಾಗಲೇ National Highway ರವರು ಒಂದು estimate ಮಾಡಿದ್ದಾರೆ. ಇದನ್ನು ನಾನು ಮಾನ್ಯ ಲೋಕೋಪಯೋಗಿ ಸಚಿವರ ಗಮನಕ್ಕೂ ತಂದಿದ್ದೇನೆ. ದಯವಿಟ್ಟು ಅದನ್ನು ಯಾವುದಾದರೂ ರೀತಿಯಲ್ಲಿ ತೆಗೆದುಕೊಂಡಾಗ ಇಡೀ ರಾಜ್ಯಕ್ಕೆ ಅನುಕೂಲವಾಗುವ ವ್ಯವಸ್ಥೆಯಾಗುತ್ತದೆ. ಅದನ್ನು ಮಾಡಬೇಕೆನ್ನುವ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುತ್ತಾ, 100 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸಾವಯವ ಕೃಷಿಯನ್ನು ಅಭಿವೃದ್ಧಿ ಪಡಿಸತಕ್ಕಂಥ ಕಾರ್ಯಕ್ರಮವನ್ನು ಮಾಡಿದರು. ನಾನು ನನ್ನ ತಾಲ್ಲೂಕಿನ ಪಟ್ಟಿಯನ್ನು ನೋಡಿದೆ. ಶಾಸಕನಾಗಿ ಆ ಕಾರ್ಯಕ್ರಮ ನನ್ನ ಗಮನಕ್ಕೇ ಬಂದಿಲ್ಲ. ಯಾವುದೋ ಒಂದು agency ಯವರು ಯಾರಿಗೋ ಕೊಟ್ಟು ಬಹುಶ: ಅರ್ಹ ಫಲಾನುಭವಿಗಳಿಗೆ ಅವಕಾಶವೇ ಸಿಗದಿರುವ ನಿಟ್ಟಿನಲ್ಲಿ ರೈತರೇ ಅಲ್ಲದಿದ್ದವರು ಅದರ ಪ್ರಯೋಜನಗಳನ್ನು ಪಡೆದಂಥ ವಿಚಾರವನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಾ, ಇನ್ನೊಂದು ಬಹಳ ಮುಖ್ಯವಾದದ್ದು ಏನೆಂದರೆ, ನಾವು ರೈತರ ಜಮೀನನ್ನು ಯಾವ

ಕೈಗಾರಿಕೆಗೂ ಸ್ವಾಧೀನಪಡಿಸಿಕೊಳ್ಳುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಕೈಗಾರಿಕಾ ಮಂತ್ರಿಯವರು ಹೇಳಿದರು. ನನ್ನ ತಾಲ್ಲೂಕಿನಲ್ಲಿ ಯಾರ ಗಮನಕ್ಕೂ ಬಾರದೆ ಸಂಪೂರ್ಣ ಕೃಷಿ ಜಮೀನು ಅದರಲ್ಲಿ ಸ್ವಲ್ಪವೂ dry land ಇಲ್ಲ, ಎಲ್ಲವೂ first class wet land ಕೂಡ ಆಗಿದೆ. ಅಲ್ಲಿ ಯಾರ ಗಮನಕ್ಕೂ ಬಾರದೆ ಸೂಡಾ, ಬೆಳಮಣ್ಣು, ನಂದಳಿಕೆ ಜಾಗವನ್ನು ಸುವರ್ಣ ಕಾರಿಡಾರ್‌ಗೆ ಸ್ವಾಧೀನಪಡಿಸುತ್ತೇವೆ ಎನ್ನುವ ನಿಟ್ಟಿನಲ್ಲಿ ಅದಕ್ಕೆ notification ಕೂಡ ಮಾಡಿದ್ದಾರೆ. ದಯವಿಟ್ಟು ಅದನ್ನು ಹಿಂತೆಗೆದುಕೊಳ್ಳಬೇಕು. ಈಗಾಗಲೇ ಮುಖ್ಯಮಂತ್ರಿಯವರು, ಕೈಗಾರಿಕಾ ಸಚಿವರು–ಕೃಷಿ ಜಮೀನನ್ನು ನಾವು ಸ್ವಾಧೀನ ಮಾಡುವುದಿಲ್ಲವೆಂದು ಹೇಳಿದ್ದಾರೆ. ಅದು ಹೌದಾದರೆ ಅದನ್ನು ರದ್ದುಪಡಿಸಬೇಕೆಂಬ ವಿನಂತಿಯನ್ನು ಮಾಡುತ್ತೇನೆ. ನಮ್ಮಲ್ಲಿ ಬಡವರಿಗೆ ಮನೆ ಕೊಡುವ ಕಾರ್ಯಕ್ರಮವಿದೆ.

ಅಧ್ಯಕ್ಷರು : ಈ ಬಗ್ಗೆ ಆಗಲೇ ಪ್ರಸ್ತಾಪವಾಗಿದೆ.

ಶ್ರೀ ಹೆಚ್. ಗೋಪಾಲ ಭಂಡಾರಿ: ಹಿಂದೆ ಅಂಬೇಡ್ಕರ್ ಮನೆಗಳನ್ನು ಮತ್ತು ಇಂದಿರಾ ಆವಾಸ್ ಮನೆಗಳನ್ನು ದಾಖಲೆಗಳು ಸರಿಯಾಗಿ ಇಲ್ಲದಿರತಕ್ಕಂಥ ಭೂರಹಿತರಿಗೆ ಕೊಡುವ ವ್ಯವಸ್ಥೆ ಇತ್ತು. ಈಗ ಅದಕ್ಕೂ ಕೂಡ registration ಆಗಬೇಕು. ಅಲ್ಲಿ loan portion ಇಲ್ಲ. ಅಲ್ಲಿ ಯಾವುದೇ ರೀತಿಯ ಸಾಲದ ವ್ಯವಸ್ಥೆ ಇಲ್ಲ. ಆದರೆ, ಅದಕ್ಕೂ registration ಮಾಡಬೇಕೆಂದು ನಿಯಮ ಮಾಡಿದ್ದಾರೆ. ಕೆಲವರು ಮನೆ ಕಟ್ಟಲಿಕ್ಕೆ ಆದಾಯವಿಲ್ಲದಿರುವಂಥ ಪರಿಸ್ಥಿತಿಯಲ್ಲಿದ್ದಾರೆ. ಆ ತರಹದ ಸ್ಥಿತಿ ನಿರ್ಮಾಣವಾಗಿದೆ. ಈ ಸಮಸ್ಯೆಯನ್ನು ಪರಿಹಾರ ಮಾಡಬೇಕೆನ್ನುವ ಮಾತನ್ನು ಹೇಳುತ್ತೇನೆ. ಇನ್ನು ಅಕ್ರಮವಾಗಿ ನಿವೇಶನರಹಿತರು ಒಂದು ಸೆಂಟ್ ಜಾಗದಷ್ಟೂ ಮಾಲೀಕತ್ವ ಇಲ್ಲದಿರುವ ಜನ ಅಲ್ಲಿ ಮನೆ ಕಟ್ಟಿ ಸರ್ಕಾರಿ ಜಾಗದಲ್ಲಿದ್ದಾರೆ, ಅವರಿಗೆ ಮನೆಯ ಹಕ್ಕುಪತ್ರವನ್ನು ಸ್ಥಳದಲ್ಲಿಯೇ ಕೊಡಬೇಕೆಂಬ ನಿಟ್ಟಿನಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ಪಾಟೀಲರು ಹೇಳಿದ ಹಾಗೆ ಯೋಜನಾ ಗಾತ್ರದಲ್ಲಿ ಯೋಜನೆಗೆ ಎಷ್ಟು

ಸೀಮಿತಗೊಳಿಸಿದ್ದರೋ ಅಷ್ಟು ಹಣವನ್ನು ಖರ್ಚು ಮಾಡದೆ ಅದರ ಶೇ. 50 ರಷ್ಟು ಭಾಗವನ್ನೂ ಕೂಡ ಖರ್ಚು ಮಾಡದಿರುವುದರಿಂದ ನಮ್ಮ ಜಿಲ್ಲೆಯ ಜನ ಬಹಳ ಕಷ್ಟದಲ್ಲಿದ್ದಾರೆ. ನಮ್ಮ ಜಿಲ್ಲೆಯ ಜನರನ್ನು ನೋಡಿದ ಕೂಡಲೆ ಬಹಳ ವಿದ್ಯಾವಂತರು, ಬುದ್ಧಿವಂತರು, ಪ್ರಜ್ಞಾವಂತರು, ಸಾಕ್ಷರಸ್ಥರು ಎಂಬುದಾಗಿ ಹೇಳಿ ನಮ್ಮನ್ನು ಹಿಂದೆ ತಳ್ಳುವಂಥ ಪರಿಸ್ಥಿತಿ ಆಗುತ್ತಿದೆ. ನಂಜುಂಡಪ್ಪ ವರದಿಯು ನಮಗಿಲ್ಲ, ನಮ್ಮ ಭಾಗಕ್ಕೆ ಯಾವುದೂ ಇಲ್ಲ, ನಾವು ಕರಾವಳಿ ಜಿಲ್ಲೆಯ ಜನ ನಾವು ಮುಂದುವರಿದಿದ್ದೇವೆ ಎನ್ನುವ ಒಂದೇ ಕಾರಣಕ್ಕೆ ಹಿಂದೆ ಜಗ್ಗತಕ್ಕ ಪರಿಸ್ಥಿತಿ ಖಂಡಿತಾ ಆಗಬಾರದು. ನಾವು ಅದೇ ವೇಗದಲ್ಲಿ ಮುಂದೆ ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕು. ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು): ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು. ನಾನು ಭಾವಿಸಿರುವಂತೆ ರಾಜ್ಯಪಾಲರ ಭಾಷಣ ಸರ್ಕಾರದ ಸಾಧನೆ ಮತ್ತು ಈ ಒಂದು ವರ್ಷದಲ್ಲಿ ನಮ್ಮ ಪ್ರಾಶಸ್ತ್ಯ ಏನು, vision ಏನು ಎನ್ನುವುದರ ಮೇಲೆ ಅವಲಂಬಿತವಾಗಿರುತ್ತದೆ. ನಾನು ಕಳೆದ ವರ್ಷ ಜನವರಿ 16 ರಂದು ಬೆಳಗಾವಿ ಅಧಿವೇಶನದಲ್ಲಿ ರಾಜ್ಯಪಾಲರು ಮಾಡಿದ ಭಾಷಣವನ್ನು ಗಮನಿಸಿದ್ದೇನೆ. ಅದರಲ್ಲಿ ಸರ್ಕಾರಕ್ಕೆ 100 ದಿನಗಳು ತುಂಬಿದ ಸಂದರ್ಭದಲ್ಲಿ ಹೊಸ ಸರ್ಕಾರದ ಆಶಯಗಳನ್ನು 'ಭವ್ಯ ಭವಿಷ್ಯಕ್ಕೆ ಭದ್ರ ಬುನಾದಿ' ಎಂಬ ಶೀರ್ಷಿಕೆ, ಅದೇ ರೀತಿ 200 ದಿನಗಳಲ್ಲಿ 'ಭದ್ರ ಬುನಾದಿಯ ಮೇಲೆ ಅಭಿವೃದ್ಧಿ ಸೌಧ' ಎನ್ನುವ ಘೋಷಣೆಯೊಂದಿಗೆ ಹೇಳಿದ್ದಿರಿ. ಅದೇ ರೀತಿ ಹೈದರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ನೀಡುವ ಬಗ್ಗೆ ಮಾತನಾಡಿದ್ದಿರಿ. ಆದರೆ, ಈ ಹೈದರಾಬಾದ್ ಕರ್ನಾಟಕಕ್ಕೆ ನೀಡುವ ವಿಶೇಷ ಸ್ಥಾನಮಾನದ ಬಗ್ಗೆ ಕಳೆದ ವರ್ಷ ಎಲ್ಲಿಯೂ ಕೂಡ ಈ ಸದನದಲ್ಲಿ ಚರ್ಚೆಯಾಗಲಿಲ್ಲ. ಅದರ ಬಗ್ಗೆ ಏನಾಯಿತು ಎನ್ನುವುದೂ ಕೂಡ ಗೊತ್ತಾಗಲಿಲ್ಲ. ಮೊನ್ನೆ ಇದಕ್ಕೆ ಸಂಬಂಧಪಟ್ಟ ಹಾಗೆ ಹೈದರಾಬಾದ್

ಕರ್ನಾಟಕ ಹೋರಾಟ ಸಮಿತಿಯವರು ಆ ಭಾಗದ ಎಲ್ಲಾ ಶಾಸಕರು ಪಕ್ಷಾತೀತವಾಗಿ ಮುಖ್ಯಮಂತ್ರಿಯವರ ಹತ್ತಿರ ಹೋದಾಗ ಮುಖ್ಯಮಂತ್ರಿಯವರು ಕೇಂದ್ರ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದಿದ್ದು, ಆಗುವುದಿಲ್ಲವೆಂದು ಅಲ್ಲಿಂದ ಪತ್ರ ಬಂದಿದ್ದು ಅದು ಅಲ್ಲಿಗೇ ಮುಗಿದಿದೆ ಎನ್ನುವುದು ಗೊತ್ತಾಯಿತು. ಇಲ್ಲಿ ಚರ್ಚೆಯೂ ಆಗಲಿಲ್ಲ, ಕೊನೆಯ ಪಕ್ಷ ಹೈದರಾಬಾದ್ ಕರ್ನಾಟಕ ಭಾಗದ ಎಲ್ಲಾ ಶಾಸಕರನ್ನಾದರೂ ಕರೆದು ಚರ್ಚೆ ಮಾಡಿ ಏನು ಮಾಡಬೇಕೆಂಬುದರ ಬಗ್ಗೆ ಚಿಂತನೆ ಮಾಡಿದ್ದರೆ ಅದಕ್ಕೆ ಒಂದು ರೂಪುರೇಷೆ ಕೊಡುವುದಕ್ಕೆ ಸಾಧ್ಯವಾಗುತ್ತಿತ್ತೇನೋ ಎನ್ನುವುದು ನನ್ನ ಭಾವನೆಯಾಗಿದೆ. ಈ ರೀತಿ ಮಾಡದಿದ್ದಾಗ ಇದು ಅಲ್ಲಿಗೇ ನಿಂತಿದೆ. ಈ ಸಲವಾದರೂ ಅದನ್ನು ಈ ಎರಡೂ ಸದನಗಳಲ್ಲಿ ಹೈದರಾಬಾದ್ ಕರ್ನಾಟಕದ 371ನೇ ವಿಧಿಗೆ ತಿದ್ದುಪಡಿ ಮಾಡಬೇಕೆಂದು ಏನು ಕೇಳಿದ್ದೇವೆ ಅದರ ಬಗ್ಗೆ ಇಲ್ಲಿ ಸರ್ವಾನುಮತದ ನಿರ್ಣಯ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂಬ ಮನವಿಯನ್ನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮಾಡುತ್ತೇನೆ. ನಿಯೋಗ ಹೋದಾಗ ಮಾನ್ಯ ಮುಖ್ಯಮಂತ್ರಿಯವರು ಆ ಭರವಸೆಯನ್ನು ಕೂಡ ನಮಗೆ ಕೊಟ್ಟಿದ್ದಾರೆ. ಈ ಸಾರಿ ಅದನ್ನು ಎಲ್ಲರೂ ಮಾಡೋಣ, ಅದನ್ನು ಮಾಡಬೇಕೆನ್ನುವಂಥ ವಿನಂತಿ ಮಾಡುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಸಹ ಅವತ್ತಿನ ದಿವಸ ಭಾಗವಹಿಸಿದ್ದಾರೆ. ಕೇಂದ್ರ ಸರ್ಕಾರದ ಮೇಲೆ ಅವರೂ ಸಹ ಒತ್ತಡ ತರಬೇಕು ಮತ್ತು ಆ ಭಾಗಕ್ಕೆ ಆಗಿರುವ ಅನ್ಯಾಯವನ್ನು ಹೋಗಲಾಡಿಸುವಂಥ ಕೆಲಸ ಮಾಡಬೇಕು. ಅದಕ್ಕೆ ಅವರು ಪೂರಕವಾದ ಮಾತನ್ನು ಹೇಳಿದ್ದಾರೆ. ಇಲ್ಲಿ ನಾವು ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರಿಗೂ ಕೂಡ ವಿನಂತಿ ಮಾಡಿಕೊಳ್ಳುತ್ತೇವೆ, ಹಾಗೆಯೇ ರೇವಣ್ಣನವರಿಗೂ ವಿನಂತಿ ಮಾಡಿಕೊಳ್ಳುತ್ತೇವೆ, ತಾವು ಒಂದು resolution ಮಾಡಬೇಕಾಗುತ್ತದೆ. ಹೈದರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ನೀಡುವ ಸಂಬಂಧ

Article 371 ಗೆ ತಿದ್ದುಪಡಿ ತರಬೇಕಾಗಿದೆ. ಆ ಕಾರಣಕ್ಕಾಗಿ ಎಲ್ಲಾ ನಾಯಕರುಗಳು ಕೂಡ ತಮ್ಮ ಸಹಮತವನ್ನು ಕೊಟ್ಟು ಕೇಂದ್ರ ಸರ್ಕಾರದಲ್ಲಿ ಕಾಂಗ್ರೆಸ್ ಪಕ್ಷ ಆಡಳಿತ ನಡೆಸುತ್ತಿರುವುದರಿಂದ ಮಾನ್ಯ ಸಿದ್ದರಾಮಯ್ಯನವರು ಅದಕ್ಕೆ ಸಹಕರಿಸಬೇಕು ಮತ್ತು ಮುಖ್ಯಮಂತ್ರಿಯವರೇ ನಿಯೋಗದ ನಾಯಕತ್ವ ವಹಿಸಿ ನಮ್ಮ ಭಾಗಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ : ನೈಸರ್ಗಿಕ ವಿಕೋಪಕ್ಕೆ ನಮ್ಮ ಭಾಗ ತುತ್ತಾಯಿತು. ಅದರಲ್ಲಿ ಇನ್ನೂ ಕೂಡ ಬಹಳಷ್ಟು ಗ್ರಾಮಗಳಲ್ಲಿ ದಾನಿಗಳು ಮನೆ ಕಟ್ಟಿಸಿಕೊಡುವುದಕ್ಕೆ ಮುಂದೆ ಬಂದಿಲ್ಲ. ಅದರ ಬಗ್ಗೆ ಏನು ನಿರ್ಧಾರ ತೆಗೆದುಕೊಳ್ಳುತ್ತಿದ್ದಾರೆ ಎನ್ನುವುದೂ ಕೂಡ ಗೊತ್ತಾಗುತ್ತಿಲ್ಲ. ನನ್ನ ಕ್ಷೇತ್ರದ 7 ಹಳ್ಳಿಗಳಲ್ಲಿ ಈಗ 2 ಹಳ್ಳಿಗಳಲ್ಲಿ ದಾನಿಗಳು ಮುಂದೆ ಬಂದು ಕೆಲಸ ಮಾಡಿದ್ದಾರೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಯವರು ಬಂದಿದ್ದಾಗ ನಾನು ಆದಿಚುಂಚನಗಿರಿಗೆ ಹೋಗಿದ್ದೆ, ಅವರು ನನ್ನನ್ನು ಕರೆದಿದ್ದರು. ಅವರು ಬಂದು ನಮ್ಮ ಗ್ರಾಮಗಳನ್ನು ನೋಡಿ ಹೋಗಿದ್ದರು. ಅವರೂ ಕೂಡ 5000 ಮನೆಗಳನ್ನು ಕಟ್ಟಿಸಿಕೊಡುತ್ತೇವೆ ಎಂದು ಹೇಳಿ 10 ಕೋಟಿ ರೂಪಾಯಿಗಳ ಚೆಕ್ ಅನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಕೊಟ್ಟಿದ್ದಾರೆ. ಈಗ ಸರ್ಕಾರವೇ ಆ ಮನೆಗಳನ್ನು ಕಟ್ಟಿಸಿಕೊಡುತ್ತದೆ. ಅದರಲ್ಲಿ ನಮ್ಮ ಎರಡು ಗ್ರಾಮಗಳು ಸೇರುತ್ತವೆ ಎಂದು ಹೇಳಿದ್ದಾರೆ. ಆದರೂ ಇನ್ನೂ 3 ಗ್ರಾಮಗಳು ಉಳಿಯುತ್ತವೆ, ಅಲ್ಲಿ ಏನು ಮಾಡುತ್ತಾರೆನ್ನುವ ಬಗ್ಗೆ ಇನ್ನೂ ಚಿಂತನೆ ಆಗಬೇಕಾಗಿದೆ. ಅದೇ ರೀತಿ ತಾವು ಹಣವನ್ನು ಕೊಡುವಾಗ ಮನೆಗಳಿಗೆ ಹಣ ಕೊಟ್ಟಿರುವುದನ್ನು ಒಪ್ಪಿಕೊಳ್ಳುತ್ತೇವೆ. ಆದರೆ, ಬೆಳೆ ಹಾನಿ, ಭೂಮಿ ಹಾನಿ ಏನಾಗಿದೆ, ಅದಕ್ಕೆ 800, 1000, 2000 ರೂ. ಅತೀ ಹೆಚ್ಚು ಎಂದು 3000 ಸಾವಿರ ರೂ. ಪರಿಹಾರ ಕೊಟ್ಟಿದ್ದೀರಿ. ಯಾವುದೋ ಕಾಲದಲ್ಲಿ ಮಾಡಿರುವ Central Norms ಪ್ರಕಾರವೇ ಹಣ ಕೊಟ್ಟಿರುವುದರಿಂದ ಆ ರೈತರಿಗೆ ಅನ್ಯಾಯವಾಗಿದೆ. ಭೂಮಿ ಕೊಚ್ಚಿ ಹೋಗಿದೆ. ಭೂಮಿಯಲ್ಲಿ 4–5 ಅಡಿ ಹೂಳು ತುಂಬಿದೆ. ಅದನ್ನು ಕಳೆದ ಅಧಿವೇಶನದಲ್ಲಿ ಪ್ರಸ್ತಾಪಿಸಿದೆ.

ಅದರ ಬಗ್ಗೆ ಇನ್ನೂ ಏನೂ ಕ್ರಮ ತೆಗೆದುಕೊಂಡಿಲ್ಲ. ಅದನ್ನು ಕೂಡಲೆ ನೋಡಬೇಕೆನ್ನುವ ಮನವಿ ಮಾಡುತ್ತೇನೆ. ಅಲ್ಲಿ ಶಾಲೆಗಳನ್ನು ಕಟ್ಟಬೇಕಾಗಿರುವುದಕ್ಕೆ ಇದುವರೆಗೂ ಕೂಡ ಏನೂ ಕ್ರಮ ತೆಗೆದುಕೊಂಡಿಲ್ಲ. ಅಲ್ಲಿ ಇನ್ನೂ ಶಾಲಾ ಕಟ್ಟಡಗಳ ನಿರ್ಮಾಣವಾಗಿಲ್ಲ. ನಿಮ್ಮ ವರದಿಯನ್ನು ನೋಡಿದರೆ ಸರ್ಕಾರ ಇದುವರೆಗೆ ಖರ್ಚು ಮಾಡಿರುವುದು 1500 ಕೋಟಿ ರೂಪಾಯಿಗಳು. ಕೇಂದ್ರ ಸರ್ಕಾರದಿಂದ 1457 ಕೋಟಿ ರೂ. ಬಂದಿದೆ. ಅಂದರೆ ರಾಜ್ಯ ಸರ್ಕಾರ ತನ್ನ ಬೊಕ್ಕಸದಿಂದ ಖರ್ಚು ಮಾಡಿರುವುದು ಕೇವಲ 43 ಕೋಟಿ ರೂಪಾಯಿಗಳು ಮಾತ್ರ. ಉಳಿದ ಹಣವೆಲ್ಲ ಕೇಂದ್ರ ಸರ್ಕಾರದಿಂದ ಬಂದಿರುವಂಥದ್ದು. ನಮ್ಮಲ್ಲಿ ಹಾಳಾದ ರಸ್ತೆಗಳಿಗೆ ಇನ್ನೂ ಹಣ ಸಿಕ್ಕಿಲ್ಲ. ಅವರು ಅವರ norms ಪ್ರಕಾರ ಕೊಟ್ಟಿರುವುದು ಬಿಟ್ಟರೆ ಬೇರೆ ಏನೂ ಆಗಿಲ್ಲ. ಅದರ ಜೊತೆಗೆ ನೀವು ಇನ್ನೂ ಕೂಡ ಶಾಲೆ ಕಟ್ಟಡ ಕಟ್ಟಬೇಕಾಗಿದೆ, ರಸ್ತೆ ನಿರ್ಮಿಸಬೇಕಾಗಿದೆ. ನಾನು ಮುಖ್ಯಮಂತ್ರಿಯವರಲ್ಲಿ ಮನವಿ ಮಾಡುವುದೇನೆಂದರೆ, ಆ ಭಾಗದಲ್ಲಿ ಹಾನಿಗೊಳಗಾಗಿರುವುದಕ್ಕೆ separate package ಮಾಡಿ ರಸ್ತೆಗಳಿಗೆ ಹಣ ಕೊಡದಿದ್ದರೆ ಆ ರಸ್ತೆಗಳು ಸರಿಯಾಗದೆ ಇನ್ನೂ 10 ವರ್ಷವಾದರೂ ಸಹ ನಾವು ಇವರ level ಗೆ ಬರುವುದಿಲ್ಲ. ಆದ್ದರಿಂದ, ನೆರೆಹಾವಳಿಗೆ ತುತ್ತಾದ ಭಾಗದಲ್ಲಿ ರಸ್ತೆ ನಿರ್ಮಿಸುವುದಕ್ಕೆ separate package ಮಾಡಬೇಕೆಂದು ಮನವಿ ಮಾಡುತ್ತೇನೆ. ಕೆಲವು ಕಡೆ ಮನೆ ಕಟ್ಟುವುದಕ್ಕೆ ಸರ್ಕಾರ ಇನ್ನೂ ಪ್ರಾರಂಭ ಮಾಡಿಲ್ಲ. ಅಲ್ಲಿ ಸರ್ಕಾರ ಏನು ಮಾಡುತ್ತದೆ ಎನ್ನುವ ಬಗ್ಗೆಯೂ ಹೇಳಬೇಕು. ಒಂದು ವೇಳೆ ಯಾರೂ ಬರಲಿಲ್ಲವೆಂದರೆ, ಕೆಲವು ಹಳ್ಳಿಗಳಲ್ಲಿ ಮನೆ ಕಟ್ಟುತ್ತೀರಿ, ಕೆಲವು ಹಳ್ಳಿಗಳಲ್ಲಿ ಆಗಲಿಲ್ಲವೆಂದರೆ, ಅಲ್ಲಿಯ ಶಾಸಕರಾಗಿ ಜನರಿಗೆ ಉತ್ತರ ಹೇಳುವುದು ಕಷ್ಟವಾಗುತ್ತದೆ. ಆ ಊರಲ್ಲಿ ಮನೆಗಳನ್ನು ಕಟ್ಟಿಸಿದ್ದಾರೆ, ನಮ್ಮ ಊರಿನಲ್ಲಿ ಮನೆ ಕಟ್ಟಿಸಿಲ್ಲವೆಂದು ಕೇಳುತ್ತಾರೆ, ಆ ರೀತಿ ಭಾವನೆ ಅವರಿಗೆ ಬರುತ್ತದೆ. ಯಾರಾದರೂ ದಾನಿಗಳು ಮುಂದೆ ಬಂದರೆ ದಾನಿಗಳಿಂದಾದರೂ ಕಟ್ಟಿಸಬೇಕು, ಒಂದು ವೇಳೆ ದಾನಿಗಳು ಮುಂದೆ ಬರದಿದ್ದರೆ ಸರ್ಕಾರ ಮುಂದೆ ನಿಂತು ಆ ಮನೆಗಳನ್ನು

ಮುಗಿಸಿಕೊಡಬೇಕೆಂದು ಮನವಿ ಮಾಡುತ್ತೇನೆ. ತಾವು ಕಳೆದ ಸಲ ಸಾವಯವ ಕೃಷಿಗೆ 100 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಇದರಲ್ಲಿ ಯಾರು ಕೆಲಸ ಮಾಡುತ್ತಿದ್ದಾರೆ ಅವರ್ಯಾರೂ ಶಾಸಕರುಗಳನ್ನು contact ಮಾಡುತ್ತಿಲ್ಲ. ಇದು ಸರ್ಕಾರದ ಕಾರ್ಯಕ್ರಮ ಹೌದೋ ಅಲ್ಲವೋ ಎನ್ನುವ ಅನುಮಾನ ಬರುತ್ತದೆ. ಇದರಲ್ಲಿ ಯಾರ್ಯಾರೋ ಇದ್ದಾರೆ. ಯಾರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ, ಏನು ಕೆಲಸ ಮಾಡುತ್ತಿದ್ದಾರೆ, ಏನು ಕೆಲಸ ಆಗಿದೆ ಎನ್ನುವುದು ಯಾರಿಗೂ ಗೊತ್ತಾಗುತ್ತಿಲ್ಲ. ಅದೇ ರೀತಿ ಈ ನಂಜುಂಡಪ್ಪ ವರದಿಯ ಬಗ್ಗೆ ನಾವು ಕಳೆದ ಸಲ ಸಹ ಹೇಳಿದ್ದೇವೆ. ಸರ್ಕಾರದ ಕಾರ್ಯಕ್ರಮಗಳಲ್ಲಿ ನಮ್ಮನ್ನೇ ನಿರ್ಲಕ್ಷ್ಯ ಮಾಡಿ ಈ ತರಹ ಮಾಡಿದರೆ ಹೇಗೆ? ಇದನ್ನು ಯಾವುದೋ agencyಗೆ ಕೊಟ್ಟಿದ್ದಾರೆ. ಅವರು ಯಾರೋ ಬೆಂಗಳೂರಿನವರು ಎಲ್ಲೋ ಬಂದು ಯಾರಿಗೋ appoint ಮಾಡಿ ಕೆಲವರಿಗೆ 1500 ರೂ., ಕೆಲವರಿಗೆ 2500 ರೂ. ಸಂಬಳ ಕೊಡುತ್ತಾರೆ. 100 ಕೋಟಿ ರೂ.ಗಳನ್ನು ಅವರ ಮನಸ್ಸಿಗೆ ಬಂದಂತೆ ಖರ್ಚು ಮಾಡುವುದಕ್ಕೆ ಸರ್ಕಾರ ಕೊಟ್ಟಿದೆ ಎನ್ನುವ ಭಾವನೆ ನಮ್ಮಲ್ಲಿ ಇವತ್ತಿದೆ. ಅವರು ಯಾರು ಎಲ್ಲಿ ಕೆಲಸ ಮಾಡುತ್ತಿದ್ದಾರೆ, ಏನು ಸಾವಯವ ಕೃಷಿ ಯಾವುದೂ ಅರ್ಥವಾಗುತ್ತಿಲ್ಲ. ಏಕೆಂದರೆ, ನಾನು ಆ ಭಾಗದಿಂದ ಬಂದಿರುವುದರಿಂದ ಅಲ್ಲಿ ಏನು ತೊಂದರೆಯಿದೆ ಎಂಬುದನ್ನು ಹೇಳಬೇಕಾಗುತ್ತದೆ. ವಿದ್ಯುತ್ತಿನ ಬಗ್ಗೆ ಈಗಾಗಲೇ ಮಾತನಾಡಿದರು ನಾನು ಈ ಬಗ್ಗೆ ಹೆಚ್ಚಿಗೆ ಮಾತನಾಡುವುದಿಲ್ಲ. ಒಂದು ಸಾವಿರ ರೂಪಾಯಿಗಳನ್ನು ಸಣ್ಣ ಅತಿ ಸಣ್ಣ ರೈತರಿಗೆ ಕೊಟ್ಟರು. ಇದು ಏನಾಗಿದೆ ಎಂದರೆ ಈ ಸಾವಿರ ರೂಪಾಯಿಗಳಿಂದ ಯಾವ ರೈತರನೂ ಉದ್ಧಾರವಾಗಿಲ್ಲ. ಅಲ್ಲಿ ಉದ್ದೇಶ ಏನು ಹೇಳಿದಿರಿ, ಆದರೆ ಅಲ್ಲಿ ಏನಾಗಿದೆ ಎಂದರೆ, ಚೆಕ್‌ಗಳು account payee ಚೆಕ್ ಇಲ್ಲ. ಯಾರದೋ ಕೈಯಲ್ಲಿ ಕೊಟ್ಟಿದ್ದರಿಂದ ಯಾರ್ಯಾರು ಬೇಕೋ ಅವರು ಆ ಚೆಕ್‌ಗಳನ್ನು ತೆಗೆದುಕೊಂಡು ಬಿಟ್ಟಿದ್ದಾರೆ. ಹನುಮಂತ, ರಾಮಣ್ಣ, ಭೀಮಣ್ಣ ಎಂದು ಬರೆದರು. Account payee ಚೆಕ್‌ಗಳನ್ನು ಕೊಡಲಿಲ್ಲ. ಇವತ್ತು ಎಲ್ಲರದೂ ಅಕೌಂಟ್‌ಗಳಿವೆ. NREG

6.10 ಪಿ.ಎಂ.

ಬಂದಿರುವುದರಿಂದ ಕೂಲಿ ಮಾಡುವವರದೂ ಕೂಡ ಬ್ಯಾಂಕ್‌ನಲ್ಲಿ ಅಕೌಂಟ್‌ಗಳಿವೆ. ನೀವು ಕೊನೆಪಕ್ಷ ಕ್ರಾಸ್ಡ್ ಚೆಕ್ ಕೊಟ್ಟಿದ್ದರೆ ಅವರಿಗಾದರೂ ಹೋಗಿ ಮುಟ್ಟುತ್ತಿದ್ದವು. ಕ್ರಾಸ್ಡ್ ಚೆಕ್ ಇಲ್ಲದೆ ಹಂಚಿರುವುದರಿಂದ ಯಾರು ಬೇಕೋ ಅವರು ಎಲ್ಲೋ ಬ್ಯಾಂಕಿಗೆ ಹೋಗಿ ಹಾಕಿ ಸಹಿ ಮಾಡಿ ತೆಗೆದುಕೊಂಡು ಹೋಗಿದ್ದಾರೆ. ಸುಮಾರು 500 ಕೋಟಿ ರೂಪಾಯಿಗಳನ್ನು ಏನೋ ಮಾಡಲು ಹೋಗಿ ಅದು ಏನೋ ಆಗಿದೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಯೋಚಿಸಿದ್ದರೆ ಕೊನೆಪಕ್ಷ ಅಸೆಟ್ ಆದರೂ ಕ್ರಿಯೇಟ್ ಆಗುತ್ತಿತ್ತು. ಅದೇ ರೀತಿಯಲ್ಲಿ ಆಸ್ಪತ್ರೆಗಳ ಬಗ್ಗೆ ಹೇಳುವುದಾದರೆ, 108ರ ಬಗ್ಗೆ ಸಾಕಷ್ಟು ಮಾತನಾಡಿದ್ದೀರಿ. ನಮ್ಮಲ್ಲಿ ಯಾವ ಆಸ್ಪತ್ರೆಯಲ್ಲಿಯೂ ಡಾಕ್ಟರ್ಸ್ ಇಲ್ಲ. ನಮ್ಮಲ್ಲಿ 100 ಬೆಡ್ ಆಸ್ಪತ್ರೆ ಇದೆ. ಅಲ್ಲಿಯೂ ಕೂಡ ಡಾಕ್ಟರ್ಸ್ ಇಲ್ಲ. ನೀವು ಅಲ್ಲಿಗೆ ಡಾಕ್ಟರ್ಸ್ ಮತ್ತು ಸ್ಟ್ಯಾಫ್‌ಗಳನ್ನು ಹಾಕಲಿಲ್ಲವೆಂದರೆ ಆ ಆಸ್ಪತ್ರೆಗಳನ್ನು ಲಾಡ್ಜಿಂಜ್ ಮಾಡಬೇಕಾದ ಪರಿಸ್ಥಿತಿ ಇದೆ. 100 ಬೆಡ್ ಆಸ್ಪತ್ರೆಯಲ್ಲಿ ಡಾಕ್ಟರ್ಸ್ ಇಲ್ಲ. ಎಲ್ಲಾ ಕಡೆ ಡಾಕ್ಟರ್ಸ್‌ಗಳನ್ನು ಹಾಕಲಾರದೆ ನಾವು ಆರೋಗ್ಯದಲ್ಲಿ ಏನೋ ಸುಧಾರಣೆ ಮಾಡುತ್ತೇವೆನ್ನುವುದು ಬಹಳ ಕನಸಿನ ಮಾತಾಗುತ್ತದೆ. ಇದರಲ್ಲಿ ಬರೆದಿರುವುದು ಒಂದು ಆಂಬ್ಯುಲೆನ್ಸ್ ಇಟ್ಟು ಅವರನ್ನು ಖಾಸಗಿ ಆಸ್ಪತ್ರೆಗಳಿಗೆ ಕಳುಹಿಸತಕ್ಕಂಥ ಕೆಲಸವಾಗುತ್ತದೆ, ಇದರ ಬಗ್ಗೆ ಮಾತನಾಡಿದ್ದಾರೆ. ನೀವು ಡಾಕ್ಟರ್ಸ್‌ನ್ನು ಹಾಕಬೇಕು.

ಶ್ರೀ ಕಾಕಾ ಸಾಹೇಬ್ ಪಾಂಡುರಂಗ ಪಾಟೀಲ್ (ನಿಪ್ಪಾಣಿ) : ಮಾನ್ಯ ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದನೆಗಳು. ಮಾನ್ಯ ರಾಜ್ಯಪಾಲರವರು ಏನು ಭಾಷಣ ಮಾಡಿದ್ದಾರೆ ಅದರಲ್ಲಿ ನಮ್ಮ ಕರ್ನಾಟಕದ ಜನರಿಗೆ ಯಾವುದೇ ಒಂದು ವಿಷನ್ ನೋಡಬೇಕೆನ್ನುವ ವಿಚಾರ ಹೇಳಿಲ್ಲ. ರಾಜಕೀಯವಾಗಿ ನಮ್ಮ ವಿರೋಧ ಪಕ್ಷದ ಧುರೀಣರು ಮತ್ತು ಹಲವಾರು ನಾಯಕರು ಹಾಗೂ ಶಾಸಕರು ಮಾತನಾಡಿದರು. ಆದರೆ ಕೆಲವೊಂದು ಅಂಶಗಳನ್ನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇರುವುದರಿಂದ ಅವರ

ಗಮನಕ್ಕೆ ತರಬಯಸುತ್ತೇನೆ. ಕಳೆದ ವರ್ಷ ಬೆಳಗಾವಿಯಲ್ಲಿ ಅಧೀವೇಶನ ನಡೆದಾಗ ಜಿಲ್ಲಾ ಪುನರ್ ರಚನೆ ಮತ್ತು ತಾಲ್ಲೂಕು ಪುನರ್ ರಚನೆ ಕಮಿಟಿಯ ಶಿಫಾರಸ್ಸಿನಂತೆ ನಿಪ್ಪಾಣಿ ಮತ್ತು ಕಿತ್ತೂರು ಎರಡು ತಾಲ್ಲೂಕುಗಳನ್ನು ಬೆಳಗಾವಿ ಜಿಲ್ಲೆಯಲ್ಲಿ ಮಾಡೋಣವೆಂದು ಹೇಳಿದ್ದರು. ಹೈದರಾಬಾದ್ ಕರ್ನಾಟಕದಲ್ಲಿ ಯಾದಗಿರಿ ಹೊಸ ಜಿಲ್ಲೆಯಾಯಿತು ಬಹಳ ಸಂತೋಷ. ಅದೇ ಕಾಲಕ್ಕೆ ನಿಪ್ಪಾಣಿ ಮತ್ತು ಕಿತ್ತೂರು ತಾಲ್ಲೂಕುಗಳು ಆಗುವುದಕ್ಕೆ ಏನೂ ತೊಂದರೆಯಿದ್ದಿದ್ದಿಲ್ಲ. ಏಕೆಂದರೆ, ಯಾವುದೋ ಒಂದು ತಾಲ್ಲೂಕು ಪ್ಲೇಸ್ ಇರಬೇಕೆಂದು ಆದಕ್ಕೆ ಯಾರದೂ ವಿರೋಧವಿಲ್ಲ. ಸಂಪೂರ್ಣ ಸ್ವಚ್ಛತಾ ಆಂದೋಲನ ದೇಶದಲ್ಲಿ ನಡೆಯುತ್ತಿದೆ. ನಮ್ಮ ರಾಜ್ಯ ಇಡೀ ದೇಶದಲ್ಲಿ 18ನೇ ಸ್ಥಾನದಲ್ಲಿದೆ. ಅಂದರೆ ಇಷ್ಟು ಲೋಯೆಸ್ಟ್ ಪ್ರಗತಿ ಇದೆ. ಮಹಿಳೆಯರಿಗೆ ಈ ಬಗ್ಗೆ ವಿಶೇಷ ಕಾಳಜಿ ವಹಿಸಿ ಗ್ರಾಮೀಣ ನೈರ್ಮಲೀಕರಣದ ಬಗ್ಗೆ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಬೇಕಾಗಿತ್ತು. ಆ ವಿಚಾರ ಇದರಲ್ಲಿ ಪ್ರಸ್ತಾಪಿಸಿಲ್ಲ. ನಮ್ಮ ಶಾಸಕ ಮಿತ್ರರೊಬ್ಬರು ಬೆಳಗಾವಿಯಲ್ಲಿ ಕಿತ್ತೂರು ಚೆನ್ನಮ್ಮ ವಿಶ್ವವಿದ್ಯಾಲಯ ಆಗಬೇಕೆಂದರು ಇದನ್ನು ನಾವು ಸ್ವಾಗತಿಸುತ್ತೇವೆ. ಆದರೂ ಕೂಡ ಹಿಂದಿನ ಹಲವಾರು ಸರ್ಕಾರಗಳು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಕಾಂಗ್ರೆಸ್ ಜೆಡಿ(ಎಸ್) ಸಮ್ಮಿಶ್ರ ಸರಕಾರದಲ್ಲಿ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದಾಗ ಮಾನ್ಯ ಸಿದ್ದರಾಮಯ್ಯನವರು ಉಪಮುಖ್ಯಮಂತ್ರಿಯಾಗಿದ್ದಾಗ ಆಗಿನ ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳಾಗಿದ್ದ ಮಾನ್ಯ ಪ್ರಕಾಶ್ ಹುಕ್ಕೇರಿಯವರ ವಿಶೇಷ ಕಾಳಜಿಯಿಂದ ನಮ್ಮ ಬೆಳಗಾವಿಗೆ ಒಂದು ಹೊಸ ಮೆಡಿಕಲ್ ಕಾಲೇಜು ಆಗಿದೆ. ಬಹಳ ನಿರ್ಲಕ್ಷ್ಯಿಸಿದಿರಿ ಎಂದಲ್ಲ. ಹಲವಾರು ಸರ್ಕಾರಗಳು ಅವರವರ ಕಾಲದಲ್ಲಿ ಮಾಡಿಕೊಂಡು ಬಂದಿವೆ. ಆದರೂ ಇತ್ತೀಚಿನ ದಿನಗಳಲ್ಲಿ ನಮ್ಮ ಬೆಳಗಾವಿ ಜಿಲ್ಲೆಯಾಗಿರಬಹುದು ಅಥವಾ ವಿಶೇಷವಾಗಿ ಗಡಿ ಭಾಗದಲ್ಲಿ ರಸ್ತೆಯಾಗಲಿ, ಸೇತುವೆಯಾಗಲಿ, ಇವುಗಳನ್ನು ಬೇರೆ ರಾಜ್ಯದೊಡನೆ ಕಂಪೇರ್ ಮಾಡಿದರೆ ಭಯಂಕರವಾಗಿ ನಾವು ಹಿಂದುಳಿದಿದ್ದೇವೆ. ಏಕೆಂದರೆ, ಬಯಲು ಸೀಮೆಯ ಬಗ್ಗೆ ಇದರಲ್ಲಿ ಯಾವ

ವಿಚಾರವೂ ಇಲ್ಲ. ಬಯಲು ಸೀಮೆಯ ವ್ಯಾಪ್ತಿಗೆ ಸುಮಾರು 74 ತಾಲ್ಲೂಕುಗಳು ಬರುತ್ತಿವೆ, ಇವರಿಗೆ ನಾವು ಏನು ಸಹಾಯ ಮಾಡುತ್ತೇವೆ, ಏನು ಕಾರ್ಯಕ್ರಮ ಕೊಡುತ್ತೇವೆ, ಎನ್ನುವುದರ ಬಗ್ಗೆ ಇದರಲ್ಲಿ ಯಾವ ವಿಚಾರವೂ ಇಲ್ಲ. ಅದೇ ಪ್ರಕಾರ BADPಗೆ ಗಡಿನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಏನು ಹಣ ಒದಗಿಸುತ್ತೇವೆ ಎನ್ನುವ ವಿಚಾರವೂ ಕೂಡ ಇದರಲ್ಲಿ ಇಲ್ಲ. ವಿಶೇಷವಾಗಿ ನಮ್ಮ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಇಲ್ಲಿಯೇ ಇದ್ದಾರೆ. ಅವರಿಗೆ ನಾನು ವಿನಂತಿ ಮಾಡುವುದೇನೆಂದರೆ, ಈ ಜಲ ನಿರ್ಮಲ ಯೋಜನೆಯಡಿಯಲ್ಲಿ ಬಹುಗ್ರಾಮಗಳ ಯೋಜನೆ ಏನು ಅನುಷ್ಠಾನಕ್ಕೆ ಬಂದಿವೆ ಅದರ ಉಸ್ತುವಾರಿ ಮಾಡಬೇಕಾದರೆ ಆ ಗ್ರಾಮಪಂಚಾಯಿತಿ ಕಡೆಯಿಂದ ಆಗುವುದಿಲ್ಲ. ಹೀಗಾಗಿ ಇದಕ್ಕೊಂದು special task force ಮಾಡಿ ಜಿಲ್ಲಾ ಪಂಚಾಯತ್ ಮುಖಾಂತರ ಮಾಡಬೇಕು. ಹಿಂದಿನ ಸಭಾಧ್ಯಕ್ಷರಾದಂಥ ಮಾನ್ಯ ಜಗದೀಶ್ ಶೆಟ್ಟರ್‌ರವರು ಮತ್ತು ಸಭಾಪತಿಗಳಾಗಿರುವ ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಅಕ್ಟೋಬರ್ ತಿಂಗಳಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಹೊಸ ರೈಲು ಯೋಜನೆಗಳು ಯಾವ್ಯಾವು ತೆಗೆದುಕೊಳ್ಳಬೇಕೆನ್ನುವ ವಿಚಾರಕ್ಕೆ ಒಂದು 18 ಜನ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿದರು. ಅದರಲ್ಲಿ ಮಾನ್ಯ ಗೃಹ ಸಚಿವರು, ಮಾನ್ಯ ಲೋಕೋಪಯೋಗಿ ಸಚಿವರು, ಮಾನ್ಯ ಕಂದಾಯ ಸಚಿವರು, ಮಾನ್ಯ ಟೂರಿಸಂ ಸಚಿವರು, ಎಲ್ಲರೂ ಇದ್ದರು. ನಾವು ಅದರಲ್ಲಿದ್ದೇವೆ. ನಮ್ಮ ಪಕ್ಷದ ವತಿಯಿಂದ ಆ ಸಮಿತಿಯಲ್ಲಿ ನಾವೊಬ್ಬರು ಸದಸ್ಯರಾಗಿದ್ದೇವೆಂದ ಮೇಲೆ ನಮ್ಮ ಕಡೆಯಿಂದಲೂ ಕೆಲವು ಸಲಹೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಬಹಳ ನೋವಿನಿಂದ ನಾನು ಈ ಮಾತನ್ನು ಹೇಳುತ್ತೇನೆ, ಕಳೆದ ಐದು ತಿಂಗಳಿನಲ್ಲಿ ಆ ಕಮಿಟಿಯ ಸಭೆ ಒಂದು ದಿವಸವೂ ಆಗಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮುಖಾಂತರ ವಿನಂತಿಸುತ್ತೇನೆ. ಆ ಕಮಿಟಿಯಿಂದ ಬೇಗನೆ ವರದಿ ತರಿಸಿ ಕೇಂದ್ರದಲ್ಲಿ ನಮ್ಮ ಮಾನ್ಯ ಮುನಿಯಪ್ಪನವರು ರೈಲ್ವೆ ಖಾತೆಯ ಸಚಿವರಾಗಿರುವುದರಿಂದ,

ವಿಶೇಷವಾಗಿ ಕರ್ನಾಟಕಕ್ಕೆ ರೈಲ್ವೆ ಮಾರ್ಗಗಳು ಬರುತ್ತಿವೆ. ಅದರಲ್ಲಿಯೂ ವಿಶೇಷವಾಗಿ ಧಾರವಾಡದಿಂದ ಬೆಳಗಾವಿಗೆ ಬರುವ ರೈಲು ಧಾರವಾಡ – ಕಿತ್ತೂರು – ಬೆಳಗಾವಿಗೆ ಏನು ಬರುತ್ತದೆ ಅದನ್ನೇ ಮುಂದುವರಿಸಿ ಬೆಳಗಾವಿ – ಸಂಕೇಶ್ವರ – ನಿಪ್ಪಾಣಿ – ಕೊಲ್ಲಾಪುರವರೆಗೆ ಮಾಡಿ ಎನ್ನುವ ಬೇಡಿಕೆ ನಮ್ಮ ಭಾಗದಿಂದ ಇದೆ. ಆ ದೃಷ್ಟಿಯಿಂದ ತಾವು ಇದನ್ನು ಪರಿಗಣಿಸಬೇಕೆಂದು ಮನವಿ ಮಾಡುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಮತ್ತೊಮ್ಮೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ.ವಿರೂಪಾಕ್ಷಪ್ಪ (ಚನ್ನಗಿರಿ) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಭಾರತದಲ್ಲಿಯೇ ಕರ್ನಾಟಕ ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ಭಾರತೀಯ ಜನತಾ ಪಾರ್ಟಿ ಅಧಿಕಾರಕ್ಕೆ ಬಂತು. ಈ ಹಿಂದೆ ಆಡಳಿತ ನಡೆಸಿದಂಥ ಕಾಂಗ್ರೆಸ್ ಮತ್ತು ಜೆಡಿ(ಎಸ್) ನಾಯಕರುಗಳು, ಭಾರತೀಯ ಜನತಾ ಪಕ್ಷದ ಸರ್ಕಾರ, ಮಾನ್ಯ ಯಡಿಯೂರಪ್ಪನವರ ನೇತೃತ್ವದ ಸರ್ಕಾರ ಮಾಡಿರತಕ್ಕಂಥ ಅಭಿವೃದ್ಧಿಯ ಕೆಲಸಗಳನ್ನು ಒಪ್ಪಿಕೊಳ್ಳುವುದಕ್ಕೆ ಅವರು ತಯಾರಿಲ್ಲ. ಅವರು ಏನು ಮಾಡುತ್ತಾರೆಂದರೆ, ಕಪ್ಪು ಕನ್ನಡಕ ಹಾಕಿಕೊಂಡು ನೋಡುತ್ತಿರುವುದರಿಂದ ಮಾನ್ಯ ಯಡಿಯೂರಪ್ಪನವರು ಏನೇನು ಅಭಿವೃದ್ಧಿ ಮಾಡಿದ್ದಾರೆನ್ನುವುದು ಅವರಿಗೆ ಗೋಚರವಾಗುತ್ತಿಲ್ಲ. ನಾನು ಒಂದು ಮಾತನ್ನು ಕೇಳುವುದಕ್ಕೆ ಇಚ್ಛಿಸುತ್ತೇನೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಕೆಲವು ಯೋಜನೆಗಳಿಗೆ ಆಯಾಯ ಕ್ಷೇತ್ರದ ಶಾಸಕರುಗಳನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಮಾನ್ಯ ಯಡಿಯೂರಪ್ಪನವರ ಕಾಲದಲ್ಲಿ ಬಂದಂಥ ಗಂಗಾಕಲ್ಯಾಣ ಇರಬಹುದು, ಹಿಂದುಳಿದ ವರ್ಗದವರಿಗೆ ಕೊಡುವ ಸವಲತ್ತುಗಳಿರಬಹುದು, ಯಾವ ಕಾಲದಲ್ಲಿ ಬಂದಿತ್ತು ಎಂದು ಹೇಳಿ ಅವರ ಆತ್ಮ ಸಾಕ್ಷಿಯಾಗಿಟ್ಟುಕೊಂಡು ಮಾತನಾಡಲಿ. ಒಂದು ನಿಮಿಷ ಇರಿ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ನಂತರ ನೀವು ಮಾತನಾಡಿ. ಹೌದು ನಾನು ಕರೆಕ್ಟ್ ಆಗಿ ಮಾತನಾಡುತ್ತಿದ್ದೇನೆ, ನಿಮ್ಮ ಕ್ಷೇತ್ರದಲ್ಲಿ ನಿಮ್ಮನ್ನೇ ಅಧ್ಯಕ್ಷರನ್ನಾಗಿ ಮಾಡಿಲ್ಲವೆ? ಯಾರ ಕಾಲದಲ್ಲಿ ಶಾಸಕರನ್ನು ಅಧ್ಯಕ್ಷರನ್ನಾಗಿ

ಮಾಡಿದ್ದೀರಿ? ಯಾವಾಗಲೂ ಮಾಡಿಲ್ಲ. ಸಂಧ್ಯಾ ಸುರಕ್ಷಾ ಯೋಜನೆಯ ಬಗ್ಗೆ ಹೇಳುವುದಾದರೆ, ಇವತ್ತು ಒಂದು ತಾಲ್ಲೂಕಿನಲ್ಲಿ ಸಂಧ್ಯಾ ಸುರಕ್ಷಾ ಯೋಜನೆ ಇರಬಹುದು, ಅಂಗವಿಕಲರ ವೇತನ ಇರಬಹುದು, ವಿಧವಾ ವೇತನ ಇರಬಹುದು, ಕನಿಷ್ಠ ಪಕ್ಷ 10 ರಿಂದ 15 ಸಾವಿರ ಜನರಿಗೆ ಪ್ರತಿ ತಾಲ್ಲೂಕಿನಲ್ಲಿ ಸಿಗತಕ್ಕಂಥ ವ್ಯವಸ್ಥೆಯಾಗಿದೆ. ಇವತ್ತು ಆ ಜನ ಯಡಿಯೂರಪ್ಪನವರು ನಮಗೆ ಜೀವನ ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ.

ಶ್ರೀ ನೆ.ಲ.ನರೇಂದ್ರಬಾಬು : ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ಶಾಸಕರನ್ನು ಸಂಧ್ಯಾ ಸುರಕ್ಷಾ ಯೋಜನೆಗೆ ಅಧ್ಯಕ್ಷರನ್ನಾಗಿ ಮಾಡಿದ್ದಾರೆಯೆ?

ಶ್ರೀ ಎಂ.ಪಿ.ಕುಮಾರಸ್ವಾಮಿ : ನೀವು ಸರಿಯಾಗಿ ಕೇಳಿಸಿಕೊಳ್ಳಲಿಲ್ಲ.

ಶ್ರೀ ಕೆ.ಎಂ.ವಿರೂಪಾಕ್ಷಪ್ಪ : ಅದಕ್ಕೆ ಅಲ್ಲಾರಿ. ನೀವು ಬೆಂಗಳೂರಿನವರು, ಪಟ್ಟಣದವರು ನಿಮಗೆ ಗೊತ್ತಿಲ್ಲ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಬರುವ ಯೋಜನೆಗಳಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ, ಗಂಗಾ ಕಲ್ಯಾಣ ಯೋಜನೆ ಇರಬಹುದು, ಹಿಂದುಳಿದ ವರ್ಗಗಳ ಜನರಿಗೆ ಸವಲತ್ತು ಕೊಡುವುದು ಇರಬಹುದು.

ಶ್ರೀ ಯು.ಟಿ.ಖಾದರ್ : ಮಾನ್ಯ ಸದಸ್ಯರಿಗೆ ಒಂದೇ ಪ್ರಶ್ನೆ. ಗಂಗಾ ಕಲ್ಯಾಣ ಯೋಜನೆಯಲ್ಲಿ ಎಷ್ಟು ಬೋರ್‌ವೆಲ್‌ಗಳನ್ನು ಕೊರೆಸಿದಿರಿ ಹೇಳಿ. ಒಂದೇ ಒಂದು ಬೋರ್‌ವೆಲ್‌ಗಳನ್ನು ಹಾಕಲಿಲ್ಲ.

ಅಧ್ಯಕ್ಷರು : Please ಖಾದರ್‌ರವರೆ ನೀವು ಕುಳಿತುಕೊಳ್ಳಿ. ನೀವು ಮುಗಿಸಿ.

ಶ್ರೀ ಕೆ.ಎಂ.ವಿರೂಪಾಕ್ಷಪ್ಪ : ಮಾನ್ಯ ಅಧ್ಯಕ್ಷರೆ, ಯಾವ ಕಾಲದಲ್ಲಿ ಒಂದು ಕಾರ್ಪೋರೇಷನ್ ಅಭಿವೃದ್ಧಿಗಾಗಿ 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು? ಮುನ್ಸಿಪಾಲಿಟಿಗಳಿಗೆ ಯಾವ ಕಾಲದಲ್ಲಿ 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು? ಪಟ್ಟಣ ಪಂಚಾಯಿತಿಗಳಿಗೆ ಯಾವ ಕಾಲದಲ್ಲಿ 2 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು? ಇಷ್ಟು ಹಣ ಬಿಡುಗಡೆ ಮಾಡಿ ಪಟ್ಟಣಗಳನ್ನು ಅಭಿವೃದ್ಧಿ ಮಾಡುತ್ತಿದ್ದಾರೆ. ಸುವರ್ಣ ಗ್ರಾಮ

ಯೋಜನೆಯಡಿಯಲ್ಲಿ ಹಳ್ಳಿಗಳ ಅಭಿವೃದ್ಧಿಯನ್ನು ಮಾಡುತ್ತಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಬಿಜೆಪಿ, ಕಾಂಗ್ರೆಸ್, ಜನತಾದಳ ಎಂದು ಮಾಡುತ್ತಿದ್ದಾರೆಯೆ? ಶಿಕ್ಷಣ ಕ್ಷೇತ್ರದಲ್ಲಿ 8ನೇ ತರಗತಿಯಿಂದ ಓದುತ್ತಿರತಕ್ಕಂಥ ಎಲ್ಲಾ ಮಕ್ಕಳಿಗೆ ಸೈಕಲ್ ಕೊಡುವ ವ್ಯವಸ್ಥೆ ಮಾಡಿದ್ದಾರೆ. ವಸತಿ ಯೋಜನೆಯ ಬಗ್ಗೆ ಮಾತನಾಡಿದ ಮಾನ್ಯ ಕೆಲವು ಸದಸ್ಯರು ಒಂದೇ ಒಂದು ನಿವೇಶನ ಕೊಟ್ಟಿಲ್ಲವೆಂದು ಹೇಳಿದರು. 80,861 ನಿವೇಶಗಳನ್ನು ವಿತರಿಸಿದ್ದಾರೆ. ಇಡೀ ರಾಜ್ಯಾದ್ಯಂತ ಮಾಡಿದ್ದಾರೆ. ನಿಮ್ಮ ಒಂದೇ ಕ್ಷೇತ್ರಕ್ಕೆ ಕೊಡಬೇಕೆಂದು ಇದೆಯೆ?

ಅಧ್ಯಕ್ಷರು : ಈ ಕಡೆ ನೋಡಿಕೊಂಡು ಮಾತನಾಡಿ, ನೀವು ಅವರಿಗೆ ಉತ್ತರ ಕೊಡಬೇಡಿ.

ಶ್ರೀ ಕೆ.ಎಂ.ವಿರೂಪಾಕ್ಷಪ್ಪ : ವಸತಿ ಕ್ಷೇತ್ರದಲ್ಲಿ ಸಾಕಷ್ಟು ಸಾಧನೆಯನ್ನು ಮಾಡಿದ್ದಾರೆ. ಆರೋಗ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಇವತ್ತು ರಸ್ತೆಗಳ ಅಭಿವೃದ್ಧಿ ಇರಬಹುದು, ಗ್ರಾಮೀಣಾಬಿವೃದ್ಧಿ ಇರಬಹುದು, ಕುಡಿಯುವ ನೀರಿನ ಯೋಜನೆ ಇರಬಹುದು, ಎಲ್ಲದರಲ್ಲೂ ಒಳ್ಳೆಯ ಅಭಿವೃದ್ಧಿಯನ್ನು ಮಾಡಿದ್ದಾರೆ. ಆದರೆ, ಏನಾಗಿದೆ ಎಂದರೆ ಇದೆಲ್ಲವನ್ನು ಸಹಿಸಿಕೊಳ್ಳುವುದಕ್ಕೆ ಇವರಿಗೆ ಆಗುತ್ತಿಲ್ಲ. ಆದ್ದರಿಂದ "ಮಾನ್ಯ ಯಡಿಯೂರಪ್ಪನವರ ಸರ್ಕಾರದಲ್ಲಿ ಯಾವುದೂ ಕೂಡ ಅಭಿವೃದ್ಧಿಯಾಗಿಲ್ಲ. ಎಲ್ಲ ಮಾಡಿರತಕ್ಕಂಥದ್ದು ಕೇವಲ ಭ್ರಷ್ಟಾಚಾರ' ಎಂಬ ಮಾತನ್ನು ಹೇಳುತ್ತಿದ್ದಾರೆ. ನಾವು ಕೇವಲ ಒಂದು ವಿಷಯಕ್ಕೆ ಬರೋಣ. ಅದೇನೆಂದರೆ, ಈ ಸದನದಲ್ಲಿ ನೈಸ್ ಯೋಜನೆ ಬಗ್ಗೆ ತಿಳಿದುಕೊಳ್ಳುವಂಥ ಅಧಿಕಾರ ನಮಗೆ ಇದೆ. ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ದೇವೇಗೌಡರು ನೈಸ್ ಯೋಜನೆ ಬಗ್ಗೆ ವಿವಿಧ ಪಕ್ಷಗಳ ಸಹಕಾರವನ್ನು ಪಡೆದು ನಾನು ಲೋಕಸಭೆಯಲ್ಲಿ ಮಾತನಾಡುತ್ತೇನೆಂಬ ಅವರ ಹೇಳಿಕೆ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಬಂದಿದೆ. ಆದ್ದರಿಂದ, ನೈಸ್ ಯೋಜನೆಯ ಬಗ್ಗೆ ಈ ಸದನದ ಸದಸ್ಯರಿಗೆ ಮತ್ತು ಕರ್ನಾಟಕ ರಾಜ್ಯದ ಪ್ರತಿಯೊಬ್ಬ ಪ್ರಜೆಯು ತಿಳಿದುಕೊಳ್ಳಬೇಕಾದಂಥ ಅವಶ್ಯಕತೆ ಇದೆ. ಆದ್ದರಿಂದ, ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರಲ್ಲಿ

ಹಾಗೂ ಮಾನ್ಯ ಸಭಾಧ್ಯಕ್ಷರಲ್ಲಿ ಒತ್ತಾಯ ಮಾಡುವುದೇನೆಂದರೆ, ಇಲ್ಲಿ ನೈಸ್ ಯೋಜನೆ ಬಗ್ಗೆ ಚರ್ಚೆಯಾಗಬೇಕು. ಮತ್ತೆ ನೈಸ್ ಯೋಜನೆಗೆ ಸಂಬಂಧಪಟ್ಟಂತೆ ನನ್ನ ಹತ್ತಿರ ಇರುವ ಮಾಹಿತಿ ಪ್ರಕಾರ ನೈಸ್ ಯೋಜನೆಗೆ 20.2.1995 ರಂದು MOU ಮಾಡಿಕೊಂಡವರು ಯಾರು? ಅಮೆರಿಕದಿಂದ ಖೇಣಿಯವರನ್ನು ಕರೆದುಕೊಂಡು ಬಂದವರು ಯಾರು? ಮಾನ್ಯ ದೇವೇಗೌಡರು ಈ ಕೆಲಸ ಮಾಡಿದ್ದಾರೆ. ಮತ್ತೆ ಮಾನ್ಯ ಜೆ.ಹೆಚ್.ಪಟೇಲ್‌ರವರ ಕಾಲದಲ್ಲಿ..

ಶ್ರೀ ಎಂ.ಟಿ.ಕೃಷ್ಣಪ್ಪ : ಮಾನ್ಯ ವಿರುಪಾಕ್ಷಪ್ಪನವರೆ, ಒಂದು ನಿಮಿಷ ಯೀಲ್ಡ್ ಆಗಿ.

ಅಧ್ಯಕ್ಷರು : ನೀವು ಯೀಲ್ಡ್ ಆಗ ಬೇಡಿ. ತಮ್ಮ ಮಾತನ್ನು ಮುಂದುವರಿಸಿ.

ಶ್ರೀ ಕೆ.ಎಂ.ವಿರೂಪಾಕ್ಷಪ್ಪ : ನಾನು ಮಾತನಾಡುವುದನ್ನು ತಾವು ಕೇಳಿ. ನಾನು ಏತಕ್ಕಾಗಿ ಈ ವಿಷಯ ಮಾತನಾಡುತ್ತಿದ್ದೇನೆಂಬುದನ್ನು ಹೇಳುತ್ತೇನೆ. ಆದ್ದರಿಂದ, ನಾನು ಮಾತನಾಡಿದ ನಂತರ ತಾವು ಮಾತನಾಡಿ. ನಾವು ಏನು ಮಾಡಿದರೂ ಕೂಡ ಭ್ರಷ್ಟಾಚಾರ ಮಾಡಿದ್ದೀರೆಂಬ ಮಾತನ್ನು ಇವರು ಹೇಳುತ್ತಿರುತ್ತಾರೆ. ಆದ್ದರಿಂದ, ನಾನು ಕೇಳುವುದೇನೆಂದರೆ, ಈ ನೈಸ್ ಯೋಜನೆ ಯಾವಾಗ ಬಂತು? ಖೇಣಿಯನ್ನು ಇಲ್ಲಿಗೆ ಕರೆದುಕೊಂಡು ಬಂದವರು ಯಾರು? ಖೇಣಿಯನ್ನು ಅಮೆರಿಕದಿಂದ ಕರ್ನಾಟಕ ರಾಜ್ಯಕ್ಕೆ ಕರೆದುಕೊಂಡು ಬಂದು ನೈಸ್ ಯೋಜನೆಯ ರಸ್ತೆ ಮಾಡುವುದಕ್ಕೆ ಗುತ್ತಿಗೆ ಕೊಟ್ಟವರು ಯಾರು?

ಶ್ರೀ ಎಂ.ಟಿ.ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಹತ್ತಿರ ಖೇಣಿ ಬಗ್ಗೆ ಸರಿಯಾದ ಮಾಹಿತಿ ಇಲ್ಲ. ಖೇಣಿ ಅಮೆರಿಕದವರಲ್ಲ.

(ಗೊಂದಲ)

ಶ್ರೀ ಕೆ.ಎಂ. ವಿರೂಪಾಕ್ಷಪ್ಪ : ನೀವು ಮಾತನಾಡುವಂಥ ಸಂದರ್ಭದಲ್ಲಿ ಈ ವಿಷಯ ಹೇಳಿ. ಮಾನ್ಯ ಅಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಾರೆ. ಆದ್ದರಿಂದ, ನೀವು ಮಧ್ಯದಲ್ಲಿ ಮಾತನಾಡಬೇಡಿ.

ಶ್ರೀ ಎಂ.ಟಿ.ಕೃಷ್ಣಪ್ಪ : ಅವರು ಮಾತನಾಡುವುದಕ್ಕೆ ನಮ್ಮದೇನೂ ವಿರೋಧ ಇಲ್ಲ. ಖೇಣಿ ಅಮೆರಿಕದವರು ಅಲ್ಲವೆಂದು ನಾನು ಹೇಳಿದೆ ಅಷ್ಟೆ.

(ಗೊಂದಲ)

ಶ್ರೀ ಕೆ.ಎಂ. ವಿರೂಪಾಕ್ಷಪ್ಪ : ಖೇಣಿ ಅಮೆರಿಕ ದೇಶದವರಲ್ಲ ಎಂಬುದು ನನಗೂ ಸಹ ಗೊತ್ತು. ಅವರು ಅಮೆರಿಕ ದೇಶದಲ್ಲಿ ಕಂಟ್ರ್ಯಾಕ್ಟ್ ಮಾಡುತ್ತಿದ್ದರು. ಅಮೆರಿಕದಲ್ಲಿ ಕಂಟ್ರ್ಯಾಕ್ಟ್ ಮಾಡುವವರನ್ನು ಕರ್ನಾಟಕ ರಾಜ್ಯಕ್ಕೆ ಕರೆದುಕೊಂಡು ಬಂದವರು ಯಾರು? ಇದರ ಬಗ್ಗೆ ಚರ್ಚೆ ಆಗಬೇಕಾಗುತ್ತದೆ. ಮಾನ್ಯ ಜೆ.ಹೆಚ್.ಪಟೇಲ್‌ರವರ ಕಾಲದಲ್ಲಿ 18,70,177 ಎಕರೆಗೆ ಭೂಸ್ವಾಧೀನ ಅಧಿಸೂಚನೆ ಮಾಡಿದ್ದಾರೆ. ಮತ್ತೆ ಮಾನ್ಯ ಎಸ್.ಎಂ.ಕೃಷ್ಣರವರ ಕಾಲದಲ್ಲಿ 2,23,606 ಎಕರೆಗೆ ಭೂಸ್ವಾಧೀನ ಅಧಿಸೂಚನೆ ಹೊರಡಿಸಿದ್ದಾರೆ. ಅದೇ ರೀತಿಯಾಗಿ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ಕಾಲದಲ್ಲಿ 204 ಎಕರೆಗೆ ಅಧಿಸೂಚನೆ ಮಾಡಿ 142 ಎಕರೆಯನ್ನು ಖೇಣಿಯವರಿಗೆ ಹಸ್ತಾಂತರ ಮಾಡಿದ್ದಾರೆ. ಮತ್ತೆ ರಾಷ್ಟ್ರಪತಿ ಆಡಳಿತದಲ್ಲಿ 19 ಗುಂಟೆಯನ್ನು ಮಾಡಿದ್ದಾರೆ. ಆದರೆ, ಮಾನ್ಯ ಬಿ.ಎಸ್.ಯಡಿಯೂರಪ್ಪನವರು ದಿನಾಂಕ 30.05.2008 ರಿಂದ ಕೇವಲ 3.1 ಎಕರೆಗೆ ಹೊಸದಾಗಿ ಪ್ರಾಥಮಿಕ ಅಂತಿಮ ಅಧಿಸೂಚನೆಯನ್ನು ಹೊರಡಿಸಿದ್ದು ಇದು ಕೂಡ ಮಿಸಿಂಗ್ ಲಿಂಕ್‌ಗೋಸ್ಕರ ಮಾಡಲಾಗಿರುತ್ತದೆ. ಆದ್ದರಿಂದ, ನೈಸ್ ಯೋಜನೆ ಬಗ್ಗೆ ತಿಳಿದುಕೊಳ್ಳುವಂಥ ಅಧಿಕಾರ ಈ ಸದನಕ್ಕೆ ಮತ್ತು ಈ ರಾಜ್ಯದ ಜನತೆಗೆ ಇದೆ. ಈ ಸರ್ಕಾರ ಎಲ್ಲವನ್ನು ಭ್ರಷ್ಟಾಚಾರ ಮಾಡಿದೆ ಮತ್ತು ಈ ಸರ್ಕಾರ ಯಾವುದೇ ಅಭಿವೃದ್ಧಿ ಕೆಲಸ ಮಾಡಿಲ್ಲ ಎನ್ನತಕ್ಕಂಥ ಮಾತುಗಳನ್ನು ಇವರು ಹೇಳಿಕೊಂಡು ಬರುತ್ತಿದ್ದಾರೆ. ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕು. ಆದ್ದರಿಂದ, ಮಾನ್ಯ ಅಧ್ಯಕ್ಷರು ಈ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಹಾಗೆಯೇ ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಸ್ಪಷ್ಟವಾದ ಉತ್ತರ ಕೊಡಬೇಕೆಂದು ಹೇಳುತ್ತಾ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಕೊನೆಯದಾಗಿ ಮಾನ್ಯ ರೇವಣ್ಣರವರು ಮಾತನಾಡಲಿ. ಮಾನ್ಯ ರೇವಣ್ಣರವರೆ, ಸ್ವಲ್ಪ ಬೇಗ ತಮ್ಮ ಮಾತನ್ನು ಮುಗಿಸಿ.

ಶ್ರೀ ಎಂ.ಟಿ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಬೇರೆ ವಿಷಯದ ಬಗ್ಗೆ ಮಾತನಾಡುವುದಕ್ಕೆ ನಮಗೆ ನೋಟೀಸ್ ಕೊಡಿ ಎಂದು ತಾವು ಹೇಳುತ್ತೀರಿ. ಮಾನ್ಯ ವಿರೂಪಾಕ್ಷಪ್ಪನವರು ಖೇಣಿ ಮತ್ತು ನೈಸ್ ಬಗ್ಗೆ ಮಾತನಾಡುವುದಕ್ಕೆ ನೋಟೀಸ್ ಕೊಟ್ಟಿದ್ರಾ? ನಾವೇನಾದರೂ ಬೇರೆ ವಿಷಯದ ಬಗ್ಗೆ ಮಾತನಾಡುವುದಕ್ಕೆ ಹೋದರೆ ನೋಟೀಸ್ ಕೊಡಿ ಎಂದು ತಾವು ಅಬ್ಜಕ್ಷನ್ ಮಾಡುತ್ತೀರಿ. ಅವರು ನೈಸ್ ಬಗ್ಗೆ ಮಾತನಾಡುವುದಕ್ಕೆ ನೋಟೀಸ್ ಕೊಟ್ಟಿದ್ರಾ?

ಶ್ರೀ ಎಂ.ಪಿ. ರೇಣುಕಾಚಾರ್ಯ : ಅವರು ರಾಜ್ಯಪಾಲರ ವಂದನಾನಿರ್ಣಯದ ಮೇಲೆ ಮಾತನಾಡಿದ್ದಾರೆ.

ಶ್ರೀ ಎಂ.ಟಿ. ಕೃಷ್ಣಪ್ಪ : ಈ ರೀತಿ ಅವಕಾಶ ಕೊಡತಕ್ಕಂಥದ್ದು ತಪ್ಪಾಗುತ್ತದೆ. ನೈಸ್ ಬಗ್ಗೆ ಮಾತನಾಡುವುದಕ್ಕೆ ಒಂದು ದಿನಾಂಕ ನಿಗದಿ ಮಾಡಿ ಎಲ್ಲರಿಗೂ ಅವಕಾಶ ಕೊಡಿ. ಅವರು ತಪ್ಪು ಮಾಹಿತಿಗಳನ್ನು ಹೇಳಿದರೆ ನಾವು ನಂಬಬೇಕೆ?

(ಗೊಂದಲ)

ಅಧ್ಯಕ್ಷರು : ಹಾಗಾದರೆ, ಅವರಿಗೆ ಹೇಳುವ ಹಕ್ಕು ಇಲ್ಲವೆ? ದಯವಿಟ್ಟು ಎಲ್ಲರು ಕುಳಿತುಕೊಳ್ಳಿ.

ಶ್ರೀ ಯು.ಟಿ. ಖಾದರ್ : ಮಾನ್ಯ ಅಧ್ಯಕ್ಷರೆ, ಇನ್ನೂ ನಾಲ್ಕೈದು ಜನ ಮಾತನಾಡಬೇಕಾಗಿದೆ. ಆದ್ದರಿಂದ, ಒಬ್ಬೊಬ್ಬರಿಗೆ 5 ನಿಮಿಷ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು : ತಾವೆಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ನಾನು ಈಗಾಗಲೇ ಮಾನ್ಯ ರೇವಣ್ಣನವರನ್ನು ಕರೆದಿದ್ದೇನೆ.

ಶ್ರೀ ಎ. ಮಂಜು : ಮಾನ್ಯ ರೇವಣ್ಣನವರು ಮಾತನಾಡಿ ಮುಗಿಸಿದ ಮೇಲೆ ನಮಗೂ ಕೂಡ ಅವಕಾಶ ಕೊಡಬೇಕು.

ಅಧ್ಯಕ್ಷರು : ಆಯಿತು. ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ):– ಮಾನ್ಯ ಸಭಾಧ್ಯಕ್ಷರೆ, 16ನೇ ಜನವರಿ 2009ರಲ್ಲಿ ಬೆಳಗಾಂ ಅಧಿವೇಶನದಲ್ಲಿ ನಡೆದಂಥ ರಾಜ್ಯಪಾಲರ ಭಾಷಣದ ಬಗ್ಗೆ ಹಾಗೂ ಈಗಿನ ರಾಜ್ಯಪಾಲರ ಬಾಷಣದಲ್ಲಿನ ವಿಷಯವನ್ನು ಈ ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಕೆಲವು ಕಾರ್ಯಕ್ರಮಗಳನ್ನು ಆ ಸಂದರ್ಭದಲ್ಲಿ ಘೋಷಣೆ ಮಾಡಿದ್ದರು. ಈ ಕಾರ್ಯಕ್ರಮಗಳ ಬಗ್ಗೆ ಒಂದು ಉದಾಹರಣೆಯನ್ನು ಹೇಳುವುದಕ್ಕೆ ಬಯಸುತ್ತೇನೆ. ಇದರಲ್ಲಿ ಭಾಗ್ಯಲಕ್ಷ್ಮಿ ಯೋಜನೆ ಮಾನ್ಯ ಮುಖ್ಯಮಂತ್ರಿಗಳಿಗೆ ಅಚ್ಚುಮೆಚ್ಚಿನ ಕಾರ್ಯಕ್ರಮವಾಗಿತ್ತು ಎಂದು ಹೇಳಬೇಕಾಗುತ್ತದೆ. ಏಕೆಂದರೆ, ಅದರ ಬಗ್ಗೆ ಅವರಿಗೆ ಸ್ವಲ್ಪ ಕಾಳಜಿ ಇದೆ. ಹಿಂದೆ ನಾನು ಅವರ ಜೊತೆ 20 ತಿಂಗಳವರೆಗೆ ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ಭಾಗ್ಯಲಕ್ಷ್ಮಿ ಯೋಜನೆಯ ಬಗ್ಗೆ ಅವರು ಸ್ಪೆಷಲ್ ಆಗಿ ರಿವ್ಯೂ ಮಾಡತಕ್ಕಂಥ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರು. ಮಾನ್ಯ ಕುಮಾರ ಸ್ವಾಮಿಯವರು ಇಲ್ಲಿ ಇದ್ದಾರೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ಏಕೆಂದರೆ, ಅವರೂ ಕೂಡ ಮಂತ್ರಿಯಾಗಿದ್ದರು. ಸದರಿ ಯೋಜನೆ ಬಗ್ಗೆ ಇರುವಂಥ ಪೇಪರ್ ಕಟ್ಟಿಂಗ್‌ನ್ನು ನಾನು ಅವರಿಗೆ ಕಳುಹಿಸಿಕೊಡುತ್ತೇನೆ. 2006–07ರಲ್ಲಿ 20,094 ಮಂಜೂರಾತಿ ಆಗಿತ್ತು. ಆದರೆ, 20,074 ಮಾತ್ರ ವಿತರಣೆಯಾಗಿ 20 ಮಾತ್ರ ಬಾಕಿ ಉಳಿದುಕೊಂಡಿತ್ತು. 2007–08ರಲ್ಲಿ 25,962 ಮಂಜೂರಾಗಿತ್ತು. ಇದರಲ್ಲಿ 22,284 ವಿತರಣೆಯಾಗಿ 3,678 ಬಾಕಿ ಉಳಿದುಕೊಂಡಿತ್ತು. ಮತ್ತೆ 2008–09ರಲ್ಲಿ 30,582 ಮಂಜೂರಾಗಿತ್ತು, ಇದರಲ್ಲಿ 19,545 ವಿತರಣೆಯಾಗಿ, 11,037 ಬಾಕಿ ಉಳಿದುಕೊಂಡಿದೆ. 2009–10ರಲ್ಲಿ 8,100 ಮಂಜೂರಾಗಿದೆ. ಆದರೆ, ಇದರಲ್ಲಿ ಒಂದನ್ನೂ ಕೂಡ ಮಾಡಿಲ್ಲ. ಈ ಮಾಹಿತಿ ನನ್ನದಲ್ಲ, ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಬಂದಿದೆ ಮತ್ತೆ ಇದಕ್ಕೆ ಸಂಬಂಧಪಟ್ಟಂತೆ ಫೋಟೋವನ್ನು ಸಹ ಪತ್ರಿಕೆಯಲ್ಲಿ ಕೊಟ್ಟಿದ್ದಾರೆ. ಇದನ್ನು ಮಾನ್ಯ ಸಭಾಧ್ಯಕ್ಷರಿಗೆ ಕಳುಹಿಸಿಕೊಡುತ್ತೇನೆ. 2009–10ನೇ ಸಾಲಿನಲ್ಲಿ ಭಾಗ್ಯಲಕ್ಷ್ಮಿ ಯೋಜನೆಯಲ್ಲಿ ಒಂದನ್ನೂ ಸಹ

ಕೊಟ್ಟಿಲ್ಲ. ಏಕೆಂದರೆ, ಅವರಿಗೆ ಗ್ರಹಣ ಏನಾದರು ಹಿಡಿಯಿತೆ ಎಂಬುದು ಗೊತ್ತಿಲ್ಲ. ಏಕೆಂದರೆ, ಈ ವರ್ಷ ಎರಡು ಗ್ರಹಣ ಇತ್ತು. ಆದ್ದರಿಂದ, ಭಾಗ್ಯಲಕ್ಷ್ಮಿ ಯೋಜನೆಗೆ ಗ್ರಹಣ ಹಿಡಿದಿದೆಯೇ ಎಂಬುದು ಗೊತ್ತಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಮಾಡಿರುವ ಘೋಷಣೆ ಪುಸ್ತಕದಲ್ಲಿದೆ. ಆದರೆ, ಪತ್ರಿಕೆಯಲ್ಲಿ ಬಂದಿರುವ ಮಾಹಿತಿ ನೋಡಿದರೆ ಈ ವರ್ಷ ಭಾಗ್ಯಲಕ್ಷ್ಮಿ ಯೋಜನೆಯಲ್ಲಿ ಒಂದನ್ನೂ ಸಹ ಕೊಟ್ಟಿಲ್ಲ ಏಕೆ? ನಾವು ಪ್ರಶ್ನೆ ಕೇಳಿರುವುದಕ್ಕೆ ಉತ್ತರ ಕೊಟ್ಟಿರತಕ್ಕಂಥದ್ದರಲ್ಲಿ ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಒಟ್ಟು 17 ಖಾತೆಗಳಿರುವುದನ್ನು ನಾನು ಅದರಲ್ಲಿ ನೋಡಿದೆ. ಈ 17 ಖಾತೆಗಳನ್ನು ನೋಡುವುದಕ್ಕಾಗಿ ಅವರು ಭಾಗ್ಯಲಕ್ಷ್ಮಿ ಯೋಜನೆ ಬಗ್ಗೆ ನಿಗಾ ವಹಿಸಿಲ್ಲವೆಂದು ಕಾಣುತ್ತದೆ. ಅವರಲ್ಲಿರುವ 17 ಖಾತೆಗಳು ಯಾವುದೆಂಬುದರ ಬಗ್ಗೆ ಉದಾಹರಣೆಗೆ ಹೇಳುತ್ತೇನೆ. 1) ಸಂಪುಟ ವ್ಯವಹಾರಗಳ ಇಲಾಖೆ 2) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ 3) ಒಳಾಡಳಿತ ಮತ್ತು ಗುಪ್ತದಳ 4) ನಗರಾಭಿವೃದ್ಧಿ ಇಲಾಖೆಯಲ್ಲಿನ ಬೆಂಗಳೂರು ಜಲಮಂಡಳಿ, ಬೆಂಗಳೂರು ನಗರ ಸಭೆ ಮತ್ತು ಪಟ್ಟಣ ಪಂಚಾಯತಿಗಳನ್ನು ಹೊರತುಪಡಿಸಿದಂತೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕೆಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಅರಣ್ಯ ಇಲಾಖೆ ಮತ್ತು ಈಗ ಇಂಧನ ಇಲಾಖೆಗಳೆಲ್ಲಾ ಸೇರಿ ಒಟ್ಟು 17 ಇಲಾಖೆಗಳು ಅವರ ಹತ್ತಿರ ಇವೆ. ಮೊದಲು ಭಾಗ್ಯಲಕ್ಷ್ಮಿ ಯೋಜನೆ ಬಗ್ಗೆ ನಿಗಾ ವಹಿಸುತ್ತಿದ್ದರು. ಒಂದು ಸಾರಿ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡಿ ಒಬ್ಬ ಪ್ರಾಮಾಣಿಕ ಅಧಿಕಾರಿಯನ್ನು ಸಸ್ಪೆಂಡ್ ಮಾಡುವ ಮಟ್ಟಕ್ಕೆ ಬೆಳಗಾಂನಲ್ಲಿ ಹೋಗಿದ್ದರು. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಅಪ್ರಿಶಿಯೇಟ್ ಮಾಡುತ್ತೇನೆ. ಏಕೆಂದರೆ, ಅವರು ಉಪ ಮುಖ್ಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಸದರಿ ಯೋಜನೆ ಬಗ್ಗೆ ಅಷ್ಟೊಂದು ಚೆನ್ನಾಗಿ ರಿವ್ಯೂ ಮಾಡುತ್ತಿದ್ದವರು ಈಗ ಮುಖ್ಯಮಂತ್ರಿಗಳಾದ ಮೇಲೆ ಈ ಯೋಜನೆ ಬಗ್ಗೆ ರಿವ್ಯೂ ಮಾಡುವುದನ್ನು ಏಕೆ ಬಿಟ್ಟರು? ಇದಕ್ಕೆ ಕಾರಣ

ಮತ್ತು ಉದ್ದೇಶ ಏನು? ಈ ವರ್ಷ ಸದರಿ ಯೋಜನೆಯಲ್ಲಿ 8100ರಲ್ಲಿ ಒಂದನ್ನೂ ಸಹ ಕೊಟ್ಟಿಲ್ಲ. ಈ ಮಾಹಿತಿಯನ್ನು ನಾನು ಕೊಟ್ಟಿಲ್ಲ. ಇಲಾಖೆಯಿಂದ ಪ್ರಕಟವಾಗಿರುವ ಮಾಹಿತಿಯನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಇನ್ನು ಒಂದು ತಿಂಗಳು ಮಾತ್ರ ಇದೆ. ಆದ್ದರಿಂದ, ಇನ್ನು ಒಂದು ತಿಂಗಳಲ್ಲಿಯಾದರೂ ಇದನ್ನು ಮಾಡಿ ಎಂದು ಈ ಸಂದರ್ಭದಲ್ಲಿ ಮಾನ್ಯ ಸಭಾಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಯವರಲ್ಲಿ ಒತ್ತಾಯ ಮಾಡುತ್ತೇನೆ. ಭಾಗ್ಯಲಕ್ಷ್ಮಿ ಯೋಜನೆ ಒಂದು ಕಡೆಯಾದರೆ ಇನ್ನು ಕೈಗಾರಿಕಾ ಬಗ್ಗೆ ಒಂದೆರೆಡು ಐಟಂಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಬಾಕಿ ವಿಷಯವನ್ನು ಇನ್ನೊಂದು ದಿವಸ ಚರ್ಚೆಗೆ ತೆಗೆದುಕೊಳ್ಳೋಣ. ಕೈಗಾರಿಕೆ ಬಗ್ಗೆ ಚರ್ಚೆ ಮಾಡುವುದಕ್ಕೆ ಮಾನ್ಯ ಸಭಾಧ್ಯಕ್ಷರು ನಿಯಮ 60 ಅಥವಾ 69ರಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತಾರೋ ಅಥವಾ ಸದನ ಮುಂದೂಡುತ್ತಾರೋ ನನಗೆ ಗೊತ್ತಿಲ್ಲ. ಮಾನ್ಯ ಕೈಗಾರಿಕಾ ಸಚಿವರು ಇವತ್ತು ಇಲ್ಲಿರುವುದರಿಂದ ಇದರ ಬಗ್ಗೆ ಒಂದು ಟ್ರಯಲ್ ಮಾತ್ರ ಬಿಡುತ್ತೇನೆ. ಕೈಗಾರಿಕೆಗೆ ಹೊಸ ಜಮೀನು ತೆಗೆದುಕೊಳ್ಳಬೇಕಾದರೆ, ಹೊಸ ಕಾನೂನು ಮಾಡಿದ್ದು ಕೈಗಾರಿಕೆ ಮಂತ್ರಿಗಳ ಮತ್ತು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇಂಡಸಟ್ರೀಸ್ ಇಲಾಖೆಯಲ್ಲಿ 28(1), ಇದು ಫೈನಲ್‌ಗೆ ಬಂದಾಗ 28(4)(2)(3) ಎಂದು ಇವರು ಏನೋ ಮಾಡಿಕೊಂಡಿದ್ದಾರೆ. ಕೈಗಾರಿಕೆ ಬಗ್ಗೆ ಕಟ್ಟಾ ಸುಬ್ರಮಣ್ಯ ನಾಯ್ಡು ಮತ್ತು ನಿರಾಣಿಯವರಿಗೆ ಗೊತ್ತಿದೆ. ಇದರಲಿ 28(1)(2)(3) ಆಗಿಲ್ಲ. 2.80 ಕೋಟಿ ರೂ.ಗಳ ಚೆಕ್‌ನ್ನು ಕೊಡುತ್ತಾರೆಂದರೆ ಹೇಗೆ ಸ್ವಾಮಿ? ಕಡತದಲ್ಲಿ ಅಧಿಕಾರಿಗಳು ಬರೆದಿದ್ದನ್ನು ಕೊಡುತ್ತೇನೆ, ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡಿದ್ದೀರಾ? ಹೊಸಕೋಟೆಯಲ್ಲಿ ಭೂ ಮಾಲೀಕರಾದ ಮುನಿಯಪ್ಪ ಅವರ ಜಮೀನಿಗೆ ಸಂಬಂಧ ಪಟ್ಟಂತೆ 28(1), 28(2) ಏನೂ ಇಲ್ಲ, ಒಂದು ಉದಾಹರಣೆಯನ್ನು ತಮಗೆ ಕೊಡುತ್ತೇನೆ. ಆ ಇಲಾಖೆಯ ಅಧಿಕಾರಿಯನ್ನು ಸಸ್ಪೆಂಡ್ ಮಾಡಿದ್ದೀರಾ? ಈ ಅಧಿಕಾರಿಯ ಹಿಂದುಗಡೆ ಯಾರಿದ್ದಾರೆ ಎಂದು ಹೇಳಿ ದಯಮಾಡಿ. ಆಫೀಸ್ ನೋಟ್ ಹಾಕಿ 2.80

ಕೋಟಿ ರೂ.ಗಳ ಚೆಕ್ ಕೊಟ್ಟು ಆ ಅಧಿಕಾರಿ ಕೆಲಸ ಮಾಡುತ್ತಿದ್ದಾನೆ. ಇವತ್ತಿನವರೆಗೆ ಆ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಂಡಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿ ಕೊಡುತ್ತೇನೆ. ದಯಮಾಡಿ ಇದನ್ನು ನೋಡಲಿ, ಅವರು ಉತ್ತರ ಏನು ಕೊಡುತ್ತಾರೆ ಕೊಡಲಿ. ಎರಡು-ಮೂರು ಐಟಂಗಳನ್ನು ಮಾತ್ರ ಬಿಡುತ್ತಿದ್ದೇನೆ, ಇಂಡಸ್ಟ್ರೀಸ್ ಮಿನಿಸ್ಟರ್‌ಗೆ ಹೇಳುತ್ತೇನೆ. ಆಮೇಲೆ ಬೇಕಾದರೆ ನೈಸ್ ಬಗ್ಗೆ ಮಾತನಾಡೋಣ. ಈ ರಾಜ್ಯದ ಜನತೆಯನ್ನು ಹೇಗೆ ನೈಸ್ ಮಾಡಿದ್ದಾರೆ. ಅದನ್ನು ನಿನ್ನೆ ನಾನು ನೋಡಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಕಲ್ಲಿದ್ದಲು ತೊಳೆಯುವುದರಲ್ಲಿ ನಾಮ ಹಾಕುತ್ತಾರೆಂದರಲ್ಲಾ, ಮುಖ್ಯಮಂತ್ರಿಗಳು ರಾಜ್ಯದ ಜನರಿಗೆ ಯಾವ ಸೋಫ್ ಹಾಕದೆ ಮುಖವನ್ನು ತೊಳೆಸುತ್ತಿದ್ದಾರೆ. ಯಾವ ಸೋಪ್ ಹಾಕಿಕೊಳ್ಳಬೇಡಿ, ನಾನು ಇರುವವರೆಗೆ ನಿಮ್ಮನ್ನು ಹಾಗೆ ವಾಶ್ ಮಾಡುತ್ತೇನೆ, ಹೇಗೆ ನೈಸ್‌ನಲ್ಲಿ ವಾಶ್ ಮಾಡುತ್ತಿದ್ದಾರೆ, ಕಲ್ಲಿದ್ದಲಿನಲ್ಲಿ ಹೇಗೆ ವಾಶ್ ಮಾಡುತ್ತಿದ್ದಾರೆ, ಅದನ್ನು ಬೇಕಾದರೆ ತಮ್ಮ ಮುಂದೆ ಇಡುತ್ತೇನೆ. ಬೇಕಾದರೆ ಒಂದು ದಿವಸ ಟೈಂ ಕೊಡಲಿ, ಬೇಕಾದರೆ ಚರ್ಚೆ ಮಾಡುವುದಕ್ಕೆ ನಾನು ರೆಡಿ ಇದ್ದೇನೆ. ವಿಧಾನ ಪರಿಷತ್ತಿನಲ್ಲಿ ಹೇಳುವುದನ್ನು ನಾನು ಟಿ.ವಿ. ಹಾಕಿಕೊಂಡು ಮಧ್ಯಾಹ್ನ ನೋಡಿದೆ. ನೈಸ್ ವಿಷಯ ಎಲ್ಲಾ ಚರ್ಚೆ ಆಗಲೇಬೇಕು. ಚರ್ಚೆಗೆ ಬೇಕಾದರೆ ಎರಡು ದಿವಸ ಇಡೋಣ. ಆಮೇಲೆ ಕಲ್ಲಿದ್ದಲು ಬಗ್ಗೆ ಹೇಳುತ್ತೇನೆ. ಟ್ರಾನ್ಸ್‌ಫಾರ್ಮರ್ ಬಗ್ಗೆ ಆಮೇಲೆ ಹೇಳುತ್ತೇನೆ. ಇವರು ಹೇಳಿ ಬಿಡುತ್ತಾರೆ, ಆಮೇಲೆ ಸಭೆ ಮುಂದುಡಿ ಸ್ವಾಮಿ. ಅವಕಾಶವಿಲ್ಲವೆಂದು ಹೇಳುತ್ತಾರೆ, ಅದಕ್ಕಾಗಿ ಅದು ಆಗಬಾರದು. ಒಂದು ಉದಾಹರಣೆಯನ್ನು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ದು ನಿಮಗೆ ಹೇಳುತ್ತೇನೆ. ಬೆಂಗಳೂರು ನಗರದ ರಿಂಗ್‌ರೋಡ್ ಬೆಳ್ಳಂದೂರಿನಲ್ಲಿ 83 ಎಕರೆ 33 ಗುಂಟೆಯ ವಿಸ್ತೀರ್ಣದ ಜಮೀನು, ಇವತ್ತು ಅದರ ರೇಟ್ 15-20 ಕೋಟಿ ರೂ.ಗಳು ಒಂದು ಎಕರೆಗೆ ಇದೆ. 4(1), 6(1) ಆಗಿರುವುದನ್ನು ಕೈಬಿಡುತ್ತಾರಲ್ಲಾ, ಇದು ನ್ಯಾಯವೇ ಸ್ವಾಮಿ? ಇದರ ಆಸ್ತಿ ಎಷ್ಟು ಹೇಳಿ? ಕನಿಷ್ಠ ಒಂದು ಎಕರೆಗೆ 15 ಕೋಟಿ ರೂ.ಗಳು. ಇದರ ಹಿಂದುಗಡೆ ಯಾರಿದ್ದಾರೆ, ಕೈಬಿಡುವುದಕ್ಕೆ ಕಾರಣ

ಏನು ಹೇಳಿ? ಯಾರ್‍ಯಾರ ಜಮೀನು ಕೈಬಿಟ್ಟಿದ್ದೀರಿ ಎನ್ನುವುದರ ಬಗ್ಗೆ ಕಡತ ಇದೆ ಬೇಕಾದರೆ ಕೊಡುತ್ತೇನೆ. ಇದು 7ನೇ ನವೆಂಬರ್ 2009 ರಲ್ಲಿ ಆಗಿರುವುದು. ಎಷ್ಟು ಜಮೀನು ಯಾರದ್ದು ಎನ್ನುವುದನ್ನು ತಮಗೆ ಕೊಡುತ್ತೇನೆ. ಏಕೆಂದರೆ ಇವತ್ತು ರಾಜ್ಯದಲ್ಲಿ ಒಂದು ಕಡೆ ನಮ್ಮ ಮಂತ್ರಿಗಳು ಹೇಳುತ್ತಾರೆ. 1,17,000 ಎಕರೆ ಜಮೀನನ್ನು ಭೂಸ್ವಾಧೀನಕ್ಕೆ acquire ಮಾಡುತ್ತೇನೆಂದು ಹೇಳುತ್ತಾರೆ. ಇನ್ನೊಂದು ಕಡೆ ನೀವು ಜಮೀನನ್ನು ನೋಟಿಫಿಕೇಶನ್ ಮಾಡಿ 28(1), (2), (3), (4) ಎಂದು ಮಾಡಿ ಹಿಂದುಗಡೆಯಿಂದ ಏನು ರೈತರನ್ನು ಬ್ಲಾಕ್‌ಮೇಲೆ ಮಾಡುತ್ತಿದ್ದೀರಾ, ಹೇಳಿ? ಇಂಡಸ್ಟ್ರಿಯಲ್ ಡಿಪಾರ್ಟ್‌ಮೆಂಟ್‌ನವರನ್ನು ನಾನು ಕೇಳಿದೆ. ಅವರಿಗೆ 5–6 ಜೀಪ್‌ಗಳನ್ನು ಕೊಟ್ಟಿದ್ದಾರಂತೆ, ಬೆಂಗಳೂರಿನ ಸುತ್ತಮುತ್ತಲೂ ಇರುವ ಜಮೀನಿಗೆ ಹೋಗಿ "ಸ್ವಾಮಿ ನಿಮ್ಮ ಜಮೀನು acquire ಮಾಡುತ್ತೇವೆ. ಇಲ್ಲದಿದ್ದರೆ ಬನ್ನಿ, ಅದು ಏನಿದೆ ಅದನ್ನು setright ಮಾಡೋಣ" ಎಂದು ಹೇಳುತ್ತಾರೆ. ನಾನು ಇರುವುದನ್ನು ಹೇಳುತ್ತೇನೆ. ಮಾತನಾಡುವುದು ಬೇಡವೆಂದರೆ, ನೀವು ಕುಳಿತುಕೊಳ್ಳಿ ಎಂದರೆ ನಾನು ಕುಳಿತುಕೊಂಡು ಬಿಡುತ್ತೇನೆ. ಇದರಲ್ಲಿ ನನ್ನದೇನೂ ಇಲ್ಲ. ತಮಗೆ ನೋಟಿಫಿಕೇಶನ್ ಕಾಪಿ ಕೊಡುತ್ತೇನೆ. ಬೇರೆಯವರ ಕಾಲದಲ್ಲಿ ಮಾಡಿರಬಹುದು, ಕುಮಾರಸ್ವಾಮಿಯವರು ಮಾಡಿದ್ದಾರೋ ಯಾವುದೋ ತಿಮ್ಮಣ್ಣ, ಬೊಮ್ಮಣ್ಣ ಮಾಡಿದ್ದಾರೋ ಅದು ನನಗೆ ಸಂಬಂಧವಿಲ್ಲ. ನಿಮ್ಮ ಕಾಲದ್ದು ಹೇಳುತ್ತಿದ್ದೇನೆ. ನನಗೆ ಇನ್ನೊಬ್ಬರ ಕಾಲದ ವಿಷಯ ಬೇಡ. ನಿಮ್ಮ ಕಾಲದಲ್ಲಿ ಸ್ವಚ್ಛತೆಯ ಆಡಳಿತವನ್ನು ನಡೆಸುತ್ತಿದ್ದೀರಿ. ಆ ದೃಷ್ಟಿಯಿಂದ ಇದು ಸ್ವಚ್ಛತೆಯ ಆಡಳಿತದಲ್ಲಿ ಆಗುತ್ತದೆಯಲ್ಲವೆ? ಮಾನ್ಯ ಮುಖ್ಯಮಂತ್ರಿಗಳ ಮತ್ತು ಇಂಡಸ್ಟ್ರೀಸ್ ಮಂತ್ರಿಗಳ ಗಮನಕ್ಕೆ ಬರದೇ ಆಗಿರಬಹುದು. ಮುಖ್ಯಮಂತ್ರಿಗಳ ಹತ್ತಿರ 17 ಖಾತೆಗಳು ಇರುವಾಗ ಸಹಿ ಯಾರೋ ಹಾಕಿಸಿಕೊಂಡು ಹೋಗಿರುತ್ತಾರೆ. ಒಂದೆರಡು ಖಾತೆಗಳು ಅಲ್ಲ, 17 ಖಾತೆ ಇರುವಾಗ ಪಾಪ ಅವರು ಏನೂ ಮಾಡುವುದಕ್ಕಾಗುವುದಿಲ್ಲ. 1,17,000 ಎಕರೆ ಜಮೀನನ್ನು ಮಾಡುತ್ತಿದ್ದಾರಲ್ಲಾ ಅದರ ಒಂದು ಉದಾಹರಣೆಯನ್ನು ನಿಮಗೆ ಕೊಡುತ್ತೇನೆ.

ಮೊನ್ನೆ ಇಂಡಸ್ಟ್ರೀಸ್ ಮಿನಿಸ್ಟರ್ ಹೇಳಿಕೆ ನೋಡಿದೆ. ಕೃಷಿ ಸಚಿವರು ಈಗ ಇಲ್ಲ. ಹಾಸನದಲ್ಲಿ 5,200 ಎಕರೆ ಜಮೀನು acquire, ದೇವೇಗೌಡರು, ಕುಮಾರಸ್ವಾಮಿ ಮಾಡಿದರು ಎಂದು ದೊಡ್ಡದಾಗಿ ಪೇಪರ್‌ನಲ್ಲಿ ಹಾಕಿದ್ದೀರಿ ಸ್ವಾಮಿ. ನಾನು ಒಂದು ಗುಂಟೆ ಜಮೀನನ್ನು ಜನಹಿತಕ್ಕೋಸ್ಕರ ಬಿಟ್ಟರೆ ಬೇರೆ ತೆಗೆದುಕೊಂಡಿಲ್ಲ. ನೀವು ಹಾಸನ ಲೋಕಸಭೆಗೆ ನಿಲ್ಲಿಸಿದ್ದೀರಲ್ಲಾ ಅವರು 8000 ರೂ.ಗಳನ್ನು ಎಕರೆಗೆ ಕೊಟ್ಟಿದ್ದಾರೆ. 50,000 ರೂ.ಗಳನ್ನು ಕೊಟ್ಟಿದ್ದಾರೆ. ನಾನು ಆ ಕೆಲಸವನ್ನು ಮಾಡಲಿಲ್ಲ. ಹಾಸನದಲ್ಲಿ IIT ತರಬೇಕೆಂದು ಮಾಡಿದ್ದೆ, ಅದಕ್ಕೆ 948 ಎಕರೆ ಜಮೀನನ್ನು ಆ ಇಲಾಖೆಯಿಂದ acquire ಮಾಡಿಸಿದ್ದೆ. ಅದರ ಬಗ್ಗೆ ಅವರಿಗೆ ಗೊತ್ತಿದೆ. ಅದನ್ನು ಮಾಡಿಸಿ ನಾನೇನು ಯಾರಿಗೂ ಕೊಡುವುದಕ್ಕೆ ಮಾಡಿಸಲಿಲ್ಲ. ಇನ್ನೊಂದು 128 ಎಕರೆ ಮಾನ್ಯ ಶರದ್ ಪವಾರ್‌ರವರು ಸಫಲ್ ಮಾರ್ಕೆಟ್ ಕೊಡುತ್ತೇನೆಂದರು, ಅದಕ್ಕೋಸ್ಕರ ಮಾಡಿಸಿದ್ದೆ. ಅದನ್ನು ಡಿ–ನೋಟಿಫಿಕೇಶನ್ ಮಾಡಿಸಿ ರೈತರ ಮನೆ ಹಾಳು ಬಿದ್ದು ಹೋಗಲಿ ಎಂದು ಮಾಡಿದರು. ಅವರು ಹೇಳುತ್ತಾರೆ, 1,2,5 ಲಕ್ಷ ರೂ.ಗಳನ್ನು ಕೊಟ್ಟರೆ ನಾನೇ ಡಿ–ನೋಟಿಫಿಕೇಶನ್ ಮಾಡಿ ಕೊಡುತ್ತೇನೆಂದು ಹೇಳುತ್ತಾರೆ. ಜನ ಮಾತನಾಡುತ್ತಿದ್ದಾರೆ, ಅವರು ತೆಗೆದುಕೊಂಡಿದ್ದಾರೆಂದು ನಾನು ಹೇಳುತ್ತಿಲ್ಲ. ಅದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಇವರು ತೆಗೆದುಕೊಂಡರೋ ಅಧಿಕಾರಿಗಳು ತೆಗೆದುಕೊಂಡರೋ ಗೊತ್ತಿಲ್ಲ ಜನರು ಹೇಳುವುದನ್ನು ಹೇಳುತ್ತಿದ್ದೇನೆ. ಸಫಲ್ ಮಾರ್ಕೆಟ್‌ಗೆ ಕೊಟ್ಟಿರುವಂಥ 128 ಎಕರೆ ಜಮೀನು ಏನಾಯಿತು? 948 ಎಕರೆ ಜಮೀನು IIT ಮಾಡುವುದಕ್ಕೆ ಮಾಡಿದ್ದೆ, ಅದನ್ನು ಮೊನ್ನೆ ಏನು ಮಾಡಿದರೆಂದರೆ, ಹೊಸದಾಗಿ ಗಣರಾಜ್ಯೋತ್ಸವಕ್ಕೆ ನನ್ನನ್ನೂ ಕರೆಸಿದ್ದರು. ಮಧ್ಯಾಹ್ನ ಉದ್ಯಮಿಗಳನ್ನು ಕರೆದುಕೊಂಡು ಪೊಲೀಸ್ ಎಸ್ಕಾರ್ಟ್ ಎಲ್ಲಾ ತೆಗೆದುಕೊಂಡರು. 'ಆ 950 ಎಕರೆಯಲ್ಲಿ ನಿಮಗೆ ಎಷ್ಟು ಬೇಕು ಅದನ್ನು ಮಾರ್ಕ್ ಮಾಡಿ ಬೆಂಗಳೂರಿಗೆ ಕಳುಹಿಸಿ ಅದನ್ನು ನಾನು ನೋಡಿಕೊಳ್ಳುತ್ತೇನೆ' ಎಂದು ಹೇಳಿದರು. ಇವರು ಯಾರನ್ನು partner ಮಾಡಿಕೊಂಡಿದ್ದಾರೋ ನನಗೆ ಗೊತ್ತಿಲ್ಲ. ನಮ್ಮ ಹಾಸನಕ್ಕೆ ಪಾಪ ಇವರು ಏಕೆ

ಬರುತ್ತಾರೆ? ಅಲ್ಲಿ ಮಾಡಿರುವುದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಜನ ಹೇಳಿದ್ದು ಹೇಳುತ್ತೇನೆ, ನೀವು ಬೇಕಾದರೆ ಆಮೇಲೆ ಹೇಳಿ. ಏರ್‌ಪೋರ್ಟಿಗೆ ಸಂಬಂಧಿಸಿದಂತೆ 369 ಎಕರೆ ಕಡತ ಇಲ್ಲಿಯೇ ಇದೆ ತಮಗೆ ಕಳುಹಿಸುತ್ತೇನೆ. 5,200 ಎಕರೆ ಜಮೀನನ್ನು ಹಾಸನದಲ್ಲಿ ಮಾಡಿದ್ದಾರೆಂದು ಪತ್ರಿಕೆಯಲ್ಲಿ ಬಂತು. ಅಶೋಕ್‌ರವರು ಹೇಳಿದರು, ಮಣ್ಣಿನ ಮಗನನ್ನು ಕೇಳಿ. ತಾವು ಪಾಪ ಏನೂ ಹೇಳಲಿಲ್ಲ. ಲೈಟಾಗಿ ಜಮೀನು ನೋಡಿಕೊಂಡು ಒಟ್ಟು ಎಷ್ಟು ಇದೆ, ಮೇನ್ ರೋಡಿಗಿದೆಯೆ ಎಂದು ನೋಡಿಕೊಂಡು ಬಂದಿರಿ. ವಿಜಯನಗರದ ಕೃಷ್ಣಪ್ಪನವರು ಇಲ್ಲಿಯೇ ಇರಬೇಕು. ಈ 942 ಎಕರೆ ಐಐಟಿ ಮಾಡಿದಿರಲ್ಲಾ ಸ್ವಾಮಿ ಅಲ್ಲಿ ವಿಜಯನಗರದ ಕೃಷ್ಣಪ್ಪನವರು 100 ಎಕರೆ ತೆಗೆದುಕೊಂಡಿದ್ದಾರೇನೋ ನನಗೆ ಗೊತ್ತಿಲ್ಲ ಈಗ ಅವರು ಇಲ್ಲಿ ಇಲ್ಲ. ನಾನು ಅವರದು ಅಕ್ವೈರ್ ಮಾಡಿಸಿದೆ. ಅದಕ್ಕೆ ರೇಟ್ ಎಷ್ಟು ಇಟ್ಟವರೆ ಗೊತ್ತಾ? ಸರ್ಕಾರದಲ್ಲಿ ಡಿ.ಸಿ.ರೇಟ್ ಇಟ್ಟಿರುವುದು 20 ರಿಂದ 25 ಲಕ್ಷ ಕೊಡಿಸುವುದಕ್ಕೆ ನಾವು ಇಡಿಸಿದ್ದೇವೆ. ನಾವೇನು ರೈತರ ಮನೆ ಹಾಳು ಮಾಡುವುದಕ್ಕೆ ಹೋಗಿಲ್ಲ ನೀವು ಬೇಕಾದರೆ ಮಾಡಿಕೊಳ್ಳಿ ಬೇಡವಾದರೆ ಬಿಟ್ಟುಕೊಳ್ಳಲಿ. ನಮಗೇನು ಅಂದರೆ ದೇವೇಗೌಡರವರು ಹಾಸನದಲ್ಲಿ 522 ಎಕರೆ ಮಾಡುತ್ತಾರೆ. ಇವರು ವೇದ ಹೇಳುವುದಕ್ಕೆ ಹೋಗುತ್ತಾರೆ 1,00,027 ಎಕರೆ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಲ್ಯಾಂಡ್ acquisition ಯಾವಾಗ ಏನೇನು ಆಯಿತು ಎಂಬ ಬಗ್ಗೆ ಸೆಪರೇಟಾಗಿ ಆಮೇಲೆ ಮಾತನಾಡೋಣ. ಚರ್ಚೆಗೆ ಟೈಂ ಹೇಳಿ ಬಿಟ್ಟರೆ ನೈಸ್ ಬಗ್ಗೆ, ಕೈಗಾರಿಕೆ ಇಲಾಖೆಯ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಿ, ಯಾರ್‍ಯಾರ ಕಾಲದಲ್ಲಿ ಏನೇನು ಆಗಿದೆ ಎಂಬ ಬಗ್ಗೆ ಚರ್ಚಿಸೋಣ. ಒಂದು ಪುಸ್ತಕ ಮಾಡಿ ಹಂಚುತ್ತೇನೆಂದು ಹೇಳುತ್ತಾರೆ, ಹಂಚಿ, ನಾನೇನು ಬೇಡ ಎಂದು ಹೇಳುತ್ತೇನೆಯೆ? ಉದಾಹರಣೆಗೆ ಹೇಳುವುದಾದರೆ, ಉತ್ತರ ಕರ್ನಾಟಕದ ಆ ಭಾಗದಲ್ಲಿ ಪಾಪ ಆ ಜನರ ಬಗ್ಗೆ ಕಳೆದ ಸಾರಿಯೂ ನಾವು ಮಾತನಾಡಿದೆವು. 72 ತಾಲ್ಲೂಕುಗಳಲ್ಲಿ ಏನಾಗಿದೆ? ಎಷ್ಟು ಕಳೆದುಕೊಂಡಿದ್ದೀರಿ? ಎಲ್ಲಾ ಆಯಿತು. ಎಷ್ಟು ಮನೆಯನ್ನು ಮಾಡಿದ್ದೀರಿ?

6.40 ಪಿ.ಎಂ.

ಬೆಂಗಳೂರು ನಗರದಲ್ಲಿ ಎಷ್ಟು ವಸೂಲಾತಿಯಾಯಿತು? ಮುಖ್ಯಮಂತ್ರಿಗಳ ಜೊತೆಯಲ್ಲಿ ಮೂರು ಜನರು ಹೋದರು. ಹೊಸ ಡಬ್ಬವನ್ನು ಹಿಡಿದುಕೊಂಡು ಹೋದರು. ನನಗೆ 400 ರಿಂದ 900 ಕೋಟಿ ರೂಪಾಯಿಗಳು ಬಂತೆಂದು ಮರು ದಿವಸದಲ್ಲಿ ಪತ್ರಿಕೆಯಲ್ಲಿ ಟಿ.ವಿ.ಯಲ್ಲಿ ಎಲ್ಲಾ ಬಂತು. ಆದರೆ ಹೋದ ಸಾರಿ ವಿಧಾನಸಭೆಯಲ್ಲಿ 86 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಮೊನ್ನೆ ಪಾಪ ಅರ್ಧ ಪುಟ ಪೇಪರ್ ಅನ್ನು ನೋಡಿದೆ. ಅದರಲ್ಲಿ ಇವರದು advertisementನಲ್ಲಿ ಎಷ್ಟು ಎಂದು ಪತ್ರಿಕಾ ಸ್ನೇಹಿತರನ್ನು ಕೇಳಿದೆ. ಅಮೃತಾನಂದಮಯಿ advertisement ಗೆ ಒಂದು ಕೋಟಿ ರೂಪಾಯಿಯನ್ನು ಕೊಟ್ಟಿದ್ದಾರೆ. 100 ಮನೆಗಳಿಗೆ ಒಂದು ಲಕ್ಷ ರೂಪಾಯಿಯಂತೆ ಒಂದು ಕೋಟಿ ರೂಪಾಯಿಗಳು. Advertisementಗೆ ಒಂದು ಕೋಟಿ ರೂಪಾಯಿಗಳು. ಅವರ ಹತ್ತಿರ ಕೀಯನ್ನು ತೆಗೆದುಕೊಳ್ಳುವುದಕ್ಕೆ 15 ಕೋಟಿ ರೂಪಾಯಿಗಳು. 5 ಎಕರೆ ಜಮೀನು 15 ಕೋಟಿ ರೂಪಾಯಿಗಳು ಇದು ಆದರೆ ಏನು ಸ್ವಾಮಿ? ಇದು ಯಾರ ದುಡ್ಡು? ಮಾನ್ಯ ಸಿದ್ದರಾಮಯ್ಯನವರು ಅವರು ಸುಮಾರು 6 ರಿಂದ 7 ವರ್ಷಗಳ ಕಾಲ ಹಣಕಾಸಿನ ಮಂತ್ರಿಯಾಗಿದ್ದರು ಅವರು ಈ ಕೆಲಸವನ್ನು ಮಾಡಿದ್ರಾ? ಅವರ ಹತ್ತಿರ ನಾವು ಯಾರಾದರೂ ಸ್ವಾಮಿಗಳ ಕೆಲಸವನ್ನು ಮಾಡಿಸಬೇಕಾದರೆ 15 ಸಾರಿ ನೀರು ಕುಡಿದರೂ ಸಹ ಅವರು ಸಹಿಯನ್ನು ಮಾಡುತ್ತಿರಲಿಲ್ಲ.

ಒಬ್ಬ ಮಾನ್ಯ ಸದಸ್ಯರು : ಅವರು ಸಹಿ ಮಾಡುವುದಕ್ಕೆ ನೀವು ಬಿಟ್ಟರೆ ತಾನೆ?

ಶ್ರೀ ಹೆಚ್.ಡಿ.ರೇವಣ್ಣ : ಏಕೆಂದರೆ, ಅವರಿಗೆ ಸ್ವಾಮಿಗಳು ಎಂದರೆ ಅಷ್ಟೇ. ಇವತ್ತು ಉದಾಹರಣೆಯನ್ನು ಇಲ್ಲಿ ನಾನು ನೋಡುತ್ತಿದ್ದೇನೆ ಕಳೆದ ಸಾರಿ ಬೆಳಗಾಂನಲ್ಲಿ ನಡೆದ ಅಧಿವೇಶನದಲ್ಲಿ ಅವರು 56,000 ಕಿ.ಮೀ. ರಸ್ತೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಉದಾಸಿಯವರ ಬಗ್ಗೆ ಹೆಚ್ಚಿಗೆ ಹೇಳುವುದು ಬೇಡ. ಏಕೆಂದರೆ ಅವರ ಬಗ್ಗೆ ನಮಗೆ ಗೌರವ ಕೂಡ

ಇದೆ. ಅದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. "ಮೊದಲನೆಯ ಹಂತದಲ್ಲಿ 10,000 ಕಿ.ಮೀ. ರಸ್ತೆಗಳನ್ನು ಕೈಗೊಳ್ಳಲಾಗುತ್ತಿದೆ. ರಸ್ತೆಯ ಅಭಿವೃದ್ಧಿಗೆ ಹೊಸ ರಾಜ್ಯ ನೀತಿಯನ್ನು ಅಳವಡಿಸಲಾಗಿದೆ. ಮುಂದಿನ ಹಂತಗಳಲ್ಲಿ 56,000 ಕಿ.ಮೀ.ರಸ್ತೆಯ ಅಭಿವೃದ್ಧಿಯನ್ನು ಕೈಗೊಳ್ಳಲಾಗುವುದು. ಯೋಜನಾ ಆಯೋಗದ ಮಾರ್ಗಸೂಚಿಯಂತೆ ಆ ಮೇಲೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ವಿನಿಯೋಗಿಸಿ K-SHIP ಮತ್ತು K.R.D.C.L. ಮೂಲಕ ರಸ್ತೆಯ ಅಭಿವೃದ್ಧಿಯಾಗುವುದು" ಎಂದು ಹೇಳಿದರು. ನಮ್ಮ ಮಂಜಣ್ಣನವರು ಇಲ್ಲಿ ಇಲ್ಲ. ಅವರು ಎಲ್ಲಿಗೋ ಹೋಗಿದ್ದಾರೆ. ಅವರು ಪುಸ್ತಕವನ್ನು ತಯಾರು ಮಾಡಿಕೊಂಡು ಬಂದಿದ್ದರು. ಅದರಲ್ಲಿ ಅರ್ಧ ಅರಕಲಗೂಡಿನದು ಮತ್ತು ಹಾಸನದು ಇತ್ತು. ಪಾಪ ಎ.ಮಂಜುರವರ ಕ್ಷೇತ್ರದ ರಸ್ತೆಯನ್ನು ಹೋದ ಸಾರಿ ಮಾಡುತ್ತೇನೆಂದರು, ಈ ಸಾರಿಯು ಅಭಿವೃದ್ಧಿ ಮಾಡಲಿಲ್ಲ. ಒಂದು ಸಾವಿರ ಕೋಟಿ ರೂಪಾಯಿಗಳು ಅಲ್ಲ. ಇವತ್ತು ಪಿಡಬ್ಲ್ಯೂಡಿಯಲ್ಲಿ ಬಿಲ್ ಎಷ್ಟು ಇದೆ ಸ್ವಾಮಿ? ನಾನು ಅವರನ್ನು ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಬಾಕಿ ಬಿಲ್ ಎಷ್ಟು ಇದೆ ಹೇಳಿ ಸ್ವಾಮಿ. PWD ಒಂದರಲ್ಲಿಯೇ ಎಲ್ಲವೂ ಸೇರಿ 800 ಕೋಟಿ ರೂಪಾಯಿಗಳ ಬಿಲ್ ಇದೆ. ಏನು ಕಾರಣ? ಯಾವ ಉದ್ದೇಶಕ್ಕಾಗಿ ಇಲ್ಲ. ನನ್ನ ಕಡೆ ಯಾರು ಕಂಟ್ರ್ಯಾಕ್ಟದಾರರು ಇಲ್ಲ. ಅದರ ಬಗ್ಗೆ ಇನ್ನೊಂದು enquiry ಮಾಡಿ. ಲೋಕೋಪಯೋಗಿ ಮತ್ತು ಇಂಧನ ಇಲಾಖೆ ಎಲ್ಲಾ ಟೆಂಡರ್ ಬಗ್ಗೆ ಎಲ್ಲಾ enquiry ಮಾಡುತ್ತೇನೆ ಎಂದು ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳದು ಒಂದು ಕತೆ ಹೇಳಬೇಕೆಂದರೆ, ಟೆಂಡರ್ ಬಗ್ಗೆ ಬೇಕಾದರೆ ಬಿಡು ಅಂದರೆ ಅದನ್ನು ಬಿಡುತ್ತೇನೆ. ನಾನು ಲೋಕೋಪಯೋಗಿ ಇಲಾಖೆಯಲ್ಲಿ 3 ವರ್ಷ 6 ತಿಂಗಳು ಕಾಲ ಮಂತ್ರಿಯಾಗಿದ್ದೆ. ಯಾವುದಾದರೂ ಟೆಂಡರ್ ಅಥವಾ ಇನ್ನೇನಾದರೂ ಮಾಡಿದ್ದರೆ ಯಾವ ತರಹದ ತನಿಖೆಯನ್ನು ಬೇಕಾದರೆ ನಡೆಸಿ ಅದಕ್ಕೆ ನಾನು ರೆಡಿ ಇದ್ದೇನೆ. ಮುಖ್ಯಮಂತ್ರಿಗಳು ಒಂದೇ ಒಂದು ಬಿಡು ಅಂದರೆ ಅದನ್ನು ಬಿಡುತ್ತೇನೆ. ಏಕೆಂದರೆ Law Minister ಇಲ್ಲ.

ನೋಟಿಸ್ ಕೊಡಬೇಕೆಂದು ಹೇಳುತ್ತಾರೆ. ಒಂದು ಉದಾಹರಣೆಯನ್ನು ಹೇಳುವುದಾದರೆ ಒಂದು ಕಥೆ ಹೇಳುತ್ತೇನೆ. ನಮ್ಮ ವಿರೋಧಪಕ್ಷದ ನಾಯಕರು ಸದನದಲ್ಲಿಯೇ ಇದ್ದಾರೆ. ಒಂದು ನೀರಾವರಿ ನಿಗಮಕ್ಕೆ ಅಧ್ಯಕ್ಷರು ಮಾನ್ಯ ಮುಖ್ಯಮಂತ್ರಿಗಳು, 22.12.2000ದಲ್ಲಿ 550 ಕೋಟಿ ರೂಪಾಯಿಗಳಿಗೆ ಒಂದು ಟೆಂಡರ್‌ನ್ನು ಕರೆಯುತ್ತಾರೆ. 550 ಕೋಟಿ ರೂಪಾಯಿಗಳಿಗೆ ಟೆಂಡರ್‌ನ್ನು ಕರೆದಿದ್ದನ್ನು 30–01–2007ರಲ್ಲಿ ಅರ್ಜಿಯನ್ನು ಸ್ವೀಕರಿಸುತ್ತಾರೆ. ಭರ್ತಿ ಮಾಡಲು 31.5.2007, ಆರ್ಥಿಕ ಬಿಡ್ 3.2.2007 ಇದಕ್ಕೆ 14 ಜನರು ಟೆಂಡರನ್ನು ಹಾಕುತ್ತಾರೆ. ಅದರಲ್ಲಿ 5 ಸಂಸ್ಥೆಗಳು ಇದೆ. RNS Jyothi K.V.L.Shankar Kirloskar ಇದರಲ್ಲಿ 2 ಟೆಂಡರ್‌ಗಳು ಉಳಿಯುತ್ತದೆ. ಇದರಲ್ಲಿ ಎರಡು ವರ್ಷ validity of the last date. ಒಂದು ಉದಾಹರಣೆಯನ್ನು ನಿಮಗೆ ಹೇಳುತ್ತೇನೆ. ರಾಜ್ಯದ Advocate General ಶ್ರೀ ಉದಯಹೊಳ್ಳ ಇರುತ್ತಾರೆ. ಅವರು ಒಂದು Opinion ಕೊಡುತ್ತಾರೆ ಅದನ್ನು ಇವರು ತೆಗೆದು ಡಬ್ಬಕ್ಕೆ ಎಸೆಯುತ್ತಾರೆ. ಆವರು ಏನು opinion ಕೊಡುತ್ತಾರೆಂದು ಬೇಕಾದರೆ ಅವರೆ Legal opinion ಕೊಟ್ಟು ಇದರಲ್ಲಿ ಯಾರು ಇದ್ದಾರೆ L–1 ಇದ್ದಾರೆ, ಅವರಿಗೆ ಕೊಡಿ ಎಂದು ಹೇಳುತ್ತಾರೆ, ಅವರು ಕೊಡುತ್ತಾರೆ ಇದು ನನ್ನದಲ್ಲ. ಪಾಪ Advocate Generalರವರನ್ನು ಮನೆಗೆ ಕಳುಹಿಸಿದರಲ್ಲಾ? ಅವರನ್ನು ಮನೆಗೆ ಕಳುಹಿಸಿ ಮತ್ತೊಬ್ಬರನ್ನು Advocate General ಮಾಡಿದ್ದೀರಿ ಸಂತೋಷ. ಅದರ ಬಗ್ಗೆ ನನ್ನದೇನ್ನೂ ಇಲ್ಲ. ಏನು ಬೇಕಾದರೂ ಬರೆಸಿಕೊಳ್ಳಿ. ಶ್ರೀ ಉದಯ ಹೊಳ್ಳರವರು ಕೊಟ್ಟಿರುವುದನ್ನು ಬೇಕಾದರೆ ನಿಮಗೆ ಕಳುಹಿಸಿಕೊಡಿ ಎಂದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. Tender Notification ಮತ್ತು ಇದನ್ನೂ ಸಹ ಕಳುಹಿಸಿಕೊಡುತ್ತೇನೆ. Technical Committee ಆಗುತ್ತದೆ. 27ನೇ ಸೆಪ್ಟೆಂಬರ್ 2008 ಅದಕ್ಕಿಂತ ಮುಂಚೆ ಒಂದು Expert Committee ಎಂದು ಮಾಡುತ್ತಾರೆ. ಅದರಲ್ಲಿ ಮೂರು ಜನರು Committee Members ಗಳು ಇರುತ್ತಾರೆ. ಅಲ್ಲಿರುವ ಮೂರು ಜನರ ಕಮಿಟಿಯಲ್ಲಿ ವಿರೋಧವನ್ನು ಮಾಡುತ್ತಾರೆ. ಅದರಲ್ಲಿ ಎರಡು ಜನರು L–1ಗೆ ಕೊಡಿ

ಎಂದು ಹೇಳುತ್ತಾರೆ L–2ಗೆ ಕೊಡಬೇಡಿ ಎಂದು ಹೇಳುತ್ತಾರೆ. ಒಬ್ಬರೇ ಒಬ್ಬರು ಅವರ ಪರವಾಗಿ ಹೇಳುತ್ತಾರೆ. ಎರಡು ಜನ technical opinion ಇರುವವರನ್ನು ತೆಗೆದು ಎಸೆಯುತ್ತಾರೆ. ಒಬ್ಬನೇ ಇರುತ್ತಾನಲ್ಲಾ ಅವನಿಗೆ ಕೊಡುತ್ತಾರೆ. Technical Committee ಯು 27ನೇ ತಾರೀಖು ಆಗುತ್ತದೆ. 30ನೇ ತಾರೀಖು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಮೂರೇ ದಿನಕ್ಕೆ 550 ಕೋಟಿ ರೂಪಾಯಿಗಳ workನ್ನು 1032 ಕೋಟಿ ರೂಪಾಯಿಗಳಿಗೆ approve ಮಾಡಿಕೊಡುತ್ತಾರೆ 100%. ನೋಟೀಸ್ ಇಲ್ಲ. ಏನೂ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು approve ಮಾಡಿರುವಂತಹ ಕಂಪನಿ ಯಾವುದೆಂದರೆ ಅದು ಹಿಮಾಚಲ ಪ್ರದೇಶದಲ್ಲಿವಂತಹ ಕಂಪನಿ. ಅಲ್ಲಿ ಅವರ Government ಇದೆ. ಅದು blacklistನಲ್ಲಿರುವಂತಹದ್ದು ಬೇಕಾದರೆ ಅದರ ಕಾಪಿಯನ್ನು ತಮಗೆ ಕೊಡುತ್ತೇನೆ. Blacklist companyಗೆ 550 ಕೋಟಿ ರೂಪಾಯಿಗಳ workನ್ನು 1032 ಕೋಟಿ ರೂಪಾಯಿಗಳಿಗೆ L–1 ಇರುವವನನ್ನು ಬಿಟ್ಟು L–2ಗೆ ಕೊಡುತ್ತಾರೆ. ಇದನ್ನು ಬೇಕಾದರೆ ತಮಗೆ ಕಳುಹಿಸಿಕೊಡುತ್ತೇನೆ. ಏಕೆಂದರೆ ನಿಮಗೆ 17 ಖಾತೆ ಇರುವುದರಿಂದ ಇವುಗಳನ್ನು ತಾವು ನೋಡುವುದಕ್ಕಾಗುತ್ತಿಲ್ಲ. ಭಾಗ್ಯಲಕ್ಷ್ಮಿದು ಇಲ್ಲ, ನೀರಾವರಿದು ಇಲ್ಲ, ಏಕೆಂದರೆ ನಿಮ್ಮ ಖಾತೆಗಳನ್ನು ಜಗದೀಶ್‌ಶೆಟ್ಟರ್ ಕಡೆಗೊ, ಉದಾಸಿ ಸಾಹೇಬರ ಕಡೆಗೊ ಕೊಡಿ. ಯಾರು honest ಆಗಿ ಇರುತ್ತಾರೋ ಅವರ ಕಡೆಯೇ ಇಟ್ಟುಕೊಳ್ಳಿ ನಿಮಗೆ ನಾನು ಇಂತಹವರಿಗೆ ಕೊಡಿ ಎಂದು ಹೇಳುತ್ತಿಲ್ಲ. ನಾನು ಏನು ಹೇಳುತ್ತೇನೆಂದರೆ 17 ಖಾತೆಗಳು ಇದ್ದಾಗ ಅಧಿಕಾರಿಗಳು ನಿಮ್ಮ ಹತ್ತಿರ ಸುಳ್ಳು ಹೇಳಿ ಸಹಿಯನ್ನು ಮಾಡಿಸುತ್ತಾರೆ. ಅದಕ್ಕೆ ನೀವು ಪಾಪ ಬಲಿಯಾಗುವುದು ಬೇಡವೆಂದು ನಾನು ನಿಮಗೆ ಹೇಳುತ್ತಿದ್ದೇನೆ. ಶ್ರೀ ಉದಯ ಹೊಳ್ಳರವರು ಕೊಟ್ಟಿರುವುದನ್ನು ಸಹ ನಾನು ನಿಮಗೆ ಕಳುಹಿಸಿಕೊಡುತ್ತೇನೆ. ಬೇಕಾದರೆ tender notification copyಯನ್ನು ಸಹ ನಿಮಗೆ ಕಳುಹಿಸಿಕೊಡುತ್ತೇನೆ ಇದರ ಜೊತೆಗೆ ಅವರು blacklist ಆಗಿರುವುದನ್ನು ಸಹ ನಾನು ಕಳುಹಿಸಿಕೊಡುತ್ತೇನೆ. ಇದು ಯಾರ ದುಡ್ಡು ಸ್ವಾಮಿ? ನೀವು ಶಾಲು ಹಾಕಿಕೊಂಡು ಅಧಿಕಾರವನ್ನು

ತೆಗೆದುಕೊಂಡು ಷರಾಯಿ ಹಾಕಿಕೊಂಡಿರುವುದು, ರೈತರ ದುಡ್ಡು ಸ್ವಾಮಿ ಅದು. ಮಾನ್ಯ ಸಿದ್ದರಾಮಣ್ಣನವರು ಸ್ವಲ್ಪ ಟ್ರಂಕ್‌ಗೆ ಬೀಗವನ್ನು ಹಾಕಿ ಆ ಕಾಲದಲ್ಲಿ ಇಟ್ಟಿದ್ದರು. ಅದು ಬಿಟ್ಟ ಮೇಲೆ flood gate ತರಹ ಅದು open ಆಗಿಹೋಯಿತು. ಅದನ್ನು ಯಾರು ಒಪ್ಪಿಸಿದರೋ ಅಥವಾ ಬಿಟ್ಟರೋ ಅದು ನನಗ್ಯಾಕೆ? ಮಳವಳ್ಳಿಯ ಶಾಸಕರಾದ ಶ್ರೀ ನರೇಂದ್ರಸ್ವಾಮಿಯವರದು ಏಕೆ? ಅವರದು ಒಂದು storyಯನ್ನು ಹೇಳಬೇಕು ಎಂದರೆ ಅದನ್ನು ಸಹ ನಾನು ಹೇಳುತ್ತೇನೆ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ : ಸಂಪೂರ್ಣ ಸ್ವಾತಂತ್ರ್ಯ ಇದೆ.

ಶ್ರೀ ಹೆಚ್.ಡಿ. ರೇವಣ್ಣ : ಬೇಡ ಏಕೆಂದರೆ, ಅವರು ನಮ್ಮ ಅಣ್ಣನವರ ಆತ್ಮೀಯರು, ಅವರ storyಯನ್ನು ಈಗ ಹೇಳುವುದು ಬೇಡ. ಅದು ಬೇಕಾದಾಗ ಹೇಳೋಣ. ನಿಮ್ಮ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯದು ಹೇಳಿ ಆಗಿದೆ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ : ಬಾಂಡ್ ಪ್ರಿಂಟ್ ಆಗುವುದು ತಡವಾಗಿದೆಯೆ ಹೊರತು, ಇನ್ನೇನೂ ಇಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಪ್ರಿಂಟೋ, ಗ್ರಿಂಟೋ ಅದು ನನಗೆ ಗೊತ್ತಿಲ್ಲ. ಅದನ್ನು ಅಣ್ಣವರಿಗೆ ಕಳುಹಿಸಿಕೊಡಪ್ಪ. ಭಾಗ್ಯಲಕ್ಷ್ಮಿದು ತೆಗೆದುಕೊಳ್ಳಪ್ಪಾ, Advocate General ಮತ್ತು ಎಲ್ಲರದನ್ನು ಸೇರಿಸಿ ಕಳುಹಿಸಿಕೊಡುತ್ತೇನೆ. Advocate General ದು, Technical Committee ಯ ಮೂರು ಜನ members ಇದ್ದು ಎರಡು ಜನರು ವಿರೋಧ ಮಾಡಿರುವುದನ್ನೂ ಸಹ ನಾನು ಕಳುಹಿಸಿಕೊಡುತ್ತೇನೆ. ಬೇಕಾದರೆ ಮೂರು ದಿನದಲ್ಲಿ ಅವರ್‍ಯಾರೋ ದೇಸಾಯಿ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿ, ಅದು ಏನೇನು ಇದೆ entire ಕಡತ ಬೇಕಾದರೆ ಸಾಹೇಬರಿಗೆ ನಾಳೆ xerox ಮಾಡಿ ನಿಮಗೆ ಕಳುಹಿಸಿಕೊಡುತ್ತೇನೆ. ಭಾಗ್ಯಲಕ್ಷ್ಮಿಯ ಮಂತ್ರಿಗಳಾದ ನರೇಂದ್ರಣ್ಣನವರಿಗೆ ಕೊಡಪ್ಪಾ. ನಾನು ತಮಗೆ ಎಲ್ಲವನ್ನು ಕಳುಹಿಸಿಕೊಡುತ್ತೇನೆ. ಯಾವ ದಾಖಲಾತಿ ಬೇಕೋ ಒಂದು setನ್ನು ತಮಗೆ ಕಳುಹಿಸಿಕೊಡುತ್ತೇನೆ. ನನ್ನ ಹತ್ತಿರ ಒಂದು xeroxನ್ನು

ಇಟ್ಟುಕೊಳ್ಳಬೇಕಲ್ಲಾ? ರೇವಣ್ಣನವರೆ ಹೇಗೆ ಹೇಳಿದ್ದೀರಿ, ಉದಯ ಹೊಳ್ಳರವರದನ್ನು ತಾವು ನೋಡಿಬಿಟ್ಟು ಕೋಡುವುದಾದರೆ ಅದನ್ನು ನಾನು ತಮಗೆ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಒಂದು extra xerox ಪ್ರತಿಯನ್ನು ನೀವು ಇಟ್ಟು ಕೊಳ್ಳುವುದಕ್ಕಾಗಲಿಲ್ಲವೇ? ಇಲ್ಲಾ ನೀವು ಎಲ್ಲಾ ಹೇಳಿ ಇಲ್ಲಿ ಮುಗಿಸಿಬಿಡುವುದು. ತಾವು ಸಭಾಧ್ಯಕ್ಷರಿಗೆ ಕೊಡಬೇಕಲ್ಲ?

ಶ್ರೀ ಹೆಚ್.ಡಿ. ರೇವಣ್ಣ : ಇಲ್ಲಾ ನಾನು ತಮಗೆ ಕೊಡುತ್ತೇನೆ. ನಮ್ಮ ಹತ್ತಿರ ...

ಶ್ರೀ ಸಿ.ಸಿ. ಪಾಟೀಲ್ : ಏನೆಲ್ಲಾ ಮಾಹಿತಿಗಳು ಇದೆಯೆಂದರೆ, xerox mechine ನಿಮ್ಮ ಹತ್ತಿರ ಇರಬೇಕು.

ಅಧ್ಯಕ್ಷರು : ಮಾನ್ಯ ಪಾಟೀಲ್‌ರವರೆ, ತಾವು ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್: ಒಂದು ಕಾಪಿಯನ್ನು ಕಳುಹಿಸಿಕೊಡಿ.

ಶ್ರೀ ಹೆಚ್.ಡಿ. ರೇವಣ್ಣ : ಇದರಲ್ಲಿ ನಾನು ಯಾವುದೂ ಮುಚ್ಚುಮರೆ ಮಾಡುವುದಿಲ್ಲ. ಬೇಕಾದರೆ ತೆಗೆದುಕೊಳ್ಳಪ್ಪಾ ಅವರಿಗೆ ಕೊಟ್ಟು ವಾಪಸ್ಸು ತೆಗೆದುಕೊಂಡು ಬಾರಪ್ಪ. ಏಕೆಂದರೆ ನಮಗೆ ಏನಾಗಿದೆ ಎಂದರೆ xerox paperಗೆ ದುಡ್ಡು ಕೊಡುವುದಕ್ಕಾಗುತ್ತಿಲ್ಲ. ಆ ಪರಿಸ್ಥಿತಿ ನನಗೆ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ನಮಗೆ ಏನಾದರೂ xerox mechineನ್ನು ಕಳುಹಿಸಿಕೊಟ್ಟರೆ ಒಳ್ಳೆಯದಾಗುತ್ತದೆ. ಬೇಕಾದರೆ ನೋಡಪ್ಪ. ಅಣ್ಣನವರು ನೋಡಿ ಬೇಕಾದರೆ ವಾಪಸ್ಸು ಕಳುಹಿಸಿಕೊಡಲಿ. ಏಕೆಂದರೆ ನಾನು ಹೇಳುವುದು ಏನಾಗಿದೆ ಎಂಬುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದರ ಬಗ್ಗೆ ಒಂದು ಟಿಪ್ಪಣಿಯನ್ನು ಮಾಡಿದ್ದೇನೆ ಅದನ್ನು ಬೇಕಾದರೆ ಅವರಿಗೆ ಕೊಡಪ್ಪ. ನಾನು ಬೇಡವೆಂದು ಹೇಳುವುದಿಲ್ಲ. ದಾಖಲೆ ಏನು ಇದೆ entire ಕಳುಹಿಸಿಕೊಡುತ್ತೇನೆ. ಇದರಲ್ಲಿ ಯಾವುದೂ ಮುಚ್ಚುಮರೆ ಇಡುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಇದು ಒಂದು ನೀರಾವರಿದು trial. ಇನ್ನೊಂದು 250 ಕೋಟಿ ರೂಪಾಯಿಗಳು ಇರುವುದನ್ನು 400 ಕೋಟಿ ರೂಪಾಯಿಗಳಾಗಿ ಮಾಡಿರುವುದನ್ನು ಬೇಕಾದರೆ ತಮಗೆ

ಕಳುಹಿಸಿಕೊಡುತ್ತೇನೆ. ಆಮೇಲೆ ಇನ್ನೊಂದು ಶಿವಮೊಗ್ಗದ ನಿಮ್ಮ ಶಿಕಾರಿಪುರದ water supply ಬಗ್ಗೆ 150% ಮಾಡಿರುವುದಕ್ಕೆ ಎಂ.ಡಿ.ಬಲಿಯಾದರು, ಈ ಕಡೆ ಅಧ್ಯಕ್ಷರಾಗಿದ್ದರಲ್ಲ ಪ್ರಕಾಶ್ ಅವರೂ ಬಲಿಯಾದರು. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಇಂಧನ ಇಲಾಖೆಯ ಬಗ್ಗೆ ಹೇಳಿದ್ದಾರೆ. ನಾನು ಬಂದ ಮೇಲೆ 18 ತಿಂಗಳುಗಳಲ್ಲಿ ಯಾವ ಸಾಧನೆ ಮಾಡಿದ್ದೇವೆ? ಮೊದಲನೆಯದಾಗಿ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ 500 ಮೆಗಾ ವ್ಯಾಟ್ ಯಾವಾಗ ಪ್ರಾರಂಭ ಆಯಿತು? ಯಾವಾಗ ಮುಗಿಯಬೇಕಾಗಿತ್ತು? ಶ್ರೀ ಆಡ್ವಾನಿ ಮತ್ತು ಅವರ ಮನೆಯವರನ್ನು ಕರೆಸಿ ಪೂಜೆ ಮಾಡಿಸಿದರು. ಯಾವಾಗ, ಯಾರ ಕಾಲದಲ್ಲಿ ಪ್ರಾರಂಭ ಆಯಿತು? ಮತ್ತು ಯಾವಾಗ ಅದು ಮುಗಿಯಬೇಕಾಗಿತ್ತು? ಏಕೆ ಮುಗಿಯಲಿಲ್ಲ? ಇದಕ್ಕೆ ಕಾರಣವೇನು ಎನ್ನುವುದನ್ನು ದಯಮಾಡಿ ತಿಳಿಸಿ. ಎರಡನೆಯದಾಗಿ ವಾರಾಹಿ ಜಲವಿದ್ಯುತ್ 280 ಮೆಗಾವ್ಯಾಟ್, ಅದು ಯಾವಾಗ ಪ್ರಾರಂಭ ಆಯಿತು. ನಾನೇನು ಅಡಿಗಲ್ಲು ಹಾಕಲಿಕ್ಕೆ ಹೋಗಿಲ್ಲ, ನನಗೆ ಅಡಿಗಲ್ಲು ಮುಖ್ಯವಿಲ್ಲ, ನಾನು ಪ್ರಾರಂಭ ಮಾಡಿಸಿದ್ದೇನೆ. ನಾಗಾರ್ಜುನ 1015 ಮೆಗಾವ್ಯಾಟ್ ಯಾವಾಗ ಆಯಿತು ಹೇಳಿ. 2.50 ಪೈಸೆಗೆ ಮಾಡಿದೆ ಯಾವಾಗ ಮುಗಿಯಬೇಕು. ಏಕೆ ಮುಗಿಯಲಿಲ್ಲ, 400 ಕೆ.ವಿ. stationನ ಲೈನ್ ಎಳೆಯಬೇಕಾಯಿತು, ಆ ಲೈನ್ ಯಾವರೀತಿ ಕೊಡುತ್ತಾರೆಂದು ಇವತ್ತಿನವರೆಗೆ ನನಗೆ ಗೊತ್ತಿಲ್ಲ. ಏಕೆಂದರೆ ಮುಖ್ಯಮಂತ್ರಿಗಳು 4 ತಿಂಗಳುಗಳಲ್ಲಿ ಮಾಡಿಸುತ್ತೇವೆಂದು ಹೇಳಿಕೆ ಕೊಟ್ಟಿದ್ದಾರೆ. ಏಕೆಂದರೆ ರಾಜ್ಯಪಾಲರ ಭಾಷಣದಲ್ಲಿಯೂ ಹೇಳಿಬಿಟ್ಟಿದ್ದಾರೆ, 600 ಮೆಗಾವ್ಯಾಟ್ ವಿದ್ಯುತ್ ಬರುತ್ತದೆ ಎಂದು ಹೇಳಿದ್ದಾರೆ. ಅದಲ್ಲದೆ ಬಳ್ಳಾರಿ ಎರಡನೇ ಹಂತದ್ದು ಯಾವಾಗ ಆಯಿತು? ರಾಯಚೂರು 250 ಮೆಗಾವ್ಯಾಟ್ ಯಾವಾಗ ಆಯಿತು? ಗುಂಡ್ಯಾದಲ್ಲಿ ಅಡಿಗಲ್ಲು ಹಾಕಿ ಬಂದಿರಿ, ನಾನಿದ್ದಾಗಲೇ clearance ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೆ. ಅದರ ಮೇಲೆ ನಿಮ್ಮ ಪಕ್ಷದವರೇ ಹಾಸನದಲ್ಲಿ ದೊಡ್ಡ ಸ್ಟ್ರೈಕ್ ಮಾಡಿದ್ದರು, ನಾನೇನಾದರೂ strike ಮಾಡಿಸಲಿಕ್ಕೆ ಬಂದಿದ್ದೆನೆ? ನಾವು ಆ ಸಣ್ಣತನಕ್ಕೆ

ಹೋಗಬಾರದು. ಏಕೆಂದರೆ 50 ಪೈಸೆಗೆ ಒಂದು ಯೂನಿಟ್ ಕರೆಂಟ್ ದೊರೆಯುವಾಗ ರಾಜ್ಯದ ದೃಷ್ಟಿಯಿಂದ ನಾನು ಗುಂಡ್ಯಾ ಬಗ್ಗೆ ವಿರೋಧಿಸಲಿಲ್ಲ. ಶ್ರೀ ವಿ.ಎಸ್.ಆಚಾರ್ಯರವರು ಮೇಲ್ಮನೆಯಲ್ಲಿ ಹೋದ ಸಾರಿ ಇಂಧನ ಸಚಿವರಾಗಿದ್ದಾಗ ಗುಂಡ್ಯಾ ವಿಷಯದಲ್ಲಿ ನನ್ನ ಪರವಾಗಿ ಸಪೋರ್ಟ್ ಕೊಟ್ಟಿದ್ದರು. ಒಳ್ಳೆಯ ಕೆಲಸವನ್ನು ಮಾಡಿ, ನಾವು ಬೇಡವೆಂದು ಹೇಳುವುದಿಲ್ಲ. ಎರಡು ಮೂರು ಪಾಯಿಂಟ್ಸ್ ಅನ್ನು ನಾವು ಕೇಳುತ್ತೇವೆ. ಕರ್ನಾಟಕ ವಿದ್ಯುತ್ ನಿಗಮದಲ್ಲಿ ಕೂಡಗಿ 1000 ಮೆಗಾವ್ಯಾಟ್, ರಾಯಚೂರು ಶಾಖೋತ್ಪನ್ನ ಎರಡನೇ ಹಂತದ್ದು 1000 ಮೆಗಾವ್ಯಾಟ್, ಕೌಶಿಕ– 1000 ಮೆಗಾವ್ಯಾಟ್, ಬಳ್ಳಾರಿ ಶಾಖೋತ್ಪನ್ನದಲ್ಲಿ ಎರಡು – 1500 ಮೆಗಾವ್ಯಾಟ್, ಒಟ್ಟು 4,500 ಮೆಗಾವ್ಯಾಟ್‌ಗೆ ಡಿ.ಪಿ.ಆರ್. ಮಾಡುವುದಕ್ಕೆ ಕೆ.ಪಿ.ಸಿ.ಯ ಸಭೆಯಲ್ಲಿ ನಿರ್ಣಯವಾಗಿದೆಯೇ, ಇಲ್ಲವೇ ಎಂಬುದನ್ನು ದಯಮಾಡಿ ತಿಳಿಸಬೇಕು. ಸಿದ್ಧರಾಮಯ್ಯನವರ ಕಾಲದಲ್ಲಿ, ರೇವಣ್ಣನವರ ಕಾಲದಲ್ಲಿ ಏನೂ ಮಾಡಿಲ್ಲ ಎನ್ನುವ ಒಂದು ಭಾವನೆಯನ್ನು ನಿನ್ನೆ ವ್ಯಕ್ತಪಡಿಸಿದ್ದಾರೆ. New Power Plant ಅದನ್ನು ಬಿ.ಟಿ.ಪಿ.ಎಸ್. 500 ಮೆಗಾವ್ಯಾಟ್, ವಾರಾಹಿ ಎರಡನೇ ಹಂತದ್ದು 230 ಮೆಗಾವ್ಯಾಟ್ ಇರಬಹುದು, ಇದೇ ರೀತಿ ಇನ್ನು ಕೆಲವನ್ನು ಸುಮಾರು 10000 ಮೆಗಾವ್ಯಾಟ್ ವಿದ್ಯುತ್ ಮಾಡಲಿಕ್ಕೆ, ಡಿ.ಪಿ.ಆರ್. ಮಾಡಲಿಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಾವು ದಯಮಾಡಿ ತಿಳಿಸಬೇಕು ಎಂದು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. Transformers ಖರೀದಿ ಬಗ್ಗೆ ಹೇಳಿದ್ದಾರೆ. ಅದಕ್ಕೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಮಾನ್ಯ ಅಧ್ಯಕ್ಷರೆ, 2006–07 ರಲ್ಲಿ ಸುಮಾರು 2,700 ಕೋಟಿ ರೂಪಾಯಿಗಳಿಗೆ ವಾರ್ಷಿಕ ಯೋಜನೆ 365 ಹೊಸ ಸ್ಟೇಷನ್ ಮಾಡಬೇಕೆಂದು ನಾವು ನಿರ್ಣಯಿಸಿದ್ದೆವು. ನಾನೇನೂ ಮಾಡಿಲ್ಲ ಇದು. ಕರ್ನಾಟಕ ವಿದ್ಯುತ್ ಆಯೋಗವು, ಬಿ.ಟಿ.ರುದ್ರಪ್ಪನವರೆಂದು ಮಾಜಿ ಕೆ.ಇ.ಬಿ. ಅಧ್ಯಕ್ಷರು, ಅವರು ಯಡಿಯೂರಪ್ಪನವರಿಗೂ ಗೊತ್ತು, ಅವರ ಸಂಬಂಧ ಇರಬೇಕೇನೋ, ಏಕೆಂದರೆ ಅವರ ಅಧ್ಯಕ್ಷತೆಯಲ್ಲಿ ಮಾಡಿಸಿದ್ದೆವು, ಬೇಕೆಂದರೆ

ಕಡತವನ್ನು ತೆಗೆಸಿ ನೋಡಿ. ಸುಮ್ಮನೆ ಕೆಲವು ಅಧಿಕಾರಿಗಳು ಏನು ಮಾಡುತ್ತಾರೆ ಎಂದರೆ ರೇವಣ್ಣ, ದೇವೇಗೌಡರು , ಕುಮಾರಸ್ವಾಮಿ ಅಂದರೆ ಸರ್, ನೀವು ತೆಗೆದುಕೊಂಡು ಬನ್ನಿ, ರೇವಣ್ಣನವರದು ಇದು, ಹೀಗೆ ಮಾಡಿ ಎಂದು ಹೇಳುತ್ತಾರೆ. ಅದಕ್ಕೆ ನೀವು ಕಡತ ತೆಗೆದು ನೋಡಿ. ಇದರಲ್ಲಿ ಸುಮಾರು 542 ಸ್ಟೇಷನ್‌ಗಳನ್ನು, 66 ಕೆ.ವಿ.ಯ 400 ಸ್ಟೇಷನ್ಸ್ ಒಟ್ಟು over-load ಇದೆಯೆಂದು ಹೇಳಿ ನಾನಲ್ಲ ವರದಿ ಕೊಟ್ಟಿರುವುದು, ಅವರು ವರದಿ ಕೊಟ್ಟು, ಅದರ ಮೇಲೆ ಕೆ.ಇ.ಆರ್.ಸಿ. ಮೇಲೆ ಅನುಮತಿ ತೆಗೆದುಕೊಂಡು 1755 ಕೋಟಿ ರೂಪಾಯಿಗಳಿಗೆ ಮಿತಗೊಳಿಸಿ ಮಾಡಲಿಕ್ಕೆ ಕ್ರಮ ತೆಗೆದುಕೊಂಡಿದ್ದರು. ಅದಾದ ಮೇಲೆ international tender, ಎಲ್ಲವನ್ನು ಕರೆದರು, ಸಿ.ಬಿ.ಐ.ಗಾದರೂ ಕೊಡಿ, Transformer ಬಗ್ಗೆ ಯಾವುದಕ್ಕಾದರೂ ಕೊಡಿ ನನ್ನದೇನೂ ಅಭ್ಯಂತರವಿಲ್ಲ. ನಮಗೆ ಬೇಕಾದರೆ ಜೈಲಿಗೆ ಹಾಕಿ. 66/11 ಕೆ.ವಿ. 180, 33 ಕೆ.ವಿ. 10/110– 180 , 66/11 ಕೆ.ವಿ.ದು. 36 ಇವೆಲ್ಲಾ ಸೇರಿ ಒಟ್ಟು 527.650 ಕೋಟಿ ರೂಪಾಯಿಗಳ transformers ಖರೀದಿ ಮಾಡಿದ್ದೇವೆ. Transformers ಖರೀದಿ ಮಾಡಬೇಕಾದರೆ ನಾವೇನು ಷರತ್ತು ಹಾಕಿದ್ದೇವೆ ಅಂದಿರೆ ಎರಡು ವರ್ಷದಲ್ಲಿ ರೇಟ್ ಏನಿರುತ್ತದೆ, ರೇಟ್ ಕಡಿಮೆ ಆದರೆ ಕಡಿಮೆ ಆಗುತ್ತದೆ. ಜಾಸ್ತಿ ಆದರೆ ಜಾಸ್ತಿಯಾಗುತ್ತದೆ. ಬೇಕಾದರೆ ಯಾವರೀತಿಯಾದರೂ ತನಿಖೆ ಮಾಡಿಕೊಳ್ಳಿ ನಮ್ಮದೇನೂ ಅಭ್ಯಂತರ ಇಲ್ಲ. 2007 ರಿಂದ ಇಲ್ಲಿಯವರೆಗೆ 400 ಹೊಸ ಸ್ಟೇಷನ್ಸ್ ಬಂದಿವೆ. ಅದರಲ್ಲಿ ಯಡಿಯೂರಪ್ಪನವರದು ಶಿಕಾರಿಪುರ, ಶಿರಾಳಕೊಪ್ಪಳ, 220 ಸ್ಟೇಷನ್ಸ್, ಅವರು ಆ ಸ್ಟೇಷನ್ಸ್ ಆಗುವುದಿಲ್ಲ, ಬೇಡ ಅದು, feasible ಇಲ್ಲವೆಂದರೂ ಅವರನ್ನು ಕರೆದುಕೊಂಡು ಹೋಗಿ ಆ ಸ್ಟೇಷನ್ ಮಾಡಿಸಿಕೊಟ್ಟಿದ್ದೇನೆ. ನಾನು ಸಣ್ಣತನಕ್ಕೆ ಹೋಗಿಲ್ಲ, ಬೇಕಿದ್ದರೆ ಕೇಳಿ 60 ಕೋಟಿ ರೂಪಾಯಿ ಸ್ಟೇಷನ್. ಈಗ ನಮ್ಮ ಜಿಲ್ಲೆಯಲ್ಲಿ ಕೆಲಸ ನಿಲ್ಲಿಸಿದ್ದಾರೆ. ನಾನು ಅದರ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಜನ ನನ್ನನ್ನು ಕೇಳಿದರೆ, ಸ್ವಾಮಿ ಯಡಿಯೂರಪ್ಪನವರು ಕೆಲಸ ಮಾಡಿಲ್ಲ, ಬೇಡವೆಂದಿದ್ದಾರೆ, ಬೇಕು ಅಂತ ರೇವಣ್ಣನವರಿಗೆ, ದೇವೇಗೌಡರಿಗೆ vote ಕೊಟ್ಟಿದ್ದಾರೆಂದು ಹೇಳಿದ್ದಾರೆ,

ಅದಕ್ಕೋಸ್ಕರ ಕೆಲಸ ಮಾಡುತ್ತಿಲ್ಲ. ನಮಗೇನಂತೆ ಪ್ರಚಾರ ಮಾಡಿಕೊಂಡು ತಿರುಗುತ್ತೇವೆ. ಆಗ ಜನ ಏನು ಮಾಡುತ್ತಾರೆ, ಬಿಡು ಹೋಗಲಿ ರೇವಣ್ಣ, ದೇವೇಗೌಡರನ್ನೇಕೆ ದೂಷಣೆ ಮಾಡುವುದು, ಯಡಿಯೂರಪ್ಪನವರು ಬಂದ ಮೇಲೆ ಮಾಡಿಲ್ಲ ಎನ್ನುತ್ತಾರೆ. ನಾನು ಆ ಸಣ್ಣತನಕ್ಕೆ ಹೋಗಿಲ್ಲ. ಈ ಸರ್ಕಾರ ಬಂದ ಮೇಲೆ ಒಂದು ಹೊಸ ಸ್ಟೇಷನ್ ಆಗಿದೆಯೇ ಅಂದರೆ, ನನ್ನ ಕಾಲದಲ್ಲಿ ಆಗಿರುವುದನ್ನು ಬಿಟ್ಟರೆ, ನಾನೇನು ಹೇಳುತ್ತೇನೋ ಅದಕ್ಕೆ ನಾನು ಭಾಗಿಯಾಗುತ್ತೇನೆ. ಈಗಿರುವ transformers ನಲ್ಲಿ ಒಂದು transformer ಉಳಿದಿವೆಯೇ ಎಂದು ದಯಮಾಡಿ ಹೇಳಲಿ. ಇವತ್ತು ಇದನ್ನು ಮಾಡದೇ ಹೋಗಿದ್ದರೆ ಕರೆಂಟ್ ಸಾವಿರ ಮೆಗಾವ್ಯಾಟ್‌ನಷ್ಟು ತಂದಿದ್ದರೂ ಸಹ ನಿಮಗೆ ಕೊಡಲಿಕ್ಕೆ ಲೈನ್ ಇರುತ್ತಿರಲಿಲ್ಲ, ಉದಾಹರಣೆಗೆ ಐದು ವರ್ಷ ಶ್ರೀ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ಪಾಂಡವಪುರದಲ್ಲಿ ಒಂದೇ ಒಂದು ಸ್ಟೇಷನ್ ಇತ್ತು. ನಾನು ಬಂದ ಮೇಲೆ ಏಳು ಸ್ಟೇಷನ್ ಮಾಡಿದೆವು. ನಾನು ಇಂಥ ಕಡೆ, ಅಂಥ ಕಡೆ ಎಂದಿಲ್ಲ, ರಾಜ್ಯದ ಎಲ್ಲಾ ಕಡೆ ಮಾಡಿಸಿದ್ದೇನೆ. ಇಲ್ಲದೇ ಹೋಗಿದ್ದರೆ ಇವತ್ತು ಕರೆಂಟ್ ಇದ್ದರೂ ಸಹ ನೀವು ತೆಗೆದುಕೊಳ್ಳಲಿಕ್ಕೆ ಆಗುತ್ತಿರಲಿಲ್ಲ. ಬೇಕಾದರೆ ಅದಕ್ಕೂ ಒಂದು ಕಮಿಟಿ ಮಾಡಿ. 400 ಸ್ಟೇಷನ್ ಬೇಕಿತ್ತೋ ಏನೋ ಎಂಬ ಬಗ್ಗೆ ಅದನ್ನು ಚೆಕ್ ಮಾಡಿ. ಇದರಲ್ಲಿ ದುಡ್ಡು ಹೊಡೆದಿದ್ದಾರೋ ಏನೋ, ಆ 400 ಸ್ಟೇಷನ್ಸ್ ಬೇಕಿತ್ತೋ ಇಲ್ಲವೋ ಎಂಬುದನ್ನು ಚೆಕ್ ಮಾಡಿ ಎಂದು ಹೇಳಿದೆವು. ನಿನ್ನೆ coal ವಾಷಿಂಗ್ ಬಗ್ಗೆ ನಾಮ ಹಾಕಿದ್ದೀರಿ ಎಂದು ಹೇಳಿದಿರಿ. ವಾಷಿಂಗ್ ಬಗ್ಗೆ ತಮ್ಮ ಗಮನಕ್ಕೆ ತರುತ್ತೇನೆ, ತಮಗೆ ಸರಿಯಾಗಿ ಮಾಹಿತಿ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ ಇದು ನನ್ನ ಕಾಲದಿಂದ ನಡೆಯುತ್ತಿಲ್ಲ, 1999 ನೇ ಇಸವಿಯಿಂದ ಕೇಂದ್ರ ಸರ್ಕಾರ 1000 ಕಿ.ಮೀ. ಮೇಲೆ ಬಂದರೆ ಯಾವುದೇ ಕಲ್ಲಿದ್ದಲು ಇರಲಿ, ಅದರಲ್ಲಿ ಪೌಡರ್, ಕಲ್ಲು ಬರುತ್ತದೆ. ಅದನ್ನು ವಾಷ್ ಮಾಡಬೇಕು ಎಂದು ನನ್ನ ಕಾಲದಲ್ಲಿ ಅಲ್ಲ, 1999 ರಲ್ಲಿ ಶ್ರೀ ಜೆ.ಹೆಚ್.ಪಟೇಲ್‌ರವರ ಕಾಲದಿಂದ ಮಾಡಿರುವಂಥದ್ದು. ಅದನ್ನು 2001 ರಲ್ಲಿ ವಾಷಿಂಗ್ ಹೇಗಿತ್ತು ಎಂದರೆ 1% ಇದ್ದರೆ ಅದರಲ್ಲಿ moisture ಏನು

ಮಾಡಬೇಕಾಗಿತ್ತು ಅಂದರೆ ವಾಷ್ ಮಾಡಿದ ಕಲ್ಲಿಗೂ, ವಾಷ್ ಮಾಡದಿರುವ ಕಲ್ಲಿಗೂ ವ್ಯತ್ಯಾಸ ಇರುತ್ತದೆ, ವಾಷ್ ಮಾಡುವುದನ್ನು ನಿಲ್ಲಿಸಿದ್ದೇವೆಂದು ಹೇಳಿದಿರಿ. ವಾಷ್ ಮಾಡಿದ್ದರಲ್ಲಿ ಒಂದು ಟನ್‌ಗೆ 3800 ರಿಂದ 4000 ಗ್ರಾಸ್ ಕ್ಯಾಲರಿ ಬರುತ್ತಿತ್ತು, ಕರೆಂಟ್ ಉತ್ಪಾದನೆಯಾಗುತ್ತಿದ್ದುದು. ಈಗ ವಾಷ್ ನಿಲ್ಲಿಸಿದ್ದೀರಿ, ಪಾಪ ನಿಮಗೆ ಸರಿಯಾದ ಮಾಹಿತಿ ಕೊಟ್ಟಿಲ್ಲ. ಅದನ್ನು ಚೆಕ್ ಮಾಡಿಸಿ. ಇದು 3000 ರಿಂದ 3200 ರವರೆಗೆ ಹೋಗಿದೆ. 2004–07 ರವರೆಗೆ ಕೆ.ಪಿ.ಸಿ.ಎಲ್.ಗೆ ರಾಷ್ಟ್ರಪತಿ ಪ್ರಶಸ್ತಿ ಬಂದಿದೆ. ಆಗ ಅಧಿಕಾರಿ ಎಲ್.ವಿ.ನಾಗರಾಜು ಪ್ರಾಮಾಣಿಕ ಅಧಿಕಾರಿಯಾಗಿದ್ದರು. ನನಗೇನೂ ಇಲ್ಲ, ಬೇಕಾದರೆ ಸಿ.ಬಿ.ಐ.ನಿಂದ ತನಿಖೆ ಮಾಡಿಸಿ, ಹೊರದೇಶದಲ್ಲಿ ಬೇಕಾದರೂ ತನಿಖೆ ಮಾಡಿಸಿ, ಯಾರಿಂದಲೂ ಬೇಕಾದರೂ ಮಾಡಿಸಿ, ನನಗೇನೂ ಅಭ್ಯಂತರವಿಲ್ಲ. ನನಗೇನು ಯಾರು coal ತೆಗೆದುಕೊಳ್ಳುತ್ತಾರೋ, ಯಾರ ಹತ್ತಿರ ವಾಷ್ ಮಾಡಿಸುತ್ತಾರೋ ನನಗೇಕೆ ಬೇಕು, ಏಕೆಂದರೆ ನಿನ್ನೆ ಅವರು ಹೇಳಿದ್ದಕ್ಕೆ ವಿವರವಾದ ಮಾಹಿತಿ ತೆಗೆದುಕೊಂಡಿದ್ದೇನೆ. 3800–4000 gross ಕ್ಯಾಲರಿಗೆ ಬರುವಂಥದ್ದನ್ನು 3,000 ದಿಂದ 3,200 ಕ್ಕೆ ಮಾಡಿದ್ದೀರಿ. ಈ ಎರಡು ವರ್ಷದಲ್ಲಿ ನಿಮ್ಮ ಕಾಲದಲ್ಲಿ ಯಾವುದಾದರು ಒಂದು ಮೆಷಿನರಿ ಪ್ರಾಮಾಣಿಕವಾಗಿ ನಡೆದಿದೆಯೇ ಹೇಳಿ, ಕಲ್ಲು ಹಾಕಿ ಅವೆಲ್ಲಾ ಕೆಟ್ಟು ಹೋಗಿ ಕಾಸ್ಟ್ ಜಾಸ್ತಿಯಾಗಿದೆ, ಅದನ್ನು ತೆಗೆಸಿ ಅದಕ್ಕೊಂದು ತನಿಖೆ ಮಾಡಿಸಿ, ಏಕೆಂದರೆ 500 ಕೋಟಿ ರೂಪಾಯಿಗಳ ಪಂಗನಾಮ ಹಾಕಿದ್ದಾರೆ ಎಂದು ಹೇಳಿದ್ದಾರೆ. ಇಲ್ಲಿಯವರೆಗೂ ಯಾರ್‍ಯಾರು wash ಮಾಡಿಸಿದ್ದಾರೆ? ಏಕೆ wash ಮಾಡಿಸಿದ್ದಾರೆ? ಪಂಗನಾಮ. wash ಅಂದರೆ KPCL ನವರು ಕಲ್ಲು ತೊಳೆಯುವುದು ಏನೋ ಎಂದು ನಾನು ಅಂದುಕೊಂಡಿದ್ದೆ. 500 ಕೋಟಿ ರೂ. ಪಂಗನಾಮ. ಇದರ ಬಗ್ಗೆ ತನಿಖೆ ಮಾಡಿ. ನಾನೇನಾದರೂ ಹಿಡಿದುಕೊಂಡಿದ್ದೇನೆಯೇ? ನೀವು ಜನಕ್ಕೆ ಸೋಪ್ ಹಾಕದೇ wash ಮಾಡುತ್ತಿದ್ದೀರಿ. ಜನಕ್ಕೆ 18 ತಿಂಗಳಿನಿಂದ wash ಮಾಡುತ್ತಿದ್ದೀರಿ. NICE wash ಮಾಡಿದಿರಿ, Industries Department ನಲ್ಲಿ wash ಮಾಡಿದಿರಿ, ಇಂಧನ ಇಲಾಖೆಯಲ್ಲಿ wash ಆಗಿದೆ. ಯಾವ ರೀತಿ wash ಮಾಡುತ್ತಿದ್ದೀರಿ

ಎನ್ನುವುದನ್ನು ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಇದರ ಬಗ್ಗೆ 1999 ರಿಂದ ಯಾರ್ಯಾರಿಗೆ ಕಂಟ್ರ್ಯಾಕ್ಟ್ ಕೊಟ್ಟಿದ್ದಾರೆ. ಕಾಂಟ್ರ್ಯಾಕ್ಟ್ ಯಾರಿಗೆ ಕೊಟ್ಟಿದ್ದಾರೋ, ಬಿಟ್ಟಿದ್ದಾರೋ ನನಗೇನು? ಟೆಂಡರ್ ಕರೆದಿದ್ದಾರೆ, ಸರಿಯಾಗಿ ಟೆಂಡರ್ ಕರೆಯದಿದ್ದವರನ್ನು ಬೇಕಾದರೆ ಜೈಲಿಗೆ ಹಾಕಿ. ನಾನು ಏನಾದರೂ letter ಕೊಟ್ಟಿದ್ದರೆ, ನನ್ನನ್ನೂ ಜೈಲಿಗೆ ಹಾಕಿ. ನಾನೇನಾದರೂ wash ಗೆ ಇಂಥವರಿಗೆ ಕೊಡಿ ಎಂದು ಹೇಳಿದ್ದರೆ ಮೊದಲು ನನ್ನ ಮೇಲೆ FIR ಹಾಕಿ. ಇದು ಕಲ್ಲಿದ್ದಲು ಬಗ್ಗೆ ಆಯಿತು. ಇನ್ನೊಂದು 1000 ಕಿ.ಮೀ. rails ಕೊಟ್ಟರು ಎಂದು ಹೇಳಿದರು. 2000–2004 ಕಲ್ಲಿದ್ದಲು ನನ್ನ ಕಾಲದಲ್ಲಿ ಅಲ್ಲ, ಈಗ ರಾಜ್ಯದಲ್ಲಿ Indian Coal, Coal Authority of India ದಿಂದ ರಾಜ್ಯಕ್ಕೆ ಪ್ರತಿ ತಿಂಗಳಿಗೆ 7 ಲಕ್ಷದ 50 ಸಾವಿರ ಟನ್ ಕಲ್ಲಿದ್ದಲನ್ನು 700 ರೂ. ಯಿಂದ 1 ಸಾವಿರ ರೂ. maximum Indian Coal ಅಲ್ಲಿ spot ನಲ್ಲಿ ಬೀಳುತ್ತದೆ. ಒರಿಸ್ಸಾದಿಂದ ಬರಬಹುದು, ಆಂಧ್ರ, ಮಹಾನದಿಯಿಂದ ಬರಬಹುದು, ಮೂರು ಕಡೆಯಿಂದ ಸೇರಿ ಒಟ್ಟು ಒಂದು ತಿಂಗಳಿಗೆ 7 ಲಕ್ಷದ 50 ಸಾವಿರ ಟನ್ ಅನ್ನು ಇವರಿಗೆ ಲಿಫ್ಟ್ ಮಾಡುವುದಕ್ಕೆ ಆಗುತ್ತಿಲ್ಲ. ಕೇಂದ್ರ ಸರ್ಕಾರ ಕೊಡಲಿಲ್ಲವೆಂದು ದೂರುತ್ತಾರೆ. 7 ಲಕ್ಷದ 50 ಸಾವಿರ ಟನ್‌ನಲ್ಲಿ ಎಷ್ಟು Indian coal ಅನ್ನು ಲಿಫ್ಟ್ ಮಾಡಿದ್ದೀರಿ ಎನ್ನುವುದನ್ನು ಹೇಳಿ. ಟೆಂಡರ್ ಕರೆದಿರುವುದು ಇವತ್ತು ನನ್ನ ಕಾಲದಲ್ಲಿ ಅಲ್ಲ. ಉದಾಹರಣೆಗೆ ಹೇಳುವುದಾದರೆ, South Indian Corporation, ಯಾರ್ಯಾರು ಎನ್ನುವುದನ್ನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಹೇಳಿದ ಮೇಲೆ ನಾವು ಮಾಹಿತಿಯನ್ನು ತೆಗೆದುಕೊಂಡು ಹೇಳಬೇಕಾಗುತ್ತದೆ. ಅಲ್ಲೂ ಹೇಳಿದ್ದಾರೆ ಕಡತ–ಪಡತ ರೇವಣ್ಣನವರಿಗೆ ಕೊಡಬೇಡಿ ಎಂದು ಹೇಳಿದ್ದಾರೆ, ಸಿದ್ದರಾಮಯ್ಯನವರು ಕೇಳಿದರೂ ಕೊಡಬೇಡಿ ಎಂದು ಹೇಳಿದ್ದಾರೆ. ಇದನ್ನು ನನ್ನ ಕಾಲದಿಂದ ಅಲ್ಲ, 1999ರಿಂದ 2001ರವರೆಗೆ ಕರಮ್ ಚಂದ್ ಥಾಪರ್ ಎಂದು ಹೇಳಿ, ಯಾರಿವರು? ಕಲ್ಕತ್ತಾದವರು. 2001–2005ರವರೆಗೆ Sea Coal Logistics ಚೆನ್ನೈ, 2005–2008ರವರೆಗೆ South India Corporation ಅದರಲ್ಲಿ ರಾಮಸ್ವಾಮಿ ಇದ್ದಾರೋ, ತಿಮ್ಮಣ್ಣ ಇದ್ದಾರೋ, ಬೊಮ್ಮಣ್ಣ

ಇದ್ದಾರೋ ನನಗೆ ಗೊತ್ತಿಲ್ಲ. ಬೇಕಾದರೆ ರಾಮಸ್ವಾಮಿ ಇದ್ದರೂ, ಹಾಕಿಕೊಳ್ಳಿ, ಇವರು ಇದ್ದರೂ ಹಾಕಿಕೊಳ್ಳಿ. ಏಕೆಂದರೆ, 1 ಸಾವಿರ ಟನ್ ಕೊಟ್ಟು ಬಿಟ್ಟರು. ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರ ಕಾಲದಲ್ಲಿಯೂ 10 ತಿಂಗಳಿನಲ್ಲಿ South India Corporation ಹಾಗೆ ಎಷ್ಟು ಕೊಟ್ಟಿದ್ದಾರೆ ಗೊತ್ತಿದೆಯೇ? ಅವರೂ 17 ಸಾವಿರ ಟನ್ ಹೊಡೆದಿದ್ದಾರೆ. ಆಮೇಲೆ adjust ಆಯಿತೋ ಇಲ್ಲವೋ ಗೊತ್ತಾಗಲಿಲ್ಲ. Cancel ಮಾಡಿದರು. ನಾವೇನು ಹಿಡಿದುಕೊಂಡಿದ್ದೇವೆಯೇ? ಅವರು ಬಂದ ತಕ್ಷಣವೇ ಮಾಡಿದ್ದರೆ ನಾನು ಹೋಗುತ್ತಿದ್ದೆ. ತಡೆಹಿಡಿದಿದ್ದರೆ ಹೋಗುತ್ತಿದೆ. 10 ತಿಂಗಳು, 11 ತಿಂಗಳು ಅವರ ಕಾಲದಲ್ಲೂ 17 ಸಾವಿರ ಟನ್ ಹೊಡೆಸಿ, ಆಮೇಲೆ ರೇವಣ್ಣನವರು ಹೇಳಿದರು ತಡೆ ತಡೆಹಿಡಿದೆ ಎಂದು ಹೇಳಿದ್ದಾರೆ. NDA Government ಅವರದ್ದೇ ಇತ್ತು, rails ಕೊಡಬೇಡಿ ಎಂದು ಹೇಳಿದ್ದೇನ? ಪ್ರತಿ ತಿಂಗಳು Government of India ದಿಂದ rails ನಲ್ಲಿ ಬರಬೇಕಾದರೆ, 1,700 ಕಿ.ಮೀ. ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರಲ್ಲಾ, ಆ 1,700 ಕಿ.ಮೀ. ಬರಬೇಕಾದರೆ raisl ನಲ್ಲಿ wagon ನಲ್ಲಿ ಬರಬೇಕಾದರೆ wagon book ಆಗಿರುತ್ತದೆ. Rails 1,800 ಕಿ.ಮೀ. ಬರಲು ಒಂದು ವಾರ ಸಮಯ ಬೇಕಾಗುತ್ತದೆ. ಪ್ರತಿ ತಿಂಗಳು ಮೀಟಿಂಗ್‌ನಲ್ಲಿ entry ಮಾಡಿದ್ದಾರೆ, rails ಕೊಡುವುದಕ್ಕೆ ಆಗುವುದಿಲ್ಲವೆಂದು ಅವರ NDA Government ಇದ್ದ ಕಾಲದಲ್ಲಿ ಹೇಳಿದ್ದಾರೆ. ಈಗ ಯಡಿಯೂರಪ್ಪನವರ ಕಾಲದಲ್ಲಿ UPA ನವರು rails ಅನ್ನು ಕೊಟ್ಟಿದ್ದಾರೆ. ಸಂತೋಷ ನನ್ನದೇನೂ ಇಲ್ಲ. ತಮಿಳುನಾಡಿನವರು ಸಮುದ್ರದ ಮೂಲಕ ತರಿಸಿ ಅಲ್ಲಿಂದ ಸಂಬಂಧಪಟ್ಟ ಜಾಗಕ್ಕೆ rail ನಲ್ಲಿ ಹೋಗತಕ್ಕಂಥದ್ದನ್ನು ಮಾಡುತ್ತಾರೆ. ಬೇಕಾದರೆ ಆ ರಾಜ್ಯದ್ದನ್ನೂ ಮತ್ತು ಈ ರಾಜ್ಯದಲ್ಲೂ ಎರಡನ್ನೂ ತರಿಸಿ ನಮ್ಮದೇನೂ ಅಭ್ಯಂತರವಿಲ್ಲ. Train ನಲ್ಲಿ ಸಾವಿರ ಕಿ.ಮೀ. ಮೇಲೆ ಬಂದರೆ ಭಾರತ ಸರ್ಕಾರದ ಒಂದು condition ಇದೆ. ಒಂದು ಟನ್‌ಗೆ 1% moisture ಎಂದು ಶ್ರೀ ಎಸ್.ಎಂ. ಕೃಷ್ಣ ಅವರ ಕಾಲದಲ್ಲಿ ಹಿಡಿಯುತ್ತಿದ್ದರು. 2004ರಲ್ಲಿ ನಾನು ಬಂದ ಮೇಲೆ ಒಂದು ಟನ್‌ಗೆ 10% ಎಂದು ದುಡ್ಡು ಹಿಡಿಸಿದ್ದೇವೆ. ಅದರಿಂದ ಎಷ್ಟು

ಉಳಿತಾಯವಾಗಿದೆ? ಈಗ ಏನು ಮಾಡಿದ್ದಾರೆ ಗೊತ್ತೆ? ಆವತ್ತು cross check ಆಗುತ್ತಿತ್ತು ಎರಡು ಕಡೆಯಿಂದ, ಬಂದಂತಹ quality ಅಲ್ಲಿ ತೇವಾಂಶ ಎಷ್ಟಿದೆ ಎಂಬುದನ್ನು SGS company ಯಿಂದ ಚೆಕ್ ಮಾಡಲಾಗುತ್ತಿತ್ತು. ಇನ್ನೊಂದು ಕಡೆ KPCL ನಿಂದ ತೇವಾಂಶದ ಬಗ್ಗೆ ಚೆಕ್ ಮಾಡಿ ಟ್ಯಾಲಿ ಮಾಡುತ್ತಿದ್ದರು. ಈ ರೀತಿ ಇವರಿಬ್ಬರು ಚೆಕ್ ಮಾಡಿ ವ್ಯತ್ಯಾಸವೇನಾದರೂ ಬಂದರೆ ಮೂರನೆಯವರಿಂದ ಚೆಕ್ ಮಾಡಿಸುವ ಕಾರ್ಯಕ್ರಮವನ್ನು ಮಾಡುತ್ತಿದ್ದೆವು. ಆದರೆ ಯಡಿಯೂರಪ್ಪ ಸಾಹೇಬರು ಏನು ಮಾಡಿದ್ದಾರೆ? 3rd party ಇಲ್ಲ, ಯಾರೂ ಇಲ್ಲ, ಕಲ್ಲಾದರೂ, ಮಣ್ಣಾದರೂ ಬರಲಿ KPCL ಅಧಿಕಾರಿಗಳು ನೋಡಿಕೊಂಡರೆ ಸಾಕು. ಈಗ ಕರಮ್ ಚಂದ್ ಥಾಪರ್ ಎನ್ನುವವರಿಗೆ ಯಡಿಯೂರಪ್ಪನವರು ಕೊಡಿಸಿದ್ದಾರೆ. ನಮ್ಮದೇನು ಅಭ್ಯಂತರವಿಲ್ಲ. ನಾನೇನಾದರೂ ಹಿಡಿದುಕೊಂಡಿದ್ದೇನಾ? ಯಾವುದೇ ಚೆಕಿಂಗ್ ಇಲ್ಲ. Quality check ಮಾಡುವ ಬಗ್ಗೆ ದಯಮಾಡಿ ಏನಾದರೂ ಮಾಹಿತಿ ಇದ್ದರೆ ತರಿಸಿಕೊಳ್ಳಲಿ ನೋಡೋಣ? ಹಿಂದೆ ಮೂರು ಕಡೆ Quality check ಮಾಡಿ 10% ದುಡ್ಡು ಹಿಡಿಯುತ್ತಿದ್ದರು. 2004ರಿಂದ 2007ರವರೆಗೆ ಇದರಲ್ಲಿ ಎಷ್ಟು ಇಳುವರಿ ಇತ್ತು? 2007ರಿಂದ ಈಚೆಗೆ ಎಷ್ಟು ಇಳುವರಿ ಇದೆ? ದಯಮಾಡಿ ಆ ಎರಡರ ಮಾಹಿತಿಯನ್ನು ತರಿಸಿ. Cross check ಮಾಡದೇ ಇರುವುದಕ್ಕೆ ಕಾರಣ ಏನು? Cross check ಏಕೆ ಮಾಡುತ್ತಿಲ್ಲ? ಏಕೆಂದರೆ ಇದು ಯಾವ ರೀತಿ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಒಂದು ಕಡೆ ಕಲ್ಲಿದ್ದಲು washing ಬಗ್ಗೆ ವಿವರವಾಗಿ ಹೇಳಿದ್ದೇನೆ. ಆಗ ಮಾನ್ಯ ಯಡಿಯೂರಪ್ಪನವರೇ ಉಪಮುಖ್ಯಮಂತ್ರಿ ಮತ್ತು ಹಣಕಾಸು ಸಚಿವರೂ ಆಗಿದ್ದರು. ಅವರ ಪ್ರಧಾನ ಕಾರ್ಯದರ್ಶಿಯವರೇ ಈ ಕಮಿಟಿಯಲ್ಲಿರುವುದು. ನಾನು ಆ ಕಮಿಟಿಯಲ್ಲಿ ಇಲ್ಲ. ಪ್ರಧಾನ ಕಾರ್ಯದರ್ಶಿಯವರು, ಇಂಧನ ಇಲಾಖೆಯ ಕಾರ್ಯದರ್ಶಿಯವರು ಇವರೆಲ್ಲಾ ಸೇರಿ ಒಂದು ಕಮಿಟಿ ಇದೆ. ಅವರು ಅದನ್ನು ಮಾಡುವುದು. ಅವರ ಇಲಾಖೆಯ ಕಾರ್ಯದರ್ಶಿಯವರು ಇದ್ದು ಎಲ್ಲವನ್ನೂ review ಮಾಡುತ್ತಿದ್ದುದ್ದನ್ನು ನಾನು ನೋಡುತ್ತಿದ್ದೆ. ಅವರು ಹೇಳಿದವರಿಗೆ ಕಂಟ್ರ್ಯಾಕ್ಟ್

ಸರಿಯಾಗಿ ಕೊಟ್ಟಿಲ್ಲವೆಂದು ಇವತ್ತು ಇವರನ್ನು suspend ಮಾಡಬೇಕೆಂದು cabinet ನಲ್ಲಿ ದೊಡ್ಡ ಗಲಾಟೆ ಆಯಿತು ಅದಕ್ಕೆ ನಾನು "ಏಕೆ ಸ್ವಾಮಿ ಆ ಅಮ್ಮ ಬಹಳ ಪ್ರಮಾಣಿಕ ಅಧಿಕಾರಿ", ಆ ಅಧಿಕಾರಿ ಹೆಸರು ಗೊತ್ತಿಲ್ಲ ಮರೆತು ಹೋಗಿದೆ, "ಏಕೆ ಆ ರೀತಿ ಮಾಡುತ್ತೀರಿ?" ಎಂದು ಹೇಳಿದ್ದಕ್ಕೆ "ರೇವಣ್ಣನವರೆ, ನೀವು ಏಕೆ ಇಂಥಹವರನ್ನು ವಹಿಸಿಕೊಂಡು ಬರುತ್ತೀರಿ" ಎಂದು ಹೇಳಿದರು. ಜಗದೀಶ್ ಶೆಟ್ಟರ್ ಸಾಹೇಬರು ಸಹಾ ಇದ್ದರೂ, ಅವರೂ ಮಂತ್ರಿಯಾಗಿದ್ದರು. ಬೆಳಗಾಂ ಕ್ಯಾಬಿನೆಟ್‌ನಲ್ಲಿ ನಡೆದಿರುವ ಘಟನೆ, ಬೇಕಾದರೆ ಅವರು ಇಲ್ಲವೆಂದು ಹೇಳಿಬಿಡಲಿ? ಏಕೆಂದರೆ ಇದು ದೇವರ ಸಭೆ. ಯಡಿಯೂರಪ್ಪನವರಿಗೆ ದೇವರ ಮೇಲೆ ನಂಬಿಕೆ ಇದೆ. ಏಕೆಂದರೆ ನಾನು ನಿಮಗೆ ವಿಷಯವನ್ನು ತಿಳಿಸುತ್ತಿದ್ದೇನೆ. ಅವರು ಎರಡು ವರ್ಷ ಅಧಿಕಾರದಲ್ಲಿದ್ದರು. ನಾನೊಬ್ಬನೇ ಕಳ್ಳನಾ? ಅವರೂ ಕಳ್ಳರು. ಅವರು ಹಣಕಾಸು ಮಂತ್ರಿಗಳಾಗಿದ್ದವರು ಅವರು ಏನು ಹೇಳುತ್ತಾರೆಂದರೆ, ಮಾನ್ಯ ಎಸ್.ಎಂ. ಕೃಷ್ಣ ಅವರ ಕಾಲದಿಂದ ಅಂದರೆ 2000 ರಿಂದ 2004ರವರೆಗೆ 3,500 ಕೋಟಿ ರೂ. ನಷ್ಟ ಹೋಗಲಿ ಮಾನ್ಯ ಯಡಿಯೂರಪ್ಪನವರೆ 3,500 ಕೋಟಿ ಬೇಡ, ಸ್ವಲ್ಪ ಜೆರಾಕ್ಸ್ ಮೆಷಿನ್ ಆದರೂ ಕಳುಹಿಸಿಕೊಡಿ. 18 ತಿಂಗಳಿನಲ್ಲಿ ಏನೇನು ಇದೆ ಎಂದು ನಿಮ್ಮ ಕಡತವನ್ನು ಜೆರಾಕ್ಸ್ ಮಾಡಿ ನಿಮಗೆ ಕಳುಹಿಸಿಕೊಡುತ್ತೇನೆ. 3,500 ಕೋಟಿ ನನಗೇನೂ ಬೇಡ. ಏಕೆಂದರೆ, ನಿನ್ನೆ ನಾನು MMT ಕಂಪನಿ ಮತ್ತು ಭಾಟಿಯಾ ಕಂಪನಿಗೆ ಆಪಾದನೆ ಮಾಡಿದೆ. ನಾನೇನಾದರೂ letter ಕೊಟ್ಟಿದ್ದೀನಾ? ಸಾವಿರ ರೂಪಾಯಿಯಲ್ಲಿ Indian coal ಇತ್ತು ನೀವು ಏಕೆ ತೆಗೆದುಕೊಳ್ಳಲಿಲ್ಲ? 7,800 ರೂ. Imported coal ಖರೀದಿ ಮಾಡುವಂತಹ ಅವಶ್ಯಕತೆ ಇತ್ತೆ? Imported coal ಅಲ್ಲಿ ಏನು ಹೇಳುತ್ತಾರೆಂದರೆ, MMTC ಕೊಟ್ಟಿದ್ದೀರಲ್ಲಾ ನಿಮ್ಮ ಮೂರು ಜನ ಅಧಿಕಾರಿಗಳಿಗೆ ಯಾರು ಕಂಟ್ರ್ಯಾಕ್ಟ್ ಕೋರ್ಟ್‌ಗೆ ಹೋಗಿದ್ದರು, 25–25 ಸಾವಿರ ರೂಪಾಯಿ penalty, ಪ್ರಧಾನ ಕಾರ್ಯದರ್ಶಿ ಹಾಗೂ ನಿಮ್ಮ Finance Secretary ಅವರಿಗೆ 25 ಸಾವಿರ ರೂಪಾಯಿ, ನಿಮ್ಮ ಎಂ.ಡಿ.ಗೆ 25 ಸಾವಿರ ರೂ. ಇನ್ನೊಬ್ಬರಿಗೆ 25 ಸಾವಿರ ರೂಪಾಯಿ ದಂಡ ಹಾಕಿದ್ದಾರೆ.

7.10 ಪಿ.ಎಂ.

ಅದರ ಪ್ರತಿ ಬೇಕು ಎಂದರೆ ಕಳುಹಿಸಿಕೊಡುತ್ತೇನೆ. ಏಕೆಂದರೆ, ನಾನು ಹೇಳುವುದು 25-25 ಸಾವಿರ ರೂಪಾಯಿ ದಂಡ ಹಾಕಿದ್ದಾರೆ. ಏನೆಂದು ದಂಡ ಹಾಕಿದ್ದಾರೆಂದರೆ, MMTC ಗೆ ಮಾನ್ಯ ಯಡಿಯೂರಪ್ಪನವರ letter ಆಧಾರದ ಮೇಲೆ ನೀವು ಕೊಟ್ಟಿದ್ದೀರಿ, ಬೇಡಿಕೆ ಇರಲಿಲ್ಲ. 12 ಲಕ್ಷ ಟನ್‌ಗೆ ಒಂದೇ ಸಾರಿ ಕರೆಯುವಂಥ ಅವಶ್ಯಕತೆ ಇತ್ತೆ ಮಾನ್ಯ ಮುಖ್ಯಮಂತ್ರಿಗಳೆ? ಒಂದು ವರ್ಷಕ್ಕೆ imported coal ಎಷ್ಟು ಬೇಕು? 7,800 ರೂ. ಇದ್ದಿದ್ದು, ಕೇವಲ 3 ರಿಂದ 4 ಸಾವಿರ ರೂಪಾಯಿಗೆ international coalಗೆ ಆಯಿತು. ಇವತ್ತು ಒಂದು ಟನ್‌ಗೆ 4,000 ರೂ. ಹೋಯಿತಲ್ಲ, ಇದು ಯಾರ ಮನೆ ದುಡ್ಡು? ಇದು ಬಡ ಬೋರೇಗೌಡನ ದುಡ್ಡಲ್ಲವೇ? ಅವತ್ತು ಯಡಿಯೂರಪ್ಪನವರು ಶಾಲು ಹಾಕಿಕೊಂಡು ಬಂದು ದುಡ್ಡು ಕಳಿದರಲ್ಲ, ಎಷ್ಟಾಯಿತು ಸ್ವಾಮಿ? 10 ಲಕ್ಷ ಟನ್‌ಗಳಷ್ಟು ಕಲ್ಲಿದ್ದಲು ತೆಗೆದುಕೊಂಡಿದ್ದೀರಲ್ಲ? 10 ಲಕ್ಷ x 4,000 = 400 ಕೋಟಿ ರೂ. ಆಗಲಿಲ್ಲವೇ? ಇದಕ್ಕಿಂತಲೂ ಇನ್ನೇನು ಬೇಕು? ಹೋದ ಸಲ ನಂಬರ್ ಪ್ಲೇಟ್ ಬಗ್ಗೆ ಹೇಳಿದೆ. ಸದನದಲ್ಲಿ ಈಗ ಸಾರಿಗೆ ಸಚಿವರಾದ ಅಶೋಕ್ ಅವರಿಲ್ಲ. ಅವರು ಪ್ಲೇಟ್ ಹಾಕಿ ಎಂದು ಹೇಳುತ್ತಿದ್ದರು. ನಾವು ಅವತ್ತು ಆಪಾದನೆ ಮಾಡದೇ ಇದ್ದಿದ್ದರೆ ಬೆಳಿಗ್ಗೆ ಸೈನ್ ಆಗಿರುತ್ತಿತ್ತು. ನಾವು ಕೆಲವು ಆಪಾದನೆಗಳನ್ನು ಮಾಡುತ್ತೇವೆ, ಅವರು ಬೆಳಗ್ಗೆಯೇ ನಿಲ್ಲಿಸಿಬಿಡುತ್ತಾರೆ. ಆಪಾದನೆ ಮಾಡಬೇಡಿ ಎಂದರೆ ನಾನು ಮಾಡುವುದಿಲ್ಲ. "*ರೇವಣ್ಣನವರೆ, ನಿಮ್ಮ ಪಿಡಬ್ಲ್ಯೂಡಿ ಕರ್ಮಕಾಂಡ ಏನೇನಿದೆ, ಮತ್ತು ನಿಮ್ಮ ಇಂಧನ ಇಲಾಖೆ ಬಗ್ಗೆ ಪುಸ್ತಕ ರಚಿಸಿ, ಅದರಿಂದ ಇಡೀ ರಾಜ್ಯದ ಜನತೆಗೆ ಮೆಸೇಜ್ ಕೊಡುತ್ತೇನೆ*" ಎಂದರು. ಕೊಡಿ ಸ್ವಾಮಿ, ಬೇಡವೆಂದವರು ಯಾರು ? ರೇವಣ್ಣನವರು ತಪ್ಪು ಮಾಡಿದ್ದರೆ ಕೊಡಿ. ನಮ್ಮ ಬಾಲಕೃಷ್ಣರವರು ತಪ್ಪು ಮಾಡಿದ್ದರೆ ಕೊಡಿ, ಕೃಷಿ ಮಂತ್ರಿಯವರು ತಪ್ಪು ಮಾಡಿದ್ದರೆ ಕೊಡಿ. ಸಿದ್ದರಾಮಣ್ಣನವರು ತಪ್ಪು ಮಾಡಿದ್ದರೆ ಕೂಡ. ಸಿದ್ದರಾಮಣ್ಣನವರೆ, 2002ರಿಂದ ರೇವಣ್ಣನವರೂ ಸೇರಿಕೊಂಡಂತೆ ನಿಮ್ಮ

ಎಸ್.ಎಂ. ಕೃಷ್ಣನವರೂ ಕಲ್ಲಿದ್ದಲು ವ್ಯವಹಾರ ಮಾಡಿ ಹೋಗಿದ್ದಾರೆ, ಅದನ್ನೂ ಹೊರಕ್ಕೆ ತೆಗೆಯೋಣ, ಸದನದಲ್ಲಿ ಈಗ ಡಿ.ಕೆ.ಶಿವಕುಮಾರ್ ಅವರು ಇಲ್ಲ. ಏಕೆಂದರೆ, ಅವರಿಗೆ ಡಿ.ಕೆ.ಶಿವಕುಮಾರ್ ಅವರೇ ಚೆನ್ನಾಗಿ ಅಡ್ಜಸ್ಟ್ ಆಗಿರುವುದು. ಅವರು ನಮ್ಮ ಹತ್ತಿರ ಅಡ್ಜಸ್ಟ್ ಆಗಿಲ್ಲ. ಇದಕ್ಕೆ ಕಾರಣವೇನೆಂದು ಗೊತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ನಮ್ಮ ಜೊತೆ 20 ತಿಂಗಳು ಅಡ್ಜಸ್ಟ್ ಆಗಿದ್ದರು. 20 ತಿಂಗಳಾದ ಬಳಿಕ ಅವರೊಂದಿಗೆ ಚೆನ್ನಾಗಿ ಅಡ್ಜಸ್ಟ್ ಆಗಿದ್ದಾರೆ. ಸಿದ್ದರಾಮಣ್ಣ ಅವರೊಂದಿಗೆ ಅಡ್ಜಸ್ಟ್ ಆಗಿಲ್ಲ. ಏಕೆಂದರೆ, ಅವರೂ ರೇವಣ್ಣ ಅವರೊಂದಿಗೆ ಅಡ್ಜಸ್ಟ್ ಆದಂತೆ ಕಾಣಲಿಲ್ಲ. ಕಾರಣ, ಯಾವುದನ್ನೇ ಕೇಳಿದರೂ 'ಶಿವಕುಮಾರ್‌ರವರೆ, ನಿಮಗೆ ಗೊತ್ತಿಲ್ವೇನ್ರಿ?' ಎನ್ನುತ್ತಾರೆ.

ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ನಾನು ಯಾವುದಾದರೊಂದು ಆಪಾದನೆ ಮಾಡುತ್ತೇನೆ. ಬಳಿಕ, ಒಂದು ಸಮಿತಿ ರಚಿಸಿ, ವಿಚಾರಣೆಗೆ ವಹಿಸಿಕೊಡಬೇಕೆಂದು ಕೇಳುತ್ತೇನೆ. ಇವರು Joint Select Committee ರಚಿಸಿದರು. Bangalore International Airport Limitedಗೆ ಸಂಬಂಧಿಸಿದಂತೆ ಒಂದು ಸಮಿತಿ ರಚಿಸಿದರು. Joint Select Committee ರಚಿಸಿ ಯಾರು ಆಪಾದನೆ ಮಾಡುತ್ತಾರೋ, ಅವರನ್ನೇ ಆ ಸಮಿತಿಗೆ ಯಡಿಯೂರಪ್ಪನವರು ನೇಮಿಸುತ್ತಾರೆ. ಡಿ.ಕೆ.ಶಿವಕುಮಾರ್ ಅವರು ಸಮಿತಿಯಲ್ಲಿ ಇರಬೇಕೆನ್ನುತ್ತಾರೆ. ಡಿ.ಕೆ.ಶಿವಕುಮಾರ್ ಅವರು ಇಸ್ಕಾನ್ ಅವ್ಯವಹಾರದ ಕುರಿತಂತೆ ಪ್ರಸ್ತಾಪಿಸಿದಾಗ, ಅದಕ್ಕೊಂದು ಸಮಿತಿ ರಚಿಸಿ ಅವರನ್ನೇ ಆ ಸಮಿತಿಗೆ ಸದಸ್ಯರನ್ನಾಗಿ ನೇಮಿಸಿದರು. ಏಕೆಂದರೆ, ಯಡಿಯೂರಪ್ಪನವರನ್ನು ಸೇಫ್‌ಗಾರ್ಡ್ ಮಾಡುವುದಕ್ಕೆ ಒಬ್ಬರು ಇರಬೇಕೋ ಏನೋ ನನಗೆ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಏನು ಉದ್ದೇಶವಿದೆಯೋ ನನಗೆ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ನನಗೇನೂ ವೈಯಕ್ತಿಕ ದ್ವೇಷವಿಲ್ಲ. ಅವರು ಇನ್ನೂ ಮೂರು ವರ್ಷ ಅಧಿಕಾರದಲ್ಲಿರಲಿ, ಅವರ ಪಕ್ಷದ ಇನ್ನೂ 150 ಜನರು ಗೆಲ್ಲಲಿ, ನಾವೇನೂ ಬೇಡವೆನ್ನುವುದಿಲ್ಲ. ಭಗವಂತ ಅವರನ್ನು ಚೆನ್ನಾಗಿ ಇಟ್ಟಿರಲಿ.

ಆದರೆ, ಏನಾಗುತ್ತದೆಂದರೆ, ನಾವೇನೂ ಮಾಡಲಿಲ್ಲ. ನಾವು ಒಂದೇ ಕಡೆ ಮಾಡಿ ಕುಳಿತು ಬಿಟ್ಟಿದ್ದೇವೆ. *'ರೇವಣ್ಣನವರೆ, ನೀವು ಎಲ್ಲವನ್ನೂ ಹಾಸನಕ್ಕೆ ಮಾಡಿಕೊಂಡಿರಿ, ರಾಮನಗರಕ್ಕೆ ಮಾಡಿಕೊಂಡಿರಿ'* ಎನ್ನುವುದಾದರೆ, ನೀವು ಎಲ್ಲಾ ಕಡೆಗಳಲ್ಲೂ ಮಾಡಿ. ನಿಮ್ಮ ಬಳಿ 110 ಶಾಸಕರಿದ್ದಾರೆ. ರೇವಣ್ಣನನ್ನು ಬಿಟ್ಟಾಕಿ. ಐದು ವರ್ಷಗಳ ಹಿಂದಿನ ಕಡತವನ್ನು ತರಿಸಿ ನೋಡಿ. ಶ್ರೀ ಎಸ್.ಎಂ.ಕೃಷ್ಣರವರ ಕಾಲದಲ್ಲಿ ಹೊಳೆನರಸೀಪುರಕ್ಕೆ 3054 ಲೆಕ್ಕ ಶೀರ್ಷಿಕೆಯಲ್ಲಿ 5 ರೂ. ಕೊಟ್ಟಿಲ್ಲ. 50 ರೂ. ಸಹ ಕೊಟ್ಟಿಲ್ಲ. ಆಗ ಪಾಪ! ದೊಡ್ಡೇಗೌಡರು ಶಾಸಕರಾಗಿದ್ದರು. ಅವರಿಗೆ ಕೇಳುವಷ್ಟು ಶಕ್ತಿ ಇರಲಿಲ್ಲ. 50 ಸಾವಿರ ರೂ. ಕೊಟ್ಟಿದ್ದಾರೋ, 50 ಲಕ್ಷ ರೂ. ಕೊಟ್ಟಿದ್ದಾರೋ, ಬೇಕಿದ್ದರೆ ಕಡತ ತೆಗೆಸಿ ನೋಡಿ. ಲೋಕೋಪಯೋಗಿ ಇಲಾಖೆಯಿಂದ ಹೊಳೆನರಸೀಪುರಕ್ಕೆ ಎಷ್ಟು ಹಣ ಬಂದಿದೆ ಎಂಬುದು ಗೊತ್ತಾಗುತ್ತದೆ. ಆದರೆ, ಇವತ್ತು ನಿಮ್ಮ 18 ತಿಂಗಳ ಅಧಿಕಾರಾವಧಿಯಲ್ಲಿ ಶಿಕಾರಿಪುರಕ್ಕೆ ಎಷ್ಟು ಹಣ ಹೋಗಿದೆ, ಯಾವ್ಯಾವ ಇಲಾಖೆಗಳಿಂದ ಎಷ್ಟೆಷ್ಟು ಹಣ ಹೋಗಿದೆ ಎಂಬುದರ ದಾಖಲೆ ಕೊಡಿ, ಅದನ್ನು ಸಭೆ ಮುಂದಿಡಿ. ನಾಳೆ ಬಜೆಟ್‌ನಲ್ಲಿ ಅದನ್ನೂ ಸೇರಿಸಿ. 18 ತಿಂಗಳಿನಲ್ಲಿ ಶಿಕಾರಿಪುರಕ್ಕೆ ಎಷ್ಟು ಕೊಟ್ಟಿದ್ದೇನೆ, ಶಿವಮೊಗ್ಗಕ್ಕೆ ಎಷ್ಟು ಕೊಟ್ಟಿದ್ದೇನೆ, ರೇವಣ್ಣ 36 ತಿಂಗಳಿನಲ್ಲಿ ಹಾಸನಕ್ಕೆ ಎಷ್ಟು ಕೊಟ್ಟಿದ್ದಾನೆ, ಅದನ್ನೂ ಇಡಿ. ನನೇನೂ ಬೇಡವೆಂದು ಹೇಳುವುದಿಲ್ಲ. ತಾವು ನಾಳೆ ಬಜೆಟ್ ಮಂಡಿಸುತ್ತಿದ್ದೀರಿ. ನಾನು ಈ ಸಲ ಮತ್ತು ಹೋದ ಸಲದ ರಾಜ್ಯಪಾಲರ ಭಾಷಣದ ಎರಡೂ ಭಾಷಣಗಳ ಕಡತವನ್ನೂ ನಿಮಗೆ ಕೊಡುತ್ತೇನೆ.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈಗ ಸದನದಲ್ಲಿದ್ದಾರೆ. ಇವತ್ತು ನಾವು ಶಾಸಕರಾಗಿ ನಮ್ಮ ಕ್ಷೇತ್ರದಲ್ಲಿ ಒಂದೂ ಬೋರ್‌ವೆಲ್ ಕೊರೆಸುವುದಕ್ಕಾಗುತ್ತಿಲ್ಲ. ಡಿ.ಸಿ.ಯವರನ್ನು ಕೇಳಿದರೆ ದುಡ್ಡಿಲ್ಲವೆನ್ನುತ್ತಾರೆ. ದುಡ್ಡನ್ನು ನಾವು ಎಲ್ಲಿಂದ ತರೋಣವೆನ್ನುತ್ತಾರೆ. ಒಂದೊಂದು ಕೋಟಿ ರೂ. ಕೊಡಿ. ಯಾರೋ ಅಮೃತಾನಂದಮಯಿಗೆ 5 ಕೋಟಿ ರೂ. ಕೊಡುವುದು. ಅವರು ಯಡಿಯೂರಪ್ಪನವರ ಹೆಸರು

ಹೇಳಿಕೊಂಡು, 'ನಮ್ಮ ಯಡಿಯೂರಪ್ಪನವರು ಬೋರ್‌ವೆಲ್ ಕೊರೆಸಿಕೊಟ್ಟಿದ್ದಾರೆ, ಅವರಿಗೆ ಭಗವಂತ ಒಳ್ಳೆಯದನ್ನು ಮಾಡಲಿ' ಎನ್ನುತ್ತಾರೆ. ಅವರು ಇನ್ನೂ 3 ವರ್ಷ 2 ತಿಂಗಳು ಇರಲಿ. ನೀವು ಸುಮ್ಮನೆ ಯಾವ್ಯಾವುದೋ ದೇವಸ್ಥಾನಗಳಿಗೆ ಹೋಗುತ್ತೀರಲ್ಲ. ದುಡ್ಡನ್ನು ಬಡವರಿಗೆ ಕೊಡಿ ಸ್ವಾಮಿ. ಯಾಕೆ, ಸ್ವಾಮಿಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಕ್ಕೆ ಹೋಗುತ್ತೀರಿ?

ಶ್ರೀ ಬಸವರಾಜ ಬೊಮ್ಮಾಯಿ : ನೀವೂ ಹೋಗುತ್ತೀರಲ್ಲ?

ಶ್ರೀ ಹೆಚ್.ಡಿ. ರೇವಣ್ಣ : ರೀ, ನಾನೂ ಹೋಗುತ್ತೇನೆ. ನನಗೆ ಇದ್ದಾರೆ, ನಾನು ಸುತ್ತೂರು ಮಠಕ್ಕೂ ಹೋಗುತ್ತೇನೆ, ಸಿದ್ಧಗಂಗಾ ಮಠಕ್ಕೂ ಹೋಗುತ್ತೇನೆ. ಬಸವರಾಜ ಬೊಮ್ಮಾಯಿಯವರೆ, ತಾವು ಕುಳಿತುಕೊಳ್ಳಿ.

ಶ್ರೀ ಬಸವರಾಜ ಬೊಮ್ಮಾಯಿ : ನಿಮಗೊಬ್ಬರಿಗೆ ಸ್ವಾಮಿಗಳ ಆಶೀರ್ವಾದ ಬೇಕೆ? ಹೇಗೆ? ಎಲ್ಲಾ ದೇವರುಗಳು ನಿಮಗೊಬ್ಬರಿಗೇ ಆಶೀರ್ವಾದಿಸಬೇಕೇ? ನೀವು ಬೆಳಿಗ್ಗೆ ಎದ್ದು ದೇವಸ್ಥಾನಕ್ಕೆ ಹೋಗುವುದು, ನಂತರ ಇಲ್ಲಿಗೆ ಬರುವುದು. ಎಲ್ಲರಿಗೂ ಆಶೀರ್ವಾದ ಬೇಕು.

ಶ್ರೀ ಹೆಚ್.ಡಿ. ರೇವಣ್ಣ : ರೀ, ನಾವು ನೀರಾವರಿ ಮಂತ್ರಿಗಳಾಗಿದ್ದವರು. ಅಲ್ಪಸ್ವಲ್ಪ ಕೆಲಸ ಮಾಡಬೇಕೆಂದು ನಾವು ಬೆಳಿಗ್ಗೆ ದೇವರನ್ನು ಕೇಳಿಕೊಂಡು ಬರುತ್ತೇವೆ. ನಿಮಗೆ ಅದೂ ಇಲ್ಲವಲ್ಲ. ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ಇನ್ನೇನೂ ಹೇಳಲು ಹೋಗುವುದಿಲ್ಲ. ಕಾರಣ, 3,500 ಕೋಟಿ ರೂ. ಏನಾಗಿದೆ? ಅದು Washing of Coal ಆಗಿರಬಹುದು, ಅದು ಯಾರ್‍ಯಾರ ಕಾಲದ್ದು? ನಾನು ಮುಖ್ಯಮಂತ್ರಿಗಳಿಗೆ ಹೇಳುವುದೇನೆಂದರೆ, ಇವತ್ತಿನವರೆಗೂ ಅವರ ಕಾಲದ್ದೂ ಸೇರಿಸಿ 20 ತಿಂಗಳು, 18 ತಿಂಗಳು ಉಪ ಮುಖ್ಯಮಂತ್ರಿಯಾಗಿದ್ದಾಗ, 20 ತಿಂಗಳು ಮುಖ್ಯಮಂತ್ರಿಯಾಗಿದ್ದಾಗ, ನಾನು 36 ತಿಂಗಳು ಮಂತ್ರಿಯಾಗಿದ್ದಾಗ ಎಲ್ಲವನ್ನೂ ಸೇರಿಸಿ ತನಿಖೆ ಮಾಡಲಿ ಅವರಿಗೆ ಸಿಬಿಐ ಬಗ್ಗೆ ಅನುಮಾನವಿದ್ದರೆ ಲೋಕಾಯುಕ್ತಕ್ಕೆ ಕೊಡಲಿ, ಲೋಕಾಯುಕ್ತದ ಬಗ್ಗೆ ಅನುಮಾನವಿದ್ದರೆ ಹಾಲಿ ನ್ಯಾಯಾಧೀಶರಿಗೆ ಕೊಡಲಿ, ಕರ್ನಾಟಕದಲ್ಲಿ ಹಾಲಿ ನ್ಯಾಯಾಧೀಶರು ಅವರಿಗೆ ಯಾರೂ ಅಡ್ಜಸ್ಟ್ ಆಗಲಿಲ್ಲವೆಂದರೆ, ಸುಪ್ರೀಂ

ಕೋರ್ಟ್ ನ್ಯಾಯಾಧೀಶರಿಗೆ ಕೊಡಲಿ. ಇಂತಹವರಿಗೆ ಕೊಡಿ ಎಂದು ನಾನೇನೂ ಹೇಳುವುದಿಲ್ಲ. ಬೇಡ ಸ್ವಾಮಿ, ಅವರಿಬ್ಬರೂ ಅಡ್ಜಸ್ಟ್ ಆಗುವುದಿಲ್ಲವೆಂದರೆ, ಈಗ ನಿಮಗೆ ಅಡ್ಜಸ್ಟ್ ಆಗಿರುವವರನ್ನು ನ್ಯಾಯಾಧೀಶರನ್ನಾಗಿ ಮಾಡಿದ್ದೀರಲ್ಲ. ಅವರಿಗೆ ಕೊಡಿ. ಮಾಡಿ, ನಿಮಗೆ ಹೇಗೆ ಬೇಕೋ ಹಾಗೆ ಬರೆಸಿಕೊಳ್ಳಿ, ನನ್ನದೇನೂ ಅಭ್ಯಂತರವಿಲ್ಲ. ನಮ್ಮನ್ನು ಜೈಲಿಗೆ ಹಾಕುತ್ತೇವೆಂದರೆ ಒಳ್ಳೆಯದು. ನಾವು ಇಲ್ಲಿ ಜನತೆಯಲ್ಲಾ ಹೇಳುವುದರ ಬದಲು ಆ ಜೈಲಿನಲ್ಲಿ 6 ತಿಂಗಳು ಇದ್ದು ಬರುತ್ತೇವೆ. ಅದಕ್ಕೆ ನಾವೇನೂ ತಲೆ ಕೆಡಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ.

ಯಾವುದೇ ವಿಷಯವನ್ನು ಮಾನ್ಯ ವಿರೋಧ ಪಕ್ಷದವರು ಪ್ರಸ್ತಾಪಿಸಿದಾಗ ನಾವು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುವುದಿಷ್ಟೆ. ಯಾವುದೇ ಚಾರ್ಜಸ್ ತಂದಾಗ ಆ ಕುರಿತಂತೆ ಚರ್ಚಿಸುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು. ನಾನು ನಿಯಮ 60ರಡಿ ವಿಷಯ ಪ್ರಸ್ತಾಪಿಸಲು ನೋಟೀಸ್ ಕೊಟ್ಟೆ. ಇಂಧನ ಇಲಾಖೆ ಬಗ್ಗೆ ಚರ್ಚೆಯೇ ಇಲ್ಲ. Straightaway "ನಿಮ್ಮ ಕಾಲದ್ದು, ಇವರ ಕಾಲದ್ದು 2002ರಿಂದ ಕಲ್ಲಿದ್ದಲು ಖರೀದಿ" ಎಂದು ಹೇಳಿ ಏಕೆ ಇವನ್ನೆಲ್ಲಾ ಮಾಡುವುದಕ್ಕೆ ಹೋಗುತ್ತೀರಿ? ಮೊದಲು ಚರ್ಚೆಯಾಗಲಿ. ಅನಂತರ, ನೀವು ಏನು ಬೇಕಾದರೂ ತೀರ್ಮಾನ ತೆಗೆದುಕೊಳ್ಳಿ. ಚರ್ಚೆಗೆ ಅವಕಾಶ ಕೊಡದೆ ಮಾಡಿದಾಗ ಏನಾಗುತ್ತದೆಂದರೆ, ರಾಜಕೀಯ ದ್ವೇಷ, ದ್ವೇಷದ ಮೇಲೆ ಮಾಡುತ್ತಿದ್ದೀರಿ. ಅಧಿಕಾರಿಗಳು ಇದ್ದಾರಲ್ಲ. ಅವರೆಲ್ಲರೂ ನಿಮ್ಮೊಂದಿಗೆ ಇರುವುದಿಲ್ಲ. ನಾಳೆ ಬೆಳಿಗ್ಗೆ ಅಧಿಕಾರ ಹೋದ ತಕ್ಷಣವೇ ಅವರೆಲ್ಲರೂ ಸಿದ್ದರಾಮಣ್ಣನವರ ಹತ್ತಿರ ಇಲ್ಲವೇ ರೇವಣ್ಣನವರ ಬಳಿಗೆ ಇರುತ್ತಾರೆ. ಅದನ್ನೂ ಬೇಕಾದರೆ ನೀವು ತಿಳಿದುಕೊಳ್ಳಿ, ಸ್ವಾಮಿ, ಇಂತಿಂತಹವರು ಹೀಗೆ ಮಾಡಿದ್ದರು ಎಂದು ಫೈಲುಗಳನ್ನು ಹಿಡಿದುಕೊಂಡು ಬಂದು ಕೊಡುತ್ತಾರೆ. ನಿಮಗೆ ಯಾವ ದಾಖಲಾತಿ ಬೇಕೋ ಕೇಳಿ, ಕೊಡುತ್ತೇವೆ. ಹೌಸಿಂಗ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧಿಸಿದಂತೆ ಬೇಕೆ? ಇಂಧನ ಇಲಾಖೆಯದು ಬೇಕೇ? ಯಾವ್ಯಾವ ಇಲಾಖೆಗಳ ಕಡತಗಳು ಬೇಕೋ, ಕೊಡುತ್ತೇವೆ. ಅದರ ಬಗ್ಗೆ ಒಂದು ದಿವಸ ಚರ್ಚೆಗೆ ಇಟ್ಟುಕೊಳ್ಳೋಣ.

ಈಗ NICE ಕುರಿತಂತೆ ನಮ್ಮ ಯಜಮಾನರು ಹೇಳುತ್ತಿದ್ದರು. ದೇವೇಗೌಡರು ತಪ್ಪು ಮಾಡಿದ್ದರೆ, ಅವರನ್ನು ಜೈಲಿಗೆ ಹಾಕಿ. ಬೇಡವೆನ್ನುವವರು ಯಾರು? ಮಾಜಿ ಪ್ರಧಾನ ಮಂತ್ರಿಯವರು ತಪ್ಪು ಮಾಡಿದ್ದರೆ ಅವರನ್ನೂ ಜೈಲಿಗೆ ಹಾಕಿ. ಯಾರ್ಯಾರ ಕಾಲದಲ್ಲಿ ಏನೇನಾಯಿತು ಎಂಬುದನ್ನು ಹೇಳಿ. ಆ ವಿಷಯವನ್ನು ಸಾರ್ವಜನಿಕವಾಗಿ ಬಿಡಿ. ಚರ್ಚೆಗೆ ಅವಕಾಶ ಕೊಡುತ್ತೇನೆಂದು ಅಲ್ಲಿ ಹೇಳಿದಿರಿ, ಇಲ್ಲಿಯೂ ಅದನ್ನೇ ಹೇಳಿ. ನಾವೇನಾದರೂ ಹಿಡಿದುಕೊಂಡಿದ್ದೇವೆಯೇ? ಅಥವಾ ನಾವೇನಾದರೂ ಮುಖ್ಯಮಂತ್ರಿಗಳ ಮನೆ ಮುಂದೆ ಹೋಗಿ, ಸ್ವಾಮಿ, 18 ತಿಂಗಳುಗಳಿಗೆ ಕೆಪಿಟಿಸಿಎಲ್, ಪಿಡಬ್ಲ್ಯೂಡಿ ಎನ್‌ಕ್ವೈರಿಗೆ ಸಂಬಂಧಿಸಿದಂತೆ ಇಂಜಿನಿಯರ್‌ಗಳನ್ನು ನೇಮಿಸಿದ್ದಾರೆಂದು ನಾನೇನಾದರೂ ಅವರನ್ನು ಹೋಗಿ ಕೇಳಿದ್ದೇನೆಯೇ? ಸಂತೋಷ. ಯಾರು ತಪ್ಪೆಸಗಿದ್ದಾರೋ ಅವರದು ಹೊರಗೆ ಬರಲಿ.

ಇವತ್ತು ಇಂಧನ ಇಲಾಖೆ. ಯಾರನ್ನೋ ರೆಕ್ರೂಟ್‌ಮೆಂಟ್‌ಗೆ ಹಾಕಿದ್ದಾರೆ, ನಾನು ಬೇಡವೆಂದು ಹೇಳಿದ್ದೇನೆಯೇ? ಇವತ್ತು ಅದೆಂತಹುದ್ದೋ ಕಮಿಷನ್ ಮಾಡಿದ್ದಾರೆ, ನೀವು ಇದರ ಬಗ್ಗೆ ಚರ್ಚೆಯನ್ನೇ ಮಾಡದೇ ಹೋಗುತ್ತಿದ್ದೀರಲ್ಲ. ಅದಕ್ಕೋಸ್ಕರವೇ ನಾನು ಹೇಳುತ್ತಿರುವುದು. ನಾನು ಏನಾದರೂ ಕೆಲವು ಮಾಹಿತಿಗಳ ಬಗ್ಗೆ ಕೇಳಿದರೆ, 'ಆಯೋಗದ ಮುಂದೆ ಹೋಗಿ ಸ್ವಾಮಿ' ಎನ್ನುತ್ತಾರೆ. ಆಯೋಗದ ಮುಂದೆ ನಾವೇಕೆ ಹೋಗೋಣ? ಆಯೋಗದವರು ನನಗೆ ನೋಟೀಸ್ ಕೊಟ್ಟರೆ ಹೋಗುತ್ತೇನೆ. ನನ್ನೊಂದಿಗೆ ಅಪರಾಧಿ ಅವರೂ ಇದ್ದಾರೆ. ಈ ರಾಜ್ಯದ 5 ಕೋಟಿ ಜನತೆಗೆ 18 ತಿಂಗಳ ಕಾಲ ಸುಳ್ಳು ಹೇಳಿದ್ದೇನೆ ಎಂದಿದ್ದಾರೆ. ಇದನ್ನು ಸ್ವತಃ ಅವರೇ ಒಪ್ಪಿಕೊಂಡಿದ್ದಾರೆ. ಭಗವಂತ ಅವರಿಗೆ ಒಳ್ಳೆಯದನ್ನು ಮಾಡಲಿ. ಅವರಿಗೆ ನಿಜವಾಗಿಯೂ ನೈತಿಕತೆ ಇದ್ದರೆ, ರಾಜೀನಾಮೆ ಕೊಟ್ಟು ನಮ್ಮೊಂದಿಗೆ ತನಿಖೆ ಎದುರಿಸಲಿ. ಇಲ್ಲವೆಂದರೆ, ಅವರು ಮಾಡಿರುವುದನ್ನು ಮುಚ್ಚಿ ಹಾಕುವುದಕ್ಕೋಸ್ಕರ ನಾಮಕಾವಸ್ಥೆ ತನಿಖೆ ಎಂದು ಹೇಳಿಬೇಕಾಗುತ್ತದೆ. ನಾನು ಪತ್ರಿಕೆಗಳಲ್ಲಿ ನೋಡಿದ್ದೇನೆ ಸ್ವಾಮಿ. ಸದನದಲ್ಲಿ ಹಿರಿಯರಾದ ಮಾನ್ಯ

ಸ್ರೀನಿವಾಸ ಪ್ರಸಾದ್ ಅವರಿಲ್ಲ. ಏಪ್ರಿಲ್ ತಿಂಗಳವರೆಗೆ ಮುಖ್ಯಮಂತ್ರಿಗಳಿರುತ್ತಾರೆ, ಅನಂತರ, ಜಗದೀಶ್ ಶೆಟ್ಟರ್ ಅವರು ಬರುತ್ತಾರೆಂದು ಹೇಳುತ್ತಿದ್ದಾರೆ. ಮುಖ್ಯಮಂತ್ರಿಗಳು ಇನ್ನೂ 3 ವರ್ಷ 2 ತಿಂಗಳು ಇರಬೇಕೆಂಬುದು ನಮ್ಮ ಆಸೆಯಾಗಿದೆ. ಅನಂತರ, 150 ಸೀಟುಗಳು ಬಂದಾಗ ಜಗದೀಶ್ ಶೆಟ್ಟರ್ ಅವರು ಬರಲಿ, ಸರ್, ನಾನು ನಿಮ್ಮ ಪರ ವಹಿಸಿಕೊಳ್ಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಯಡಿಯೂರಪ್ಪನವರು ನಮ್ಮ ನಾಯಕರು. ಈ ರೀತಿ ಪದೇ ಪದೇ ಜಗದೀಶ್ ಶೆಟ್ಟರ್ ಅವರ ಹೆಸರನ್ನು ಉಪಯೋಗಿಸಿಕೊಂಡು ರಾಜಕೀಯವಾಗಿ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದೀರಿ, ರೇವಣ್ಣನವರೆ, ಇದು ಸರಿಯಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ನಾನು ಹೇಳಿದ್ದು ತಪ್ಪಾಯಿತು, ಸರ್.

ಶ್ರೀ ಜಗದೇಶ್ ಶೆಟ್ಟರ್ : ಈಗ ನಾವೆಲ್ಲರೂ ಒಂದಾಗಿದ್ದೇವೆ. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ 5 ವರ್ಷಗಳ ಕಾಲ ಇರುತ್ತಾರೆ. ಇದರಲ್ಲಿ ಸಂಶಯವಿಲ್ಲ. ಅವರು ನಮ್ಮ ನಾಯಕರು. ಇದರಲ್ಲಿ ಬೇರೆ ಪ್ರಶ್ನೆಯೇ ಇಲ್ಲ. ಪದೇ ಪದೇ ಈ ರೀತಿ ಜಗದೀಶ್ ಶೆಟ್ಟರ್, ಮತ್ತೊಬ್ಬರ ಹೆಸರನ್ನು ಪ್ರಸ್ತಾಪಿಸುವ ಮೂಲಕ ನಮ್ಮಲ್ಲಿ ಡಿವೈಡ್ ಮಾಡುವ ಕೆಲಸ ಮಾಡಲು ಹೋಗಬೇಡಿ. ದಯವಿಟ್ಟು ಇಂತಹ ರಾಜಕಾರಣ ಮಾಡಲು ಹೋಗಬೇಡಿ.

ಶ್ರೀ ಹೆಚ್.ಡಿ. ರೇವಣ್ಣ : ಸರ್, ನೀವು ಬೇಡವೆಂದರೆ, ಕರುಣಾಕರ ರೆಡ್ಡಿಯವರನ್ನೇ ಮಾಡೋಣ ಬಿಡಿ, ಸರ್.

ಆಧ್ಯಕ್ಷರು : ರೇವಣ್ಣನವರೆ, ತಮ್ಮ ಮಾತು ಮುಗಿಸಬೇಕು.

ಶ್ರೀ ಹೆಚ್.ಡಿ. ರೇವಣ್ಣ : ನಮ್ಮ ಆಸೆ ನೀವು ಇರಬೇಕೆಂಬುದೇ ಆಗಿದೆ. ಐದು ವರ್ಷಗಳ ಕಾಲ ಯಡಿಯೂರಪ್ಪನವರೇ ಇರಬೇಕೆಂಬುದು ನಮ್ಮ ಆಸೆಯಾಗಿದೆ. ಯಡಿಯೂರಪ್ಪನವರು ಹೋದರೆ ಜಗದೀಶ್ ಶೆಟ್ಟರ್ ಅವರು ಬರಬೇಕೆಂದು ಹೇಳುತ್ತೇವೆ. ನೀವು ಬೇಡವೆಂದರೆ, ಕರುಣಾಕರ ರೆಡ್ಡಿಯವರನ್ನೇ ಮಾಡುವುದಕ್ಕೆ ಹೇಳೋಣ ಬಿಡಿ. ನಮಗೇನಿಲ್ಲ.

ಮಾನ್ಯ ಅಧ್ಯಕ್ಷರೆ, ಯಾವುದೇ ಉತ್ತರ ಕೊಡುವಾಗ, ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಆಪಾದನೆ ಮಾಡುವಾಗ ಮೊದಲು ನೋಟೀಸ್ ಕೊಟ್ಟು ನಂತರ ಪ್ರಸ್ತಾಪಿಸಬೇಕೆಂದು ಹೇಳಿದ್ದೀರಿ. ಅವರು ಚರ್ಚೆ ಮಾಡಲಿ. ಆಮೇಲೆ ಬೇಕಿದ್ದರೆ ಆಪಾದನೆ ಮಾಡುವುದಕ್ಕೆ ಬಿಡಿ. ನನ್ನ ಕಾಲದಲ್ಲಿ ಇರಬಹುದು, ಟ್ರಾನ್ಸ್‌ಫಾರ್ಮರ್ ಇರುಬಹುದು, ಯಾವುದನ್ನು ಸಿಬಿಐಗೆ ಕೊಡುತ್ತೀರೋ, ಇಂಟರ್‌ಪೋಲ್‌ಗೆ ಕೊಡುತ್ತೀರೋ, ಎಲ್ಲವನ್ನೂ ಕೊಡಿ. ನಾನು ತಲೆ ಕೆಡಿಸಿಕೊಳ್ಳುವುದೇನೂ ಇಲ್ಲ. ಇನ್ನೊಂದು ಮುಖ್ಯಮಂತ್ರಿಗಳಿಗೆ ಹೇಳುವುದೇನೆಂದರೆ, ಬಿ.ಬಿ.ಎಂ.ಪಿ. ಚುನಾವಣೆಗೋಸ್ಕರ ಹಾಲಿನ ಬೆಲೆಯನ್ನು ಕಡಿಮೆ ಮಾಡಲು ಹೋಗಬೇಡಿ. ರೈತರ ಮಕ್ಕಳಿಗೆ ಅನುಕೂಲವಾಗಲಿ. ಶಿವಮೊಗ್ಗದಲ್ಲಿ 12.50 ರೂಪಾಯಿ ಇದೆ. ಒಂದು ಬಿಸ್ಲೇರಿ ನೀರಿನ ಬಾಟಲ್ ಬೆಲೆ 15 ರೂಪಾಯಿ ಇದೆ. ಏನು ತಲೆಕೆಡಿಸಿಕೊಳ್ಳಬೇಡಿ. ಯಾರು ಏನೂ ಬಯುವುದಿಲ್ಲ. ಯಡಿಯೂರಪ್ಪನವರು ನಾಲ್ಕು ರೂಪಾಯಿ ಜಾಸ್ತಿ ಮಾಡಿದ್ದಾರೆಂದು ನಾನು ನಿಮ್ಮ ಪರವಾಗಿ ಹೇಳುತ್ತೇನೆ. ಇಲ್ಲಿ ಹಾಲನ್ನು ಕೊಳ್ಳುವವರೆಲ್ಲರೂ ರೈತರ ಮಕ್ಕಳೇ. ದೊಡ್ಡವರ ಮಕ್ಕಳು ಯಾರೂ ಕೊಳ್ಳುವುದಿಲ್ಲ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಹಾಲಿನ ಬೆಲೆ ಕಡಿಮೆ ಇದೆ. 18 ರೂಪಾಯಿ ಇದೆ. ಆದ್ದರಿಂದ ಹಾಲಿನ ಬೆಲೆಯನ್ನು ಜಾಸ್ತಿ ಮಾಡಲು ನೀವು ಏಕೆ ಹಿಂದೇಟು ಹಾಕುತ್ತೀರಿ? ನೀವು ಏನೂ ಹೆದರಿಕೊಳ್ಳಬೇಡಿ. ಕಾರ್ಪೊರೇಷನ್ ಚುನಾವಣೆಯಲ್ಲಿ ನೀವು ಎಷ್ಟು ಹಣವನ್ನು ಖರ್ಚು ಮಾಡುತ್ತೀರೋ ಅಷ್ಟು ಸೀಟುಗಳು ಬರುತ್ತವೆ. ನಿಮ್ಮ ಹಾಲಿನ ರೇಟ್‌ನಿಂದ ಏನು ಬರುವುದಿಲ್ಲ. ಹಾಲಿನ ರೇಟ್‌ನಿಂದ ಸೀಟುಗಳು ಬರುತ್ತದೆಂದು ನೀವು ತಿಳಿದುಕೊಂಡಿದ್ದರೆ ಅದು ಶುದ್ಧ ಸುಳ್ಳು. ಈಗ ಜನರು ಹಾಲಿನ ಬೆಲೆ ಮತ್ತು ಬಸ್ಸಿನ ದರವನ್ನು ಚುನಾವಣೆಯಾದಮೇಲೆ ಜಾಸ್ತಿ ಮಾಡುತ್ತಾರೆ ಎಂದು ಅಂದುಕೊಂಡಿದ್ದಾರೆ. ಈ ಎರಡೂ ವಿಚಾರ ಜನರಿಗೆ ಗೊತ್ತಾಗಿಹೋಗಿದೆ. ನೀವು ಬಿ.ಬಿ.ಎಂ.ಪಿ. ಚುನಾವಣೆಯಲ್ಲಿ ಗೆಲ್ಲಬೇಕಾದರೆ ದುಡ್ಡು ಖರ್ಚು ಮಾಡುವುದೊಂದನ್ನೇ ಮಾಡಿ. ಹಾಲು, ಬಸ್ಸಿನ ರೇಟನ್ನು ಜನರು ಲೆಕ್ಕಕ್ಕೆ

ಇಟ್ಟುಕೊಳ್ಳುವುದಿಲ್ಲ. ಆದ್ದರಿಂದ, ದಯಮಾಡಿ ಹಾಲಿನ ರೇಟನ್ನು ಜಾಸ್ತಿ ಮಾಡಿ. ಸಂಸ್ಥೆಗಳನ್ನು ಹಾಳು ಮಾಡಿಯೆಂದು ನಾನೇನು ಹೇಳುವುದಿಲ್ಲ. ಅದರ ಬಗ್ಗೆ ನಿಗಾ ತೆಗೆದುಕೊಂಡು ಕ್ರಮ ತೆಗೆದುಕೊಳ್ಳಿ. ಬರತಕ್ಕಂಥ ಬಜೆಟ್ ರೈತಾಪಿ ಜನರಿಗೆ ಅನುಕೂಲವಾಗಲಿ. ಕೃಷಿ ಸಚಿವರು ಇಲ್ಲ. ಒಂದು ಸ್ಪ್ರಿಂಕ್ಲರ್ ಸೆಟ್, ಐ.ಪಿ. ಸೆಟ್, ಟ್ರಾಕ್ಟರ್‌ಗೆ ಏನು ಸಬ್ಸಿಡಿ ಹಣ ಇದೆ ಎಲ್ಲವನ್ನೂ ದಾವಣಗೆರೆ, ಶಿವಮೊಗ್ಗಾಕ್ಕೆ ಕೊಟ್ಟಿದ್ದಾರಂತೆ. ಬೇರೆ ಜಿಲ್ಲೆಗೆ ಕೊಟ್ಟೇ ಇಲ್ಲವೆಂದು ಹೇಳುತ್ತಾರೆ. ಬೇರೆ ಜಿಲ್ಲೆಗಳಿಗೂ ಕೊಡಿ. ದಯಮಾಡಿ ಕೆಲಸ ಮಾಡಿಯೆಂದು ಹೇಳಿ ಮಾನ್ಯ ಸಬಾಧ್ಯಕ್ಷರು ಎರಡು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿಪುರಂ) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರು ನಮ್ಮನ್ನು ಉದ್ದೇಶಿಸಿ ಮಾತನಾಡಿದಂಥ ಭಾಷಣದ ಬಗ್ಗೆ ಮಾತನಾಡಬೇಕೆಂದು ಬಹಳಷ್ಟು ಕಾತರತೆಯಿಂದ ಕಾದಿದ್ದಕ್ಕೆ ಅಂತೂ ಇಂತು 5 ನಿಮಿಷ ಅವಕಾಶ ಸಿಕ್ಕಿದ್ದಕ್ಕೆ ತೃಪ್ತಿಪಟ್ಟು ನಿಮಗೆ ಧನ್ಯವಾದವನ್ನು ಹೇಳುತ್ತೇನೆ. ರಾಜ್ಯಪಾಲರು ಮಾಡಿದಂಥ ಭಾಷಣದಲ್ಲಿ ಹೊಸ ಚಿಂತನೆ, ದೂರದೃಷ್ಟಿ, ಸಾಧನೆಯ ಪ್ರತಿಬಿಂಬ ಇರುತ್ತದೆಂದು ನಾವೇನು ಅಂದುಕೊಂಡಿದ್ದೆವೋ ಅದೊಂದು ಕೈಗನ್ನಡಿಯೆಂದು ಭಾವಿಸಿದ್ದೆವೋ ಅದು ಕಾಣುತ್ತಿಲ್ಲ. ಏಕೆಂದರೆ, ಅವರು ಇಲ್ಲಿ ಮಾಡಿದ ಭಾಷಣದ ಎರಡನೇ ದಿನವೇ ರಬ್ಬರ್ ಬೋರ್ಡ್‌ವತಿಯಿಂದ ಏರ್ಪಡಿಸಿದ್ದಂಥ ಒಂದು ಸಭೆಯಲ್ಲಿ ಮಾತನಾಡುತ್ತಾ ನಾನು ಕರ್ನಾಟಕದ ರಾಜ್ಯಪಾಲನಾಗಿ ಅಧಿಕಾರ ವಹಿಸಿಕೊಂಡು 6 ತಿಂಗಳಾಗಿದೆ, ಅಂದಿನಿಂದ ಸರ್ಕಾರದ ನಡವಳಿಕೆಯನ್ನು ಗಮನಿಸುತ್ತಿದ್ದೇನೆ, ವಿದ್ಯುತ್ ಸಮಸ್ಯೆಯ ನಿವಾರಣೆಗೆ ಇದುವರೆಗೆ ಪ್ರಾಮಾಣಿಕ ಪ್ರಯತ್ನಗಳು ಆಗಿಲ್ಲ" ಎಂದು ಹೇಳುತ್ತಾರೆ. ರಾಜ್ಯಪಾಲರ ಈ ಒಂದು ಭಾಷಣದ ಪರಿ ಬಹುಶ: ಹೃದಯಾಂತರಾಳದಿಂದ ಬಂದಿದ್ದೇ ಅಥವಾ ಅವರ ಬಾಯಿಯಿಂದ ಹೇಳಿಸಿರತಕ್ಕದ್ದೇ ಎಂಬ ಸಂಶಯ ಸ್ಪಷ್ಟವಾಗಿ ಮೂಡಿ ಬರುತ್ತದೆ. ರೆವಿನ್ಯೂ ಟ್ಯಾಕ್ಸ್ ವಸೂಲಾತಿಯಲ್ಲಿ ಸಹ ಇಳಿಮುಖವಾಗಿರುವುದನ್ನು ನೋಡಿದಾಗ ರಾಜ್ಯದ ಪ್ರಗತಿ

ಕುಂಠಿತವಾಗಲಿಲ್ಲವೇ ಎಂಬುದು ಇವತ್ತು ಆತಂಕಕ್ಕೆ ಎಡೆಮಾಡಿಕೊಡುತ್ತದೆ. ಯೋಜನೆಯಾಗಲಿ, ಯೋಜನೇತರವಾಗಲಿ ನಿರೀಕ್ಷಿತ ಮಟ್ಟ ಮುಟ್ಟುವುದಕ್ಕೆ ಆಗುತ್ತಿಲ್ಲ. ಇವತ್ತು ವಿದ್ಯುಚ್ಛಕ್ತಿ ಬಹಳ ಮುಖ್ಯವಾಗಿರತಕ್ಕದ್ದು. ಕಾರ್ಖಾನೆಗಳಾಗಲಿ ಬೇರೆಯದ್ದಕ್ಕಾಗಲಿ ಪ್ರತಿಯೊಂದಕ್ಕೂ ಇವತ್ತು ವಿದ್ಯುಚ್ಛಕ್ತಿ ಅತ್ಯವಶ್ಯಕವಾಗಿದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳು ಸಂಪೂರ್ಣವಾಗಿ ವಿದ್ಯುಚ್ಛಕ್ತಿಯನ್ನು ಅವಲಂಬಿಸಿವೆ. ಬಹಳಷ್ಟು ಕಡೆ ಸೋರಿಕೆಗಳಿಗೆ ಸಂಬಂಧಿಸಿದಂತೆ 45 ಸಾವಿರ ಪ್ರಕರಣಗಳು ಈಗಾಗಲೇ ದಾಖಲಾಗಿದೆ. ಸುಮಾರು 125 ಕೋಟಿ ರೂ. ದಂಡವನ್ನು ವಸೂಲಿ ಮಾಡಿದೆಯೆಂದು ಹೇಳುತ್ತಾರೆ. ಬೆಂಗಳೂರು ಎಸ್ಕಾಂ ಬಹುಶ: ದೆಹಲಿ ಬೇಸ್ಡ್ ಕಂಪನಿಗೆ, ಅದು ಕಲ್ಯಾಣಿ ಇರಬಹುದು, ಯಾವುದೋ ಕಂಪನಿಗೆ ಕೊಟ್ಟಿರತಕ್ಕದ್ದು ಕೆಇಆರ್‌ಸಿ ಮುಂದೆ ಸಹ ಇದೆ. ಅದು Quantum of energy ಎಷ್ಟು ಕೊಟ್ಟಿದ್ದು, ಎಷ್ಟು realization ಆಗಿದೆ ಎಂಬುದು ಗೊತ್ತಾಗಬೇಕು. ಮೈನರ್ ಇರಿಗೇಷನ್ ಇಲಾಖೆಯಲ್ಲಿ ಇವತ್ತು ಸುಮಾರು ಎಷ್ಟು ಐ.ಪಿ. ಸೆಟ್‌ಗಳಿವೆ? ಅದರಲ್ಲಿ ಎಷ್ಟು definite ಆಗಿದೆ? ಎಂಬ ಬಗ್ಗೆ ಅಂಕಿಅಂಶಗಳು ಸ್ಪಷ್ಟವಾಗಿ ಇನ್ನೂ ಗೋಚರವಾಗುತ್ತಿಲ್ಲ. 18 ಲಕ್ಷ ಎಂದಾದರೆ, ನನಗೆ ಒಂದು ಆಶ್ಚರ್ಯ, ಗುಬ್ಬಿ ತಾಲ್ಲೂಕಿನ ನಮ್ಮ ಸಂಬಂಧಿಕರೊಬ್ಬರು ಫೋನ್ ಮಾಡಿ ನಮಗೆ 5 ಹೆಚ್.ಪಿ. ಪಂಪ್‌ಸೆಟ್‌ಗೆ ವಿದ್ಯುತ್ ಬೇಕು, ದಯವಿಟ್ಟು ಹೇಳಿ ಕೊಡುತ್ತಿಲ್ಲವೆಂದು ಕೇಳಿದರು. ನಾನು ಕೂಡಲೆ ಸಂಬಂಧಪಟ್ಟ ಇಂಜಿನಿಯರ್‌ರನ್ನು ಸಂಪರ್ಕ ಮಾಡಿ ಕೇಳಿದಾಗ ಬಹಳ ಕುಬ್ಜ ಗ್ರಾಮದಲ್ಲಿರುವ ಒಬ್ಬ ರೈತ ಸಣ್ಣ ಮೂರು ಎಕರೆ ಜಮೀನು ಮಾಡಿಕೊಂಡಿರತಕ್ಕದ್ದಕ್ಕೆ ಐ.ಪಿ. ಸೆಟ್‌ಗೆ ವಿದ್ಯುತ್ ಕೊಡಿಯೆಂದು ಕೇಳಿದಾಗ ಆ ಇಂಜಿನಿಯರ್ "ಇಲ್ಲ ಸರ್, ಅದನ್ನು Yellow Zone ಎಂದು ಘೋಷಣೆ ಮಾಡಿದ್ದಾರೆ" ಎಂದು ಹೇಳಿದರು. ನಾನೂ ಸಹ ಅಲ್ಲಿಗೆ ಎರಡು ಸಲ ಹೋಗಿದ್ದೆ. "ಏಕೆ Yellow Zone ಎಂದು ಮಾಡಿದ್ದೀರಿ?" ಎಂದು ಕೇಳಿದರೆ, "ಇಲ್ಲಿ, ಅದು ಸರ್ಕಾರದ ಆದೇಶ, ನಿಮ್ಮ ನಂಬರ್ ಕೊಡಿ ಬೇಕಾದರೆ ಫ್ಯಾಕ್ಸ್ ಮಾಡುತ್ತೇನೆ" ಎಂದು ಅವರು ಹೇಳಿದರು. ನನಗೆ

ಆಶ್ಚರ್ಯವಾಯಿತು. ನಮ್ಮ ರಾಜ್ಯದಲ್ಲಿ ಪ್ರಾಮಾಣಿಕವಾಗಿ ವಿದ್ಯುತ್‌ನ್ನು ಕೇಳಿದರೆ ಕೊಡುವುದಿಲ್ಲ. ಆದರೆ, ಅಲ್ಲಿ ಎಲ್ಲೋ ಕದ್ದು ವಿದ್ಯುತ್ ತೆಗೆದುಕೊಳ್ಳುತ್ತಾರೆ. ಗಂಗಾಕಲ್ಯಾಣ ಯೋಜನೆಯಲ್ಲಿ, ಬೇರೆ ಇನ್ನು ಯಾವುದೋ ಸ್ಕೀಮ್‌ನಲ್ಲಿ ಕೊಡಬಹುದು, ಆದರೆ, ಈ ರೀತಿ apply ಮಾಡಿದವರಿಗೆ ಕೊಡಲು ಬರುವುದಿಲ್ಲವೆಂದು ಆ ಇಂಜಿನಿಯರ್‌ರವರು ಹೇಳಿದರು. ಆಗ ನನಗೆ ಸಂಬಂಧಪಟ್ಟವರ ಜೊತೆ ಮಾತನಾಡಬೇಕೆಂದು ಬೇಸರ ಬಂತು. ಪ್ರಾಮಾಣಿಕವಾಗಿ ವಿದ್ಯುತ್ ಕೇಳುವವರಿಗೆ ಕೊಡುವ ಶಕ್ತಿ ಇಲ್ಲವೆಂದರೆ ನಮ್ಮ ರಾಜ್ಯ ಯಾವ ದಿಕ್ಕಿಗೆ ಹೋಗುತ್ತಿದೆ? ಇವತ್ತು ಖಾಸಗಿಯವರ ಜೊತೆ ಕರಾರು ಮಾಡಿಕೊಂಡು ವಿದ್ಯುತ್‌ಗೆ ಕೊಟ್ಟಿದ್ದೇವೆ. Indian Electricity Act ಪ್ರಕಾರ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗುವ ವಿದ್ಯುತ್‌ನ್ನು ತುರ್ತು ಸ್ಥಿತಿಯಲ್ಲಿ ನಮ್ಮ ರಾಜ್ಯಕ್ಕೇ ಪಡೆದುಕೊಳ್ಳುವ ಅಧಿಕಾರ ನಮಗಿದೆ. ಇದರ ಬಗ್ಗೆ ಈ ಹಿಂದೆ ಸುತ್ತೋಲೆಯನ್ನು ಹೊರಡಿಸಿದ್ದಂಥ ರಾಜ್ಯ ಸರ್ಕಾರ ಅದನ್ನು ಮತ್ತೆ ಏಕೆ ವಾಪಸ್ ತೆಗೆದುಕೊಂಡಿತು ಎಂಬುದು ಸಂಶಯಕ್ಕೆ ಎಡೆಕೊಡುತ್ತದೆ. ಇವತ್ತು Cost of electricity per unit ಕೊಡುವುದಕ್ಕೆ, ಯಾವ ಪೀಕ್ ಸಮಯದಲ್ಲಿ ನಾವು ಎಲ್ಲಿಂದ ತೆಗೆದುಕೊಳ್ಳಬಹುದಾಗಿತ್ತೋ, ಅವರಿಂದ ತೆಗೆದುಕೊಂಡು, ಜಲಾಶಯಗಳಲ್ಲಿ ಹೆಚ್ಚು ನೀರಿದ್ದಾಗ ಅವರಿಂದ ಕಡಿಮೆ ಬೆಲೆಗೆ ತೆಗೆದುಕೊಂಡು ಇಲ್ಲಿ ಉಳಿತಾಯ ಮಾಡಬಹುದಾಗಿತ್ತು. ಅದು ಕಾಣುತ್ತಿಲ್ಲ. ಇವತ್ತು ವಿದ್ಯುಚ್ಛಕ್ತಿಯ ಕೊರತೆ ಬಗ್ಗೆ, ಮೊನ್ನೆ ಸಾರ್ವಜನಿಕರು ದೂರದರ್ಶನದ ಮಾಧ್ಯಮಗಳಲ್ಲಿ ಹೇಳುತ್ತಿದ್ದರು. ಪ್ರತಿಯೊಬ್ಬ ಮಧ್ಯಮ ವರ್ಗದವರಿಗೆ, ಬಡತನ ರೇಖೆಗಿಂತ ಕೆಳಗಿರುವವರಿಗೆ ಪ್ರತಿಯೊಂದು electrical appliance ಮೇಲೆ one-tune investnent ಇದೆ. ಅದು ಕೆಡುತ್ತಾ ಇರುವುದ್ನು ಅವರು ಹೇಗೆ recovery ಮಾಡಿಕೊಳ್ಳುವುದೆಂದು ಗೃಹಿಣಿಯರು ಆತಂಕವನ್ನು ವ್ಯಕ್ತಪಡಿಸುತ್ತಿದ್ದರು. ಅಂದರೆ electrical appliance ಇಟ್ಟುಕೊಂಡಿರುವವರು ಪ್ರತಿಯೊಂದಕ್ಕೂ insurance ಮಾಡಿಸಬೇಕಾಗುತ್ತದೆ, ಬೆಂಗಳೂರು ನಗರದಲ್ಲಿ ಇವತ್ತು ವಿದ್ಯುತ್ ಕೊರತೆಯಿಂದ ಬಹಳಷ್ಟು

ಅಸ್ತವ್ಯಸ್ತವಾಗಿದೆ. ಸಣ್ಣ ಕೈಗಾರಿಕೆಗಳು ಮುಚ್ಚುವ ಸ್ಥಿತಿಗೆ ಬಂದಿದೆ. ಕಾರ್ಖಾನೆಗಳು ಬಹಳಷ್ಟು ಹೀನ ಸ್ಥಿತಿಗೆ ಹೋಗಿದೆ. ನಾನೂ ಕೂಡ ಕೃಷಿ ಮೂಲದಿಂದ ಬಂದಿರತಕ್ಕವನು. ಬೆಂಗಳೂರಿನ ಸುತ್ತ ಮುತ್ತ ಫಲವತ್ತಾದ ಭೂಮಿಯನ್ನು ಬಲಿ ಕೊಡುತ್ತಿದ್ದೇವಲ್ಲಾ ಇದು ರೈತರ ಬಲಿ ಅಲ್ಲವೇ ಎಂದು ಸರ್ಕಾರಕ್ಕೆ ಕೇಳುತ್ತೇನೆ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಸೋಪ್ ಕಾರ್ಖಾನೆಯ ಹಿಂಭಾಗದಲ್ಲಿ ವ್ಯಾಡ್‌ಪ್ಯಾಕ್ ಎಂಬ ಒಂದು ಕಾರ್ಖಾನೆ ಇದೆ. ಆ ಕಾರ್ಖಾನೆಯ ಕಾರ್ಮಿಕರು ಇದ್ದಕ್ಕಿದ್ದಂತೆ ಧರಣಿ ಸತ್ಯಾಗ್ರಹ ಮಾಡಿ ಇವತ್ತು ನಮ್ಮನ್ನು ಹೊರಗಡೆ ಹಾಕಿದ್ದಾರೆಂದು ಹೇಳಿದರು. ನಾನು ಹೋಗಿ ಪರಿಸ್ಥಿತಿಯನ್ನು ಅವಲೋಕನ ಮಾಡಿದಾಗ ಅಲ್ಲಿರುವ ಕಾರ್ಖಾನೆಯನ್ನು ರಾಜ್ಯ ಸರ್ಕಾರದ ಇನ್ನೊಂದು ಯೂನಿಟ್ ಎಂದು ದೊಡ್ಡಬಳ್ಳಾಪುರಕ್ಕೆ shift ಮಾಡಿದ್ದಾರೆ. ಈ ಕಾರ್ಖಾನೆಯನ್ನು ಏಕೆ ಮುಚ್ಚಿದ್ದಾರೆಂದರೆ, ಇದನ್ನು ಮುಚ್ಚಿ ಆ ಜಾಗವನ್ನು ಒಂದು ಅಪಾರ್ಟ್‌ಮೆಂಟ್‌ನವರಿಗೆ ಮಾರಲು ಹೊರಟಿದ್ದಾರೆ. ಫಲವತ್ತಾದ ರೈತರ ಭೂಮಿಯನ್ನು ತೆಗೆದುಕೊಳ್ಳುವುದು ಒಂದು ಕಡೆ, ಇಲ್ಲಿ ಕಾರ್ಖಾನೆ ಜಾಗವನ್ನು ಅಪಾರ್ಟ್‌ಮೆಂಟ್‌ನವರಿಗೆ ಕೊಡುವುದು. ಅಲ್ಲೂ ಬಲವಂತವಾಗಿ ಭೂಮಿ ಹೋಯಿತು, ಇಲ್ಲೂ ಭೂಮಿ ಹೋಗಿ ಬಹುಮಹಡಿಯ ಕಟ್ಟಡಗಳು ಬರುತ್ತವೆ. ಈ ಸ್ಥಿತಿಯಲ್ಲಿ ಬೆಂಗಳೂರು ನಗರದಲ್ಲಿ definet ಆಗಿರುವ ಕೈಗಾರಿಕೆಗಳ ಬಗ್ಗೆ ಲೆಕ್ಕ ಮಾಡಿ, ಆ ಕಾರ್ಖಾನೆಯನ್ನು ಅಲ್ಲೇ, ಕೈಗಾರಿಕೆ ವಲಯವನ್ನು ಏಕೆ ಸ್ಥಾಪನೆ ಮಾಡಬಾರದು? ಅದರ ಬಗ್ಗೆ ಚಿಂತನೆ ಮಾಡಬೇಕು. ದಿವಂಗತ ದೇವರಾಜ ಅರಸುರವರ ಕಾಲದಲ್ಲಿ ಸಣ್ಣಪುಟ್ಟ ರೈತರಿಗೆ security ಇತ್ತು. ತರಕಾರಿ, ಸೊಪ್ಪು ಬೆಳೆಯುತ್ತಿದ್ದವರಿಗೆ ಜಮೀನು ವಶಪಡಿಸಿಕೊಳ್ಳಬಾರದು ಎಂದು ಇತ್ತು. ಆದರೆ, ಅವರು ಇವತ್ತು ಬಾಯಿ ಇಲ್ಲದೆಯೇ ಬೀದಿಗೆ ಇಳಿದು ಹೋರಾಟ ಮಾಡಬೇಕಾದ ಸ್ಥಿತಿಯಾಗಿದೆ. ರೈತರ ಬಗ್ಗೆ ಕಳಕಳಿ ಇರುವ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡುತ್ತೇನೆ, ದಯವಿಟ್ಟು ಆ ರೈತರಿಗೆ ರಕ್ಷಣೆ ಕೊಡಿ. ಏಕೆಂದರೆ ಉದ್ಯೋಗ ಕೊಡಲು ಆಗುವುದಿಲ್ಲ. ಸಣ್ಣ ಪುಟ್ಟ ಜಾಗವನ್ನೇನು ಅವರು ಕಳೆದುಕೊಂಡು ಹಣ ಪಡೆಯುತ್ತಾರೆ ಅದರಿಂದ

ಒಂದು ಕಾರು, ಮನೆಯನ್ನು ತೆಗೆದುಕೊಳ್ಳಬಹುದು. ಆದರೆ, ಅವರ ಬದುಕನ್ನು ಕೊಡಲು ಸಾಧ್ಯವಾಗುವುದಿಲ್ಲ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಬಹಳ ಮುಖ್ಯವಾದ ಅಂಶವೇನೆಂದರೆ, ಇವತ್ತು ಶಿಕ್ಷಣ ಬಹಳ ದುಬಾರಿಯಾಗಿದೆ. Health and education have become very costly. ಕೇವಲ ಬೆಂಗಳೂರಿನಲ್ಲಿ ಅಲ್ಲ, ಇಡೀ ರಾಜ್ಯದಲ್ಲಿ ಇದು ಆಗಿದೆ. ಜಾರ್ಜ್‌ರವರು ಮಾತನಾಡುತ್ತಾ ಹೇಳುತ್ತಿದ್ದರು. ಇವತ್ತು ಯಶಸ್ವಿನಿಯಾಗಲಿ, ಇ.ಎಸ್.ಐ. ಕಾರ್ಡ್ ಇರಬಹುದು, ಅಸಂಘಟಿತ ವಲಯಕ್ಕೆ ಮಾಡಿರುವ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ಕೆಲಸ ಸರ್ಕಾರದಿಂದ ಆಗಬೇಕು. ಇಲ್ಲದಿದ್ದರೆ ಬೆಳಗ್ಗೆ ಎದ್ದ ತಕ್ಷಣ ಮುಖ್ಯಮಂತ್ರಿಯವರ, ಪ್ರಧಾನ ಮಂತ್ರಿಯವರ ಪರಿಹಾರ ನಿಧಿಯಿಂದ ಹಣ ಕೊಡಿಸಿ, ನರ್ಸಿಂಗ್ ಹೋಂಗಳಿಗೆ ಹೇಳಿ ಕಡಿಮೆ ಮಾಡಿಸಿ ಎಂದು ಜನಸಾಮಾನ್ಯರು ಬರುತ್ತಾರೆ. ಒಂದು ಸಣ್ಣ ಕಾರಣಕ್ಕೂ 50–60 ಸಾವಿರ ರೂ. ಒಂದು ಡೆಲಿವರಿಗೂ 25 ಸಾವಿರ ರೂ, 50 ಸಾವಿರ ರೂ. ಕೊಡಬೇಕು. ನಾವು ಯಾವ ಸ್ಥಿತಿಗೆ ಬಂದಿದ್ದೇವೆ? 2000 ದಲ್ಲಿ ಇಡೀ ದೇಶವನ್ನು, ವಿಶ್ವವನ್ನು ಆರೋಗ್ಯಕರವಾಗಿ ಮಾಡಬೇಕೆಂಬ ಗುರಿ ಇತ್ತು, ಅದನ್ನು ಸಾಧನೆ ಮಾಡಿದ್ದೇವೆಯೇ? ಖಂಡಿತಾ ಇಲ್ಲ. ಆರೋಗ್ಯ ಸಚಿವರು ಇಲ್ಲಿ ಕುಳಿತಿಲ್ಲ. ನಮಗೆ ಹಾಜರಾತಿಯನ್ನು ಕಡ್ಡಾಯ ಮಾಡುತ್ತೀರಿ. ಬೆಳಗ್ಗೆ ಸಂಜೆ ಇರಬೇಕೆಂದು ಮಾಡುತ್ತೀರಿ. ಮಾನ್ಯ ಸಚಿವರುಗಳು ಕಛೇರಿಗಳಿಗೂ ಕಡ್ಡಾಯವಾಗಿ ಹಾಜರಾಗುವಂತೆ ಮಾಡಿ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಏಕೆಂದರೆ, ಎಷ್ಟೋ ಸಾರಿ ನಾವು ಸಚಿವರನ್ನು ಭೇಟಿ ಮಾಡಲಿಕ್ಕೆ ಹೋದಾಗ ಅವರು ಇರುವುದಿಲ್ಲ. ಅವರು ಎಲ್ಲಿ ಇರುತ್ತಾರೋ? ಗೊತ್ತಿಲ್ಲ. ನಾವು ಹೇಗೆ ಅವರನ್ನು ಭೇಟಿ ಮಾಡಿ ನಮ್ಮ ಸಮಸ್ಯೆ ಹೇಳುವುದು? ಮಾನ್ಯ ಶ್ರೀರಾಮುಲುರವರು ಇದೇ ಸಭೆಯಲ್ಲಿ ಬೆಂಗಳೂರು ನಗರದ ಆಸ್ಪತ್ರೆಗಳಿಗೆ ಸಂಬಂಧಿಸಿದಂತೆ ನಗರದ ಶಾಸಕರ ಸಭೆಯೊಂದನ್ನು ಕರೆಯುತ್ತೇನೆಂದು ಹೇಳಿದ್ದರು. ಆದರೆ ಅವರು ಇದುವರೆಗೂ ಅಂತಹ ಸಭೆ. ಕರೆದಿಲ್ಲ. ನಮ್ಮಲ್ಲಿ ಇರುವುದೊಂದು ಕೆ.ಸಿ.ಜನರಲ್ ಆಸ್ಪತ್ರೆ. ಅಲ್ಲಿನ ICUಗೆ

ಹೋದರೆ, ಅಲ್ಲಿ ಜನ ಪ್ರವಾಹವೇ ಇರುತ್ತದೆ. ಅಲ್ಲಿಗೆ ಇಡೀ ರಾಜ್ಯದಿಂದ patients ಬಂದಿರುತ್ತಾರೆ. ಇಲ್ಲಿಯ ICUಗೆ ಇಷ್ಟೆಲ್ಲಾ ಜನರನ್ನು ನಿಭಾಯಿಸುವ ಶಕ್ತಿ ಇರುವುದಿಲ್ಲ. ಬಡವರ ಆರೋಗ್ಯ ಸ್ಥಿತಿ ಉತ್ತಮವಾಗಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ತಾವು ಎರಡು ಬಾರಿ ಈ ಸಭೆಯಲ್ಲಿ BPL Card ಅನ್ನು ಕಡ್ಡಾಯ ಮಾಡುವುದಿಲ್ಲ ಎಂದು ಹೇಳಿದಿರಿ. ಯಾವ ಸೌಲಭ್ಯವನ್ನು ತೆಗೆದುಕೊಳ್ಳಲಿಕ್ಕೂ ಈಗ BPL Card ಅನ್ನೇ ಕೇಳುತ್ತಿದ್ದಾರೆ. ಬೆಂಗಳೂರಿನಲ್ಲಿ ಬಡವರು ಇಲ್ಲವೇ? ಬೆಂಗಳೂರಿನ ಬಡವರ ಸ್ಥಿತಿ ಏನಾಗಬೇಕು? ಈಗ BPL Cards ಕೊಡುತ್ತಿಲ್ಲ. ಹೀಗಿರುವಾಗ OAP ಆಗಲಿ, WP ಆಗಲಿ, ಯಾವುದೇ ಸರ್ಕಾರಿ ಯೋಜನೆಗಳ ಸೌಲಭ್ಯ ಪಡೆಯಲಿಕ್ಕೂ ಸಾಧ್ಯವಾಗುತ್ತಿಲ್ಲ. ಇಂತಹ ಸ್ಥಿತಿ ಬಂದಿದೆ. ಇನ್ನು ಭಾಗ್ಯಲಕ್ಷ್ಮಿ ಬಾಂಡ್‌ಗಳ ವಿತರಣೆಯಂತೂ ಒಂದು ವರ್ಷದಿಂದ ನೆನೆಗುದಿಗೆ ಬಿದ್ದಿದೆ. ಮಾನ್ಯ ಸಚಿವರಾದ ನರೇಂದ್ರಸ್ವಾಮಿಯವರು ಸದನದಲ್ಲಿಲ್ಲ. ಇಂತಹ ಒಳ್ಳೆಯ ಕಾರ್ಯಕ್ರಮವೊಂದನ್ನು ನೀವು ಶುರು ಮಾಡಿದಿರಿ. ಆದರೆ ಆ ಕಾರ್ಯಕ್ರಮವನ್ನು ಸಮರ್ಪಕವಾಗಿ ಏಕೆ ಜಾರಿ ಮಾಡುತ್ತಿಲ್ಲ? ಐ.ಎ.ಎಸ್. ಅಧಿಕಾರಿಗಳೂ ಸೇರಿದಂತೆ ಎಷ್ಟೊಂದು ಜನ ಅಧಿಕಾರಿಗಳು ನಿಮ್ಮಲ್ಲಿದ್ದಾರೆ. ಆದರೂ ಏಕೆ ಕಾರ್ಯಕ್ರಮಗಳು effective ಆಗಿ ಜಾರಿಯಾಗುತ್ತಿಲ್ಲ? ಆಡಳಿತ ಹೇಗಿದೆ ಎಂಬುದಕ್ಕೆ ಉದಾಹರಣೆಯೊಂದನ್ನು ಕೊಡಬಯಸುತ್ತೇನೆ. ಮಾನ್ಯ ಸಹಕಾರ ಸಚಿವರಾದ ಸವದಿಯವರು ಬೆಳಗಾಂ ಅಧಿವೇಶನದಲ್ಲಿ ಭರವಸೆಯೊಂದನ್ನು ಕೊಟ್ಟರು. ಸಹಕಾರ ಇಲಾಖೆಯವರು ಸಿ.ಐ.ಡಿ. ತನಿಖೆಗೆ ಆದೇಶ ಮಾಡಿದರು. ಮಾನ್ಯ ಮುಖ್ಯಮಂತ್ರಿಗಳು ಸದಸ್ಯರಿಗೆ ಅನ್ಯಾಯವಾಗುವುದಿಲ್ಲ ಎಂದು ಹೇಳಿದ್ದರು. ಆದರೆ ಇವತ್ತು ಏನಾಗುತ್ತಿದೆ? ಇಂದು ಅದು ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತಿದೆ. ಅಂದು ಅದು ನಾನು ಪ್ರತಿನಿಧಿಸುತ್ತಿದ್ದ ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿತ್ತು. ನಕಲಿ ಸದಸ್ಯರು ಇವತ್ತು ಅನಾಮಧೇಯರಾಗಿ ಮನೆಗಳನ್ನು ಕಟ್ಟುತ್ತಿದ್ದಾರೆ. ಮಹಾನಗರ ಪಾಲಿಕೆ alienated landಗೆ ಕಂದಾಯ ಕಟ್ಟಿಸಿಕೊಂಡು, ಲೇಔಟ್ ಆಗಿರುವುದುಕ್ಕೆ ಇವತ್ತು ಖಾತೆ–

ಕಂದಾಯ ಮಾಡಿಕೊಟ್ಟಿದ್ದಾರೆ. ಇವತ್ತು ಅನಾಯಾಸವಾಗಿ ಅಲ್ಲಿ buildings ಬರುತ್ತಿದೆ. ಪೋಲೀಸ್ ಇಲಾಖೆಗೆ ಹೇಳಿದರೂ ಆಗುತ್ತಿಲ್ಲ. ಪಟ್ಟಭದ್ರ ಹಿತಾಸಕ್ತಿಗಳು ಅಥವಾ land grabbers ಎಷ್ಟು ಪ್ರಬಲರಾಗಿದ್ದಾರೆ ಎಂಬುದು ಇದರಿಂದ ಗೊತ್ತಾಗುತ್ತದೆ. ಸಂಬಂಧಪಟ್ಟ ಗೃಹ ಇಲಾಖೆ ಮತ್ತು ಕಾರ್ಪೊರೇಷನ್‌ರವರಿಗೆ ಸೂಚನೆ ಕೊಟ್ಟು, ಖಾತೆ ಮಾಡುತ್ತಿರುವುದನ್ನು ತೆಗೆದು ಹಾಕುತ್ತೇವೆಂದು ಹೇಳಿದ್ದಿರಿ, ಆದರೆ ಅದು ಇದುವರೆಗೂ ಆಗಿರುವುದಿಲ್ಲ. ಬೆಂಗಳೂರು ನಗರದಲ್ಲಿ ಯಾವ್ಯಾವ ರೀತಿಯಲ್ಲಿ fradu ಗಳು ಆಗುತ್ತಿದೆ ಎನ್ನುವುದಕ್ಕೋಸ್ಕರ ಇದನ್ನು ಉದಾಹರಣೆಯಾಗಿ ನಿಮಗೆ ನಾನು ಹೇಳುತ್ತಿದ್ದೇನೆ. ಅರಣ್ಯ ಇಲಾಖೆ ಬಗ್ಗೆ ಹೇಳುವುದಾದರೆ, ಇವತ್ತು ಕರ್ನಾಟಕದಲ್ಲಿ ಅರಣ್ಯ ಸಂಪತ್ತು ನಾಶವಾಗುತ್ತಿದೆ. ಅರಣ್ಯ ಕ್ಷೀಣಿಸುತ್ತಿರುವುದರಿಂದ ಕಾಡಿನ ಮೃಗಗಳು ಇವತ್ತು ನಾಡಿಗೆ ಬರುತ್ತಿವೆ. ಇವತ್ತು ನಾವು ಅರಣ್ಯವನ್ನು ಉಳಿಸಿಕೊಳ್ಳದೇ ಹೋದರೆ ಮಳೆಯಾದರೂ ಹೇಗೆ ಬರುತ್ತದೆ? ಕೊಡಗಿನಲ್ಲಿ ಏನಾದರೂ ಕಾಡಿಲ್ಲದೆ, ಮಳೆ ಬರದೆ, ಕಾವೇರಿ ಏನಾದರೂ ಬತ್ತಿ ಹೋಗುತ್ತದೆ ಎನ್ನುವುದಾದರೆ ಬೆಂಗಳೂರು ನಗರದ ಜನತೆಯ ಸ್ಥಿತಿ ಏನಾಗುತ್ತದೆ? ಅಥವಾ ಇಡೀ ರಾಜ್ಯದ ಸ್ಥಿತಿ ಏನಾಗುತ್ತದೆ? ಅಥವಾ ತಮಿಳುನಾಡಿನ ಸ್ಥಿತಿ ಏನಾಗುತ್ತದೆ ಎಂಬುದನ್ನು ಯೋಚಿಸಿ. ಬಹಳ ದೂರದೃಷ್ಟಿಯನ್ನಿಟ್ಟುಕೊಂಡು ನಾವು ಯೋಜನೆಗಳನ್ನು ಮಾಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ನೀವು ನನಗೆ ಮಾತನಾಡಲು ಸಮಯ ಕೊಟ್ಟಿರತಕ್ಕದ್ದು ಬಹಳ ಕಡಿಮೆ. ನಾನು ಶಿಕ್ಷಣ ಇಲಾಖೆಗೆ ಸಲಹೆಯೊಂದನ್ನು ಕೊಡಬಯಸುತ್ತೇನೆ. ಶಿಕ್ಷಣ ಇಲಾಖೆಯವರು ಪ್ರತಿಯೊಂದು ಶಾಲೆಗಳಲ್ಲಿ advance ಆಗಿ ನವೆಂಬರ್ ಅಥವಾ ಡಿಸೆಂಬರ್ ತಿಂಗಳಿನಲ್ಲಿಯೇ ಮಕ್ಕಳಿಗೆ ಮುಂದಿನ ವರ್ಷದ ಬುಕ್ಸ್‌ಗೆ ದುಡ್ಡು ಕಳುಹಿಸಿಕೊಡಬೇಕೆಂದು ಆದೇಶ ಹೊರಡಿಸಿದ್ದಾರೆ. ಇದು ಮಾನ್ಯ ಅಧ್ಯಕ್ಷರ ಗಮನಕ್ಕೂ ಕೂಡ ಬಂದಿರಬಹುದು. ನಮ್ಮ ಹತ್ತಿರ fees ಕಟ್ಟಲಿಕ್ಕೆ ದುಡ್ಡಿಲ್ಲ, ನಾವು ಹೇಗೆ advance ಆಗಿ ಬುಕ್ಸ್‌ಗೆ ದುಡ್ಡು ಕಟ್ಟಲಿಕ್ಕೆ ಸಾಧ್ಯವಾಗುತ್ತದೆ ಎಂದು parents ಕೇಳುತ್ತಾರೆ. ದಯವಿಟ್ಟು ಶಿಕ್ಷಣ ಸಚಿವರು ಈ ಆದೇಶವನ್ನು

ವಾಪಸ್ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಇನ್ನು Donation ಬಗ್ಗೆ ಹೇಳುವುದಾದರೆ, ಇದೊಂದು ಸಾಮಾನ್ಯವಾದಂತಹ ಸಮಸ್ಯೆ. ಇದರ ಬಗ್ಗೆ ತಮಗೂ ಗೊತ್ತಿರಬಹುದು. ಬೆಂಗಳೂರು ನಗರದಲ್ಲಿ ಎಲ್ಲಿಗೆ ಹೋದರೂ ಇದರ ಹಾವಳಿ ಹೆಚ್ಚಾಗಿದೆ. ಕಡ್ಡಾಯವಾಗಿ ವಂತಿಗೆ ಪಡೆಯುವುದನ್ನು ನಿಯಂತ್ರಣ ಮಾಡಲಿಲ್ಲವೆಂದರೆ ಕಷ್ಟವಾಗುತ್ತದೆ. ಶಿಕ್ಷಣ ಸಂಸ್ಥೆಗಳು Five Star Hotel ಇದ್ದ ರೀತಿಯಲ್ಲಿ ಇರುತ್ತವೆ. ಸಾಮಾನ್ಯ ಜನರ ಕೈಗೆ ಇವು ಎಟಕುವುದಿಲ್ಲ. ಬೆಂಗಳೂರು ನಗರದಲ್ಲಿರುವ ಸರ್ಕಾರಿ ಶಾಲೆಗಳ ಅವಸ್ಥೆ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿದೆ. ನಗರದಲ್ಲಿರುವ ಬಹಳಷ್ಟು ಸರ್ಕಾರಿ ಶಾಲೆಗಳನ್ನು ಮುಚ್ಚತಕ್ಕ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ಇದರಿಂದ ಬಡ ಜನರು ಖಾಸಗಿ ಶಾಲೆಗಳಿಗೆ ಹೋಗುವಂತಾಗುತ್ತದೆ. ಖಾಸಗಿ ಶಾಲೆಗಳಲ್ಲಿ ಶುಲ್ಕ ನೀತಿ–ನಿಯಮದ ಬಗ್ಗೆ ಯಾವುದೇ ನಿಯಂತ್ರಣ ಇರುವುದಿಲ್ಲ. ಸುಮಾರು 886 ಸರ್ಕಾರಿ ಶಾಲೆಗಳನ್ನು ಮುಚ್ಚಲು ಶಿಫಾರಸ್ಸು ಮಾಡಲಾಗಿದೆ. ಸರ್ಕಾರ ಶಿಕ್ಷಣ ಸಂಸ್ಥೆಗಳ ಮೇಲೆ ನಿಯಂತ್ರಣ ಮಾಡಬೇಕು. ಇಡೀ ರಾಜ್ಯದ ಐದು ಕೋಟಿ ಜನ ಇವತ್ತು ಬಹಳಷ್ಟು ನಿರೀಕ್ಷೆ ಇಟ್ಟುಕೊಂಡು ನಮ್ಮನ್ನು ಇಲ್ಲಿಗೆ ಕಳುಹಿಸಿದ್ದಾರೆ. ಅವರ ನಿರೀಕ್ಷೆ ಹುಸಿಯಾಗದ ರೀತಿಯಲ್ಲಿ ನಾವು ನಡೆದುಕೊಳ್ಳೋಣ.

ಅಧ್ಯಕ್ಷರು : ದಯವಿಟ್ಟು ಬೇಗ ಮುಗಿಸಿ.

ಶ್ರೀ ನೆ.ಲ. ನರೇಂದ್ರಬಾಬು : ಎರಡೇ ನಿಮಿಷದಲ್ಲಿ ನನ್ನ ಮಾತನ್ನು ಮುಗಿಸಿಬಿಡುತ್ತೇನೆ. ಇನ್ನು ರಸ್ತೆಗಳ ಬಗ್ಗೆ ಹೇಳುವುದಾದರೆ, ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಮನವಿಯೊಂದನ್ನು ಮಾಡಿಕೊಳ್ಳುತ್ತೇನೆ. ತಾವು ಸಾಮಾನ್ಯವಾಗಿ ಹೈವೇಗಳಲ್ಲಿ ಓಡಾಡುತ್ತಿರುತ್ತೀರಿ. ಎಷ್ಟೊಂದು ಒಳ್ಳೊಳ್ಳೆಯ ರಸ್ತೆಗಳನ್ನು ನಾವು ಮಾಡುತ್ತಿದ್ದೇವೆ. ಆದರೆ ಅವುಗಳಲ್ಲಿ ಪಾದಚಾರಿಗಳಿಗೆ ಯಾವುದೇ ಸುರಕ್ಷತೆ ಇಲ್ಲ. Tree corridorsಗಳನ್ನು ನಾವು ಇವತ್ತು ನಾಶ ಮಾಡುತ್ತಿದ್ದೇವೆ. ಇವತ್ತು ವಿದ್ಯಾರ್ಥಿಗಳಿಗೆ ಸೈಕಲ್‌ಗಳನ್ನು ಕೊಡುತ್ತಿದ್ದೀರಿ. ಕೊಳ್ಳೇಗಾಲದಿಂದ ನಾನು ಬರುತ್ತಿರಬೇಕಾದರೆ ನಮ್ಮ ಕಣ್ಮುಂದೆಯೇ ವಿದ್ಯಾರ್ಥಿಯೊಬ್ಬನಿಗೆ ಬಸ್‌ವೊಂದು ಡಿಕ್ಕಿ ಹೊಡೆಯಿತು. ಎಗ್ಸಾಮ್‌ಗೆ

ಹೋಗುತ್ತಿದ್ದ ಆ ವಿದ್ಯಾರ್ಥಿಯ ಟಿಫನ್ ಕ್ಯಾರಿಯರ್ & ಪುಸ್ತಕ ಎಲ್ಲಾ ಚೆಲ್ಲಾಡಿ, ಆತ ರಕ್ತದ ಮಡುವಿನಲ್ಲಿ ಬಿದ್ದ. ಇಂದು ಸುರಕ್ಷತೆಯ ಅವಶ್ಯಕತೆ ತುಂಬಾ ಇದೆ. ನೀವು ನಮ್ಮನ್ನೆಲ್ಲಾ ಚೈನಾ ದೇಶಕ್ಕೆ ಕಳುಹಿಸಿದ್ದಿರಿ. ನಾನೂ ಸಹ ಚೈನಾ ದೇಶದಲ್ಲಿ ಕಂಡಿದ್ದೇನೆ. ಅಲ್ಲಿ ಸೈಕಲಿಸ್ಟ್‌ಗಳಿಗೆ, ಪಾದಚಾರಿಗಳಿಗೆ ಮತ್ತು two-wheelersಗೆ safety ensure ಮಾಡುತ್ತಾರೆ. ಈ ಬಗ್ಗೆ ನಾನು ಮೊನ್ನೆ ಕೇಂದ್ರದ ಸಚಿವರಾದ ಕಮಲನಾಥ್‌ರವರಿಗೂ ಸಹ ಹೇಳಿದೆ. ದಯವಿಟ್ಟು ದೂರದೃಷ್ಟಿಯನ್ನಿಟ್ಟುಕೊಂಡು ಕಾರ್ಯಕ್ರಮಗಳನ್ನು ಮಾಡಿದರೆ ಚೆನ್ನಾಗಿರುತ್ತದೆ. ಜನ ಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು ಯೋಜನೆ ರೂಪಿಸಿ. ದೊಡ್ಡ ದೊಡ್ಡ ಕಾರುಗಳಲ್ಲಿ ಅಥವಾ ಏರೋಪ್ಲೇನ್‌ಗಳಲ್ಲಿ ಓಡಾಡುವ ಯಾರೋ ಶ್ರೀಮಂತರನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಡಿ. ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತಾ, ಮುಂದಿನ ದಿನಗಳಲ್ಲಿಯಾದರೂ ನನಗೆ ಮಾತನಾಡಲು ಹೆಚ್ಚು ಅವಕಾಶ ನೀಡಬೇಕೆಂದು ಆಗ್ರಹಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರೆ : ಈಗ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ.

ಶ್ರೀ ಎ. ಮಂಜು : ದಯವಿಟ್ಟು ನನಗೆ ಅವಕಾಶ ಕೊಡಿ.

ಶ್ರೀ ಯು.ಟಿ. ಖಾದರ್ : ದಯವಿಟ್ಟು ನನಗೂ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ಸಮಯ ಸಾಕಷ್ಟು ಆಗಿದೆ. ನೀವು clarification ಕೇಳಲು ನಾನು ಅವಕಾಶ ಮಾಡಿಕೊಡುತ್ತೇನೆ. Please, ಸಹಕರಿಸಿ.

ಶ್ರೀ ಎ. ಮಂಜು : ದಯವಿಟ್ಟು ಎರಡು ನಿಮಿಷ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ಆಯಿತು, ಮಾನ್ಯ ಎ. ಮಂಜುರವರು ಮಾತ್ರ ಮಾತನಾಡಿ.

ಶ್ರೀ ಯು.ಟಿ. ಖಾದರ್ : ಮಾನ್ಯ ಅಧ್ಯಕ್ಷರೆ, ನಾನೇನು ತಪ್ಪು ಮಾಡಿದ್ದೇನೆ?

ಅಧ್ಯಕ್ಷರು : ನೀವು ಸಾಕಷ್ಟು ಮಾತನಾಡಿದ್ದೀರಿ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎ. ಮಂಜು (ಅರಕಲಗೂಡು) : ಸನ್ಮಾನ್ಯ ಅಧ್ಯಕ್ಷರೆ, Governor's speech ಮೇಲೆ ನಮ್ಮ ನಾಯಕರುಗಳೆಲ್ಲಾ ಎಲ್ಲಾ ಇಲಾಖೆಯ ಆಗು ಹೋಗುಗಳ ಬಗ್ಗೆ, ಸರ್ಕಾರದ ವೈಫಲ್ಯಗಳ ಬಗ್ಗೆ ಮಾತನಾಡಿದ್ದಾರೆ. ನಾನು ಅವರು ಮಾತನಾಡಿದ್ದನ್ನೇ ಮಾತನಾಡುವುದಕ್ಕೆ ಹೋಗುವುದಿಲ್ಲ. ಕೆಲವೊಂದು 2–3 ಅಂಶಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕಳೆದ ಬಾರಿ ಚುನಾವಣೆಯಲ್ಲಿ ಮಾನ್ಯ ಯಡಿಯೂರಪ್ಪನವರ ನೇತೃತ್ವದಲ್ಲಿ ಸರ್ಕಾರ ಬಂದಾಗ, ಆ ಪಕ್ಷದವರು ಒಂದು ಪ್ರಣಾಳಿಕೆಯನ್ನು ಹೊರಡಿಸಿದ್ದರು. ಅದರಲ್ಲಿ 'ಹೊಸ ಹಾದಿ' ಎಂಬ ಪ್ರೋಗ್ರಾಮ್‌ವೊಂದನ್ನು ಮಾಡಿ ಅದರಲ್ಲಿ ಐದು ಅಂಶಗಳನ್ನು ಹೇಳಿದ್ದರು. ಆಹಾರದ ಹಕ್ಕು, ಆರೋಗ್ಯದ ಹಕ್ಕು, ಶಿಕ್ಷಣದ ಹಕ್ಕು, ವಸತಿಯ ಹಕ್ಕು ಮತ್ತು ಶಾಂತಿ–ಸಾಮಾಜಿಕ ನ್ಯಾಯ ಹಕ್ಕು ಎಂಬ ಘೋಷಣೆಗಳನ್ನು ಮಾಡಿ, ಇದರ ಮುಖಾಂತರ ಮತ ಪಡೆದುಕೊಂಡು ಇವತ್ತು ಮುಖ್ಯಮಂತ್ರಿಯಾಗಿ ಇಲ್ಲಿ ಆಡಳಿತ ಮಾಡುತ್ತಿದ್ದೀರಿ. ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳುವುದಿಷ್ಟೇ. ಈ 'ಆಹಾರದ ಹಕ್ಕು' ಎಂದರೆ, ನಿಜವಾದಂತಹ ಹಳ್ಳಿಯಲ್ಲಿದ್ದಂತಹ ಬಡಪಾಯಿಗೆ ಅಕ್ಕಿ ದೊರಕುತ್ತಿದೆಯೇ? ಅದನ್ನು ಕೊಡುತ್ತಿದ್ದಾರೆಯೇ? ಬಿ.ಪಿ.ಎಲ್. ಕಾರ್ಡ್ ನಿಜವಾಗಿ ಸಿಗುತ್ತಿದೆಯೇ? ಸ್ಪೀಕರ್ ಕ್ಷೇತ್ರವೂ ಸೇರಿ, ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರವೂ ಸೇರಿ ಈ ಮಾತನ್ನು ನಾನು ಕೇಳುತ್ತಿದ್ದೇನೆ. ಇದರಲ್ಲಿ ಭಾರಿ ಅನ್ಯಾಯವಾಗಿರುವುದನ್ನು ನಾವು ನೋಡಿದ್ದೇವೆ. ಆದರೂ ಕೂಡ ಕಳೆದ ಪಾರ್ಲಿಮೆಂಟ್ ಚುನಾವಣೆ ಸಂದರ್ಭದಲ್ಲಿ ಓಟ್ ಹಾಕಿಕೊಳ್ಳುವ ಸಲುವಾಗಿ, ತಾತ್ಕಾಲಿಕವಾಗಿ ನೀವು ವಿತರಣೆಯನ್ನು ಮಾಡಿದಿರಿ, ಅದಾದ ಮೇಲೆ ಮತ್ತೆ ನಿಲ್ಲಿಸಿದಿರಿ. ಇವತ್ತು ಹಳ್ಳಿಗಳಲ್ಲಿ ಸೀಮೆಎಣ್ಣೆಗೆ ಇರಬಹುದು, ಅಕ್ಕಿಗೆ ಇರಬಹುದು, ತುಂಬಾ ತೊಂದರೆಯಾಗಿದೆ. ಇದರ ಬಗ್ಗೆ ಸರ್ಕಾರ ಕ್ರಮವನ್ನು ತೆಗೆದುಕೊಂಡಿಲ್ಲ. ಕೇಂದ್ರ ಸರ್ಕಾರ ಆರೋಗ್ಯಕ್ಕೆ ಏನೊಂದು ಹಣವನ್ನು ಕೊಟ್ಟಿದ್ದರು, ಆ

ಹಣವನ್ನೂ ಕೂಡ ಸಮರ್ಪಕವಾಗಿ ರಾಜ್ಯ ಸರ್ಕಾರ ಉಪಯೋಗಿಸಿಲ್ಲ. ಅದೂ ಕೂಡ ಇನ್ನು 63 ಕೋಟಿ ರೂ.ಗಳು ಬಾಕಿ ಉಳಿದಿದೆ. ಕೇಂದ್ರ ಸರ್ಕಾರದ ಹಣ ಅದು. ರಾಜ್ಯ ಸರ್ಕಾರದ್ದು ಇರಲಿ. ಇದಾದ ಮೇಲೆ 'ಆರೋಗ್ಯ ಹಕ್ಕು', ಮಾನ್ಯ ನರೇಂದ್ರಸ್ವಾಮಿಯವರು ಸದನದಲ್ಲಿ ಇಲ್ಲ. 'ಭಾಗ್ಯಲಕ್ಷ್ಮಿ' ಯೋಜನೆ ಮಾಡಿದ್ದೀರಿ. ಆ ಯೋಜನೆ ಅಡಿಯಲ್ಲಿ ಕೇವಲ ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ಕೊಟ್ಟಿದ್ದಾರೆಯೇ ಹೊರತು, ದುಡ್ಡು ಕೊಟ್ಟಿಲ್ಲ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ಇನ್ನೂ 800–1000 ಜನರಿಗೆ ದುಡ್ಡು ಕೊಟ್ಟಿಲ್ಲ, ಇವರ ಶಾಪ ಸರ್ಕಾರಕ್ಕೆ ತಗುಲುವುದಿಲ್ಲವೇ? ಏತಕ್ಕಾಗಿ ನೀವು ಈ ಬಗ್ಗೆ ನಿಮ್ಮ manifesto ದಲ್ಲಿ ಹಾಕಿದ್ದೀರಿ? ಹೆಣ್ಣುಮಕ್ಕಳ ಶಾಪ ನಿಮಗೆ ತಗುಲುವುದಿಲ್ಲವೇ? ನಾನು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುವುದೇನೆಂದರೆ, ನಾವು ಹೇಳಿರುವುದಲ್ಲ, ನೀವೇನು ಜನತೆಗೆ ಭರವಸೆಗಳನ್ನು ಕೊಟ್ಟಿದ್ದೀರಿ, ಅದನ್ನು ಈಡೇರಿಸಿ ಪುಣ್ಯ ಕಟ್ಟಿಕೊಳ್ಳಿ. ನೀವು ನಾವು ಮಾತನಾಡಿದರೆ, 'ಅಯ್ಯೋ, ವಿರೋಧ ಪಕ್ಷದವರು ಇದೇ ಹೇಳುವುದು' ಎನ್ನುವ ಭಾವನೆಯನ್ನು ಬಿಡಬೇಕು. ನೀವು ಒಪ್ಪಿಕೊಂಡಿರತಕ್ಕದ್ದನ್ನು implement ಮಾಡಿ, ನಿಮ್ಮ ಮಾತಿನ ಪ್ರಕಾರ ನೀವು ನಡೆದುಕೊಂಡು, ಜನತೆಗೆ ಕೊಟ್ಟಂತಹ ಆಶ್ವಾಸನೆ ಈಡೇರಿಸಿ. ಆರೋಗ್ಯ ಇಲಾಖೆಯಲ್ಲೂ ಸಹ ಕೇಂದ್ರ ಸರ್ಕಾರದ ಹಣವನ್ನು ನೀವು ಉಪಯೋಗಿಸಿಕೊಳ್ಳದೆ ಅದು ವಾಪಸ್ ಹೋಗಿದೆ. 'ಶಿಕ್ಷಣದ ಹಕ್ಕು', ನೀವು ಏನು ಕೊಟ್ಟಿದ್ದೀರಿ? ಈಗಾಗಲೇ ನನ್ನ ಸ್ನೇಹಿತರು ಶಿಕ್ಷಣದ ಬಗ್ಗೆ ಮಾತನಾಡಿದರು. ಮಾನ್ಯ ಶಿಕ್ಷಣ ಸಚಿವರು ಕಾನೂನೊಂದನ್ನು ಮಾಡಿದ್ದಾರೆ. ಅದಕ್ಕಾಗಿ ನಾವು ಅವರನ್ನು appreciate ಮಾಡಬೇಕಾಗಿದೆ. Teachers ಆಗಿರುವವರು ಯಾವುದೇ ಕಾರಣದಿಂದ ಆ ಇಲಾಖೆ ಬಿಟ್ಟು ಎಲ್ಲಿಗೂ ಹೋಗಬಾರದು ಎಂದು ಕಾನೂನು ಮಾಡಿದ್ದಾರೆ. ಅದಕ್ಕೆ ನಿಜವಾಗಿಯೂ ಕೂಡ ಅವರಿಗೆ ಧನ್ಯವಾದಗಳನ್ನು ಹೇಳಬೇಕು. ಅದು ಕೇವಲ ಮಾನ್ಯ ಕಾಗೇರಿಯವರು ನೋಡಿಕೊಳ್ಳುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಮಾತ್ರ ಅನ್ವಯಿಸುತ್ತದೆ. ಇದು Higher Education ಏನು ಮಾಡಿದ್ದಾರೆ ಎಂದರೆ

grant-in-aidನಲ್ಲಿ ಇದ್ದಂತಹ teachersಗೆ ವ್ಯವಸ್ಥಿತವಾಗಿ ಎಲ್ಲಾ ಇಲಾಖೆಗಳಿಗೂ ವರ್ಗ ಮಾಡಿದ್ದಾರೆ. ಆದರೆ Government Collegeನಲ್ಲಿದ್ದಂತಹ teachersಗಳನ್ನು ಮಾಡಿಲ್ಲ. ಕೇವಲ private institutionsನಲ್ಲಿ ಇರುವವರನ್ನು ಮಾತ್ರ ವಿವಿಧ ಇಲಾಖೆಗಳಿಗೆ ವರ್ಗ ಮಾಡಿದ್ದಾರೆ. ಇದಕ್ಕಾಗಿ ಅವರದೇ ಆದಂತಹ ವ್ಯಾಪಾರ ಮಾಡಿದ್ದಾರೆ. ಆ ಶಿಕ್ಷಣಕ್ಕೆ ಬೇರೆ ಕಾನೂನು, ಈ ಶಿಕ್ಷಣಕ್ಕೆ ಬೇರೆ ಕಾನೂನು ಎಂದರೆ, ಅದರ ಅರ್ಥವೇನು? ಇಲ್ಲಿ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುವುದಕ್ಕೆ ತೊಂದರೆಯಾಗಿರತಕ್ಕಂಥ grant-in-aid ಶಾಲೆ teachersಗಳನ್ನು ನೀವು ವಿಧಾನ ಸೌಧಕ್ಕೆ ಕರೆದುಕೊಂಡು ಬಂದು ಮಂತ್ರಿಗಳ ಹತ್ತಿರ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇನ್ನು ವಸತಿ ಹಕ್ಕಿನ ಬಗ್ಗೆ ಹೇಳುವುದಾದರೆ, ನೀವು ಎಷ್ಟು ಮನೆ ಕಟ್ಟಿದ್ದೀರಿ ಅಥವಾ ಎಷ್ಟು ಸೈಟುಗಳನ್ನು ಕೊಟ್ಟಿದ್ದೀರಿ? ನನ್ನ ಕ್ಷೇತ್ರದಲ್ಲಿ ಒಂದು ಸೈಟ್ ಕೂಡ ಕೊಟ್ಟಿಲ್ಲ. ಬೇರೆಯವರ ಕ್ಷೇತ್ರದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಪ್ರಕಾರ ಇಡೀ ರಾಜ್ಯದಲ್ಲಿ ಇವರು ಅಧಿಕಾರಕ್ಕೆ ಬಂದ ಮೇಲೆ ಒಂದು ಸೈಟ್ ಕೂಡ ಕೊಟ್ಟಿಲ್ಲ. ಇದು ದಾಖಲೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇದನ್ನೆಲ್ಲಾ ನಾವು ಹೇಳಿರುವುದಲ್ಲ, ಅವರು ಹೇಳಿರುವುದು. ಇದರ ಜೊತೆಗೆ ನೀವು ಏನು ಮಾಡಿದ್ದೀರಿ, KIADB ಲ್ಯಾಂಡ್ ನಲ್ಲಿ 2002 ರಿಂದ 2008ರವರೆಗೆ, 6 ವರ್ಷಗಳ ಕಾಲದಲ್ಲಿ 4230 ಎಕರೆ de–notification ಆಗಿತ್ತು, ಪಾಪ ನಮ್ಮ ಮಂತ್ರಿಗಳಾದ ಕಟ್ಟಾ ಸುಬ್ರಮಣ್ಯನಾಯ್ಡುರವರು ಈಗ ಇಲ್ಲ. 2008ರಿಂದ ಇಲ್ಲಿಯವರೆಗೆ 4300 ಎಕರೆ de–notify ಮಾಡಿದ್ದೀರಲ್ಲಾ? ನಾವು ಕ್ಲೀನ್ ಆಗಿದ್ದೇವೆ ಎಂದು ಹೇಗೆ ಹೇಳುತ್ತೀರಾ? ನಾವೇನೂ ಮಾಡಿಲ್ಲ, ಮೋಸವನ್ನೇ ಮಾಡಿಲ್ಲ ಎಂದು ಹೇಳಿದರೆ ರೆಕಾರ್ಡ್ ಹೇಳುವುದಿಲ್ಲವೇ? ನಮಗೆ ಈ ಸದನದಲ್ಲಿ ಮಾತನಾಡುತ್ತಿರುವುದನ್ನು ನೋಡಿದರೆ ಏನು ಅನಿಸುತ್ತದೆಂದರೆ, ರೇವಣ್ಣನವರು ಮುಖ್ಯಮಂತ್ರಿಗಳ ಮೇಲೆ ಹೇಳುವುದು, ಮುಖ್ಯಮಂತ್ರಿಗಳು ರೇವಣ್ಣನವರ ಮೇಲೆ ಹೇಳುವುದು ಅಷ್ಟೆ, ಈ ರಾಜ್ಯದ ಅಭಿವೃದ್ಧಿಯ ಬಗ್ಗೆ ಆಗಲಿ ಇನ್ನೊಂದರ ಬಗ್ಗೆ ಆಗಲಿ ಚರ್ಚೆಯೂ

ಮಾಡುತ್ತಿಲ್ಲ, ಅದು ಆಗುತ್ತಲೂ ಇಲ್ಲ. ಬಹುಶಃ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದಿಷ್ಟೆ, ಇರಿಗೇಷನ್ ಬಗ್ಗೆ ಹೇಳುವುದಾದರೆ ಈ ಕಾವೇರಿ ನಿಗಮ ಇದೆಯೋ ಇಲ್ಲವೋ ಎನ್ನುವುದು ಗೊತ್ತಿಲ್ಲ. ಈ ಹಳೇ ಮೈಸೂರು, ಕರ್ನಾಟಕ ಇವರಿಗೆ ಬೇಡವೇ ಬೇಡ, ಓಟು ಹಾಕಿಲ್ಲವೆಂತಲೇ? ದಯವಿಟ್ಟು ಬೇಜಾರು ಮಾಡಿಕೊಳ್ಳಬೇಡಿ. ನಾವು ಯಡಿಯೂರಪ್ಪನವರನ್ನು ಕಂಡಂಥದ್ದು, ತಾವು ಇಡೀ ರಾಜ್ಯವನ್ನು ಸುತ್ತಾಡಿದ್ದೀರಿ, ನೀವು ಕೂಡ ಮಂಡ್ಯ ಜಿಲ್ಲೆಯಿಂದ ಬಂದಿರುವವರು, ಇನ್ನು 130 ಕೋಟಿ ರೂಪಾಯಿ ಕಾವೇರಿ ನಿಗಮಕ್ಕೆ ಬಾಕಿ ಇದೆ. ನನ್ನ ಕ್ಷೇತ್ರದಲ್ಲಿ ಲಿಫ್ಟ್ ಇರಿಗೇಷನ್ ಮಂಜೂರಾಗಿರುವುದನ್ನು ನಿಲ್ಲಿಸಿದ್ದಾರೆ. ಬಹುಶಃ ಈಗ ನಮ್ಮ ಮನವಿ ಮೇಲೆ ನಮ್ಮ ಕಾವೇರಿ ಅಣೆಕಟ್ಟೆಯಲ್ಲಿ, ಕಟ್ಟೇಪುರದಕಟ್ಟೆಯಲ್ಲಿ ಅವರು modernization ಮಾಡಿರುವುದಕ್ಕೆ, ಸಂಬಂಧಪಟ್ಟ ಜಲಸಂಪನ್ಮೂಲ ಮಂತ್ರಿ ಹಾಗೂ ಇತರೆ ಮಂತ್ರಿಗಳಿಗೆ ಈ ಸಂದರ್ಭದಲ್ಲಿ ಕೃತಜ್ಞತೆಗಳನ್ನು ಹೇಳುತ್ತೇನೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ತಮ್ಮ ಮಂತ್ರಿ ಸಹಪಾಠಿಗಳು ಕಚೇರಿಯಲ್ಲಿದ್ದು ಎಲ್ಲಾ ಶಾಸಕರು ಒಂದೇ ಎನ್ನುವ ದೃಷ್ಟಿಯಿಂದ ನೋಡಿಕೊಳ್ಳುವ ವ್ಯವಸ್ಥೆಯನ್ನು ಕಲ್ಪಿಸಬೇಕು. ಅಧಿಕಾರ ಇರುತ್ತದೆ, ಹೋಗುತ್ತದೆ; ಯಾರಿದ್ದಾಗ ಏನಾಯಿತೆಂಬುದು ಮಾತ್ರ ಉಳಿದುಕೊಳ್ಳುವುದು. ನಮ್ಮ PWD ಮಂತ್ರಿಗಳಿಲ್ಲ, ಕಳೆದ ಸಾರಿ ಪ್ರಮಾಣವಾಗಿ ಮಾಡಿಕೊಡುತ್ತೇನೆಂದು ಹೇಳಿದರು. K-SHIP 2nd stage ರಸ್ತೆಯನ್ನು ತೆಗೆದುಕೊಂಡು ಹೋಗಿ ಮುಖ್ಯಮಂತ್ರಿಗಳ ಕ್ಷೇತ್ರಕ್ಕೆ ಹಾಕಿಕೊಂಡರಲ್ಲ, ನಾವು ಎಲ್ಲಿ ಹೋಗಬೇಕು? ಈ ಸದನದಲ್ಲಿ ಒಪ್ಪಿಕೊಂಡಿರುವುದು ರೆಕಾರ್ಡ್‌ನಲ್ಲಿದೆ, ಸದನದಲ್ಲಿ ಮಂತ್ರಿಗಳು ಮಾತನಾಡುವುದಕ್ಕೆ ಬೆಲೆಯೇ ಇಲ್ಲವೆ? ಹೇಳಿರುವುದನ್ನಾದರೂ ಇಂಪ್ಲಿಮೆಂಟ್ ಮಾಡಬೇಕಲ್ಲ? 5054ನಲ್ಲಿ ಇಡೀ ರಾಜ್ಯಕ್ಕೆಲ್ಲಾ ಹಣ ಕೊಟ್ಟಿದ್ದಾರೆ ಹಾಗಾದರೆ ಅರಕಲಗೂಡು ತಾಲ್ಲೂಕು ಈ ರಾಜ್ಯದಲ್ಲೇ ಇಲ್ಲವೇ? ಒಂದು ರೂಪಾಯಿ ಕೊಟ್ಟಿಲ್ಲ, ನಾನು ಬಿಜೆಪಿ ಬಿಟ್ಟೆ ಎಂದು. ಇನ್ನೂ ತಾವು ದ್ವೇಷ ಸಾಧಿಸುತ್ತಿದ್ದೀರಾ? ಸಾಯುವವರೆಗೆ ನೀವೇ

ಇರುತ್ತೇವೆಂದು ತಿಳಿದುಕೊಂಡಿದ್ದೀರಾ? ಮಾನ್ಯ PWD ಮಂತ್ರಿಗಳೆ, ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ, ನನಗೆ ವಿಶೇಷವಾಗಿ ನನಗೇನೂ ಬೇಡ, ಎಲ್ಲರಿಗೂ ಕೊಟ್ಟಂಥ ರೀತಿಯಲ್ಲಿ ನಮಗೂ ಕೊಡುವಂಥ ವ್ಯವಸ್ಥೆ ಮಾಡಬೇಕು. ನೀವು ನಿಮ್ಮನ್ನು ಹೊಗಳುವುದು ಇದ್ದೇ ಇರುತ್ತದೆ, ಬೇರೆಯವರು ಕೆಲಸ ಮಾಡಿದ್ದಾರೆಂದು ಹೊಗಳಬೇಕು, ಆ ಭಾವನೆಯನ್ನು ನೀವು ಇಟ್ಟುಕೊಂಡು ಕೆಲಸ ಮಾಡಬೇಕು, ಆಗ ಮಾತ್ರ ಹೆಸರು ಬರುತ್ತದೆ ಆ ಉದಾರತನವನ್ನು ಇಟ್ಟುಕೊಳ್ಳಿ. ನಾಳೆ ಬಜೆಟ್ ಮಂಡನೆ ಇರುವುದರಿಂದ, ರೈತರಪರ ಬಜೆಟ್ ಮಾಡಿ ರೈತರಿಗೆ ಒಳ್ಳೆಯದನ್ನು ಮಾಡಿ ಎಂದು ನನಗೆ ಇದುವರೆಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ವಂದನೆಗಳು.

ಶ್ರೀ. ಯು.ಟಿ. ಖಾದರ್ [ಮಂಗಳೂರು] : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಬಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ, ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ, ಏಕೆಂದರೆ, ಎಲ್ಲರೂ ವಿಶೇಷವಾಗಿ ಮಾತನಾಡಿದ್ದಾರೆ, ಎರಡೇ ಮಾತುಗಳಲ್ಲಿ ನನ್ನ ಮಾತುಗಳನ್ನಾಡುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ಕಡೆ ಸಮಾರಂಭದಲ್ಲಿ ಮಾತನಾಡುತ್ತಾ, ಶಾಸಕರೆಲ್ಲಾ ಉತ್ತಮವಾಗಿ ಕೆಲಸ ಮಾಡಬೇಕು, ಅವರವರ ಕ್ಷೇತ್ರಕ್ಕೆ ಹೋಗಿ ಜನಸೇವೆ ಮಾಡಬೇಕೆನ್ನುವ ಮಾತನ್ನು ಹೇಳಿದ್ದಾರೆ, ಆ ಮಾತುಗಳನ್ನು ಕೇಳಿದಾಗ ಬಹಳ ಸಂತೋಷವಾಗುತ್ತದೆ. ಆದರೆ ನಾವು ಇಲ್ಲಿ ನಿಮ್ಮ ಮುಖಾಂತರ ಸರ್ಕಾರವನ್ನು ಕೇಳುವುದೇನೆಂದರೆ, ಯಾವರೀತಿ ನಾವು ಕ್ಷೇತ್ರಕ್ಕೆ ಕೆಲಸ ಮಾಡುವುದೆಂದು. ಬಹುಶ: ಒಂದು ವರ್ಷದಲ್ಲಿ ಶಾಸಕರ ನಿಧಿಯಲ್ಲಿ ಒಂದು ಕೋಟಿ ರೂಪಾಯಿ ಬರಬೇಕಾಗಿತ್ತು, ಸರಿಯಾದ ಅನುದಾನ ಇದುವರೆವಿಗೂ ಬಂದಿಲ್ಲ. ಅನುದಾನ ಬರದೆ ಅಲ್ಲಿಯ ಜಿಲ್ಲಾಧಿಕಾರಿ ಇಂಜಿನಿಯರ್‌ಗೆ ಎಸ್ಟಿಮೇಟ್ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ನಾವು ಜನರ ಹತ್ತಿರ ಹೋದಾಗ ಅವರು ಹೇಳಿದ ಸಣ್ಣಪುಟ್ಟ ಕೆಲಸ ಮಾಡುವಾಗ ನಾವು ಯಾವರೀತಿ ಸ್ಪಂದಿಸಬೇಕೆಂಬುದನ್ನು ತಾವು ಆಲೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ನಮ್ಮ ಮಲೆನಾಡು

ಪ್ರದೇಶಾಭಿವೃದ್ಧಿ ನಿಧಿಯಲ್ಲಿ ಇಡೀ ವರ್ಷದಲ್ಲಿ ಒಂದು ನಯಾಪೈಸೆಯನ್ನು ಕೊಟ್ಟಿಲ್ಲ. ಒಂದು ವರ್ಷ ಮುಗಿದ ತಕ್ಷಣ ಕರ್ನಾಟಕ ವಿಕಾಸ ಕಾರ್ಯಕ್ರಮವನ್ನು ಮಾಡಿದಿರಿ, ಒಂದು ಕಡೆ ಖಜಾನೆ ತುಂಬಿ ತುಳುಕುತ್ತಿತ್ತು, ಕರ್ನಾಟಕ ವಿಕಾಸ ಯೋಜನೆಯಲ್ಲಿ ಮಲೆನಾಡಿಗೆ ಕನಿಷ್ಠ 30–40 ಲಕ್ಷ ರೂಪಾಯಿ ಸಿಗಬಹುದೆಂದು ಭಾವಿಸಿದ್ದೆವು. ಆದರೆ ಇವತ್ತು ನಾವು ಬಹಳ ಬೇಸರದಿಂದ ಹೇಳಬೇಕಾಗಿದೆ, ಒಂದೇ ಒಂದು ರೂಪಾಯಿಯನ್ನು ಮಲೆನಾಡಿಗೆ ಆ ಯೋಜನೆಯ ಮೂಲಕ ಆ ಜನರಿಗೆ ಮುಟ್ಟಿಸುವುದಕ್ಕಾಗಲಿಲ್ಲವೆಂದು ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಇವತ್ತು ಜಿಲ್ಲಾ ಪಂಚಾಯಿತಿಗೂ ಕೂಡ ಅನುದಾನವಿಲ್ಲ; ತಾಲ್ಲೂಕು ಪಂಚಾಯಿತಿಗೆ ಅನುದಾನವಿಲ್ಲ, ಯಾವರೀತಿ ಜನರ ಸಮಸ್ಯೆಯನ್ನು ಬಗೆಹರಿಸುವುದು? ಕಳೆದ ವರ್ಷ ಆಗಿದ್ದು ಆಗಿಹೋಯಿತು. ಮುಂದಿನ ವರ್ಷದ ಸಂದರ್ಭದಲ್ಲಿ ಶಾಸಕರ ನಿಧಿ 1 ಕೋಟಿ ರೂ. ಇರುವುದನ್ನು ಕನಿಷ್ಠ 2 ಕೋಟಿ ರೂಪಾಯಿಯನ್ನಾದರೂ ಮಾಡಬೇಕು. ಏಕೆಂದರೆ, ಇವತ್ತು 1 ಕಿ.ಮೀ. ರಸ್ತೆ ಮಾಡಬೇಕಾದರೆ ಕನಿಷ್ಠ 10 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಆದ ಕಾರಣ ಅದನ್ನು 2 ಕೋಟಿ ರೂಪಾಯಿಗಳಿಗೆ ಹೆಚ್ಚಿಸುವುದಾಗಬೇಕು. ನಮ್ಮ ಮಲೆನಾಡು ಇರಲಿ, ಕರಾವಳಿ ಇರಲಿ, ಇನ್ನಿತರ ಬೋರ್ಡುಗಳಿಗೆ ಅನುದಾನ ಬಿಡುಗಡೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಕಾನೂನು ಸುವ್ಯವಸ್ಥೆಯ ಬಗ್ಗೆ ಹೇಳುವುದಾದರೆ, ಇವತ್ತು ಉತ್ತರ ಕನ್ನಡ ಜಿಲ್ಲೆಗೆ ಉತ್ತಮರಾದ DC, SP, IG ಹಾಕಿರುವುದಕ್ಕೆ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಆದರೆ ಇವತ್ತು ಪೊಲೀಸ್ ಅಧಿಕಾರಿಗಳು, ಯಾರನ್ನು ನಿಯಂತ್ರಣದಲ್ಲಿಡಬಹುದು? Habitual offender ಗಳನ್ನು, ರೌಡಿಗಳನ್ನು, ಸಮಾಜಘಾತುಕ ಶಕ್ತಿಗಳನ್ನು ಹದ್ದುಬಸ್ತಿನಲ್ಲಿಡಬಹುದು. ಆದರೆ ಇವತ್ತು ಆಡಳಿತ ಪಕ್ಷದ ಕಾರ್ಯಕರ್ತರೆ ಬೇಡವಾದ ಕೆಲಸವನ್ನು ಮಾಡಿದರೆ, ಬಹುಶ: ಎಷ್ಟೆ ಪ್ರಾಮಾಣಿಕರಿದ್ದರೂ ಅವರನ್ನು ನಿಯಂತ್ರಿಸಲು ಸ್ವಲ್ಪ ಕಷ್ಟವಾಗುತ್ತದೆಂದು ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ, ಇವತ್ತು ಆ ಪಕ್ಷದ ಕಾರ್ಯಕರ್ತರು ಸ್ಟೇಷನ್ ಮುಂದೆ

ನಿಂತುಕೊಂಡು ನಾವು ಕೈ ಕಡಿಯುತ್ತೇವೆ, ಕಾಲು ಕಡಿಯುತ್ತೇವೆ ಎನ್ನುವ ಮಾತನ್ನಾಡುತ್ತಾರೆ. ಯಾರೋ ಪ್ರೀತಿ ಮಾಡಿ ಯಾರೋ ಓಡಿ ಹೋಗುವುದು, ಇಲ್ಲಿ ಲವ್ ಜಿಹಾದ್ ಎಂದು ಅಲ್ಪಸಂಖ್ಯಾತರ ಮೇಲೆ ಗಲಭೆ ಮಾಡುವ ವ್ಯವಸ್ಥೆ ಇದೆ. ಈ ರೀತಿಯ ಪರಿಸ್ಥಿತಿ ಆಗಬಾರದು, ಆ ಪಕ್ಷದ ಕಾರ್ಯಕರ್ತರನ್ನು ಆ ಪಕ್ಷದ ಮುಖಂಡರು ನಿಯಂತ್ರಣದಲ್ಲಿಟ್ಟುಕೊಂಡು ಸಮಾಜದಲ್ಲಿ ಶಾಂತಿ ಕಾಪಾಡುವ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಇವತ್ತು ಕಳಕಳಿಯಿಂದ ಕೇಳಿಕೊಳ್ಳಲು ಇಚ್ಛಿಸುತ್ತೇನೆ. ಆರೋಗ್ಯವಿಲ್ಲದ ಬಡಜನರಿಗೆ ಮುಖ್ಯಮಂತ್ರಿಗಳು ಪರಿಹಾರ ಕೊಡುತ್ತಿರುವುದರ ಬಗ್ಗೆ ಬಹಳಷ್ಟು ಹೆಮ್ಮೆ ಇದೆ, ಏಕೆಂದರೆ, ಮುಂಚೆ ಬಹಳ ಕಡಿಮೆ ಪರಿಹಾರ ಸಿಗುತ್ತಿತ್ತು, 35, 40, 50 ಸಾವಿರ ರೂ. ಕೊಡುತ್ತಿದ್ದರು, ಅದಕ್ಕೆ ಒಂದು ಕಾನೂನನ್ನು ತಂದಿದ್ದಾರೆ, ಅದೊಂದು ಬಿಪಿಎಲ್ ಆಗಬೇಕು, ಅವರ summary report ತರಬೇಕು, ಈಗ summary report ಅನ್ನು ಆಸ್ಪತ್ರೆಗಳಲ್ಲಿ ಆಪರೇಷನ್ ಆದ ಮೇಲೆ ಕೊಡುತ್ತಾರೆ, ಮುಂಚೆ ಕೊಡುವುದಿಲ್ಲ. ಆದುದರಿಂದ ಈ ಒಂದು ಸುತ್ತೋಲೆಯನ್ನು ಏನು ಹೊರಡಿಸಿದ್ದಾರೆ, ಅದನ್ನು ತಕ್ಷಣವೇ ರದ್ದುಪಡಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನು ಒಂದು ಶಾಲೆಯಲ್ಲೂ ಉತ್ತಮವಾದ ವಾತಾವರಣವಿರಬೇಕಾದರೆ, ಮಕ್ಕಳು ನಲಿದಾಡುತ್ತಾ ಇರಬೇಕಾದರೆ, ಆ ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕರು, ನಗುತ್ತಾ ಬಂದರೆ ಮಾತ್ರ ಶಾಲೆಯಲ್ಲಿ ನಗುವಿನ ವಾತಾವರಣವಿರುತ್ತದೆ. ಶಿಕ್ಷಕರಿಗೆ ನೀವು 6 ತಿಂಗಳಿನಿಂದ ಸಂಬಳವನ್ನು ಕೊಡದಿದ್ದರೆ, ಅವರು ಯಾವರೀತಿಯಿಂದ ಬರಬೇಕು? ಇನ್ನೂ ಬಹಳಷ್ಟು ವಿಷಯಗಳಿವೆ, ಆದರೆ ಸಮಯವಿಲ್ಲ, ಆದರೆ ಇಷ್ಟು ಮಾತನಾಡಲು ಕಾಲಾವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ [ಮುಖ್ಯಮಂತ್ರಿಗಳು]: ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಸುಮಾರು 20ಕ್ಕೂ ಹೆಚ್ಚು ಶಾಸಕರು ಮಾತನಾಡಿದ್ದಾರೆ, ಪ್ರತಿಪಕ್ಷದ

ನಾಯಕರು ಸುದೀರ್ಘವಾಗಿ ಅನೇಕ ವಿಷಯಗಳನ್ನು ನನ್ನ ಹಾಗೂ ಸರ್ಕಾರದ ಗಮನಕ್ಕೆ ತಂದಿದ್ದಾರೆ. ರಾಜ್ಯದ ಕಾನೂನು ಸುವ್ಯವಸ್ಥೆಯ ಬಗ್ಗೆ ವಿದ್ಯುತ್ ಪರಿಸ್ಥಿತಿ ಬಗ್ಗೆ, ನೈಸ್ ವಿಚಾರದ ಬಗ್ಗೆ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ ಇತ್ಯಾದಿ ವಿಚಾರಗಳ ಸೇರಿದಂತೆ ಅನೇಕ ವಿಷಯಗಳ ಬಗ್ಗೆ ಗೌರವಾನ್ವಿತ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನನ್ನ ಪ್ರಕಾರ ಈ ಸಂಸದೀಯ ವ್ಯವಸ್ಥೆಯಲ್ಲಿ ಹೊರಗಡೆ ಏನು ನಾವು ಮಾತನಾಡುತ್ತೇವೆ ಅದಕ್ಕಿಂತ ಸದನದ ಒಳಗಡೆ ಮಾತನಾಡುವ ಒಂದೊಂದು ಮಾತಿಗೂ ಬಹಳ ದೊಡ್ಡ ಮಹತ್ತರವಾದ ಪ್ರಾಧಾನ್ಯತೆ, ಗೌರವವಿದೆ. ಸದಸ್ಯರು ಕೊಡುವಂಥ ಸಲಹೆಗಳನ್ನು ಗಂಭೀರವಾಗಿ ತೆಗೆದುಕೊಂಡು, ಕೊರತೆಗಳನ್ನು ಸರಿಪಡಿಸಿ ಅನುಷ್ಠಾನಗೊಳಿಸುವುದು ಒಂದು ಜವಾಬ್ದಾರಿಯುತ ಸರ್ಕಾರದ ಕರ್ತವ್ಯ, ಆ ಕೆಲಸ ಮಾಡಲು ನಾನು ಸಿದ್ಧನಿದ್ದೇನೆ, ನಿಮ್ಮ ಸಲಹೆಗಳನ್ನು ಸ್ವೀಕಾರ ಮಾಡಿದ್ದೇನೆ. ಸಾಧನೆ ಮಾತನಾಡಬೇಕು; ಮಾತನಾಡುವುದೇ ಸಾಧನೆಯಾಗಬಾರದು. ಒಂದು ಕಾಲವಿತ್ತು, ರಾಜಕೀಯ ಪಕ್ಷದ ಮುಖಂಡರು ಕೇವಲ ಜನರನ್ನು ಓಟ್ ಬ್ಯಾಂಕ್ ರಾಜಕಾರಣಕ್ಕೆ ಉಪಯೋಗ ಮಾಡಿಕೊಂಡು ಕೊಟ್ಟ ಭರವಸೆಯನ್ನು ಈಡೇರಿಸದೆ, ಚುನಾವಣೆ ಬಂದಾಗ ಯಾವುದೋ ದೊಂಬರಾಟ ಮಾಡಿ ಓಟು ತೆಗೆದುಕೊಂಡು ಆಟವಾಡುವ ಕಾಲವಿತ್ತು, ಆದರೆ ಈಗ ಜನರು ಜಾಗ್ರತರಾಗಿದ್ದಾರೆ. ಯಾವುದು ಸರಿ ಯಾವುದು ತಪ್ಪು ಎಂದು ತೀರ್ಮಾನ ಮಾಡುವ ಶಕ್ತಿ ಜನರು ಪಡೆದಿದ್ದಾರೆ. ಕಳೆದ 20–22 ತಿಂಗಳಲ್ಲಿ ನಡೆದಂತಹ ಅನೇಕ ಮಹತ್ತರವಾದಂತಹ ಘಟನೆಗಳು, ಚುನಾವಣೆಗಳಲ್ಲಿ ಜನ ಯಾವ ರೀತಿ ಸ್ಪಂದಿಸಿದರು ಎನ್ನುವಂಥದ್ದು ನಮಗೂ ನಿಮಗೂ ಇಬ್ಬರಿಗೂ ಗೊತ್ತಿದೆ. ನಮ್ಮ ಸರ್ಕಾರ ನುಡಿದಂತೆ ನಡೆಯುವ ಸರ್ಕಾರ. ಕೊಟ್ಟ ಮಾತಿನಂತೆ ನಡೆದುಕೊಳ್ಳುವಂತಹ ಸರ್ಕಾರ. ಅದಕ್ಕೆ ಚ್ಯುತಿ ಆದರೆ, ಕೊಟ್ಟ ಮಾತಿನಂತೆ ನಡೆದುಕೊಳ್ಳದೆ ಇದ್ದರೆ, ಬೇರೆಯವರಿಗೆ ಏನಾಯಿತು ಅದೇ ನಮಗೂ ಆಗುತ್ತದೆ ಎನ್ನುವಂತಹ ಎಚ್ಚರಿಕೆಯಿಂದ ಆಡಳಿತ ನಡೆಸುವಂತಹ ಪ್ರಯತ್ನದಲ್ಲಿ ನನ್ನನ್ನು ನಾನು ತೊಡಗಿಸಿ ಕೊಂಡಿದ್ದೇನೆ. ಮಾನ್ಯ

ರೇವಣ್ಣರವರೆ, ಈ ಸರ್ಕಾರವನ್ನು ಅಸ್ಥಿರಗೊಳಿಸುವುದಕ್ಕೆ ಬಹಳ ಪ್ರಯತ್ನ ಪಟ್ಟಿರಿ. ಹೇಗಾದರೂ ಮಾಡಿ ಅಭಿವೃದ್ಧಿ ಕಾರ್ಯಗಳ ವೇಗವನ್ನು ತಡೆಯಬೇಕು, ಮಾತೆತ್ತಿದರೆ ಪ್ರತಿ ಪಕ್ಷದ ನಾಯಕರ ಬಾಯಲ್ಲಿ ಕಳೆದ 20 ತಿಂಗಳಿಂದ ಬಂದಂತಹ ಮಾತು ಎಂದರೆ, "ಇನ್ನೇನು ಮುಗಿದೇ ಹೋಯಿತು, ನಾವು ಬಂದು ಕುರ್ಚಿಯಲ್ಲಿ ಕುಳಿತುಕೊಳ್ಳುವುದು ಅಷ್ಟೇ ಉಳಿದಿರುವುದು", ಬಹಳಷ್ಟು ಟೀಕೆ ಟಿಪ್ಪಣಿಗಳನ್ನು ನಿಂತಲ್ಲಿ, ಕೂತಲ್ಲಿ ಮಾಡಿದಿರಿ. ಬಹುಶಃ ನನಗೆ ನೆನಪಿರುವ ಹಾಗೆ ಯಡಿಯೂರಪ್ಪನ ಮೇಲೆ ನೀವು ಮಾಡಿದಷ್ಟು ಆರೋಪ ಬೇರೆಯವರ ಮೇಲೆ ಮಾಡಿಲ್ಲ. ಜನರಲ್ಲಿ, ಒಂದು ರೀತಿ ಗೊಂದಲ ಉಂಟು ಮಾಡಿ ಇದರ ರಾಜಕೀಯ ಲಾಭವನ್ನು ಪಡೆಯಬಹುದು ಎಂಬ ಭ್ರಮೆಯಲ್ಲಿ ತಾವೇನಿದ್ದೀರಿ ಇದು ನಡೆಯುವುದಿಲ್ಲ. ಜನ ಅದನ್ನು ತೋರಿಸುತ್ತಾರೆ. ನಾವು ಅಭಿವೃದ್ಧಿ ಬಗ್ಗೆ ಮಾತನಾಡುತ್ತೇವೆ. ಮಾನ್ಯ ಗೌರವಾನ್ವಿತ ಸದಸ್ಯರು ತಪ್ಪು ತಿಳಿದುಕೊಳ್ಳದೇ ಇದ್ದರೆ ಒಂದು ವಿನಂತಿ ಮಾಡುತ್ತೇನೆ. ಬೆಳಿಗ್ಗೆ ಆರು ಗಂಟೆಗೆ ಬೆಂಗಳೂರನ್ನು ಒಂದು ಸಾರಿ ಸುತ್ತು ಹಾಕಿ ಬರೋಣ. ನಾನೂ ನಿಮ್ಮ ಜೊತೆಯಲ್ಲಿ ಬರುತ್ತೇನೆ. ಬೆಂಗಳೂರು ಹೇಗಿತ್ತು? ಹೇಗಾಗಿದೆ? ಜನ ಏನು ಮಾತನಾಡುತ್ತಿದ್ದಾರೆ? ಬರೀ ಬೆಂಗಳೂರು ಅಲ್ಲ, ಕರ್ನಾಟಕ ರಾಜ್ಯದ ಯಾವುದೇ ಜಿಲ್ಲಾ ಕೇಂದ್ರಗಳಿಗೆ ಹೋದರೆ, ಕಳೆದ 20 ತಿಂಗಳಲ್ಲಿ ಆಗಿರುವಂತಹ ಬದಲಾವಣೆ ಎದ್ದು ಕಾಣುತ್ತದೆ. ಜನ ಮಾತನಾಡುತ್ತಾರೆ. "ಏನ್ರಿ ಮಾನ್ಯ ಯಡಿಯೂರಪ್ಪ ಬಂದ ಮೇಲೆ ಎಲ್ಲಿಂದ ದುಡ್ಡು ಬಂದಿತು? ಇಷ್ಟೊಂದು ಕೆಲಸಗಳು ಆಗುತ್ತಿವೆ. ಮೊದಲು ಬಂದ ದುಡ್ಡುಗಳು ಎಲ್ಲಿ ಹೋಗುತ್ತಿದ್ದವು"? ಎಂದು ಸಾಮಾನ್ಯವಾಗಿ ಜನ ನಿಂತಲ್ಲಿ ಕೂತಲ್ಲಿ ಮಾತನಾಡುತ್ತಾರೆ. ನೀವು ನಂಬುತ್ತೀರೋ ಬಿಡುತ್ತೀರೋ ನನಗೆ ಗೊತ್ತಿಲ್ಲ. ಅದಂತೂ ನಿಶ್ಚಿತ. ಅದು ಹೌದು ಎನ್ನುವುದು ನಾಳೆ ಬೆಂಗಳೂರಿನ ಚುನಾವಣೆ ಸಂದರ್ಭದಲ್ಲಿ ಮಾನ್ಯ ರೇವಣ್ಣರವರೆ, ನಮಗೂ ನಿಮಗೂ ಗೊತ್ತಾಗುತ್ತದೆ ಎನ್ನುವ ವಿಶ್ವಾಸ ನನಗಿದೆ. ಒಂದು ರೀತಿ ಅಗ್ನಿ ಪರೀಕ್ಷೆ ಎದುರಿಸಿದ್ದೇನೆ. ನಾನು ಇಲ್ಲವೆಂದು ಹೇಳುವುದಿಲ್ಲ. ಅನೇಕ ರಾಜಕೀಯ ಪಕ್ಷಗಳ ಅಧಿಕಾರದಲ್ಲಿ

ಮುಖ್ಯಮಂತ್ರಿಗಳಾಗಿದ್ದಂತಹವರು ಏನೇನು ಎದುರಿಸಿದರು ಆ ರೀತಿ ಅಗ್ನಿ ಪರೀಕ್ಷೆಗಳು ನನಗೂ ಬಂದವು. ನಾನು ನಂಬಿರುವುದು ದೇವರನ್ನು ಹಾಗೂ ರಾಜ್ಯದ ಜನರನ್ನು ಜನತೆಯ ಆಶೀರ್ವಾದದಿಂದ ದೇವರ ದಯೆಯಿಂದ ಮಾನ್ಯ ರೇವಣ್ಣರವರೆ, ನಾನು ಇಲ್ಲಿ ಗಟ್ಟಿಯಾಗಿ ಕುಳಿತಿದ್ದೇನೆ, ಮೂರು ವರ್ಷ ಇರುತ್ತೇನೆ. ಮತ್ತೆ ಇನ್ನು ಐದು ವರ್ಷ ನೀವು ಅಲ್ಲಿ ವಿರೋಧ ಪಕ್ಷದಲ್ಲಿ ಇರುವಂತೆ ನೋಡಿಕೊಳ್ಳುವುದಕ್ಕೆ ಏನು ಬೇಕೋ ಅದರ ಅಡಿಪಾಯವನ್ನು ಹಾಕುತ್ತಿದ್ದೇನೆ. ಅದರ ಬಗ್ಗೆ ಯಾವುದೇ ಅನುಮಾನ ನಿಮಗೆ ಬೇಡವೆಂದು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಾನು ಬದುಕಬೇಕು ಎನ್ನುವಂಥದ್ದು ಮನುಷ್ಯ ಸಹಜವಾದ ಒಂದು ಆಸೆ, ಆದರೆ ಇತ್ತೀಚೆಗೆ ನಾನು ಬದುಕಬೇಕು, ಅದಕ್ಕಾಗಿ ಇನ್ನೊಬ್ಬರನ್ನು ಬಲಿ ತೆಗೆದುಕೊಳ್ಳಬೇಕು, ಈ ರೀತಿ ಒಂದು ರಾಜಕೀಯ ವಾತಾವರಣವನ್ನು ನಿರ್ಮಾಣ ಮಾಡುವಂತಹ ಪ್ರಯತ್ನದಲ್ಲಿ ಕೆಲವು ಸ್ನೇಹಿತರು ಪ್ರಯತ್ನ ನಡೆಸಿದ್ದೀರಿ. ಯಾವುದೇ ಕಾರಣಕ್ಕೆ ನೀವು ಯಶಸ್ವಿಯಾಗುವುದಿಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಂದು ರೀತಿ 2009ರ ವರ್ಷ ರಾಜ್ಯಕ್ಕೆ ಅನೇಕ ನೋವುಗಳನ್ನು ಕೊಟ್ಟಂತಹ ನತದೃಷ್ಟ ವರ್ಷ. ಅಕ್ಟೋಬರ್‌ನಲ್ಲಿ ಬಂದೊದಗಿದಂತಹ ಪ್ರವಾಹ, ಒಂದು ರೀತಿ ಸುನಾಮಿ, ಅಲ್ಲೋಲ ಕಲ್ಲೋಲ ಉಂಟು ಮಾಡಿತು. ಆ ಸಂತ್ರಸ್ತರ ನೆರವಿಗಾಗಿ ಸ್ವಾತಂತ್ರ್ಯ ನಂತರ ಬೇರೆ ಯಾರೂ ಮಾಡದಷ್ಟು ಪ್ರಯತ್ನವನ್ನು ಮಾಡಿದರೂ ಸಹ ಟೀಕೆ ಟಿಪ್ಪಣಿಗಳು ಏನು ಕಡಿಮೆ ಆಗಲಿಲ್ಲ. ಕೇಂದ್ರದ ಗೃಹ ಸಚಿವರು ಬರುತ್ತಾರೆ, ಆಗಿರುವಂತಹ ಸಾಧನೆಗಳನ್ನು ನೋಡಿ ಆಶ್ಚರ್ಯ ಪಡುತ್ತಾರೆ, 15 ರಿಂದ 20 ಸಾವಿರ ಜನಗಳಿದ್ದ ಸಾರ್ವಜನಿಕ ಸಭೆಗಳಲ್ಲಿ ಹೇಳುತ್ತಾರೆ "ಇಷ್ಟು ಬೇಗ ಭೂಮಿಯನ್ನು ರೈತರಿಂದ ಪಡೆದು ಈ ಗ್ರಾಮಗಳನ್ನು ನಿರ್ಮಾಣ ಮಾಡುವುದಕ್ಕೆ ಹೇಗೆ ಸಾಧ್ಯವಾಯಿತು ಮಾನ್ಯ ಯಡಿಯೂರಪ್ಪನವರೆ?" ಎಂದು ಕೇಳುತ್ತಾರೆ. ಈ ಪ್ರಶ್ನೆಯನ್ನು ಕೇಂದ್ರದ ಗೃಹ ಸಚಿವರು ಕೇಳಿದಾಗ ನಮ್ಮ ದೇಶಪಾಂಡೆಯವರು ಪಕ್ಕದಲ್ಲಿ ಕುಳಿತಿದ್ದರು. ಎಲ್ಲಿ ಕೇಂದ್ರದ ಗೃಹ ಸಚಿವರಾದ ಮಾನ್ಯ ಚಿದಂಬರಂರವರು ಅಡಿಪಾಯ ಹಾಕಿದ್ದರೋ ಇನ್ನು

ಒಂದು ತಿಂಗಳಲ್ಲಿ ಮನೆಗಳನ್ನು ಕಟ್ಟಿದ ಮೇಲೆ ಅದೇ ಚಿದಂಬರಂರವರನ್ನು ಕರೆದುಕೊಂಡು ಬಂದು ಉದ್ಘಾಟನೆ ಮಾಡಿಸುವವನಿದ್ದೇನೆ. ಪಾಪ ನಿಮಗ್ಯಾರಿಗೂ ಬರಬೇಕು ಅನ್ನಿಸಲಿಲ್ಲ. ಸಹಕಾರ ಕೊಡಲಿಲ್ಲ. ಟೀಕೆ ಮಾಡುವುದು ಬಿಡಲಿಲ್ಲ, ಇದನ್ನು ತಾವು ಮಾಡಿದಿರಿ. ಆದರೆ ನಾವು ಧೃತಿಗೆಡದೆ ಕೇಂದ್ರದ ಸಹಕಾರದೊಂದಿಗೆ ಆ ನೆರೆ ಸಂತ್ರಸ್ತರಿಗೆ ಯಾವ ರೀತಿ ನೆರವನ್ನು ಕೊಡಬೇಕು ಅದನ್ನು ಕೊಡುವುದರಲ್ಲಿ ದಾಪುಗಾಲು ಹಾಕಿದ್ದೇವೆ. ಇದು ಸಣ್ಣ ಸಾಧಾರಣ ಕೆಲಸ ಅಲ್ಲ. ಕಳೆದ 25 ವರ್ಷಗಳಿಂದ ನೆರೆಗೆ ಸಿಕ್ಕಿ ಆ ತಗ್ಗು ಪ್ರದೇಶದ ಗ್ರಾಮಗಳು ಜಲಾವೃತಗೊಂಡು ದಿಕ್ಕು ದೆಸೆ ಕಾಣದ ಜನರನ್ನು ಮತ್ತು ಸುಮಾರು 325 ಗ್ರಾಮಗಳನ್ನು ಎತ್ತರದ ಸ್ಥಳಕ್ಕೆ ಸ್ಥಳಾಂತರ ಮಾಡಿ ಹೊಸ ನಗರಗಳನ್ನು ನಿರ್ಮಾಣ ಮಾಡುವಂತಹ ಪ್ರಯತ್ನ ಏನು ನಡೆಸಿದ್ದೇವೆ ಇದನ್ನು ಹಗುರವಾಗಿ ಮಾತನಾಡುವ ಜನರಿಗೆ ನಾನು ಉತ್ತರ ಕೊಡುವುದಕ್ಕೆ ಇಷ್ಟಪಡುವುದಿಲ್ಲ. ಆ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇನೆ. ಜನ ಮುಂದೆ ಬಂದರು. ಆ ಸಂದರ್ಭದಲ್ಲಿ ಅನೇಕ ಟೀಕೆ ಟಿಪ್ಪಣಿಗಳು ನೀವು ಮಾಡಿದರೂ ಸಹ ಅನೇಕ ಕೈಗಾರಿಕೋದ್ಯಮಿಗಳು, ಮಠಾಧಿಪತಿಗಳು, ನಮ್ಮ ಸರ್ಕಾರಿ ನೌಕರರು ಮತ್ತು ಪೆನ್‌ಶನ್ ಪಡೆಯುತ್ತಿರುವಂತಹ ನಿವೃತ್ತಿಯಾದ ನೌಕರರು ಇವರಿಂದ ಸುಮಾರು 355 ಕೋಟಿ ರೂ. ಹತ್ತರ ನೇರ ಹಣ ಬಂದಿತು, ಮನೆಗಳನ್ನು ಕಟ್ಟಿಕೊಡುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ಸುಮಾರು 45 ಗ್ರಾಮಗಳಲ್ಲಿ 12 ಜಿಲ್ಲೆಗಳಲ್ಲಿ ಮನೆಗಳನ್ನು ಕಟ್ಟುವುದು ಪ್ರಾರಂಭವಾಗಿದೆ. ಈ ಶನಿವಾರ, ಭಾನುವಾರ ಮಧ್ಯದಲ್ಲಿ ಯಾವುದಾದರೂ ಒಂದು ದಿವಸ ತಾವೂ ಬಂದರೆ ಹೆಲಿಕಾಪ್ಟರ್‌ನಲ್ಲಿ ಜೊತೆಗೆ ಕರೆದುಕೊಂಡು ಹೋಗುತ್ತೇನೆ. ಮನೆಗಳು ಯಾರ ರೀತಿ ಕಟ್ಟುತ್ತಿದ್ದಾರೆ, ಕೆಲಸ ಹೇಗೆ ಆಗುತ್ತಿದೆ ಎನ್ನುವುದನ್ನು ನಿಮಗೆ ಕರೆದುಕೊಂಡು ಹೋಗಿ ತೋರಿಸಿಕೊಂಡು ಬರುತ್ತೇನೆ. ಮಾನ್ಯ ಸಿದ್ದರಾಮಯ್ಯನವರು ಹೋಗಿ ನೋಡಿಕೊಂಡು ಬಂದಿದ್ದಾರಂತೆ. ಅವರು ಒಬ್ಬರೇ ಸಿಕ್ಕಾಗ ಹೇಳಿದರು ಬಹಳ ಚೆನ್ನಾಗಿ ಮನೆ ಕಟ್ಟುತ್ತಿದ್ದೀರಿ, ಒಳ್ಳೆಯದಾಗುತ್ತದೆ ಎಂದು. ಆದರೆ ವಿರೋಧ ಪಕ್ಷದಲ್ಲಿ ಕುಳಿತು ಹೇಳುವುದಕ್ಕೆ

ಹಿಂದೆ ಮುಂದೆ ನೋಡುತ್ತಾರೆಂದು ನನಗೆ ಅನುಮಾನ ಅಷ್ಟೆ. ಮಾನ್ಯ ಸಿದ್ದರಾಮಯ್ಯನವರೆ, ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಎಲ್ಲಾ ಆಗಿ ಹೋಗಿದೆ ಎಂದು ನಾನು ಹೇಳುವುದಿಲ್ಲ. ಮಾನ್ಯ ಜಯಚಂದ್ರರವರೆ, ಆ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆಂದು ಮಾತ್ರ ಹೇಳಬಹುದು. ಅಲ್ಲಂ ಇವೆಲ್ಲಾ ಏತಕ್ಕೆ? ಅವರನ್ನು ಜೊತೆಗೆ ಕರೆದುಕೊಂಡು ಹೋಗಿ ತೋರಿಸಿಕೊಂಡು ಬರೋಣ. ಪ್ರಚಾರ ಏಕೆ ಬೇಕು? ಮಾನ್ಯ ರೇವಣ್ಣರವರು ಮೊದಲು ಇದ್ದ ರೇವಣ್ಣರವರಾಗಿದ್ದರೆ ಬಂದು ನೋಡಿ ಸಂತೋಷ ಪಡುತ್ತಿದ್ದರು. ಮಾನ್ಯ ರೇವಣ್ಣರವರನ್ನೂ ಕರೆದುಕೊಂಡು ಹೋಗೋಣ. ನೀವು ಹೇಳುವುದು ಸರಿ ಇದೆ. ಯಾರು ಬರುತ್ತೀರಿ ಅವರಿಗೆ ಕರೆದುಕೊಂಡು ಹೋಗುತ್ತೇನೆ. ನೀವು ಬಂದು ನೋಡಿ ಸಲಹೆ ಕೊಟ್ಟರೆ ನಿಮ್ಮ ಸ್ನೇಹಿತರಿಗೆ ಮನೆ ಕಟ್ಟಿ ಕೊಡಿ ಎಂದರೆ, ಯಾರಾದರೂ ಶಾಲೆ ಕಟ್ಟಿ ಕೊಡಿ ಎಂದು ಹೇಳಿದರೆ, ಒಂದು ರೀತಿ ದೊಡ್ಡ ಸಹಾಯ ಮಾಡಿದ ಹಾಗಾಗುತ್ತದೆ. ಆ ದೃಷ್ಟಿಯಿಂದ ನಾನು ದೇವರು ಮೆಚ್ಚುವ ರೀತಿಯಲ್ಲಿ ಕೆಲಸ ಮಾಡಿದ್ದೇನೆ. ಯಾರು ಒಪ್ಪುತ್ತಾರೋ ಬಿಡುತ್ತಾರೋ ನನ್ನ ಆತ್ಮ ಸಾಕ್ಷಿಗನುಗುಣವಾಗಿ ನಾನು ಕೆಲಸ ಮಾಡಿದ್ದೇನೆ ಎನ್ನುವಂತಹ ವಿಶ್ವಾಸ ನನಗಿದೆ. ನಿಮ್ಮೆಲರ ಸಹಕಾರ ಇದ್ದರೆ ಇನ್ನೊಂದು ಎರಡು-ಮೂರು ತಿಂಗಳಿನಲ್ಲಿ 75% ಕೆಲಸ ಆಗುತ್ತದೆ. 70,000 ಮನೆಗಳಲ್ಲಿ 50,000 ಮನೆಗಳಾದರೂ ಪೂರ್ಣವಾಗುತ್ತದೆ ಎನ್ನುವ ವಿಶ್ವಾಸದೊಂದಿಗೆ ನೋಡುತ್ತಿದ್ದೇನೆ. ಪ್ರಯತ್ನ ಮಾಡೋಣ. ಮಾನ್ಯ ರೇವಣ್ಣರವರೆ, ಇತ್ತೀಚಿನ ಮಾತುಕತೆಗಳನ್ನು ನೋಡಿದಾಗ ನನಗನ್ನಿಸುವುದು ನಾವು ಸಾಧಿಸುವುದಕ್ಕೆ ಆಗದೆ ಇರುವಂಥದ್ದನ್ನು ಇತರರು ಸಾಧಿಸುವುದಕ್ಕೆ ಹೊರಟು ಬಿಟ್ಟಿದ್ದಾರಲ್ಲ ಎನ್ನುವಂತಹ ಮತ್ಸರ ಇತ್ತೀಚೆಗೆ ರಾಜಕಾರಣದಲ್ಲಿ ಜಾಸ್ತಿಯಾಗುತ್ತಿದೆ ಎನ್ನುವಂತಹ ಅನುಮಾನ ಬರುತ್ತಿದೆ, ಮಾನ್ಯ ಸಿದ್ದರಾಮಯ್ಯನವರೆ, ಒಳ್ಳೆಯದನ್ನು ಸಹಿಸುವುದಿಲ್ಲ. ಸಿದ್ದರಾಮಣ್ಣನವರೆ, ನೀವು ಒಪ್ಪುತ್ತೀರೋ ಇಲ್ಲವೋ ನನಗೆ ಗೊತ್ತಿಲ್ಲ. ನನಗೆ ನೆನಪಿರುವ ಹಾಗೆ ಒಂದು ತಿಂಗಳಲ್ಲಿ. ಸುಮಾರು 25, 26 ದಿವಸವಾದರೂ ನಾನು ನನ್ನ ಜವಾಬ್ದಾರಿಯನ್ನು

ನಿರ್ವಹಿಸುವುದರಲ್ಲಿ ಹೆಚ್ಚು ಗಮನ ಕೊಟ್ಟಿದ್ದೇನೆ. ಪ್ರತಿ ದಿನದಲ್ಲಿ ಸುಮಾರು 15, 16 ಗಂಟೆಗಳ ಕಾಲ ಇದೇ ಕೆಲಸವನ್ನು ಮಾಡುತ್ತಿದ್ದೇನೆ. ಆದರೆ ಆ ಟೀಕೆ ಟಿಪ್ಪಣಿಗಳಿದೆಯಲ್ಲ, ಮಾತನಾಡುವವರ ಶೈಲಿ ಇದೆಯಲ್ಲ, ಇದನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ. ಸ್ವಾತಂತ್ರ್ಯ ಬಂದಮೇಲೆ ರೇವಣ್ಣನವರೆ, ಕರ್ನಾಟಕ ರಾಜ್ಯದಲ್ಲಿ ಬಡವರಿಗೆ ಆಗಿರುವಂಥ ಸವಲತ್ತು, ಒಬ್ಬ ರೈತ ಇರಬಹುದು, ನೇಕಾರ ಇರಬಹುದು, ಫಿಶರ್‌ಮನ್ ಇರಬಹುದು, ಇತರ ಕೆಲಸ ಮಾಡುವವರಿರಬಹುದು, ಅಲ್ಪಸಂಖ್ಯಾತ ಬಂಧುಗಳಿರಬಹುದು ಹೀಗೆ ಸರ್ವರಿಗೂ ಸಮಪಾಲು, ಸಮಬಾಳು, ಇದು ಘೋಷಣೆ ಆಗಿತ್ತು ಸ್ವಾಮಿ. ಬನ್ನಿ ನನ್ನ ಜೊತೆ, ನನ್ನನ್ನು ಕರೆದುಕೊಂಡು ಹೋಗಿ ನಿಮ್ಮ ಏರಿಯಾಗಳಿಗೆ, 100 ಕುಟುಂಬದವರನ್ನು ಮಾತನಾಡಿಸಿ, ಸುಮಾರು 75 ಕುಟುಂಬವಾದರೂ ನಮಗೆ ಸಿಗಬೇಕಾದ ಸಲವತ್ತುಗಳು ಸಿಕ್ಕಿದೆ ಎಂದು ಹೇಳದೇ ಇರುವಂಥ ಯಾವುದಾದರೂ ಒಂದು ಗ್ರಾಮವನ್ನು ನೀವು ತೋರಿಸಿ. ರೇವಣ್ಣನವರೆ, ಏಕೋ ಏನೋ ತಮಗೆ ಎಲ್ಲವು ಹೇಗೋ ಕಾಣುತ್ತಿದೆ, ಗೊತ್ತಿಲ್ಲ. ಭಾಗ್ಯಲಕ್ಷ್ಮಿ ಯೋಜನೆ ಬಗ್ಗೆ ನೀವು ಮಾತನಾಡಿದಿರಿ. ನೀವು ಒಬ್ಬ ಸಚಿವರಾಗಿದ್ದವರು ಸ್ವಾಮಿ, ನೀವು ಅನುಭವ ಇರುವಂಥವರು. ಅಂಕಿ ಅಂಶಗಳ ಆಧಾರದ ಮೇಲೆ ನೀವು ಮಾತನಾಡಬೇಕಲ್ಲ? ಕಡೇ ಪಕ್ಷ ಈ ಸದನದಲ್ಲಿ ಮಾತನಾಡಬೇಕಾದರೆ ಅಂಕಿ ಅಂಶಗಳ ಆಧಾರದ ಮೇಲೆ ನೀವು ಮಾತನಾಡಬೇಕಲ್ಲ? 01–04–2006 ರಿಂದ 31–03–2008 ರವರೆವಿಗೆ 2,90,517 ಜನ ಭಾಗ್ಯಲಕ್ಷ್ಮಿ ಯೋಜನೆಯ ಸವಲತ್ತನ್ನು ಪಡೆದಿದ್ದಾರೆ. 2008–09 ರಲ್ಲಿ 2,93,816 ಜನ ತೆಗೆದುಕೊಂಡಿದ್ದಾರೆ. 2009–10 ರಲ್ಲಿ 1,32,115 ಜನ ತೆಗೆದುಕೊಂಡಿದ್ದಾರೆ. 2008–09 ರಲ್ಲಿ 316 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. 2009–10 ರಲ್ಲಿ 207 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. ಈ ಸಾಲಿನಲ್ಲಿ 2009–10 ರಲ್ಲಿ 354 ಕೋಟಿ ರೂ.ಗಳಲ್ಲಿ 1,06,000 ಜನರಿಗೆ ಬಾಂಡ್‌ಗಳು ವಿತರಣೆಯಾಗಿದೆ. ಇನ್ನು 248 ಕೋಟಿ ರೂ.ಗಳನ್ನು ಕೊಡಬೇಕಾಗುತ್ತದೆ. ಆ ಪೂರ್ಣ ಹಣವನ್ನು 31ನೇ ತಾರೀಖಿನೊಳಗೆ ಬಿಡುಗಡೆ ಮಾಡುತ್ತೇವೆ. ಒಂದು

ಗೊಂದಲ ನಿಮಗೆ ಇರುವಂತೆ ಕಾಣುತ್ತಿದೆ. ಭಾಗ್ಯಲಕ್ಷ್ಮಿ ಯೋಜನೆಯಲ್ಲಿ ಏನು ಹೇಳಿದೆ ರೇವಣ್ಣನವರೆ, ಒಂದು ಹೆಣ್ಣು ಮಗುವನ್ನು ಈ ಯೋಜನೆಯಲ್ಲಿ ಸೇರಿದೆಯೆ ಎಂದು ನೋಡಿ, ಆ ಬಗ್ಗೆ ರೆಕಾರ್ಡ್ ಆದಮೇಲೆ ಆ ದುಡ್ಡನ್ನು ಆ ಹೆಣ್ಣುಮಗಳ ತಾಯಿಯ ಕೈಗೂ ಕೂಡ ಕೊಡುವುದಿಲ್ಲ. ಮಗುವಿನ ಕೈಗೂ ಕೂಡ ಕೊಡುವುದಿಲ್ಲ. ಸಂಬಂಧಪಟ್ಟಂಥ Insurance Department ನಲ್ಲಿ ಆ ಹಣವನ್ನು Deposit ಮಾಡುತ್ತಿದ್ದೇವೆ. ಆದುದರಿಂದ ಇಲ್ಲಿ ಯಾರಾದರೂ ಒಬ್ಬರೂ ಕೂಡ ಸೌಲಭ್ಯದಿಂದ ವಂಚಿತ ರಾಗುತ್ತಾರೆ ಎನ್ನುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಮಧ್ಯವರ್ತಿಗಳ ಪ್ರಶ್ನೆ ಬರುವುದಿಲ್ಲ. ಲಂಚರುಷುವತ್ತುಗಳ ಪ್ರಶ್ನೆ ಬರುವುದಿಲ್ಲ. ಇವೆಲ್ಲವೂ ನಿಮ್ಮ ಗಮನಕ್ಕೆ ಏಕೆ ಬರಲಿಲ್ಲವೋ ನನಗೆ ಗೊತ್ತಿಲ್ಲ ಸ್ವಾಮಿ. ಜನ ನಮ್ಮಿಂದ ತುಂಬ ನಿರೀಕ್ಷೆ ಮಾಡುತ್ತಿದ್ದಾರೆ. ಅಭಿವೃದ್ಧಿಶೀಲ ಮತ್ತು ಜನಪರ ಒಳ್ಳೆಯ ಆಡಳಿತವನ್ನು ಕೊಡಬೇಕು, ಭ್ರಷ್ಟಾಚಾರರಹಿತವಾಗಿರುವಂಥ, ಮಧ್ಯವರ್ತಿಗಳ ಹಾವಳಿಯಿಂದ ತಪ್ಪಿಸುವಂಥ ಆಡಳಿತವನ್ನು ಕೊಡಬೇಕು. ಕನಿಷ್ಠ ನಾಗರಿಕರಿಗೆ ಸಿಗಬೇಕಾದ ಸವಲತ್ತುಗಳು ಸಿಗಬೇಕು ಎನ್ನತಕ್ಕಂಥ ಭಾವನೆಗಳನ್ನು ಜನರು ಇಟ್ಟುಕೊಂಡಿದ್ದಾರೆ. ಬಹುಶ: ಈ ಕಡೆಯಲ್ಲಿರುವಂಥ ನಮ್ಮ ಎಲ್ಲ ಸ್ನೇಹಿತರು, ಈ ಕಡೆ ವಿಶೇಷವಾದಂಥ ಗಮನವನ್ನು ಕೊಟ್ಟು, ಅಪರೂಪಕ್ಕೆ ಸಿಕ್ಕಿರುವಂಥ ಈ ಅವಕಾಶವನ್ನು ಉಪಯೋಗ ಮಾಡಿಕೊಂಡು ಜನರ ಕಣ್ಣೀರು ಒರೆಸುವಂಥ ಒಂದು ಕೆಲಸವನ್ನು ಮಾಡಬೇಕಾಗಿದೆ. ರಸ್ತೆ ಮಧ್ಯದಲ್ಲಿ ಕುಳಿತು ಮುಗ್ಧ ರೈತರನ್ನು ಸರ್ಕಾರದ ವಿರುದ್ಧ ಎತ್ತಿಕಟ್ಟಿ ಪ್ರಚೋದನೆ ಮಾಡುವಂಥ ರೀತಿ ಇದೆಯಲ್ಲ, ಇದು ಪ್ರಜಾಪ್ರಭುತ್ವದಲ್ಲಿ ಯಾರಿಗೂ ಗೌರವ ತರುವಂಥ ಸಂಗತಿಯಲ್ಲ. ದಾಖಲೆ ಬಗ್ಗೆ ಚರ್ಚೆ ಮಾಡೋಣ. ಯಾವುದೇ ವಿಷಯದ ಮೇಲೆ ಇರಬಹುದು, ಗಣಿಗಾರಿಕೆ ಮೇಲಿರಬಹುದು, ರೇವಣ್ಣನವರೆ, ನೈಸ್ ರಸ್ತೆ ಬಗ್ಗೆ ಇರಬಹುದು, ರಾಜ್ಯದ ಹಣಕಾಸಿನ ಪರಿಸ್ಥಿತಿ ಬಗ್ಗೆ ಇರಬಹುದು, ನೆರೆ ಸಂತ್ರಸ್ತರಿಗೆ ಸಿಕ್ಕಿರುವಂಥ ಸವಲತ್ತುಗಳ ಬಗ್ಗೆ ಇರಬಹುದು, ಬೃಹತ್ ಕೈಗಾರಿಕೆಗಳ ಬಗ್ಗೆ ನಾವು ಮಾಡಿರುವಂಥ ಕಾರ್ಯಕ್ರಮಗಳಿರಬಹುದು, ಹೀಗೆ ಯಾವ ವಿಷಯದ ಬಗ್ಗೆ

ಎಷ್ಟು ಹೊತ್ತು ಬೇಕಾದರೂ, ಎಷ್ಟು ದಿವಸ ಬೇಕಾದರೂ ಚರ್ಚೆಯನ್ನು ಮಾಡೋಣ. ವಿರೋಧ ಪಕ್ಷದವರಾದ ನಿಮಗೆ ಸಿಗುವಂಥ ಮಾಹಿತಿಗಳನ್ನು ನಮಗೆ ಕೊಟ್ಟರೆ ಸರಿಪಡಿಸಿಕೊಳ್ಳುವುದಕ್ಕೆ ನಾವು ಸಿದ್ಧರಿದ್ದೇವೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮಾಲೀಕರ ಪರವಾಗಿ ನಾವಿಬ್ಬರೂ ಇಲ್ಲಿ ಕುಳಿತಿದ್ದೇವೆ. ಲೋಪದೋಷಗಳು ಇಲ್ಲವೇ ಇಲ್ಲವೆಂದು ನಾನು ಹೇಳುವುದಕ್ಕೆ ಸಿದ್ಧನಿಲ್ಲ. ಆ ರೀತಿಯದ್ದು ನಿಮ್ಮ ಕಣ್ಣಿಗೆ ಕಂಡಾಗ ನಮಗೆ ಹೇಳಿದರೆ ನಾವು ತಿದ್ದಿಕೊಳ್ಳುವುದಕ್ಕೆ ಇಲ್ಲಿ ಕುಳಿತಿದ್ದೇವೆ. ವಿರೋಧ ಪಕ್ಷದಲ್ಲಿರುವ ನೀವು ಟೀಕೆ ಮಾಡುವುದಕ್ಕೇ ಇರುವುದು. ಆ ರೀತಿ ಟೀಕೆ ಮಾಡುವಾಗ ಒಳ್ಳೆಯದನ್ನು ಹೇಳುವುದಕ್ಕೋಸ್ಕರವೇ ಹೊರತು ನಮ್ಮನ್ನು ಹೊಗಳುವುದಕ್ಕೋಸ್ಕರವಲ್ಲ. ನಮ್ಮ ಕೊರತೆಗಳನ್ನು ಹೇಳುವುದಕ್ಕೇ ನೀವು ಅಲ್ಲಿ ಇರುವುದು. ಆ ರೀತಿ ಹೇಳಿದಾಗ ನಾವು ತಿದ್ದಿಕೊಳ್ಳಬೇಕು. ಆದುದರಿಂದ ಯಾವ ಒಂದು ತಪ್ಪು ಗ್ರಹಿಕೆಯಲ್ಲಿ ಗೊಂದಲ ಉಂಟುಮಾಡುವ ಪ್ರಯತ್ನದಲ್ಲಿ ತಾವಿದ್ದೀರಿ ಇದರಿಂದ ಏನೂ ಲಾಭವಾಗುವುದಿಲ್ಲವೆನ್ನುವಂಥ ಮಾತನ್ನು ಮಾತ್ರ ಈ ಸಂದರ್ಭದಲ್ಲಿ ನಾನು ನಿಮಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸ್ವಾಮಿ, ನಾವು ಆಡಳಿತಕ್ಕೆ ಬಂದಮೇಲೆ ಸುಮಾರು ಇಪ್ಪತ್ತು ಸಾವಿರ ಉದ್ಯೋಗ ಕೊಡುವ ಬಗ್ಗೆ ಗಮನವನ್ನು ಕೊಟ್ಟಿದ್ದೇವೆ. ಶಿಕ್ಷಣ ಕ್ಷೇತ್ರದಲ್ಲಿರಬಹುದು, ಪೊಲೀಸ್ ಇಲಾಖೆಯಲ್ಲಿರಬಹುದು, Health Department ನಲ್ಲಿರಬಹುದು, ಡಾಕ್ಟರ್ಸ್‌ಗಳನ್ನು ನೇಮಕ ಮಾಡುವುದರಲ್ಲಿರಬಹುದು, ಇವ್ಯಾವುದಕ್ಕೂ ಕೊರತೆ ಮಾಡಿಲ್ಲ. ರೈತನಿಗೆ ನಾವು ಕೊಟ್ಟಿರುವಷ್ಟು ಸವಲತ್ತುಗಳನ್ನು ಬೇರೆ ಯಾರೂ ಕೊಡಲಿಲ್ಲ. Food Subsidy ಇರಬಹುದು, Milk Subsidy ಇರಬಹುದು, Interest subsidy ಇರಬಹುದು, Free ಎಲೆಕ್ಟ್ರಿಸಿಟಿ ಇರಬಹುದು, ಪೆನ್‌ಶನ್ ಸ್ಕೀಂಗಳಿರಬಹುದು, ಬೈಸಿಕಲ್ ವಿತರಣೆ ಇರಬಹುದು, ಇವೆಲ್ಲವನ್ನೂ ನಾವು ಮಾಡಿದ್ದೇವೆ. ಅಭಿವೃದ್ಧಿಗೆ ಆದ್ಯತೆಯನ್ನು ಕೊಟ್ಟಾಗ ಸಹಜವಾಗಿ ಆರ್ಥಿಕವಾಗಿ ಸ್ವಲ್ಪ ಇಕ್ಕಟ್ಟು ಉಂಟಾಗುತ್ತದೆ. ಅದನ್ನು ಸರಿಪಡಿಸಿಕೊಂಡು ಮುಂದೆ ಹೋಗುವಂಥ ಶಕ್ತಿ ಇದೆ ಮತ್ತು ಧೈರ್ಯವಿದೆ. ನಾಳೆ ಬಜೆಟ್ ಮಂಡನೆಯನ್ನು ಮಾಡಿದ ಮೇಲೆ ಹಣಕಾಸಿನ ವಿಚಾರದಲ್ಲಿ

ಟೀಕೆ ಮಾಡುವಂಥ ನಮ್ಮ ಸ್ನೇಹಿತರುಗಳಿಗೆ ಅದರ ಬಗ್ಗೆ ನಾಳೆ ಬೆಳಿಗ್ಗೆ ಉತ್ತರ ಸಿಗುತ್ತದೆ. ನಾಳೆ 12.30 ಕ್ಕೆ ನಾನು ಬಜೆಟ್ ಮಂಡನೆಯನ್ನು ಮಾಡಿದಾಗ ಅವರಿಗೆ ಉತ್ತರ ಸಿಗುತ್ತದೆ. ನಾವು ಬಹಳ ಪ್ರಾಮಾಣಿಕವಾಗಿ ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗುವಂಥ ಪ್ರಯತ್ನವನ್ನು ಮಾಡುತ್ತಿದ್ದೇವೆ. ಜಾತಿ, ಮತ, ಭೇದ, ಇವೆಲ್ಲವನ್ನು ಬಿಟ್ಟು ನಾವೆಲ್ಲರೂ ಒಂದು, ನಾವೆಲ್ಲರೂ ಭಾರತೀಯರು ಎನ್ನುವ ಭಾವನೆಯೊಂದಿಗೆ ಕೆಲಸ ಮಾಡುವಂಥ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇದನ್ನು ಸಹಿಸಿಕೊಳ್ಳದೆ, ಅದಕ್ಕೆ ಸ್ವಲ್ಪ ಗೊಂದಲ ಉಂಟು ಮಾಡುವಂಥ ಪ್ರಯತ್ನವನ್ನು ಕೆಲವರು ಮಾಡುತ್ತಿದ್ದಾರೆ. ಅವರಿಗೆ ದೇವರು ಒಳ್ಳೆಯದು ಮಾಡಲಿ. ಸುಮಾರು 1 ಲಕ್ಷದ 19 ಸಾವಿರ ನಿರುದ್ಯೋಗಿಗಳಿಗೆ ಕೌಶಲ್ಯ ಯೋಜನೆಯಲ್ಲಿ ಸವಲತ್ತುಗಳು ಸಿಗುತ್ತದೆ. ಬಹುಶ: ಈ ಮಾನವೀಯ ಮೌಲ್ಯಗಳನ್ನು ಮನುಜ ಕುಲಕ್ಕೆ ನೀಡಿದ ಈ ಕರ್ಮಭೂಮಿಯಲ್ಲಿ, ಚೆನ್ನೈನಲ್ಲಿ ಸರ್ವಜ್ಞ ಪುತ್ಥಳಿ ಮತ್ತು ಬೆಂಗಳೂರಿನಲ್ಲಿ ತಿರುವಳ್ಳುವರ್ ಪ್ರತಿಮೆ ಅನಾವರಣ ಮಾಡಿ ಇಡೀ ದೇಶದಲ್ಲಿ ಒಂದು ಬಾಂಧವ್ಯದ ಬೆಸುಗೆಯ ಸಂಕೇತವಾಯಿತು. 13ನೇ ತಾರೀಖು ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿಯವರು ಒಬ್ಬ ಸಚಿವನನ್ನು ವಿಶೇಷವಾಗಿ invitation ಕೊಡುವುದಕ್ಕಾಗಿ ಇಲ್ಲಿಗೆ ಕಳುಹಿಸಿಕೊಟ್ಟು ಅಲ್ಲಿ ವಿಧಾನ ಸೌಧದ ಕಟ್ಟಡದ ಉದ್ಘಾಟನೆಗೆ ಬರಬೇಕೆಂದು ಆಮಂತ್ರಣವನ್ನು ಕಳುಹಿಸಿಕೊಟ್ಟಿದ್ದಾರೆ. ಇದೊಂದು ವಿಚಾರ ದೊಡ್ಡದು ಎನ್ನುವ ಮಾತನ್ನು ನಾನು ಹೇಳಲಿಲ್ಲ. ಆದರೆ ಯಾವ ರೀತಿ ಸಂಬಂಧಗಳನ್ನು ಸರಿಪಡಿಸಿಕೊಳ್ಳುವುದರಲ್ಲಿ ನಾವಿದ್ದೇವೆ ಎನ್ನುವುದಕ್ಕೋಸ್ಕರ ನಾನು ಈ ಮಾತನ್ನು ಹೇಳಿದೆ. ಕಾನೂನು ಸುವ್ಯವಸ್ಥೆ ಬಗ್ಗೆ ನೀವು ಮಾತನಾಡಿದಿರಿ. India Todayಯವರು, ಪ್ರಣಬ್ ಮುಖರ್ಜಿಯವರ ಸಮಕ್ಷಮ, ಈ ಎಲ್ಲ ಗೊಂದಲವನ್ನು ಉಂಟುಮಾಡುವ ಪ್ರಯತ್ನ ಮಾಡಿದ ಮೇಲೂ ಸಹ ಕಾನೂನು ಸುವ್ಯವಸ್ಥೆ ಕಾಪಾಡುವುದರಲ್ಲಿ ಕರ್ನಾಟಕದಲ್ಲಿ ಯಾವ ರೀತಿ ಯಶಸ್ವಿಯಾದರು ಎಂದು ಹೇಳಿ ನಮಗೆ ದೆಹಲಿಯಲ್ಲಿ ಸನ್ಮಾನ ಮಾಡಿದರು. ಕೆಲವರ ಪ್ರಯತ್ನ ನಡೆದಿದೆ ಕಾನೂನು

8.10 ಪಿ.ಎಂ.

ಸುವ್ಯವಸ್ಥೆಯನ್ನು ಹಾಳು ಮಾಡಬೇಕೆಂದು. ಶೋಷಣೆಗೆ ಒಳಗಾಗಿರುವಂಥ ಮಹಿಳೆಯರಿಗೆ ನಾವು ಕೊಟ್ಟಿರುವಂಥ ಸವಲತ್ತುಗಳು ಇವೆ. ಉಳುವ ನೇಗಿಲ ಯೋಗಿ, ಬಹುಶ: ಈ ದೇಶದ ಇತಿಹಾಸದಲ್ಲಿ ರೈತನ ಮಗನಾಗಿ ಆ ರೈತನ ನೇಗಿಲ ಯೋಗಿಯನ್ನು ಗುರುತು ಮಾಡಿ ಯಾವುದೇ ಸಮಾರಂಭ ನಡೆದರೂ ಸಹ ನೇಗಿಲ ಯೋಗಿಯನ್ನು ನೆನಪು ಮಾಡಿಕೊಂಡು ಸಮಾರಂಭವನ್ನು ಪ್ರಾರಂಭ ಮಾಡುತ್ತಿದ್ದೇವೆ. ಮಾಡಬೇಕಾದುದು ಬಹಳ ಇದೆ. ಆ ದಿಕ್ಕಿನಲ್ಲಿ ಪ್ರಾಮಾಣಿಕವಾದ ಹೆಜ್ಜೆಯನ್ನು ಇಟ್ಟಿದ್ದೇವೆ. ವಸತಿ, ಆರೋಗ್ಯ, ಶಿಕ್ಷಣಕ್ಕೆ ನಾವು ಆದ್ಯತೆಯನ್ನು ಕೊಡುತ್ತಿದ್ದೇವೆ. ಯಾರು ಸ್ವಾಮಿ, ಆ ಹಳ್ಳಿಯಲ್ಲಿರುವಂಥ ಬಡವನಿಗೆ ಮನೆ ಕಟ್ಟಿಕೊಡುತ್ತೇವೆಂದು ಹೇಳಿ 30 ಸಾವಿರ ರೂ.ಗಳನ್ನು ಕೊಟ್ಟು, ಆ ಮನೆ ಈ ಕಡೆಯಿಂದ ಕಟ್ಟಿ ಆ ಕಡೆಯಿಂದ ಬೀಳುತ್ತಿದ್ದ ಮನೆಗಳನ್ನು ಕಟ್ಟುವಂಥದ್ದನ್ನು ಬದಲಾಯಿಸಿ ಒಂದು ಲಕ್ಷದ ಐದು, ಹತ್ತು ಸಾವಿರ ಖರ್ಚು ಮಾಡಿ ಒಂದೊಂದು ಮನೆ ಕಟ್ಟುವಂಥ ಕೆಲಸ ಪ್ರಾರಂಭವಾಗಿದೆಯಲ್ಲ, ಈ ಬಗ್ಗೆ ಯೋಚನೆ ಮಾಡುವುದಕ್ಕೆ, ಕಲ್ಪನೆ ಮಾಡಿಕೊಳ್ಳುವುದಕ್ಕೆ ನಿಮ್ಮಗಳಿಂದ ಸಾಧ್ಯವಿದೆಯೆ ಎಂದು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ದೇಶದ ಇತಿಹಾಸದಲ್ಲಿ ಈ ರೀತಿ flood affected areaದಲ್ಲಿ ಸಮಸ್ಯೆ ಬಂದಾಗ ಕೇಂದ್ರ ಸರ್ಕಾರಕ್ಕೆ ಕೈತೋರಿಸಿ ನಾನೂ ಸಹ ಕೈಕಟ್ಟಿ ಕುಳಿತುಕೊಳ್ಳಬಹುದಾಗಿತ್ತು. ನಾನು ಭಿಕ್ಷೆ ಪಾತ್ರೆ ಹಿಡಿದುಕೊಂಡು ಹೋದೆ, ಜನ ಮುಂದೆ ಬಂದರು. ಅದಕ್ಕೂ ಕಲ್ಲು ಹಾಕುವಂತಹ ಪ್ರಯತ್ನವನ್ನು ಕೆಲವರು ಮಾಡಿದರು. ಈಗ ನನ್ನ ಮುಂದೆ ಅನೇಕ ಸವಾಲುಗಳು ಇವೆ, ಇಲ್ಲವೆಂದು ನಾನು ಹೇಳುವುದಿಲ್ಲ. ನಾನು ಈ ಮನೆಯಲ್ಲಿ ಕನ್ನಡ ನಾಡಿನ ಆರು ಕೋಟಿ ಜನರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಕಳೆದ 35–40 ವರ್ಷಗಳಿಂದ ಅಧಿಕಾರವನ್ನು ನಡೆಸಿದಂತಹ ಸರ್ಕಾರಗಳ ಮುಂದಾಲೋಚನೆ ಇಲ್ಲದಿರುವ ನೀತಿಯಿಂದ, ಅವರು ಗಮನಿಸದಿರುವುದರಿಂದ ಈಗ ನಾವು ವಿದ್ಯುತ್ ಅಭಾವ ಎದುರಿಸುತ್ತಿದ್ದೇವೆ. ಅದು ನೀವು ಕೊಟ್ಟಂತಹ ಬಳುವಳಿ. ಆದರೆ ನಾವು ಏನೇನು

ಮಾಡಿದ್ದೇವೆಂದು ವಿವರವಾದ ಒಂದು ಪಟ್ಟಿಯನ್ನು ಕೊಟ್ಟಿದ್ದೇನೆ. ಮುಂದಿನ 15–20–25 ವರ್ಷಗಳನ್ನು ಕಣ್ಮುಂದೆ ಇಟ್ಟುಕೊಂಡು ವಿದ್ಯುತ್ ಉತ್ಪಾದನೆಗೆ ಗಮನವನ್ನು ಕೊಡುತ್ತಿದ್ದೇವೆ. ನನ್ನ ಆಸೆ ಇದೆ, ನನ್ನ ಅಧಿಕಾರಾವಧಿ ಮುಗಿದು, ಮಾನ್ಯ ರೇವಣ್ಣನವರೆ, ಮುಂದಿನ ಚುನಾವಣೆಗೆ ಹೋಗುವಂತಹ ಸಂದರ್ಭದಲ್ಲಿ ಈ ರಾಜ್ಯ ವಿದ್ಯುತ್‌ನಲ್ಲಿ self sufficient ಆಗಬೇಕೆನ್ನುವುದು ನನ್ನ ಬಯಕೆ, ನನ್ನ ಅಪೇಕ್ಷೆ. ಅದರಲ್ಲಿ ಯಶಸ್ವಿಯಾಗುತ್ತೇವೆನ್ನುವ ವಿಶ್ವಾಸ ನೂರಕ್ಕೆ ನೂರು ಇದೆ. ಇದಕ್ಕೆ ಎಷ್ಟೇ ಸಾವಿರ ಕೋಟಿ ರೂಪಾಯಿ ಖರ್ಚಾಗಲಿ, ಬರುವಂತಹ ದಿವಸಗಳಲ್ಲಿ ಮಾರ್ಚ್‌ನಲ್ಲಿ ಒಂದು ಸಾವಿರ ಮೆಗಾವ್ಯಾಟ್ ವಿದ್ಯುತ್, ಏಪ್ರಿಲ್ ಮತ್ತು ಮೇ ತಿಂಗಳುಗಳಿಗೆ ಒಂದು ಸಾವಿರ ಮೆಗಾವ್ಯಾಟ್ ವಿದ್ಯುತ್ತಿಗೆ ಟೆಂಡರ್ ಕರೆದಿದ್ದೇವೆ. ನಾಳೆ ಅದನ್ನು ಓಪನ್ ಮಾಡುತ್ತಿದ್ದೇವೆ. ಎಷ್ಟೇ ಕಷ್ಟವಾಗಲಿ, ನಾವು ಈ ಮನೆಯಲ್ಲಿ ಕೊಟ್ಟ ಭರವಸೆಯಂತೆ ಅಷ್ಟು ಗಂಟೆಗಳ ಕಾಲ ವಿದ್ಯುತ್ತನ್ನು ಕೊಡುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆಂದು ಹೇಳುತ್ತೇನೆ.

ದೊಡ್ಡ ಪ್ರಮಾಣದಲ್ಲಿ ಮನೆಗಳನ್ನು ಕಟ್ಟಬೇಕಾಗಿದೆ, ಬಹಳ ದೊಡ್ಡ ಪ್ರಮಾಣದಲ್ಲಿ ಯೋಜನೆಗಳು ಸಿದ್ಧವಾಗಿವೆ. ಈ ರಾಜ್ಯ ಗುಡಿಸಲುರಹಿತ ರಾಜ್ಯವಾಗಬೇಕು, ಈ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತೇವೆ. ಅದರಲ್ಲಿ ಯಶಸ್ವಿಯಾಗುತ್ತೇನೆನ್ನುವ ವಿಶ್ವಾಸ ನನಗೆ ಇದೆ.

ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸಾಧನೆಯಾಗಿದೆ. ಒಂದು ಬದಲಾವಣೆಯನ್ನು ತರುವಂತಹ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನದ ವಿಚಾರದ ಬಗ್ಗೆ ಗೌರವಾನ್ವಿತ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಕೇಂದ್ರ ಸರ್ಕಾರದ ಗೃಹ ಇಲಾಖೆ ಅಧಿಸೂಚನೆ ಹೊರಡಿಸಬೇಕಾಗಿದೆ. ಈಗಾಗಲೇ ಮೂರು ಬಾರಿ ಕೇಂದ್ರಕ್ಕೆ ಪತ್ರವನ್ನು ಬರೆದಿದ್ದೇನೆ. ನಾನೇ ಸ್ವತ: ಮಾನ್ಯ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ ಹೇಳಿದ್ದೇನೆ. ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆ ಸ್ಥಾನಮಾನ ಸಿಕ್ಕಿರುವಂತಹ ಸಂದರ್ಭದಲ್ಲಿ ನಮಗೆ ಕೇಂದ್ರದಿಂದ

ಹೆಚ್ಚಿನ ನೆರವು ಸಿಗಬೇಕಾಗಿದೆ. ಅದಕ್ಕಾಗಿ ಕಾಯದೆ, ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆ ಸ್ಥಾನಮಾನ ಸಿಕ್ಕಿರುವಂತಹ ಹಿನ್ನೆಲೆಯಲ್ಲಿ ಏನೇನು ಕೆಲಸ ಕಾರ್ಯಗಳನ್ನು ಮಾಡಬೇಕಾಗಿದೆ, ಅದಕ್ಕೆ ಬೇಕಾದಂತಹ ಸವಲತ್ತುಗಳನ್ನು, ಹಣವನ್ನು ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅನೇಕ ಮಾನ್ಯ ಸದಸ್ಯರು ಕಾನೂನು ಸುವ್ಯವಸ್ಥೆ ಬಗ್ಗೆ ಮಾತನಾಡಿದರು. ನಮ್ಮ ರಾಜ್ಯದಲ್ಲಿ ಸಣ್ಣಪುಟ್ಟ ಘಟನೆಗಳನ್ನು ಹೊರತುಪಡಿಸಿದರೆ ಬಹುತೇಕ ಶಾಂತಿ ಪರಿಸ್ಥಿತಿ ಇದೆ. ಅದಕ್ಕಾಗಿ ನಾನು ನಮ್ಮ ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಕ್ಸಲ್ ನಿಗ್ರಹ ಮಾಡುವುದರಲ್ಲಿ ಕೂಡ ಅವರು ಬಹಳ ಯಶಸ್ವಿಯಾಗಿ ಕೆಲಸ ಮಾಡುತ್ತಿದ್ದಾರೆ. ಪ್ರಾರ್ಥನಾ ಮತ್ತು ಪೂಜಾ ಸ್ಥಳಗಳಿಗೆ ಸಂಬಂಧಿಸಿದಂತೆ ಕೆಲವು ಅಹಿತಕರ ಘಟನೆಗಳು ನಡೆದವು. ಪೊಲೀಸ್ ಇಲಾಖೆ ಶೀಘ್ರವಾದ ಕ್ರಮವನ್ನು ತೆಗೆದುಕೊಂಡು ಬಿಗಿ ತರುವಂತಹ ಪ್ರಯತ್ನ ಮಾಡಿತು. ಅಲ್ಪಸಂಖ್ಯಾತರು ಸೇರಿದಂತೆ ಎಲ್ಲಾ ವರ್ಗದ ಜನ ನಮಗೆ ಸಹಕಾರ ಕೊಡುತ್ತಿದ್ದಾರೆ, ಎಲ್ಲರೂ ಸಾಮರಸ್ಯದಿಂದ ಬದುಕುತ್ತಿದ್ದಾರೆ. ಸಮಾಜದಲ್ಲಿ ಅಶಾಂತಿ ಉಂಟು ಮಾಡುವಂತಹ ವಿಚ್ಛಿದ್ರಕಾರಿ ಶಕ್ತಿಗಳು ಯಾರೇ ಇರಲಿ, ಆ ಕುಟಿಲ ಪ್ರಯತ್ನಗಳನ್ನು ಇಲ್ಲಿ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ, ಅದಕ್ಕೆ ನಿಮ್ಮೆಲ್ಲರ ಸಹಕಾರ ಇದೆಯೆಂದು ಭಾವಿಸಿದ್ದೇನೆ.

ನಮ್ಮ ಆಡಳಿತ ಯಂತ್ರ ಚುರುಕಾಗಬೇಕಾಗಿದೆ. ಅಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳ ಫಲ ಜನತೆಗೆ ಸಕಾಲದಲ್ಲಿ ಸಿಗಬೇಕು ಎನ್ನುವುದು ನಮ್ಮ ನಿಮ್ಮೆಲ್ಲರ ಅಪೇಕ್ಷೆ, ಅದಕ್ಕೆ ಜನ ನಮ್ಮನ್ನು ಆಯ್ಕೆ ಮಾಡಿ ಕಳುಹಿಸಿದ್ದಾರೆ. ಆಡಳಿತದಲ್ಲಿ ಒಂದು ಪಾರದರ್ಶಕತೆಯನ್ನು ಕಾಯ್ದುಕೊಳ್ಳುವುದಕ್ಕೆ 46 ಇಲಾಖೆಗಳಲ್ಲಿ ಇ-ಟೆಂಡರ್ ಪದ್ಧತಿಯನ್ನು ಅನುಸರಿಸುತ್ತಿದ್ದೇವೆ. KSWAN ಯೋಜನೆಯಡಿಯಲ್ಲಿ ರಾಜ್ಯಾದ್ಯಂತ ಇ-ಸಂಪರ್ಕ ಜಾಲ ಹಾಗೂ video-conferencing ವ್ಯವಸ್ಥೆ ಕಲ್ಪಿಸುವ ಮೂಲಕ ಜನರಿಗೆ ಒಳಿತುಂಟು ಮಾಡುವಂತಹ ಶೀಘ್ರ ನಿರ್ಣಯ ಮತ್ತು ತೀರ್ಮಾನಗಳನ್ನು ಕೈಗೊಳ್ಳುವುದಕ್ಕೆ ಅದರಿಂದ ಅವಕಾಶವಾಗುತ್ತಿದೆ.

ಬೆಂಗಳೂರು-1 ಬಹುವಿಧ ಸೇವಾ ಕೇಂದ್ರಗಳು ಯಶಸ್ವಿಯಾಗಿವೆ. ರಾಜ್ಯಾದ್ಯಂತ ಇದೇ ರೀತಿಯ ಮಾದರಿ ಯೋಜನೆಯನ್ನು ವಿಸ್ತರಿಸುತ್ತಿದ್ದೇವೆ.

'ಜನಸ್ಪಂದನ ಯೋಜನೆ' ಆಡಳಿತ ಯಂತ್ರವನ್ನು ಜನರ ಮನೆಬಾಗಿಲಿಗೆ ತೆಗೆದುಕೊಂಡು ಹೋಗುತ್ತಿದೆ. ಅನೇಕ ಸಮಸ್ಯೆಗಳನ್ನು ಸ್ಥಳದಲ್ಲೇ ಬಗೆಹರಿಸುವಂತಹ ಪ್ರಾಮಾಣಿಕ ಪ್ರಯತ್ನವನ್ನು ನಮ್ಮ ಅಧಿಕಾರಿಗಳು ಮಾಡುತ್ತಿದ್ದಾರೆ. ಆರೋಗ್ಯ ಕವಚ ಯೋಜನೆಯಿಂದ ರಾಜ್ಯದ ಗ್ರಾಮೀಣ ಪ್ರದೇಶದ ಜನರಿಗೆ ಹೆಚ್ಚಿನ ಅನುಕೂಲ ಮಾಡಿದೆ. ಮುಂದಿನ ದಿನಗಳಲ್ಲಿ ಸುಧಾರಣೆ ಮಾಡುವುದಕ್ಕೆ ಇನ್ನು ಏನೇನು ಸಾಧ್ಯವಿದೆ ಅದೆಲ್ಲಾ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ.

ಇನ್ನು ಭೀಕರ ನೆರೆ ಹಾವಳಿಗೆ ಸಿಕ್ಕು ಮೃತರಾದಂತಹ 229 ಜನರ ಕುಟುಂಬಕ್ಕೆ 229 ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಮೃತ ಪಟ್ಟಂತಹ ಜಾನುವಾರು ಸಂಖ್ಯೆ 6,207 ಆಗಿದ್ದು, ಅದಕ್ಕೆ 230 ಲಕ್ಷ ರೂಪಾಯಿ ಪರಿಹಾರ ಸಿಕ್ಕಿದೆ. ಬೆಳೆ ಹಾನಿಯಾದಂತಹ 14,17,433 ಹೆಕ್ಟೇರ್‌ಗೆ ಪರಿಹಾರವನ್ನು ಕೊಟ್ಟಿದ್ದೇವೆ. 6,93,285 ಮನೆಗಳು ಬಿದ್ದುಹೋಗಿರುವುದಕ್ಕೆ ಪರಿಹಾರವನ್ನು ಕೊಟ್ಟಿದ್ದೇವೆ. ಮೊದಲು ಐದರಿಂದ ಹತ್ತು ಸಾವಿರ ರೂಪಾಯಿ ಭಿಕ್ಷೆ ಕೊಡುವ ಹಾಗೆ ಕೊಡುತ್ತಿದ್ದರು, ಈಗ 30 ಸಾವಿರ ರೂಪಾಯಿ ಕೊಟ್ಟಿದ್ದೇವೆ. ರಾಜ್ಯ ಸರ್ಕಾರ ನೆರೆ ಹಾವಳಿಯಿಂದ ಆದ ನಷ್ಟವನ್ನು 18,568 ಕೋಟಿ ರೂಪಾಯಿ ಎಂದು ಅಂದಾಜು ಮಾಡಿ ಪ್ರವಾಹ ಪರಿಹಾರಕ್ಕಾಗಿ 7047.34 ಕೋಟಿ ರೂಪಾಯಿಗೆ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದೇವೆ. ಮಾನ್ಯ ಸಿದ್ಧರಾಮಯ್ಯನವರು ಮತ್ತು ಮಾನ್ಯ ಜಯಚಂದ್ರರವರು ಜೊತೆಗೆ ಬಂದರೆ ಕೇಂದ್ರಕ್ಕೆ ಹೆಚ್ಚು ಒತ್ತಾಯವನ್ನು ತಂದು ಹೆಚ್ಚು ಹಣವನ್ನು ಪಡೆಯಬಹುದು. ರಾಜ್ಯ ಸರ್ಕಾರ ಈಗಾಗಲೇ 1,878.25 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ. ಇದರಲ್ಲಿ 1,712.39 ಕೋಟಿ ರೂಪಾಯಿ ಖರ್ಚಾಗಿದೆ. ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ 165 ಕೋಟಿ ರೂ. ಈಗಲೂ ಇದೆ. ಈಗಾಗಲೇ ಸ್ಥಳಾಂತರಗೊಂಡಿರುವ ಹಳ್ಳಿಗಳಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ಕುಡಿಯುವ ನೀರು, ವಿದ್ಯುತ್

ಸರಬರಾಜು, ಶಾಲೆಗಳು ಅಂಗನವಾಡಿ ಕೇಂದ್ರಗಳನ್ನು ಕಟ್ಟುವಂತಹ ಕೆಲಸಗಳನ್ನು ಪ್ರಾರಂಭ ಮಾಡಿದ್ದೇವೆ.

ರಾಜ್ಯದಲ್ಲಿ ಇರುವಂತಹ ವಿದ್ಯುತ್ ಬೇಡಿಕೆಗೆ ತಕ್ಕಂತೆ ನಾವು ವಿದ್ಯುತ್ ಕೊಂಡುಕೊಂಡು ವಿತರಣೆ ಮಾಡಬೇಕಾಗಿದೆ. ಕೇಂದ್ರದಿಂದ ರಾಜ್ಯಕ್ಕೆ ಕಡಿಮೆ ಪ್ರಮಾಣದಲ್ಲಿ ವಿದ್ಯುತ್ ಬರುತ್ತಿದೆ. ಕೇಂದ್ರದ ಗ್ರಿಡ್‌ನಿಂದ 2007-08ನೇ ಸಾಲಿನಲ್ಲಿ ಜನವರಿಯವರೆಗೆ 8,645 ಮಿಲಿಯನ್ ಯೂನಿಟ್ ಪಡೆಯಲಾಗಿದೆ. 2008-09ರಲ್ಲಿ 7,981 ಮಿಲಿಯನ್ ಯೂನಿಟ್ ಇಳಿಮುಖವಾಗಿದೆ. ನಾವು ಎಷ್ಟು ಹಣ ಬೇಕಾದರೂ ಕೂಡ ಖರ್ಚು ಮಾಡಬಹುದು, ಆದರೆ ವಿದ್ಯುತ್ ಉತ್ಪಾದನೆ ಒಂದೆರಡು ದಿನದಲ್ಲಿ ಆಗುವುದಿಲ್ಲ. ಆದುದರಿಂದ ಮುಂದಾಲೋಚನೆ ಮಾಡಿ ವಿದ್ಯುತ್ ಘಟಕಗಳನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಇದರ ಬಗ್ಗೆ ನಾನು ಇಲ್ಲಿ ಉತ್ತರವನ್ನು ಸಾಕಷ್ಟು ವಿವರವಾಗಿ ಕೊಟ್ಟಿದ್ದೇನೆ. ಮತ್ತೆ ಅದನ್ನೇ ನಾನು repeat ಮಾಡುವುದಕ್ಕೆ ಇಷ್ಟಪಡುವುದಿಲ್ಲ. ನಾನು ಈಗಾಗಲೇ ಹೇಳಿದಂತೆ ಫೆಬ್ರವರಿ ತಿಂಗಳಿನಲ್ಲಿ ವಿದ್ಯುತ್ ಕೊರತೆಯನ್ನು ತಕ್ಷಣ ನೀಗಿಸುವುದಕ್ಕೆ 400 ಮೆಗಾವ್ಯಾಟ್ ವಿದ್ಯುತ್ತನ್ನು ಖರೀದಿ ಮಾಡಿದ್ದೇವೆ. ಈ ಮಾರ್ಚ್ ತಿಂಗಳಲ್ಲಿ 1000 ಮೆಗಾವ್ಯಾಟ್ ವಿದ್ಯುತ್ತನ್ನು ಖರೀದಿ ಮಾಡುತ್ತಿದ್ದೇವೆ.

ಇಲ್ಲಿ ನೈಸ್ ವಿಚಾರವನ್ನು ಕೆಲವರು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೆ, ನಾನು ಅತ್ಯಂತ ವಿನಯದಿಂದ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತಾವು ಪ್ರತಿಪಕ್ಷದ ನಾಯಕರೆಲ್ಲರ ಜೊತೆ ಸಮಾಲೋಚನೆ ಮಾಡಿ ಒಂದು ದಿವಸ ಇಲ್ಲಿ ಪೂರ್ತಿಯಾಗಿ ನೈಸ್ ವಿಚಾರದ ಬಗ್ಗೆ ಸವಿಸ್ತಾರವಾಗಿ ಚರ್ಚೆಯಾದರೆ ಗೊತ್ತಾಗುತ್ತದೆ. ಇದಕ್ಕೆ ಯಾರು ಕಾರಣ? ಇದಕ್ಕೆ ಯಾರೇ ಕಾರಣವಾಗಿರಲಿ, ಈ ರಸ್ತೆ ಮಾಡಿ ಜನರಿಗೆ ಆಗಿರುವ ತೊಂದರೆ ತಪ್ಪಿಸುವುದಕ್ಕೆ ಏನೇನು ಮಾಡಬಹುದು, ಹೆಚ್ಚುವರಿ ಭೂಮಿ ಯಾರೇ ಕೊಟ್ಟಿರಲಿ, ನಾನು ಅದನ್ನು ಮುಂದುವರೆಸುವುದಕ್ಕೆ ಇಷ್ಟಪಡುವುದಿಲ್ಲ. ನಾನು ಅಗತ್ಯವಿರುವಷ್ಟು ಭೂಮಿಯನ್ನು ಬಿಟ್ಟು ಒಂದು

ಗುಂಟೆ ಜಮೀನನ್ನು ಹೆಚ್ಚಿಗೆ ಕೊಡುವುದಕ್ಕೆ ಇಷ್ಟಪಡುವುದಿಲ್ಲ, ಕೊಡುವುದಿಲ್ಲ. ಆದುದರಿಂದ ಈ ಬಗ್ಗೆ ನಾನು ಏನು ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇನೆಂಬುದು ಬರುವ ದಿವಸಗಳಲ್ಲಿ ನಿಮಗೆ ಗೊತ್ತಾಗುತ್ತದೆ. ನಾನು ಮಾತನಾಡುವವನಲ್ಲ, ಕೃತಿಯಲ್ಲಿ ತೋರಿಸುವಂಥ ವ್ಯಕ್ತಿ. ಈ ಬಗ್ಗೆ ಸಾಕಷ್ಟು ಚರ್ಚೆಯನ್ನು ಮಾಡೋಣ. ವಿಶೇಷವಾಗಿ ರಾಜ್ಯದ ಹಣಕಾಸಿನ ನಿರ್ವಹಣೆಯ ಬಗ್ಗೆ ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸಿದ್ಧರಾಮಯ್ಯನವರೆ, ನಾನು ಒಂದು ಮಾತನ್ನು ಹೇಳುವುದೇನೆಂದರೆ ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ ಈ ವರ್ಷದ ರಾಜ್ಯದ ಹಣಕಾಸಿನ ಪರಿಸ್ಥಿತಿ ಸಾಕಷ್ಟು ಸುಧಾರಣೆಯಾಗಿದೆ. ಜಗತ್ತಿನಾದ್ಯಂತ ಆರ್ಥಿಕ ಹಿಂಜರಿತದ ಪರಿಣಾಮವಾಗಿ ಆರ್ಥಿಕ ಬೆಳವಣಿಗೆ ಕುಂಠಿತವಾಗಿತ್ತು, ಸಂಪನ್ಮೂಲ ಸಂಗ್ರಹಣೆಯಲ್ಲಿ ಸ್ವಲ್ಪ ಕಡಿಮೆಯಾಗಿದೆ. ಅದು ಭಾರತ ದೇಶವಾಗಲಿ, ಕರ್ನಾಟಕವಾಗಲಿ, ಇದಕ್ಕೆ ಹೊರತಲ್ಲ. ಆದರೂ ಕೆಲವು ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಂಡಿರುವುದರಿಂದ ಸ್ವಲ್ಪ ಸುಧಾರಣೆಯಾಗುತ್ತಿದೆ. ವರ್ಷದ ಪ್ರಾರಂಭದಲ್ಲಿ ಜೂನ್, ಜುಲೈನಲ್ಲಿ ಹಿನ್ನಡೆಯಾಗಿತ್ತು, ಈಗ ಸ್ವಲ್ಪ ಸುಧಾರಣೆಯಾಗಿದೆ. ರಾಜ್ಯದ ಸಂಪನ್ಮೂಲ ಸಂಗ್ರಹಣೆ ಕಳೆದ ವರ್ಷಕ್ಕಿಂತ ಹೆಚ್ಚಾಗುವಂಥ ಮತ್ತು ಯೋಜನಾ ವೆಚ್ಚದಲ್ಲಿ ಹೆಚ್ಚಿನ ಒಂದು ಸಾಧನೆ ಮಾಡುವಂಥ ಭರವಸೆ ನನಗಿದೆ. ಅದು ನಾಳೆ ಅಂಕಿ ಅಂಶಗಳಿಂದ ತಮಗೆ ಗೊತ್ತಾಗುತ್ತದೆ. ಭಾರತೀಯ ರಿಸರ್ವ್ ಬ್ಯಾಂಕಿನ State Finances', A study of Budget 2009–10 ಎಂಬ ಪ್ರಕಟಣೆಯಲ್ಲಿ ಅವರು ಅಧ್ಯಯನ ಮಾಡಿರುವುದನ್ನು ಹೇಳಿದ್ದಾರೆ. RBI ವರದಿಯಲ್ಲಿರುವಂತೆ ಕೇಂದ್ರ ಸರ್ಕಾರ ನಿಗದಿ ಪಡಿಸಿದ ವಿತ್ತೀಯ ಮಿತಿಯನ್ನು ಪಾಲಿಸಿದ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯವೂ ಒಂದು. ಈ ಪ್ರಕಟಣೆಯಲ್ಲಿ ಅವರು ಏನು ಹೇಳುತ್ತಾರೆಂದರೆ, "However, despite the slowing down of revenue, the need for increased expenditure on account of economic slow-down, states like Karnataka, Kerala, Bihar, Chattisgarh, Gujarat and Tamil Nadu have been successful in limiting their fiscal deficit

within the target of 3% of their GSDP during 2009-10." ಕರ್ನಾಟಕ ರಾಜ್ಯ ಸೇರಿದಂತೆ ಒಟ್ಟು 6 ರಾಜ್ಯಗಳು ವಿತ್ತೀಯ ಮಿತಿಯನ್ನು ಪಾಲಿಸಿದೆ. ಉಳಿದ ರಾಜ್ಯಗಳು ಆ ಮಿತಿಯನ್ನು ಪಾಲಿಸಲು ಸಾಧ್ಯವಾಗಿಲ್ಲವೆನ್ನುವುದನ್ನು RBI ಅಧ್ಯಯನದಿಂದ ತಿಳಿಸಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಜನವರಿ ಅಂತ್ಯಕ್ಕೆ ರಾಜ್ಯದ ರಾಜಸ್ವ ಆದಾಯ 36,673 ಕೋಟಿ ರೂಪಾಯಿಗಳು ಆಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 34,459 ಕೋಟಿ ರೂಪಾಯಿಗಳಾಗಿತ್ತು. ಅಂದರೆ ಈ ವರ್ಷ 2,214 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಸಂಗ್ರಹ ಮಾಡಿದ್ದೇವೆ. ಈ ವರ್ಷ ಯೋಜನಾ ವೆಚ್ಚದಲ್ಲಿ ಸಾಕಷ್ಟು ಪ್ರಗತಿಯಾಗಿದೆ. ನಾವು ಆಡಳಿತದಲ್ಲಿ ಹೀಗೆ ಒಂದು ಬಿಗಿ ತಂದು ಸುಧಾರಣೆ ಮಾಡಿ, ರಾಜ್ಯದ ಅಭಿವೃದ್ಧಿ ಕಡೆ ಹೆಚ್ಚು ಗಮನವನ್ನು ಕೊಡುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ರೈಲ್ವೆ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು 50% cost sharing ನಲ್ಲಿ ಕೇಂದ್ರ ಸರ್ಕಾರದ ರೈಲ್ವೆ ಸಚಿವರು ಬಂದಾಗ ನಾನು ಅವರಿಗೆ ಭರವಸೆಯನ್ನು ಕೊಟ್ಟಿದ್ದೇನೆ. ಅದಕ್ಕಾಗಿ ನಾನು ದೊಡ್ಡ ಪ್ರಮಾಣದಲ್ಲಿ ಹಣವನ್ನು ತೆಗೆದಿಡುತ್ತಿದ್ದೇನೆ. ಬೆಂಗಳೂರಿನಲ್ಲಿ ಒಂದು ವರ್ತುಲ ಟ್ರೈನ್, local train ತುಂಬಾ ಅಗತ್ಯವಿದೆ. ಇದಕ್ಕೆ ತಾವೆಲ್ಲರೂ ಸಹಕಾರ ಕೊಟ್ಟರೆ ಉಳಿತಾಯ ಮಾಡಿಯಾದರೂ ಅದಕ್ಕೆ ಎಷ್ಟು ಹಣದ ಅಗತ್ಯವಿದೆಯೋ ಅಷ್ಟು ಹಣವನ್ನು ಒಮ್ಮೆಗೆ ಬಿಡುಗಡೆ ಮಾಡಿ ಬೆಂಗಳೂರು ನಗರದಲ್ಲಿ ಜನಸಂದಣಿಯಿಂದ ತೊಂದರೆಗೆ ಏನು ಒಳಗಾಗಿದ್ದಾರೆ, ಅದನ್ನು ಸರಿಪಡಿಸುವುದಕ್ಕೆ ನನ್ನಿಂದ ಏನು ಸಾಧ್ಯವಿದೆಯೋ ಆ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತೇನೆ. ಇನ್ನು ಮೂರ್‍ನಾಲ್ಕು ದಿವಸಗಳಲ್ಲಿ ದೆಹಲಿಗೆ ಹೋದಾಗ ಅಲ್ಲಿ ರೈಲ್ವೆ ಸಚಿವರನ್ನು ಭೇಟಿ ಮಾಡಿ ಆ ದಿಕ್ಕಿನಲ್ಲಿ ಪ್ರಾಮಾಣಿಕವಾದ ಪ್ರಯತ್ನವನ್ನು ನಾವು ನೀವೆಲ್ಲರೂ ಒಟ್ಟಾಗಿ ಸೇರಿ ಮಾಡೋಣ. ಸನ್ಮಾನ್ಯ ರೇವಣ್ಣನವರಿಗೆ ಇವತ್ತು ನಾನು ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ, ಏಕೆಂದರೆ ನಾಳೆ ಬಜೆಟ್ ಮಂಡನೆ ಮಾಡಬೇಕಾದರೆ ನಾನು ಇವತ್ತು ಸ್ವಲ್ಪ ಸಮಾಧಾನವಾಗಿ ಹೋಗಿ ನಾಳೆ ಬಜೆಟ್ ಅನ್ನು ಮಂಡನೆ ಮಾಡಬೇಕು. ನಾನು ಇಲ್ಲಿ ಏನಾದರೂ

ಹೇಳಿದರೆ, ನೀವು ಏನಾದರೂ ಹೇಳುತ್ತೀರಾ, ಮತ್ತೆ ಇಲ್ಲಿ ನಾವು ನೀವು ಬಡಿದಾಡುವುದು ಆಗುತ್ತದೆ. ಅದರ ಬದಲು ಇದನ್ನು ಇನ್ನೊಮ್ಮೆ ಚರ್ಚೆ ಮಾಡೋಣ, ನಾನು ಇರುತ್ತೇನೆ. ಇನ್ನು ಕೈಗಾರಿಕಾ ಕ್ಷೇತ್ರದಲ್ಲೂ ಸಹ ಗಣನೀಯ ಸಾಧನೆ ಆಗುತ್ತಿದೆ. Global Investors' Meetಗೆ ನಿಮ್ಮೆಲ್ಲರ ಸಹಕಾರವಿದ್ದರೆ ದೊಡ್ಡ ಪ್ರಮಾಣದಲ್ಲಿ ಕೈಗಾರಿಕೋದ್ಯಮವನ್ನು ತರುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಈಗ ಸಾಕಷ್ಟು ಸಮಯವಾಗಿರುವುದರಿಂದ ಮತ್ತೆ ನಾಳೆ ಬಜೆಟ್ ಮಂಡನೆ ಮಾಡುವ ಅವಕಾಶವಿರುವುದರಿಂದ ಮತ್ತು ಇನ್ನೂ ಅನೇಕ ವಿಚಾರಗಳ ಬಗ್ಗೆ ಸವಿಸ್ತಾರವಾಗಿ ಚರ್ಚೆ ಮಾಡುವ ಅವಕಾಶವಿರುವುದರಿಂದ ನಾನು ಇಷ್ಟು ಮಾತ್ರ ಈ ಸಂದರ್ಭದಲ್ಲಿ ತಮಗೆ ಉತ್ತರದ ರೂಪದಲ್ಲಿ ಕೆಲವು ಮಾತುಗಳನ್ನು ಹೇಳುತ್ತಾ, ತಮ್ಮ ಸಹಕಾರಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸತ್ಯಕ್ಕೆ ದೂರವಾದಂಥ ಮಾತುಗಳನ್ನು ಹೇಳಿಸಿದ್ದರು. ವಾಸ್ತವಿಕವಾಗಿ ನಾವು ಏನು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇವೆ, ಅವುಗಳಿಗೆ ಯಾವುದಕ್ಕೂ ಉತ್ತರವನ್ನು ಕೊಡುವಂಥ ಪ್ರಯತ್ನವನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡಲಿಲ್ಲ. ನಿನ್ನೆ power ಬಗ್ಗೆ ಏನು ಹೇಳಿದ್ದಾರೆ, ಅದನ್ನೇ ಇವತ್ತು ಹೇಳಿದ್ದಾರೆ. ರಾಜ್ಯದಲ್ಲಿ ಇವತ್ತು ಕೂಡ ಹಳ್ಳಿಗಾಡಿನಲ್ಲಿ ಜನರು, ವಿದ್ಯಾರ್ಥಿಗಳು ಎಲ್ಲರೂ ಕೂಡ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಅದಕ್ಕೆ ತಾತ್ಕಾಲಿಕವಾದ ಪರಿಹಾರವೇನು? ದೀರ್ಘ ಕಾಲದ ಪರಿಹಾರ ಏನು? ಇಂಥದ್ದು ಯಾವುದನ್ನೂ ಮಾಡತಕ್ಕಂಥ ಪ್ರಯತ್ನಗಳನ್ನು ಮಾಡಿಲ್ಲ. ಪ್ರವಾಹ ಪರಿಹಾರದ ವಿಚಾರದಲ್ಲಂತೂ ಅವರೇ 1,878 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ, 1,700 ಕೋಟಿ ರೂಪಾಯಿಗಳು ಖರ್ಚಾಗಿದೆಯೆಂದು ಒಪ್ಪಿಕೊಂಡಿದ್ದಾರೆ. ಕೇಂದ್ರ ಸರ್ಕಾರವೇ 1,733 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಸಾರ್ವಜನಿಕರು ವಂತಿಕೆ ಮೂಲಕ 341 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಂದರೆ 2,074 ಕೋಟಿ

ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ಮತ್ತು ಸಾರ್ವಜನಿಕರ ವಂತಿಕೆ ಬಂದಿದೆ. ಇವರು 1,700 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಎಲ್ಲಾ 63,000 ಮನೆಗಳನ್ನು ಕಟ್ಟುತ್ತೇವೆಂದು ಜನರು ಮುಂದೆ ಬಂದಿಲ್ಲ. ನಿಮ್ಮ ಹತ್ತಿರ ದುಡ್ಡು ಇದ್ದಿದ್ದರೆ, ಎಲ್ಲೆಲ್ಲಿ ಕಟ್ಟಬೇಕೆಂದು ಇದೆಯೋ ಅಲ್ಲೆಲ್ಲಾ ಮನೆಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಬಹುದಿತ್ತಲ್ಲಾ? ನೀವು ಎಲ್ಲಾದರೂ ಒಂದು ಮನೆಯನ್ನು ಕಟ್ಟಿದ್ದೀರಾ? Shift ಮಾಡುವಂಥದ್ದು ಇತಿಹಾಸದಲ್ಲೆ ಮಾಡಿಲ್ಲ, ಇಡೀ ಜಗತ್ತಿನಲ್ಲೆ ಮಾಡಿಲ್ಲ, ಮಾಡುತ್ತಿದ್ದೇವೆ ಎಂದು ಹೇಳುತ್ತೀರಿ. ಇಂಥ ದುರಂತ ನೂರು ವರ್ಷಗಳಿಂದ ಆಗಿರಲಿಲ್ಲ. ಕೇಂದ್ರ ಸರ್ಕಾರವೂ ಸಹ ದೊಡ್ಡ ಪ್ರಮಾಣದಲ್ಲಿ ಸಹಾಯ ಮಾಡಿದೆ, ಸಾರ್ವಜನಿಕರು ಸಹಾಯ ಮಾಡಿದ್ದಾರೆ. ನಿಮ್ಮ ಕೈಯಲ್ಲಿ ಆ ಹಣವನ್ನೇ ಖರ್ಚು ಮಾಡುವುದಕ್ಕೆ ಆಗಿಲ್ಲ. ಆ ಹಣವನ್ನು ಸಂಬಳ ಕೊಡುವುದಕ್ಕೆ ಖರ್ಚು ಮಾಡಿಕೊಂಡಿದ್ದಿರಾ, ಬೇರೆ ಭೇರೆಯದಕ್ಕೆ ಖರ್ಚು ಮಾಡಿಕೊಂಡಿರಬೇಕು. ಹಣಕಾಸಿನ ಪರಿಸ್ಥಿತಿಯಂತೂ ಕೆಟ್ಟು ಹೋಗಿದೆ. ನಿಮ್ಮ ಹತ್ತಿರ ಯಾವುದಕ್ಕೂ ಉತ್ತರವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಳೆ ಗೊತ್ತಾಗುತ್ತದೆ.

ಶ್ರೀ ಸಿದ್ದರಾಮಯ್ಯ : ನಾಳೆ ಗೊತ್ತಾಗುತದಲ್ಲ? ಈಗ ಕೇಳಿರುವುದಕ್ಕೆ ಉತ್ತರ ಹೇಳಿದ್ದೀರಲ್ಲ. ಬೀದಿಯಲ್ಲೆಲ್ಲಾ ಮಾತನಾಡುವುದು, ಇಲ್ಲೆ ಮಾತನಾಡಿ, ಇಲ್ಲೂ ಹೇಳುವುದಿಲ್ಲ, ಬೀದಿಯಲ್ಲೂ ಹೇಳುವುದಿಲ್ಲ. ನೀವು ಎಲ್ಲಿ ಹೇಳಿದ್ದೀರಿ? ನೀವು ಎಲ್ಲಿ ಹೇಳುತ್ತೀರಾ ಎಂಬುದನ್ನು ಹೇಳಿ, ಆ ಜಾಗಕ್ಕೆ ನಾವು ಬರುತ್ತೇವೆ, ಇಲ್ಲೂ ಹೇಳುವುದಿಲ್ಲ, ಬೇರೆ ಎಲ್ಲೂ ಹೇಳುವುದಿಲ್ಲ. ನಾವು ಆರೋಪ ಮಾಡಿದರೆ "ಅವರಿಗೆ ಹೊಟ್ಟೆಕಿಚ್ಚು" ಎಂದು ಹೇಳುತ್ತೀರಿ, ತೀರಾ emotional ಆಗಿಬಿಟ್ಟರೆ "ಅವರಿಗೆ ನಾಲಿಗೆ ಸೀಳಿರಿ" ಎನ್ನುತ್ತಾರೆ. ಆ ರೀತಿ ನೀವು ಹೇಳಿಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ನೀವು ಏನು ಹೇಳಿದ್ದೀರಿ, ನಾನು ಏನು ಹೇಳಿದೆಯೆಂಬುದು ಬೇಡ.

ಶ್ರೀ ಸಿದ್ದರಾಮಯ್ಯ : ಬೇಡವಾ? ಅವರಿಗೆ ನಾಲಿಗೆ ಸೀಳಿ ಎಂದು....

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಏನಾದರೂ ಮಾಡಿ ನನ್ನನ್ನು ಕೆಣಕುವುದಕ್ಕೆ ನೋಡುತ್ತೀರಾ, ಅದಕ್ಕೆ ನಾನು ಏನೂ ತಲೆ ಕೆಡಿಸಿಕೊಳ್ಳುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಇವರು ನಾಳೆ ಏನೋ ಬಹಳ ಒಳ್ಳೆಯ ಬಜೆಟ್ ಮಂಡಿಸಿ ಬಿಡುತ್ತೇವೆಂದು ಹೇಳುತ್ತಾರೆ. ಆದರೆ ಯಡಿಯೂರಪ್ಪನವರೆ, ಸಂಪನ್ಮೂಲಗಳೇ ಇಲ್ಲ ಏನು ಮಂಡಿಸುತ್ತೀರಿ? ನೀವು ತೆರಿಗೆಯನ್ನು ವಸೂಲು ಮಾಡಿದ್ದೀರಾ? ತೆರಿಗೆ ಸೋರಿ ಹೋಗುವುದನ್ನು ತಪ್ಪಿಸಿದ್ದೀರಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ತೆರಿಗೆ ಸಂಗ್ರಹ ಮಾಡುವುದರಲ್ಲಿ ಈ ದೇಶದಲ್ಲೇ ಮೊದಲನೆಯ ಸ್ಥಾನದಲ್ಲಿದ್ದೇವೆ.

ಶ್ರೀ ಸಿದ್ದರಾಮಯ್ಯ : ಗೊತ್ತಿರಲಿಲ್ಲ. 2004–05 ರಲ್ಲಿ ತೆಗೆದುನೋಡಿ. In 2004–05, 2005–2006 what was the tax growth? What is the tax growth today? ಹೇಳಿ ನೋಡೋಣ. ನಿಮಗೆ ಸೋರಿಹೋಗುವುದನ್ನು plug ಮಾಡುವುದಕ್ಕೆ ಆಗಿಲ್ಲ. ನಿಮಗೆ ನಿಮ್ಮ ಕುರ್ಚಿ ಹಿಡಿದುಕೊಂಡು ಕುಳಿತುಕೊಳ್ಳುವುದೇ ಕಷ್ಟವಾಗಿದೆ, ಇವನ್ನೆಲ್ಲ ನೋಡುವುದಕ್ಕೆ ನಿಮಗೆ ಎಲ್ಲಿ ಸಮಯ ಸಿಗುತ್ತದೆ? ಅದರಲ್ಲಿ ಬೇರೆ ಅವರು ಹೇಳಿದ ಹಾಗೆ 17 ಇಲಾಖೆಗಳು. ಅಧಿಕಾರಿಗಳು ಬರೆದುಕೊಡುತ್ತಾರೆ, ಅದನ್ನು ತೆಗೆದುಕೊಂಡು ಬಂದು ನೀವು ಹೇಳಿಬಿಡುತ್ತೀರಿ. ಅವರು ನಿಮಗೆ ಸತ್ಯಕ್ಕೆ ದೂರವಾದದನ್ನೇ ಹೇಳಿಕೊಡುತ್ತಾರೆ. ನನಗೆ ಗೊತ್ತಿರುವ ಮಟ್ಟಿಗೆ Finance Departmentನಲ್ಲಿ review ಮಾಡಿದ್ದು ಒಂದನ್ನೂ ನಾನು ಕಂಡಿಲ್ಲ. ಇವತ್ತು ನನಗೆ ಇರುವ information ಪ್ರಕಾರ input ನಲ್ಲಿ false claimಗಳನ್ನು ಮಾಡುತ್ತಿದ್ದಾರೆ. ನಿಮ್ಮ ಕೈಯಲ್ಲಿ ಒಂದನ್ನೂ ತಪ್ಪಿಸುವುದಕ್ಕೆ ಆಗಿಲ್ಲ. After the introduction of VAT, false input claims ಮಾಡುತ್ತಿದ್ದಾರೆ. ನೀವು ಅದನ್ನು ತಪ್ಪಿಸುವುದಕ್ಕೆ ಆಗಿಲ್ಲ. ಸೋರಿ ಹೋಗುವುದನ್ನು ತಪ್ಪಿಸುವುದಕ್ಕೆ

ಆಗಿಲ್ಲ. Austerity measures ಎಂದು ಹೇಳಿದಿರಿ. ಆದರೆ ಕೃಷ್ಣದೇವರಾಯನ ಪಟ್ಟಾಭಿಷೇಕದ 500ನೇ ವರ್ಷದ ಆಚರಣೆಗೆ 75 ಕೋಟಿ ರೂ. ಖರ್ಚು ಮಾಡಿದಿರಿ ಎಂದು ಪತ್ರಿಕೆಗಳಲ್ಲಿ ಬರುತ್ತದೆ. ಒಂದು ಕಡೆ austerity measures ಎಂದು ಹೇಳುವುದು, ಇನ್ನೊಂದು ಕಡೆ ಅದ್ಧೂರಿಯಾಗಿ ಖರ್ಚು ಮಾಡುವುದು ಆಗುತ್ತಿದೆ. ನೀವು ಹೇಳುವುದಕ್ಕೂ, ನಿಮ್ಮ ನಡವಳಿಕೆಗೂ ಏನಾದರೂ ಸಂಬಂಧ ಇದೆಯೇ? ಇವತ್ತು ನಿಮ್ಮ ಸರ್ಕಾರ ಜನರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸಂಪೂರ್ಣ ಸೋತಿದೆ. ನಿಮ್ಮ Economic Survey ಮತ್ತು ನಿಮ್ಮ ಸಾಧನೆಗಳು ಅದನ್ನು ತೋರಿಸುತ್ತದೆ. ಈ ವರ್ಷ, ಅಂದರೆ 2009–10ಕ್ಕೆ, what is the G.D.P. growth? ಇವತ್ತು ಕೇಂದ್ರದ G.D.P. growth 7.5%ವರೆಗೆ ಹೋಗಿರುವಾಗ, ನೀವು ಇನ್ನೂ 5.5% ಎಂದು ಕುಳಿತಿದ್ದೀರಿ. Not even 5.5%. What does it mean? What does it indicate? ಇಡೀ ದೇಶದ್ದು 7.5% ಇದೆ. ಅಲ್ಲಿ economy slow down ಆಗಿರಲಿಲ್ಲವೇ? ನಿಮಗೆ ಮಾತ್ರ slow down ಆಗಿಬಿಟ್ಟಿತೇ? ಕೇಂದ್ರದಲ್ಲಿ agricultural production ಸರಾಸರಿ–2% ಆಗಿದೆ. Economic Surveyಯಲ್ಲಿ ನಿಮ್ಮದು ಏಕೆ 5.5% ಇದೆ? Government of Indiaದ್ದು, All India G.D.P. is growing at the rate of 7.2%, 7.5% they are expecting. But whereas, in Karnataka it is only 5.5%. It clearly shows, ನೀವು ಅಧಿಕಾರಕ್ಕೆ ಬಂದ ಮೇಲೆ ಈ ರಾಜ್ಯದ ಅಭಿವೃದ್ಧಿ ಸಂಪೂರ್ಣ ಕುಂಠಿತವಾಗಿದೆ, G.D.P. growth ಬಿದ್ದುಹೋಗಿದೆ. ರಾಜ್ಯದ ಅಭಿವೃದ್ಧಿ ಮಾಡಿದ್ದೇವೆ ಎಂದು ಹೇಳುತ್ತೀರಿ. ಎಲ್ಲಿ ಮಾಡಿದ್ದೀರಿ ರಾಜ್ಯದ ಅಭಿವೃದ್ಧಿಯನ್ನು? ಬರಿ ಅಂಕಿಅಂಶಗಳನ್ನು ಹಿಡಿದುಕೊಂಡು ಓದಿಬಿಟ್ಟರೆ ಆಗುತ್ತದೆಯೇ? ಇದು ನೀವೇ ಮಾಡಿರತಕ್ಕಂಥ Economic Survey; ನಾವು ಮಾಡಿದ್ದಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವೇನು ಮಾತನಾಡುತ್ತಿದ್ದೀರಿ? ಈ ದೇಶದ ಎಲ್ಲ ರಾಜ್ಯಗಳನ್ನು ನೋಡಿ, ಕೇಂದ್ರದಲ್ಲಿ ಏನಾಗಿದೆ ಎಂದು ನೋಡಿ.

ಶ್ರೀ ಸಿದ್ದರಾಮಯ್ಯ : ನಿಮ್ಮದನ್ನೂ ನೋಡಿದ್ದೇವಲ್ಲ?

ಶ್ರೀ ಬಿ.ಎಸ್. ಯಡಿಯೂರಪ್ಪ : ಕೇಂದ್ರ ಸರ್ಕಾರ 10 ಲಕ್ಷ ಕೋಟಿ ರೂ. ಬಜೆಟ್‌ಗೆ 4 ಲಕ್ಷ ಕೋಟಿ ರೂ. ಸಾಲ ತಂದರು.

ಶ್ರೀ ಸಿದ್ದರಾಮಯ್ಯ : ನಾನು ಕೇವಲ ಕರ್ನಾಟಕದ್ದು ನೋಡುತ್ತೇನೆಯೇ ಹೊರತು . . . . .

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಮೂಗಿನ ನೇರಕ್ಕೆ ಮಾತನಾಡುವುದರಿಂದ ಏನೂ ಉಪಯೋಗವಾಗುವುದಿಲ್ಲ. ನಮ್ಮ ಸಾಧನೆ ಏನು ಎನ್ನುವುದನ್ನು ನಾಳೆ ಬಜೆಟ್ ಮಂಡನೆ ಆದಮೇಲೆ ನೋಡಿ.

ಶ್ರೀ ಸಿದ್ದರಾಮಯ್ಯ : ಇಲ್ಲಿದೆಯಲ್ಲ? ಇದನ್ನು ನೋಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದರಲ್ಲಿರುವುದನ್ನೂ ಸೇರಿಸಿ ಹೇಳುತ್ತೇವೆ.

ಶ್ರೀ ಸಿದ್ದರಾಮಯ್ಯ : This is the indicator. ಇದನ್ನೇನು ನಾನು ನನ್ನ ಮನೆಯಿಂದ ತೆಗೆದುಕೊಂಡು ಬಂದಿದ್ದೇನೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅಕ್ಕಪಕ್ಕದ ರಾಜ್ಯಗಳಲ್ಲಿ ಏನಾಗಿದೆ ಎಂದು ನೋಡಿ.

ಶ್ರೀ ಸಿದ್ದರಾಮಯ್ಯ : ಕೇಂದ್ರದಲ್ಲಿ ಏನಾಗಿದೆ ಎಂದು ನೋಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಡೀ ದೇಶಕ್ಕೆ ಏನಾಗಿದೆ, ಅಕ್ಕಪಕ್ಕದ ರಾಜ್ಯಗಳಲ್ಲಿ ಏನಾಗಿದೆ, ಅದರ ಚೌಕಟ್ಟಿನಲ್ಲಿ ನಾನು ಮಾಡಿದ್ದೇನೆ.

SRI SIDDARAMAIAH : You please go through this. The Economic Survey of India, Government of India, ಇದನ್ನು ನೋಡಿ. ಅದಕ್ಕೂ, ಇದಕ್ಕೂ compare ಮಾಡಿ. ನೀವು ಈ ರಾಜ್ಯವನ್ನು ಹಾಳು ಮಾಡಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಜನಗಳ ಮುಂದೆ ಹೋದಾಗ, ಯಾರು ಹಾಳು ಮಾಡಿದರು ಎಂದು ಗೊತ್ತಾಗುತ್ತದಲ್ಲ? ಬೆಂಗಳೂರಿನಲ್ಲಿ ಜನಗಳ ಮುಂದೆ ಹೋದಾಗ ಗೊತ್ತಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಹೋಗೋಣ ನಡೆಯಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಳೆಯೇ ಹೋಗೋಣ ಬನ್ನಿ. ಬೆಂಗಳೂರು ಹೇಗಿತ್ತು? ನೀವು ಬಂದ ಮೇಲೆ ಏನೇನು ಮಾಡಿದಿರಿ, ನಾವು ಬಂದ ಮೇಲೆ ಏನೇನು ಮಾಡಿದ್ದೇವೆ ಎಂದು ಕೇಳೋಣ. ಆಗ ಗೊತ್ತಾಗುತ್ತದೆ, ನಿಮ್ಮ ಬಣ್ಣ ಬಯಲಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಆಯಿತು, ನೋಡೋಣ ನಡೆಯಿರಿ. ಹೋಗೋಣ ನಡೆಯಿರಿ. ನಿಮ್ಮ ಬಣ್ಣ ಈಗಾಗಲೇ ಬಯಲಾಗಿಬಿಟ್ಟಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನಿಮ್ಮಂಥವರನ್ನು ಬಹಳ ನೋಡಿದ್ದೇನೆ.

ಶ್ರೀ ಸಿದ್ದರಾಮಯ್ಯ : ಹೊಸದಾಗಿ ಬಯಲಾಗುವಂಥದು ನಿಮ್ಮದು ಏನಿದೆ? ಈಗಾಗಲೇ ಬಯಲಾಗಿಬಿಟ್ಟಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಶಾಂತರೀತಿಯಿಂದ ತಮ್ಮ ಮಾತಿಗೆ ಗೌರವ ಕೊಟ್ಟರೆ ಅದನ್ನು ದುರುಪಯೋಗ ಮಾಡಿಕೊಳ್ಳಬೇಡಿ ಅಷ್ಟೆ.

SRI SIDDARAMAIAH : I never expected this.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಈ ರೀತಿ ಮಾತನಾಡುವುದಾದರೆ, budget ಮೇಲೆ ನಾಳೆ ಚರ್ಚೆ ಮಾಡೋಣ.

ಶ್ರೀ ಸಿದ್ದರಾಮಯ್ಯ: ಒಂದು ದಿನ ಬೇಕಾದರೂ ಚರ್ಚೆ ಮಾಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಏನು ಬೇಕಾದರೂ ಮಾತನಾಡಿದರೂ ಕೇಳುತ್ತೇನೆ ಅಂದುಕೊಂಡಿರುವಿರಾ? ಅದು ನಡೆಯುವುದಿಲ್ಲ. ಜನ ನಿಮ್ಮ ಮಾತನ್ನು ಒಪ್ಪುವುದಿಲ್ಲ ಎಂದೆ.

ಶ್ರೀ ಸಿದ್ದರಾಮಯ್ಯ : ನಿಮ್ಮ ಮಾತನ್ನು ಯಾರು ಒಪ್ಪುತ್ತಾರೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಏನೆಂದು ಜನಗಳಿಗೆ ಗೊತ್ತಾಗಿದೆ.

ಶ್ರೀ ಸಿದ್ದರಾಮಯ್ಯ : ನಿಮ್ಮ ಮಾತನ್ನು ಒಪ್ಪುವವರು ಯಾರಿದ್ದಾರೆ? ನಿಮ್ಮ ಮಾತನ್ನು ಒಪ್ಪಿಕೊಳ್ಳುತ್ತಾರೆಯೇ? ನಿಮಗೆ ಕೋಪ ಬಂದರೆ ನನಗೂ ಕೋಪ ಬರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾಡಿಕೊಳ್ಳಿ, ಯಾರು ಬೇಡವೆನ್ನುತ್ತಾರೆ? ಹೆದರಿಸಿದರೆ ನಾವು ಹೆದರುವುದಿಲ್ಲ.

ಶ್ರೀ ಸಿದ್ದರಾಮಯ್ಯ : ನೀವು ಜೋರಾಗಿ ಮಾತನಾಡಿದರೆ, ನಾನೂ ಜೋರಾಗಿ ಮಾತನಾಡುತ್ತೇನೆ. ನಿಮಗೊಬ್ಬರಿಗೇ ಅಲ್ಲ ಕೋಪ ಬರುವುದು. ನನಗೂ ಕೋಪ ಬರುತ್ತದೆ.

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ನಾನು ಹೇಳುತ್ತೇನೆ, ಈ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಹಾಳು ಮಾಡಿದ್ದೀರಿ. ಸಂಪನ್ಮೂಲ ಕ್ರೋಢೀಕರಣ ಮಾಡುವುದರಲ್ಲಿ ಸಂಪೂರ್ಣ ವಿಫಲರಾಗಿದ್ದೀರಿ. ಅಭಿವೃದ್ಧಿ ಕೆಲಸಗಳಿಗೆ ನಿಮ್ಮ ಹತ್ತಿರ ಹಣವಿಲ್ಲ. ಅಭಿವೃದ್ಧಿ ಕೆಲಸಗಳು ಸಂಪೂರ್ಣವಾಗಿ ಕುಂಠಿತವಾಗಿವೆ. ಪ್ರವಾಹದಿಂದ ಪೀಡಿತರಾದ ಜನರಿಗೆ ನೀವು ಸರಿಯಾಗಿ ಪರಿಹಾರವನ್ನು ಕೊಟ್ಟಿಲ್ಲ. ಕೇಂದ್ರ ಸರ್ಕಾರ ಕೊಟ್ಟಿರುವಂಥ ಹಣವನ್ನೂ ಕೂಡ ಸರಿಯಾಗಿ ಖರ್ಚು ಮಾಡಿಲ್ಲ. ವಿದ್ಯುತ್ ಕ್ಷಾಮವನ್ನು ಬಗೆಹರಿಸುವುದರಲ್ಲಿ ಸಂಪೂರ್ಣ ವಿಫಲರಾಗಿದ್ದೀರಿ. ಈ ಸರ್ಕಾರದವರು ತಮ್ಮ ಕುರ್ಚಿ ಉಳಿಸಿಕೊಳ್ಳುವುದಕ್ಕೋಸ್ಕರ ಮಾಡಬಾರದಂಥ ಕೆಲಸಗಳನ್ನು ಮಾಡಿದ್ದೇವೆ ಎಂದು ನೀವೇ ಹೇಳಿದ್ದೀರಿ. ನಿಮ್ಮ ಉತ್ತರದಿಂದ ನಮಗ್ಯಾರಿಗೂ ಕೂಡ ತೃಪ್ತಿಯಾಗಿಲ್ಲ, ಸಮಾಧಾನವಾಗಿಲ್ಲ, ನಾವು ಇದನ್ನು ವಿರೋಧ ಮಾಡಿ, walk out ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಮುಖ್ಯಮಂತ್ರಿಗಳು ನಾಳೆ ಬಜೆಟ್‌ಅನ್ನು ಮಂಡನೆ ಮಾಡಬೇಕಾಗಿರುವುದರಿಂದ ನಾವು ಅವರಿಗೆ ಯಾವುದೇ tension ಕೊಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಅವರು ನಾಳೆ ಈ ರಾಜ್ಯದ ಐದು ಕೋಟಿ ಜನತೆಗೆ ಉತ್ತಮವಾದಂಥ ಒಂದು ಬಜೆಟ್ ಕೊಡಬೇಕು. ನಮಗೇನು ಅವರ ಬಗ್ಗೆ ಯಾವುದೇ ದ್ವೇಷವಾಗಲೀ, ಮತ್ತೊಂದಾಗಲೀ ಇಲ್ಲ. ಅವರಿಗೆ ಒಳ್ಳೆಯದಾಗಲಿ. 18 ತಿಂಗಳಿಂದ ನಾನು

ಸುಳ್ಳು ಹೇಳಿದ್ದೇನೆ ಎಂದು ಅವರೇ ಸಾರ್ವಜನಿಕವಾಗಿ ಒಪ್ಪಿಕೊಂಡಿದ್ದಾರೆ. ನಾಳೆಯಾದರೂ ಅವರು ನಿಜವಾದ ಪರಿಸ್ಥಿತಿಯನ್ನು ಹೇಳಿ, ಈ ರಾಜ್ಯದ ಜನತೆಗೆ ಉತ್ತಮವಾದಂಥ ಒಂದು ಬಜೆಟ್ ಕೊಡಲಿ ಎಂದು ಅವರಿಗೆ ಯಾವುದೇ tension ಕೊಡಬಾರದು ಎಂದು ನಾವು ಅವರಿಗೆ ಯಾವುದೇ clarification ಕೇಳಲು ಹೋಗಲಿಲ್ಲ ಅಥವಾ ನಾವು ಸಭಾತ್ಯಾಗವನ್ನೂ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಅವರಿಗೆ ಮನವಿ ಮಾಡುವುದು ಇಷ್ಟೇ, ಏಕೆಂದರೆ ಅವರು ರೈತರ ಮಕ್ಕಳು. ಈಗ ಇಲ್ಲಿ ಸಹಕಾರ ಮಂತ್ರಿಗಳೂ ಇದ್ದಾರೆ, ಪಶುಸಂಗೋಪನಾ ಮಂತ್ರಿಗಳೂ ಇದ್ದಾರೆ. ಹಾಲಿಗೆ ಸಂಬಂಧಿಸಿದಂತೆ ಮತ್ತೆ ಕೂಪನ್ ಕೊಡುವ ಪರಿಸ್ಥಿತಿ ಬರುತ್ತದೆ, ಬೇಕಾದರೆ ನೀವು ಚೆಕ್ ಮಾಡಿ. 40 ಲಕ್ಷ ಇದ್ದದ್ದು ಇವತ್ತು 32 ಲಕ್ಷಕ್ಕೆ ಬಂದಿದೆ. ಆದ್ದರಿಂದ ನೀವು ಒಂದು ಲೀಟರಿಗೆ ಕನಿಷ್ಠವೆಂದರೂ 3–4 ರೂಪಾಯಿಗಳನ್ನು ಜಾಸ್ತಿ ಮಾಡಿ. ಯಾರೂ ನಿಮ್ಮನ್ನು ಬಯ್ಯುವುದಿಲ್ಲ. ಬಯ್ಯುವುದಾದರೆ ನಮ್ಮನ್ನೇ ಬಯ್ಯಲಿ. ಈ ರೀತಿ ರೇವಣ್ಣನವರು ಹೇಳಿದ್ದಾರೆ ಎಂದು ಬೇಕಾದರೆ ಕಾರ್ಪೊರೇಷನ್ ಎಲೆಕ್ಷನ್‌ನಲ್ಲಿ ನಮ್ಮ ವಿರುದ್ಧ ಓಟು ಹಾಕಲಿ. ನಾನು ಅದರ ಬಗ್ಗೆ ಯೋಚಿಸುತ್ತಿಲ್ಲ. ರೈತರ ವಿಷಯದಲ್ಲಿ ನಾವು ರಾಜಕೀಯ ಮಾಡುವುದು ಬೇಡ. ಈ ಬಗ್ಗೆ ನೀವು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿ ಎಂದು ಹೇಳುತ್ತೇನೆ. ಅದರ ಜೊತೆಗೆ, ಇನ್ನೊಂದು ತಮ್ಮಲ್ಲಿ ಮನವಿ ಮಾಡುವುದೆಂದರೆ, ಸರ್ಕಾರಿ ನೌಕರರ ನಿವೃತ್ತಿ ವಯಸ್ಸು 58 ವರ್ಷ ಇದ್ದುದನ್ನು ನೀವು 60 ವರ್ಷ ಮಾಡಿದ್ದೀರಿ. ಎರಡು ವರ್ಷ ಜಾಸ್ತಿ ಮಾಡಿ, ಅವರಿಗೆ ನೀವು ಒಂದಕ್ಕೆ ಮೂರರಷ್ಟು ಸಂಬಳ ಕೊಡುತ್ತೀರಿ. ಆದ್ದರಿಂದ ನಾಳೆ ಬಜೆಟ್‌ನಲ್ಲಿ ನಿವೃತ್ತಿ ವಯಸ್ಸನ್ನು ಮುಂಚೆ ಇದ್ದಹಾಗೇ 58ಕ್ಕೆ ಇಳಿಸುವ ಬಗ್ಗೆ announce ಮಾಡಿ. ಏಕೆಂದರೆ, ಯುವಕರು ಕೆಲಸವಿಲ್ಲದೇ ರಸ್ತೆಗಳಲ್ಲಿ ತಿರುಗುತ್ತಿದ್ದಾರೆ. ಕೆಲವು ಕಡೆಗಳಲ್ಲಿ, ಅದು ಸಹಕಾರಿ ರಂಗ ಇರಬಹುದು ಅಥವಾ ಸಕ್ಕರೆ ಕಾರ್ಖಾನೆಗಳಲ್ಲಿ ಇರಬಹುದು, ಅವರಿಗೆ ಸಕ್ಕರೆ ಕಾಯಿಲೆ ಬಂದು 58 ವರ್ಷಕ್ಕೇ ಕೆಲವರು ಸೇವೆ ಸಲ್ಲಿಸುವ ಸ್ಥಿತಿಯಲ್ಲಿರುವುದಿಲ್ಲ. ದಯಮಾಡಿ ಅದರ ಬಗ್ಗೆ ನೀವು ಯೋಚನೆ ಮಾಡಿ. ನಾಳೆ

ಉತ್ತಮವಾದಂಥ ಬಜೆಟ್ ಕೊಡಲು ಭಗವಂತ ತಮಗೆ ಒಳ್ಳೆಯದು ಮಾಡಲಿ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2010ರ ಫೆಬ್ರವರಿ 25ರಂದು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ಘನತೆವೆತ್ತ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ".

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

ಅಧ್ಯಕ್ಷರು : ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ಅಂಗೀಕರಿಸಲಾಗಿದೆ. ವಂದನಾ ನಿರ್ಣಯವನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕಳುಹಿಸಲಾಗುವುದು.

ಈಗ ಸದನವನ್ನು ನಾಳೆ ಮಧ್ಯಾಹ್ನ 12.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ರಾತ್ರಿ 8 ಗಂಟೆ 40 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ: 5ನೇ ಮಾರ್ಚ್, 2010ರ ಶುಕ್ರವಾರದಂದು ಮಧ್ಯಾಹ್ನ 12 ಗಂಟೆ 30 ನಿಮಿಷಕ್ಕೆ ಸೇರಲು ನಿಃಶ್ಚಯಿಸಿತು)

* * * * * *